ಪ್ರಧಾನ ಮಂತ್ರಿ ಯುವ ಯೋಜನೆ

आज़ादी का अमृत महोत्सव



ಅರಣ್ಯಾನಿ

ತೇಜಸ್ ಎಚ್ ಬಾಡಾಲ

ಭಾರತವು ದೇವಾಲಯಗಳ ತಾಣ. ಪ್ರಕ್ಷಿಪ್ತ ವಾಗಿ ಹೇಳುವುದಾದರೆ ಅದು ಜ್ಯೋತಿ ಯಂತೆ ಬೆಳಗುವ ಪುಣ್ಯಸ್ಥಳಗಳ ಬೀಡು. ಇಲ್ಲಿ ಹಸಿರು ಸಂಪತ್ತು ಹೇರಳವಾಗಿ ಹರಡಿ ಕೊಂಡಿರಲು, ಅದರ ರಕ್ಷಕರಾಗಿ ಕಾಡಿನ ಮಕ್ಕಳಿದ್ದರು. ಅತ್ಯಮೂಲ್ಯವಾದ ಪ್ರಾಣಿ, ಪಕ್ಷಿ, ಗಿಡಮರಗಳಿರುವ ಪಶ್ಚಿಮಘಟ್ಟಗಳು ಭಾರತದ ಉಸಿರು. ಕರ್ನಾಟಕದ ಪಶ್ಚಿಮ ಭಾಗವನ್ನೇ ಆವರಿಸಿಕೊಂಡಿರುವ ಈ ಹಸಿರು ನಮ್ಮ ಪುಣ್ಯವೇ ಸರಿ. ಕಾಳ, ನಾಗ, ಬೋಕರೆಂಬ ಕಾಡಿನ ಮಕ್ಕಳು ಇಂತಹ ಪರಿಸರದಲ್ಲಿ ಜೀವನ ಕಳೆಯುತ್ತಿರುವಾಗ, ಕೊಡಲಿ ಹಿಡಿದ ದುರುಳರು ಬಂದು, ಅವರ ಜೀವನವೇ ತಲೆಕೆಳಗಾಗುತ್ತದೆ. ಅದ್ಯಾರೋ ಆಚಾರ್ಯರು ಆಗಮಿಸಿ ಇವರನ್ನು ರಕ್ಷಿಸು ತ್ತಾರೆ. ನಿಜಕ್ಕೂ ಅವರು ಯಾರು? ಅವರ ಮಾರ್ಮಿಕ ನುಡಿಗಳ ಅರ್ಥವೇನು? ಅಂತಹ ಸಂಕೀರ್ಣ ಸ್ಥಿತಿಯಲ್ಲಿ ಬ್ರಿಟೀಷರು ಕಾಡಿಗೆ ಬರುವು ದೆಂದರೇನು? ನಿಗೂಢವಾಗಿ ಕೇಳಿಸುವ ಢಮಢಮ ಶಬ್ದವೇನು? ಆಚಾರ್ಯರು ಆಗಾಗ ಹೇಳುವ ದೇಶ ಎಂದರೇನು?

ಎಲ್ಲಕ್ಕೂ ಉತ್ತರ: ಅರಣ್ಯನಿ!



ಅರಣ್ಯನಿ

ಪ್ರಧಾನ ಮಂತ್ರಿ ಯುವ ಯೋಜನೆ

ಅರಣ್ಯಾನಿ



ತೇಜಸ್ ಎಚ್ ಬಾಡಾಲ

nbt.india
एकः सूते सकलम्

ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ

ISBN 978-93-5491-641-0

ಮೊದಲನೆಯ ಮುದ್ರಣ 2022 (ಶಕ 1944)

Aranyani (*Kannada Original*)

₹ 250.00

ನಿರ್ದೇಶಕರು, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ
ನೆಹರೂ ಭವನ, 5, ಇನ್‌ಸ್ಟಿಟ್ಯೂಶನಲ್ ಏರಿಯಾ, ಫೇಜ್–II
ವಸಂತ್ ಕುಂಜ್, ಹೊಸ ದೆಹಲಿ–110070 ಇವರಿಂದ ಪ್ರಕಟಿತ.

website : www.nbtindia.gov.in

ಪರಿವಿಡಿ

ಮುನ್ನುಡಿ

ದೇಶವೆಂದರೆ ಅದೊಂದು ಭಾವ. ಆ ಭಾವನೆಯು ವಿವರಣೆಗೆ ನಿಲುಕದ್ದು. ಆದರೆ ಆ ಭಾವದಲ್ಲೇ ತೇಲುತ್ತಾ ತುರೀಯಾವಸ್ಥೆಗೆ ತಲುಪಿದ ಸಾಧಕನಂತೆ ನಾವೆಲ್ಲರೂ ಇರಬಹುದಲ್ಲವೆ? ಆ ಭಾವ ಊರ್ಜಿತಗೊಳ್ಳಲು ಆಗಾಗ ನಮಗೆ ಪ್ರಬೋಧನೆ ಬೇಕು. ಪ್ರಸ್ತುತ ದೇಶಪ್ರೇಮ ವರ್ಧನೆ ಆಗಲು ಇತಿಹಾಸವನ್ನು ಓದಿದರೆ ಸಾಕು! ಅಲ್ಲಿ ಸಿಗದಿರುವ ವಿಷಯವೇ ಇಲ್ಲ! ಆದರೂ, ಅಲ್ಲಿ ಸಿಗದ ಹಲವು ವಿಷಯಗಳು ನಮ್ಮ ಹಿರಿಯರಲ್ಲೇ ಉಳಿದುಬಿಟ್ಟಿದೆ ಅಲ್ಲವೆ? ಅವನ್ನೆಲ್ಲಾ ಪ್ರಚ್ಛನ್ನಗೊಳಿಸಲು ಯುವಶಕ್ತಿಯಿಂದ ಮಾತ್ರ ಸಾಧ್ಯ! ಇಂತಹ ಪರಿಕಲ್ಪನೆಯನ್ನು PM YUVA ಎನ್ನುವ ರೂಪದಲ್ಲಿ ಆವಿರ್ಭವಿಸಿದ ನಮ್ಮ ನೆಚ್ಚಿನ ಪ್ರಧಾನಿ ನರೇಂದ್ರ ಮೋದಿಜಿ ಅವರಿಗೆ ಎಷ್ಟೆಂದು ಧನ್ಯವಾದ ಸಲ್ಲಿಸಲಿ? ಅವರ ಪರಿಕಲ್ಪನೆಗೆ ವಟವೃಕ್ಷದಂತೆ ನಿಂತು ದೇಶದಲ್ಲಿರುವ ಹಲವಾರು ಪ್ರತಿಭೆಗಳಲ್ಲಿ ಕೆಲವು ಅದೃಷ್ಟವಂತರನ್ನು ಆಯ್ಕೆ ಮಾಡಿ ಅವರಿಗೆ ಬೇಕಾದ ಮಾರ್ಗದರ್ಶನ ವನ್ನೆಲ್ಲಾ ಕೊಡಿಸಿದ ರಾಷ್ಟ್ರೀಯ ಪುಸ್ತಕ ನ್ಯಾಸದ ನಿರ್ದೇಶಕರಾದ ಶ್ರೀಯುವರಾಜ್ ಮಲಿಕ್ ಸರ್ ಹಾಗೂ ಎಲ್ಲಾ ಸಿಬ್ಬಂದಿ ವರ್ಗಕ್ಕೆ ನನ್ನ ಪ್ರಣಾಮಗಳು.

ಅಷ್ಟಕ್ಕೂ, ಆಯ್ಕೆಗೊಂಡ ಎಪ್ಪತ್ತೈದು ಮಂದಿಯಲ್ಲಿ ನಾನೂ ಒಬ್ಬ ಎಂದಾಗ, ನನಗೆ ಖುಷಿಗಿಂತ ಹೆಚ್ಚಾಗಿ ಭಯ ಆಯಿತು! ಎಂತಹ ಜವಾಬ್ದಾರಿ ಇದು! ಎಷ್ಟೋ ದಿನಗಳಿಂದ ನನ್ನಲ್ಲಿ ಪ್ರಕ್ಷಿಪ್ತವಾಗಿದ್ದ ಒಂದು ಕಥೆಯನ್ನು ಈಗ ಜಗತ್ತಿಗೆ ಹೇಳಬೇಕಿತ್ತು. ಹೇಳಿದರೆ ಅದೂ ನೈಜವಾಗಿ ಕಾಣಬೇಕು, ವಾಸ್ತವಾಂಶಗಳೊಂದಿಗೆ ಕಲ್ಪನೆಯ ಸಾರವೂ ಜನರಿಗೆ ತಲುಪಬೇಕು, ಇಷ್ಟೇ ಆಗಿದ್ದರೆ ನಾನೇಕೆ ಭಯಪಡುತ್ತಿದ್ದೆ? ಆ ಕಥೆ ದೇಶಕ್ಕೆ ಸಂಬಂಧಿಸಿದ್ದು ಅಲ್ಲವೆ? ಭಾರತವೆಂದರೆ ಅದು ಶಾಸ್ತ್ರಸಂಪನ್ನ, ಕಥಾಲಂಕೃತ, ಸುಸಂಸ್ಕೃತ ನಾಡು. ಇಲ್ಲಿ

ನಡೆದಿರುವ ಯುದ್ಧಗಳೆಷ್ಟೋ, ಅದರಲ್ಲಿ ಮಡಿದ ವೀರರು ಎಷ್ಟು ಮಂದಿ! ನಾನು ಭಾರತದಲ್ಲಿ, ಅದರಲ್ಲೂ ನಮ್ಮ ಕರ್ನಾಟಕದಲ್ಲಿ ಸ್ವಚ್ಛಂದವಾಗಿ ಹರಡಿಕೊಂಡಿರುವ ಬೃಹತ್ ಪಶ್ಚಿಮ ಘಟ್ಟಗಳಲ್ಲೇ ನನ್ನ ಕಥೆ ನಡೆಯಬೇಕೆಂದು ನಿಶ್ಚಯಿಸಿದೆ. ನನ್ನ ಪುಟ್ಟ ಕಣ್ಣು, ಒಂದಷ್ಟು ಪುಟಗಳಲ್ಲಿ ಅದರ ಸೌಂದರ್ಯವನ್ನು ಹಿಡಿದಿಡುವುದು ಎಂದರೇನು? ಅದು ಸಾಧ್ಯವೆ? ಆಗ ನಾನು ಒಂದೊಂದೇ ಪುಸ್ತಕಗಳನ್ನು ತೆರೆಯತೊಡಗಿದೆ. ನಾನು ಯೋಚಿಸಿದ್ದ ಕಥೆಯ ಸ್ವರೂಪಕ್ಕೆ; ನಿಧಾನವಾಗಿ ಇನ್ನೊಂದಿಷ್ಟು ಮಹತ್ವಪೂರ್ಣವಾದ ವಿಷಯಗಳು ಸೇರಿಕೊಳ್ಳುತ್ತಾ ಹೋಯಿತು. ಓದುಗರಾಗಿ ನೀವು ಈಗ ಬಂದಿದ್ದೀರಿ, ಇಲ್ಲಿಯೇ ಆ ವಿಷಯಗಳನ್ನೆಲ್ಲಾ ಪ್ರಸ್ತಾಪಿಸಿಬಿಟ್ಟರೆ ರಸಭಂಗ ಆಗುವುದು ಖಚಿತ. ಹಾಗಾಗಿ ನಿಮ್ಮನ್ನು ಕೌತುಕಕ್ಕೆ ಒಡ್ಡುವ ಕೆಲವು ವಿಷಯಗಳನ್ನು ಇಲ್ಲಿ ಹೇಳುತ್ತೇನೆ.

ಸ್ವಾತಂತ್ರ್ಯ ಸಂಗ್ರಾಮದ ಕುರಿತು ಓದುತ್ತಿದ್ದಾಗ, ನನ್ನ ಗಮನವನ್ನು ಸೆಳೆದ ವಿಷಯವೆಂದರೆ, ಭಾರತೀಯ ಸಮರ ಕಲೆಗಳನ್ನು ಬ್ರಿಟೀಷರು ನಿಷೇಧಿಸಿದ ಬಗೆ! ಬಂದೂಕು ಇತ್ಯಾದಿಗಳ ಪ್ರಯೋಗವೇ ಇಲ್ಲದ ನಮ್ಮ ಸಮರ ಕಲೆಗಳ ಕುರಿತಾಗಿ ಅವರಿಗೇಕೆ ಅಷ್ಟು ಭಯ? ಇದು ಒಂದು ವಿಷಯ. ಇನ್ನೊಂದು, ಪಶ್ಚಿಮ ಘಟ್ಟಗಳಲ್ಲಿ ಸಹಜವಾಗಿ ಬೆಳೆಯದ ನೀಲಗಿರಿ ಮರಗಳು ಅಷ್ಟು ಸಂಖ್ಯೆಯಲ್ಲಿ ಅದು ಹೇಗೆ ಬೆಳೆಯಿತು? ಎಲ್ಲಾ ಆಯಾಮಗಳಿಗೂ ಒಂದಲ್ಲ ಒಂದು ದೇವರನ್ನು ಕಲ್ಪಿಸಿಕೊಳ್ಳುವ ನಮ್ಮ ಧರ್ಮದಲ್ಲಿ ಅರಣ್ಯವು ದೈವ ಸ್ವರೂಪವೆ? ಹೇಗೆ? ಹೀಗೆ ಒಂದಕ್ಕೊಂದು ವಿಷಯಗಳನ್ನು ಪೋಣಿಸುತ್ತಾ, ನಿಮ್ಮ ಮುಂದೆ 'ಅರಣ್ಯಾನಿ' ಎನ್ನುವ ಈ ಕಥೆಯನ್ನು ಭಾರತ ಸರ್ಕಾರ ಹಾಗೂ ಎನ್‌ಬಿಟಿ ಅವರ ಸಹಾಯದಿಂದ ನೀಡುತ್ತಿದ್ದೇನೆ.

ಇದನ್ನು ನಾನೊಬ್ಬನೆ ಬರೆದೆ ಎಂದರೆ ಖಂಡಿತ ತಪ್ಪಾಗುತ್ತದೆ! ಬಹಳಷ್ಟು ಮಂದಿ ನನ್ನ ಜೀವನದಲ್ಲಿ ಅತ್ಯದ್ಭುತ ಬದಲಾವಣೆಗಳನ್ನು ತಂದಿದ್ದಾರೆ. ಅಂತಹ ತರಂಗಗಳ ಫಲದಿಂದ ನಾನು ಈ ಕಥೆ ಬರೆದಿದ್ದು. ಮೊದಲಿಗೆ, ನನ್ನ ಜೀವನದಲ್ಲಿ ಇಷ್ಟೆಲ್ಲಾ ಬೆಳವಣಿಗೆಗಳನ್ನು ಉಂಟು ಮಾಡುತ್ತಿರುವ ಆ ಪರಮಾತ್ಮನಿಗೆ ನಮಸ್ಕಾರಗಳು. ದೈವಸ್ವರೂಪಿಗಳಾಗಿ ಸದಾ ಆಶೀರ್ವದಿಸುತ್ತಿರುವ ನನ್ನ ತಾತ ದಿವಂಗತ ಶ್ರೀನಿವಾಸ ಶಾಸ್ತ್ರೀ ಹಾಗೂ ಅಜ್ಜಿ ದಿವಂಗತ ದಾಕ್ಷಾಯಣಿ ಅವರಿಗೆ ನನ್ನ ನಮಸ್ಕಾರಗಳು. ನಮ್ಮ ಪ್ರಧಾನ ಮಂತ್ರಿಗಳು ಹಾಗೂ ಎನ್‌ಬಿಟಿಗೆ ನನ್ನ ದೀರ್ಘದಂಡ ಪ್ರಣಾಮಗಳು. ಮತ್ತೆ, ನಾನು ಬರೆಯುವುದನ್ನು ಆರಂಭಿಸಿದ್ದೆ ನನ್ನ ತಂದೆ ತಾಯಿಯರಾದ ಹೇಮಂತ್ ಕುಮಾರ್ ಹಾಗೂ ರೂಪಶ್ರೀ ಇವರಿಂದ. ಸತತವಾಗಿ ನನ್ನನ್ನು ತಿದ್ದಿ ತೀಡಿ, ಬರೆಯುವಾಗ ನನ್ನ ವಿಚಿತ್ರ ವರ್ತನೆಯನ್ನೆಲ್ಲಾ ಸಹಿಸಿಕೊಂಡು, ಸದಾಕಾಲ ನನ್ನ ತಪ್ಪುಗಳನ್ನು ತಿದ್ದಿದ ಅವರಿಗೆ

ಸಾಷ್ಟಾಂಗ ಪ್ರಣಾಮಗಳು. ಇನ್ನು, ಅರಣ್ಯನಿ ಎನ್ನುವ ಈ ಪುಸ್ತಕದಲ್ಲಿ ನಾನು ಹೊಸದಾಗಿ ಕಲಿತು ಬರೆದ ವಿಷಯಗಳಿವೆ. ಪ್ರತೀ ಹಂತದಲ್ಲೂ ನನಗೆ ಅಂತರ್ಧ್ವನಿಯಾಗಿ ಗೋಚರಿಸಿದ್ದಲ್ಲದೆ, ಪ್ರತ್ಯಕ್ಷವಾಗಿ ಕುಳಿತರೆ ಅಮೂಲ್ಯವಾದ ವಿಷಯಗಳನ್ನು ನನಗೆ ಹೇಳಿಕೊಟ್ಟ ನನ್ನ ಗುರುಗಳಾದ ವಿದ್ವಾನ್ ರಾ.ಸ. ನಂದಕುಮಾರ್ ಅವರಿಗೆ ನಾನು ಎಷ್ಟು ಕೃತಜ್ಞತೆಗಳನ್ನು ಹೇಳಿದರೂ ಸಾಲದು. ಅಂತೆಯೇ "ಹೇಗಿದೆ ಓದಿ ಕೊಡಿ ಅಣ್ಣ" ಎಂದು ಹೇಳಿ ಪುಸ್ತಕವನ್ನು ಕೊಟ್ಟಾಗ ಇದನ್ನು ಓದಿ, ವಿಶೇಷವಾಗಿ ಪ್ರತಿಕ್ರಿಯಿಸಿದ ಗುರುಪುತ್ರರಾದ ಸುಮುಖ ಶ್ರೀವತ್ಸ ಅವರಿಗೆ ನನ್ನ ಪ್ರಣಾಮಗಳು! ಗುರುಕೃಪೆಯ ಫಲ ಅಷ್ಟೆ, ನನ್ನದೇನೂ ಇಲ್ಲ! ಈ ರೀತಿಯಾಗಿ ಪುಸ್ತಕ ಬರೆಯುತ್ತಿದ್ದೇನೆ ಎಂದಾಗ, ಅದರ ಸಂಶೋಧನೆಗೆ ಅವಶ್ಯಕವಾದ ರಜೆಯನ್ನು ನೀಡಿದ್ದಲ್ಲದೇ ಬೆನ್ನುತಟ್ಟಿ ಪ್ರೋತ್ಸಾಹಿಸಿದ, ನಾನು ಓದುತ್ತಿರುವ ಮೈಸೂರಿನ ಜೆಎಸ್‌ಎಸ್ ಕಾನೂನು ಕಾಲೇಜಿನ ಚೀಫ್ ಎಕ್ಸಿಕ್ಯುಟೀವ್ ಶ್ರೀ ಸುರೇಶ್ ಸರ್ ಅವರಿಗೆ ಹಾಗೂ ನನ್ನ ಎಲ್ಲಾ ಗುರುಗಳಿಗೆ ಪ್ರಣಾಮಗಳು. ಇನ್ನು ನನಗೆ ಸ್ಫೂರ್ತಿಯನ್ನು ನೀಡುತ್ತಾ, ಉತ್ತೇಜಿಸುತ್ತಾ, ನನ್ನಲ್ಲಿ ಸದಾ ಸೃಜನಶೀಲತೆ ಕಡಿಮೆಯಾಗದಂತೆ ನೋಡಿಕೊಂಡ ನನ್ನ ಸೋದರ ಮಾವ ವಿಜಯ್ ಅವರಿಗೂ ನನ್ನ ಪ್ರಣಾಮಗಳು. ನನಗೆ ಸತತ ಪ್ರೋತ್ಸಾಹ ನೀಡುತ್ತಾ ಸಂಭ್ರಮಿಸುತ್ತಿರುವ ನನ್ನ ತಾತ ಶ್ರೀನಿವಾಸ ಮೂರ್ತಿ ಹಾಗೂ ಅಜ್ಜಿ ನಾಗಮಣಿ ಅವರಿಗೆ ನನ್ನ ನಮಸ್ಕಾರಗಳು.

ಇವೆಲ್ಲವೂ ಪರೋಕ್ಷ ಕಾರಣಗಳಿರಬಹುದು. ಪ್ರತ್ಯಕ್ಷವಾಗಿ ಈ ಪುಸ್ತಕ ಸಿದ್ಧಗೊಳ್ಳಲು ಸಹಾಯ ಮಾಡಿದ ಮನಗಳೆಷ್ಟು! ಗುರುವಾಗಿ, ನನ್ನನ್ನು ಉತ್ಸಾಹದಿಂದ ಮಾತನಾಡಿಸುತ್ತಾ, ಕಥೆಯನ್ನೂ ಇನ್ನೂ ಸುಂದರಗೊಳಿಸುವುದು ಹೇಗೆ, ಇದಕ್ಕೆ ಯಾವ ಯಾವ ಪುಸ್ತಕಗಳನ್ನು ಓದಿದರೆ ಒಳ್ಳೆಯದು ಎಂದು ಹೇಳಿ ಕೊಟ್ಟಂತಹ ಗುರುಗಳಾದ, ಮಾರ್ಗದರ್ಶಕರಾದ ಶ್ರೀ ಪುರುಷೋತ್ತಮ ಬಿಳಿಮಲೆ ಅವರಿಗೆ ನನ್ನ ಸಾಷ್ಟಾಂಗ ಪ್ರಣಾಮಗಳು. ಪುರುಷೋತ್ತಮ ಬಿಳಿಮಲೆ ಅವರು ಹೇಳಿದ ಕೆಲವು ವಿರಳ ಪುಸ್ತಕಗಳು ನನಗೆ ಎಲ್ಲಿಯೂ ದೊರಕದಾದಾಗ, ನೇರ ಅದರ ಬರಹಗಾರರಾದ ಬಾಬು ಬನ್ನಂಜೆ ಅಮೀನ್ ಅವರನ್ನೇ ಸಂಪರ್ಕಿಸಿ ಅದನ್ನು ನನಗೆ ಜೋಪಾನವಾಗಿ ಕಳುಹಿಸಿಕೊಟ್ಟ ಉಪ್ಪಿನಂಗಡಿಯ ಕೈಲಾರ್ ರಾಜಗೋಪಾಲ ಭಟ್ ಅವರಿಗೆ ನನ್ನ ಸಾಷ್ಟಾಂಗ ನಮಸ್ಕಾರಗಳು. ಪುಸ್ತಕದಲ್ಲಿ ಬರೆದ ನನ್ನ ಕಲ್ಪನೆಗಳನ್ನು ವಿವರಿಸಿದಾಗ, ಅದರಂತೆಯೇ ಬಹಳ ಅಚ್ಚುಕಟ್ಟಾಗಿ ಚಿತ್ರಗಳನ್ನು ಬಿಡಿಸಿಕೊಟ್ಟ ಕೃತಿ ಕೈಲಾರ್ ಅವರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು. ಕಥೆಯನ್ನು ಓದುವಾಗ ಆ ಚಿತ್ರಗಳು ನಿಮಗೆ ಎಷ್ಟೋ ಸಹಾಯವಾಗುತ್ತದೆ! ಇನ್ನು, ಸಂದೇಹಗಳು ಬಂದಾಗೆಲ್ಲ ವಾಟ್ಸಾಪಿನಲ್ಲಿ ಸಂದೇಶ

ಕಳುಹಿಸಿದರೆ ಸಾಕು, ಶೀಘ್ರವಾಗಿ ಪ್ರತಿಕ್ರಯಿಸಿ ಅದನ್ನು ಪರಿಹರಿಸುವುದಲ್ಲದೆ, ಸಮಯಕ್ಕೆ ಸರಿಯಾಗಿ ಪುಸ್ತಕವನ್ನು ಸಿದ್ಧಗೊಳಿಸಲು ಕಾರಣರಾದ ಎನ್‌ಬಿಟಿಯ ವೀಣೇಶ್ ಸರ್ ಅವರಿಗೆ ನನ್ನ ನಮಸ್ಕಾರಗಳು.

ಇಷ್ಟೆಲ್ಲಾ ಜನರು ಕೈ ಜೋಡಿಸಿ ಸಿದ್ಧವಾಗಿರುವ ಅರಣ್ಯಾನಿ ಎನ್ನುವ ಈ ಐತಿಹಾಸಿಕ ಕಲ್ಪನಾ ಕಾದಂಬರಿಯು ವಾಸ್ತವಾಂಶಗಳನ್ನೇ ಆಧಾರವಾಗಿಟ್ಟು ಕೊಂಡು ಕಟ್ಟಿರುವ ಒಂದು ಕಥೆ ಈಗ ನಿಮ್ಮ ಮುಂದಿದೆ. ಇದನ್ನು ಕೌತುಕದಿಂದ ಓದುತ್ತಿರುವ ನಿಮಗೆ ಈ ಕಾಡಿನ ಜಟಿಲ ಜಗತ್ತಿಗೆ ಸ್ವಾಗತ!

ತೇಜಸ್ ಎಚ್ ಬಾಡಾಲ

1

ಪ್ರಬಲ ಕಾರಣ

ದಟ್ಟ ಕಾಡಿನ ಹೆಮ್ಮರಗಳು ಅಗಲವಾಗಿ ಹರಡಿಕೊಂಡಿರಲು, ವರುಣನ ಆರ್ಭಟವನ್ನೂ ಅವು ಕಡಿಮೆ ಮಾಡುತ್ತವೆ. ಭೂಮಿಯನ್ನು ಸ್ಪರ್ಶಿಸುವ ಆತುರದಲ್ಲಿರುವಂತೆ ಬೀಳುವ ಮಳೆಯ ಹೆಬ್ಬೆಟ್ಟು ಗಾತ್ರದ ಹನಿಗಳು, ಈ ಛಾವಣಿಯಂತಹ ಮರಗಳ ಮೇಲೆ ಬಿದ್ದು, ಅವುಗಳ ಸಂಕೀರ್ಣ ರೆಂಬೆ–ಕೊಂಬೆಗಳ ರಚನೆಯನ್ನು ದಾಟಿ ಭೂಮಿಯನ್ನು ಮುಟ್ಟುವಷ್ಟರಲ್ಲಿ, ಸಾಸಿವೆ ಗಾತ್ರದ ಹನಿಯಾಗಿ ಬಿಟ್ಟಿರುತ್ತದೆ. ಭಾರತದ ಪಶ್ಚಿಮ ಘಟ್ಟದ ಸೌಂದರ್ಯವು ಈ ರೀತಿಯ ಮಳೆಯ "ಚಿಮುಕಿಸುವಿಕೆ"ಯಿಂದಲೇ ದುಪ್ಪಟ್ಟಾಗುತ್ತದೆ. ಇಷ್ಟೇ ಅಲ್ಲದೆ, ಭಾರತದ ದಕ್ಷಿಣ ಭಾಗವು ಜೀವಂತವಾಗಿರಲು ಕಾರಣವೇ ಈ ಶೋಲಾ ಕಾಡುಗಳು. ಜಗತ್ತಿನ ಅತ್ಯಂತ ಶ್ರೀಮಂತ ಕಾಡುಗಳು.

ಹೆಗಲಲ್ಲಿ ಬಿಲ್ಲೊಂದನ್ನು ಹಿಡಿದು, ಬೆನ್ನಿನ ಬತ್ತಳಿಕೆಯಲ್ಲಿ ಹಲವು ರೀತಿಯ ಬಾಣಗಳನ್ನು ಹೊತ್ತು ಒಬ್ಬನು ಸದ್ದು ಮಾಡದೆಯೇ ಓಡುತ್ತಿದ್ದ. ವೀರಗಚ್ಚೆಯನ್ನು ಉಟ್ಟಿದ್ದ ಅವನ ಬಲಶಾಲಿ ತೊಡೆಯ ಆಕಾರ ಕಾಣುತ್ತಿತ್ತು. ಮಳೆಯಿಂದ ಮೆತ್ತಗಾದ ಕೆಂಪು ಬಣ್ಣದ ಮಣ್ಣು ಕಾಲಿಟ್ಟ ತಕ್ಷಣ ಒಳಹೋಗುತ್ತಿತ್ತು. ಅದು ಹಾಗಾಗುವ ಮುನ್ನವೇ ಮುಂದಿನ ಹೆಜ್ಜೆ ಇಡುವ ಚಾಕಚಕ್ಯತೆ ಅವನಲ್ಲಿತ್ತು. ಸೊಂಟದಿಂದ ಮೇಲಕ್ಕೆ ಯಾವ ಹೊದಿಕೆಯೂ ಇಲ್ಲದ ಅವನ ಧೃಡಕಾಯವನ್ನು ಮಳೆಯು ತೋಯಿಸಿತ್ತು. ಆದರೆ, ಮಳೆಯ ನೀರಿನೊಂದಿಗೆ ಅವನ ಬೆವರೂ ಬೆರೆತುಹೋಗಿತ್ತು. ಮುಷ್ಟಿಗಟ್ಟಿದ್ದ ಅವನ ಕೈಗಳು ಒಳಗಡಗಿರುವ ನರಗಳನ್ನೂ ಎತ್ತಿ ತೋರಿಸುತ್ತಿದ್ದವು. ಸಹ್ಯಾದ್ರಿಯ ಉಬ್ಬು ತಗ್ಗುಗಳೆಲ್ಲವೂ

ಅವನಿಗೆ ಚಿರಪರಿಚಿತದಂತಿತ್ತು. ಯಾವ ಗುಡ್ಡದಿಂದ ಎಗರಿದರೆ ಯಾವ ತಗ್ಗಿನಲ್ಲಿ ಜಾರಬಹುದೆಂಬ ಅವನ ಜ್ಞಾನ ಅದ್ಭುತವಾದದ್ದು. ಒಂದು ಜಾರಿನಲ್ಲಿ ಉದುರಿರುವ ಎಲೆಗಳ ಮೇಲೆ ನಿಧಾನವಾಗಿ ಜಾರಿ ಎದ್ದು, ಎರಡೂ ಕಾಲುಗಳನ್ನು ಜೋರಾಗಿ ತಟ್ಟಿ ಮೇಲಕ್ಕೆಗರಿದ. ಇದರಿಂದ ಇನ್ನೊಂದು ಹೆಬ್ಬಂಡೆಯನ್ನು ಹತ್ತಬಹುದಾದಷ್ಟು ಶಕ್ತಿ ಸಿಕ್ಕಿತು. ಆ ಹೆಬ್ಬಂಡೆಯು ಕಾರ್ಯತಂತ್ರಕ್ಕೆ ಪೂರಕವಾದದ್ದು. ಅಲ್ಲಿ ನಿಂತರೆ ದಿಗಂತದವರೆಗೂ ಹರಡಿಕೊಂಡಿರುವ ಕಾಡು ಕಾಣುತ್ತದೆ. ಗಿರಿಗಳಂತೂ ಭರತನಾಟ್ಯ ಮಾಡುವ ಕಲಾವಿದೆಯರು ಎರಡೂ ಕರಗಳ ತ್ರಿಪತಾಕ ಹಸ್ತ ಮುದ್ರೆಯನ್ನು ಶಿರದ ಮೇಲೆ ಸ್ವಸ್ತಕದಲ್ಲಿ ಎತ್ತಿ ಸಾಲಾಗಿ ನಿಂತಂತೆ ಕಾಣುತ್ತದೆ. ಹೆಬ್ಬಂಡೆಯ ಮೇಲೆ ನಿಂತವನೇ ಕೋತಿಯಂತೆ ಕಿರುಚಾಡಲಾರಂಭಿಸಿದ. ಅರೆಕ್ಷಣ ಅವನು ಕಿರುಚಾಡಿದ್ದು ವಿಫಲವಾಯಿತೆಂಬಂತೆ ಭಾಸವಾಯಿತು. ಆದರೆ, ಕಾಡಿನ ಒಂದು ಭಾಗದಿಂದ ಪಕ್ಷಿಗಳು ಭಯದಿಂದ ಹಾರಿಹೋಗುವಂತೆ ವಾನರಗಳೆಲ್ಲವೂ ಕಿರುಚಾಡ ತೊಡಗಿತು. ಅವನು ಆ ವಾನರಗಳ ಭಾಷೆ ಅರ್ಥವಾಗುವಂತೆ ಮತ್ತೆ ಮತ್ತೆ ಶಬ್ದಗಳನ್ನು ಮಾಡತೊಡಗಿದ. ಒಂದು ಕಡೆಯೂ ನಿಲ್ಲದ ಅವನ ಓಟದ ರಭಸ ಹೆಚ್ಚಾಯಿತು. ಅತ್ತ ಇತ್ತ ನೋಡುತ್ತಾ, ಒಂದು ಬಾಣವನ್ನು ಬತ್ತಳಿಕೆಯಿಂದ ತೆಗೆದು, ಒಂದು ಗುಡ್ಡದಿಂದ ಇಳಿಜಾರಿನೆಡೆಗೆ ಹಾರುವಾಗ ಬಿಲ್ಲಿನಿಂದ ಆ ಬಾಣವನ್ನು ಬಿಟ್ಟ.

ರಥಸ್ಥೇನ ಗಜಸ್ಥೇನ ಹಯಸ್ಥೇನ ಚ ಪತ್ತಿನಾ ।
ಧಾವತಾ ವೈ ಶ್ರಮಃ ಕಾರ್ಯೋ ಲಕ್ಷ್ಯಂ ಹನ್ತುಂ ಸುನಿಶ್ಚಿತಂ॥[1]

"ಬಿಲ್ಲುಗಾರಿಕೆಯನ್ನು ಕಲಿಯುತ್ತಿರುವವನು ರಥದಲ್ಲಿ ಕುಳಿತು, ಗಜದ ಮೇಲೆ ಕುಳಿತು, ಕುದುರೆಯ ಬೆನ್ನೇರಿ, ಹಾಗೆಯೇ ಓಡುವಾಗ ಲಕ್ಷ್ಯ ಭೇದಿಸುವುದನ್ನು ಕಲಿಯಬೇಕು" ಎಂಬುದನ್ನು ಅವನು ಮನನ ಮಾಡುತ್ತಿದ್ದ. ಕಾಡಿನ ನಡುವೆ ರಭಸದಲ್ಲಿ ಸಾಗುವ ನದಿಯಲ್ಲಿ ಮಣ್ಣಿನ ಮಡಕೆಯೊಂದನ್ನು ತೇಲಿಬಿಟ್ಟು, ಓಡುತ್ತಾ ವೇಗದಲ್ಲಿ ಅದನ್ನು ಸೂಚೀಮುಖ ಬಾಣದಲ್ಲಿ ಇಬ್ಭಾಗ ಮಾಡುವ ಧೃಡಭೇದಿ ಅವನು. ಇನ್ನು ಚಲಿಸದ ವೃಕ್ಷಕ್ಕೆ ಬಾಣವನ್ನು ಹೂಡುವ ಕಾಷ್ಠಚ್ಛೇದಿ ಅವನಾಗಲಾರನೆ?

ಆ ಬಾಣವು "ಸುಂಯ್"ಕಾರವನ್ನು ಮಾಡುತ್ತಾ ಹೋಗಿ ಮರಕ್ಕೆ ನಾಟಿತು. ತಕ್ಷಣ ಅಲ್ಲಿದ್ದ ವನ್ಯಜೀವಿಗಳು ತಮ್ಮ ತಮ್ಮ ಭಾಷೆಯಲ್ಲಿ ಕೂಗಾಡಲಾರಂಭಿಸಿದವು. ಇಳಿಜಾರಿನಲ್ಲಿ ಜಾರುತ್ತಾ, ಅಲ್ಲಿ ನಿಧಾನವಾಗಿ ಹರಿಯುತ್ತಿದ್ದ ಸ್ರೋತವೊಂದರಲ್ಲಿ

---

1. ವಸಿಷ್ಠ ಧನುರ್ವೇದ ಸಂಹಿತಾ ॥60॥

ಮೊಸಳೆಯಂತೆ ಮುಳುಗಿಬಿಟ್ಟ. ಕರಿನೀರಿನಲ್ಲಿ ಅವನ ಕೃಷ್ಣ-ವರ್ಣದ ದೇಹವು ಬೆರೆತುಹೋಯಿತು. ಮೇಲೆ ನಿಂತು ನೋಡಿದರೆ ಕಾಣದಂತೆ ಅವನ ಗಟ್ಟಿ-ಮುಟ್ಟು ದೇಹವು ಮರೆಮಾಚಿಕೊಂಡಿತ್ತು. ಎಷ್ಟು ಹೊತ್ತಿಗೂ ಏನೂ ಬದಲಾವಣೆಯಾಗಲಿಲ್ಲ. ಮಕರದಂತೆಯೇ ಮೊದಲು ಕೇವಲ ಶಿರಭಾಗವನ್ನು ಜಲಪದರದಿಂದ ಮೇಲೆಕ್ಕೆತ್ತಿ ಹೊರಗೆಲ್ಲವೂ ನೋಡುತ್ತಾ, ಝರಿಯ ಇನ್ನೊಂದು ಬದಿಗೆ ಬಂದು ಎದ್ದ. ತೋಯ್ದುಹೋಗಿದ್ದ ಅವನ ಕೇಶರಾಶಿಯನ್ನೊಮ್ಮೆ ಸಿಂಹದಂತೆ ಅಲುಗಾಡಿಸಿ, ಹಿಂದಕ್ಕೆ ಬಾಚಿದ. ನೀರಿನ ಹರಿಯುವಿಕೆಯು ಅವನ ಮಾಂಸಖಂಡಗಳಿಗೆ ಒಳ್ಳೆ ಬಗೆಯ ಆರಾಮವನ್ನೇ ನೀಡಿತ್ತು. ಈಗ ಅವನು ಓಡಲು ಇನ್ನಷ್ಟು ಸಶಕ್ತನಾಗಿದ್ದ. ಝರಿಯ ಮಡಿಲಲ್ಲಿರಿಸಿದ್ದ ತನ್ನ ಬಿಲ್ಲು, ಬತ್ತಳಿಕೆಗಳನ್ನು ಹೆಗಲೇರಿಸಿಕೊಂಡ. ಕೇವಲ ಪಶ್ಚಿಮ ಘಟ್ಟಗಳಲ್ಲೇ ಕಂಡುಬರುವ ಕೆಂಪು ಹರಟೆಮಲ್ಲ ಪಕ್ಷಿಯಂತೆ "ವ್ರೂಂಯ್ ವ್ರೂಂಯ್" ಎಂದು ಎರಡು ಬಾರಿ ಕೂಗಿದ. ಯಾವುದೇ ರೀತಿಯ ಪ್ರತಿಕ್ರಿಯೆ ಬಾರದ ಹಿನ್ನೆಲೆಯಲ್ಲಿ ಆತ ಮತ್ತೆ ಓಡಲು ಶುರು ಮಾಡಿದ. ಆಕಾಶದೆತ್ತರಕ್ಕೆ ಬೆಳೆದ ತೇಗದ ಮರಗಳಲ್ಲಿ ಯಾವುದೋ ಚೇಷ್ಟೆಯಲ್ಲಿ ತೊಡಗಿದ್ದ ಸಿಂಗಳೀಕಗಳೆಲ್ಲವೂ ಓಡುತ್ತಿರುವ ಮನುಷ್ಯನೆಡೆಗೆ ನೋಡಿದವು. ಒಂದರ ಹಿಂದೆ ಒಂದು ಕುಳಿತು, ಮೈಯಲ್ಲಿ ಸಿಕ್ಕಿಕೊಂಡಿರುವ ಹೇನುಗಳನ್ನು ಹೆಕ್ಕುತ್ತಿದ್ದ ಅವುಗಳೆಲ್ಲವು ಓಡುತ್ತಿರುವ ಇವನ ಕಡೆಗೆ ತಿರುಗಿದವು. ಮರದ ರೆಂಬೆ-ಕೊಂಬೆಗಳಲ್ಲಿ ಸಂಚರಿಸುವುದನ್ನು ಕಲಿಯುತ್ತಿದ್ದ ಮರಿಗಳ ಬಾಲವನ್ನು ಹಿಡಿದೆತ್ತಿ ಅಪ್ಪಿಕೊಂಡವು ಹೆಣ್ಣು ಸಿಂಗಳೀಕಗಳು. ಇವನು ಓಡಿದಂತೆಲ್ಲ, ಪಕ್ಷಿಗಳು ಭಯಭೀತವಾಗಿ ಹಾರತೊಡಗಿದವು. ಗುಂಪಿನ ಬಲಿಷ್ಠವಾದ ಸಿಂಗಳೀಕವು ಒಮ್ಮೆ ಜೋರಾಗಿ ಕೂಗಿ, ಬಾಯ್ತೆರೆದು ತನ್ನ ಆಯುಧವಾದ ತನ್ನ ದಂತಪಂಕ್ತಿಯನ್ನು ಪ್ರದರ್ಶಿಸಿತು. ನೀಲಗಿರಿ ಮರಗಳಲ್ಲಿ ವಾಸಿಸುವ ಕರಿಕೊರಂಗುಗಳೂ ತಮ್ಮ ದನಿಗೂಡಿಸಿದವು. ಹದಿನಾರು ಬಗೆಯ ಸದ್ದುಗಳನ್ನು ಮಾಡಬಲ್ಲ ಅವುಗಳು ಯಾವುದೋ ಪ್ರಾಣಿ ಬೇಟೆಗೆ ಓಡುತ್ತಿದೆ ಎಂದು ಭಾವಿಸಿ, ಎಚ್ಚರಿಕೆಯ ಸದ್ದುಗಳನ್ನು ಮಾಡತೊಡಗಿದವು. ಮೌನದ ಪರದೆಯೊಳಗಿದ್ದ ಕಾಡು, ಇದ್ದಕ್ಕಿದ್ದಂತೆಯೇ ಸದ್ದುಗಳಿಂದ ತುಂಬಿಕೊಂಡಿತು. ಮೌನದ ಪರದೆ ಹರಿಯಿತು. ದೂರದಿಂದ ಗಜಗಡಣವು ಘೀಳಿಡುವ ಸದ್ದೂ ಕಿವಿಗೆ ಬಿತ್ತು. ಇವೆಲ್ಲಕ್ಕೂ ಓಡುತ್ತಿರುವ ಅವನೇ ಕಾರಣವಾಗಿದ್ದ. ಆದರೆ ಝರಿಯವರೆಗೂ ಯಾವುದೇ ಶಬ್ದವನ್ನೂ ಮಾಡದೆ ಬಂದ ಅವನು ಇದೇಕೆ ಹೀಗೆ ಮಾಡಿದ? ಇದ್ದಕ್ಕಿದ್ದಂತೆ ಜೋರಾದ ಮನುಜ ದನಿಯೊಂದು ಕೇಳಿಸಿತು: "ಜೀಸಸ್!"

2

ಕಾಡು ತಾನಾಗಿಯೇ ಸಹಜ ಸ್ಥಿತಿಗೆ ಬಂದಿತು. ಅಲ್ಲಲ್ಲಿ ಎಲೆಗಳ ನಡುವೆ ಓಡಾಡುವ ಜೀರುಂಡೆಯ ಸದ್ದು ಬಿಟ್ಟರೆ, ಇಡೀ ಕಾಡು ನಿಶ್ಶಬ್ಧವಾಗಿತ್ತು. ಅಷ್ಟಕ್ಕೂ, ಕಾಡಿನಲ್ಲಿನ ಆ ಗದ್ದಲಕ್ಕೆ ಕಾರಣವಾದವನು ಕಾಡಿನ ಅಂಚಿನಲ್ಲಿದ್ದ ಹಸಿರು ಬಣ್ಣದ ಕಟ್ಟಡದೊಳಗಿನ ಒಂದು ಕತ್ತಲ ಕೋಣೆಯಲ್ಲಿ ಬಂಧಿಸಲ್ಪಟ್ಟಿದ್ದ. ಅರೆಪ್ರಜ್ಞೆಯಲ್ಲಿ ಏನೇನೋ ಗೊಣಗಾಡುತ್ತಿದ್ದ ಅವನಿಗೆ ಕಪ್ಪು ಕಂಬಳಿಯೊಂದನ್ನು ಹೊದಿಸಿದ ಇಬ್ಬರು, ಕೋಣೆಯಿಂದ ಹೊರಬಂದು ತಾವೂ ಹಾಸಿಗೆ ಹಾಸಿಕೊಂಡು ಮಲಗಿದರು.

"ಕಟುರ್ರ್... ಕಟುರ್ರ್..." ಎಂಬ ಶಬ್ದಕ್ಕೆ, ಹಸಿರು ಕಟ್ಟಡದೊಳಗಿನವರೆಲ್ಲರೂ ಎದ್ದರು. ಕತ್ತಲ ಕೋಣೆಯೊಳಗಿದ್ದವನು ಕಂಬಳಿಯನ್ನು ಎಸೆದು ಬಾಗಿಲನ್ನು ಬಡಿಯತೊಡಗಿದ.

"ಯಾರಿದ್ದೀರಿ! ನನ್ನನ್ನ ಹೊರಗೆ ಬಿಡಿ!! ನಿಮಗೆ ಏನೋ ಹೇಳುವುದಿದೆ!!" ಎಂದು ಒಮ್ಮೆ ಏರು ದನಿಯಲ್ಲಿ ಕೂಗಿದ. ಹಾಸಿಗೆಯನ್ನು ಆಗ ಮಡಚಿ ಪಕ್ಕಕ್ಕಿಡುತ್ತಿದ್ದ ಖಾಕಿಧಾರಿಗಳಿಬ್ಬರು, "ಸುಮ್ಮನಿರಪ್ಪ. ಸಾಹೇಬರು ಬರೋವರ್ಗೂ ನೀನಿಲ್ಲೇ ಇರ್ಬೇಕು!" ಎಂದರು.

"ಛೇ!" ಎಂಬ ನಿರಾಸೆಯ ಕೂಗು ಕೋಣೆಯಿಂದ ಕೇಳಿಸಿತು. "ಕಟುರ್ರ್... ಕಟುರ್ರ್..." ಎಂಬ ಶಬ್ದ ಕೇಳುತ್ತಲೇ ಇತ್ತು. ಖಾಕಿಧಾರಿಗಳಿಬ್ಬರೂ ಹೊರಗೆ ಬಂದರು.

ಆಕಾಶದೆತ್ತರಕೆ ತರು ನಿಂತಿದೆ–
ಹಕ್ಕಿ ಸಂಕುಲವು ಗೂಡನು ಕಟ್ಟಿದೆ;
ಮರಕುಟಿಗವೊಂದು ದಿಮ್ಮಿಯ ಕುಟ್ಟಿದೆ–
ಕುಟುಕುಟು ಶಬ್ದ ನಮ್ಮ ತಲೆ ಕೆಡಿಸಿದೆ!

ಹೀಗೆ ಒಬ್ಬ ಖಾಕಿಧಾರಿಯು ಆಶುಕವಿತ್ವ ಕಲೆಯನ್ನು ಪ್ರದರ್ಶಿಸಿದ. ಅವನ ಜೊತೆಗಿದ್ದವನ ಚಪ್ಪಾಳೆ, ಮರವನ್ನು ಕುಟ್ಟುತ್ತಿದ್ದ ಆ ಮರಕುಟಿಗವನ್ನೂ ಸುಮ್ಮನಾಗಿಸಿತು. ಕಾಡಿನ ವಾತಾವರಣವೇ ಅಂಥದ್ದು. ಅಲ್ಲಿ ಪ್ರಾಣಿ–ಪಕ್ಷಿ–ಕೀಟಗಳಿರಬೇಕು. ಅಲ್ಲಿಗೆ ಹೋಗುವ ಮಾನವ, ಅದರ ಶಾಂತಿಯನ್ನು ಕೆಡಿಸುತ್ತಾನೆ. ಮತ್ತೊಮ್ಮೆ ಒಳಕ್ಕೆ ಹೋಗಿ, ಕತ್ತಲ ಕೋಣೆಗೆ ಸರಿಯಾಗಿ ಬೀಗ ಹಾಕಿ, ಇಬ್ಬರೂ ಹತ್ತಿರವೇ ಹರಿಯುತ್ತಿದ್ದ ಒಂದು ಝರಿಗೆ ಹೋದರು. ಅದರಲ್ಲಿ ಹರಿಯುತ್ತಿದ್ದ ಅಮೃತದಂತಹ ಜಲದಲ್ಲಿ ಮುಖ ಪ್ರಕ್ಷಾಳನ ಮಾಡಿಕೊಂಡು, ಬಾಯಾರಿಕೆಯನ್ನು ತೀರಿಸಿಕೊಂಡು, ಹರಟುತ್ತಾ ನಡೆದು ಬಂದರು. ಹಸಿರು ಕಟ್ಟಡದ ಹೊರಗಡೆ ಒಂದು ವಿಲ್ಲೀಸ್ ಜೀಪ್ ನಿಂತಿತ್ತು.

"ಏಯ್, ಸಾಹೇಬರು ಬಂದು ಬಿಟ್ಟಿದ್ದಾರೆ ಬಾರಪ್ಪ!" ಎನ್ನುತ್ತಾ ಖಾಕಿಧಾರಿಗಳಿಬ್ಬರೂ ಕಟ್ಟಡದೊಳಕ್ಕೆ ವನವೃಷಭಗಳಂತೆ ನುಗ್ಗಿದರು.

ಮೇಜಿನ ಮೇಲೆ ಕುಳಿತಿದ್ದ ಸಾಹೇಬರು, ಖಾಕಿಧಾರಿಗಳನ್ನು ಕಂಡೊಡನೆ, "ತ್ರಿಶ್ರದಲ್ಲಿ ಹೇಳಪ್ಪ" ಎಂದರು. ತನ್ನ ಬಟ್ಟೆಯನ್ನು ಸರಿಮಾಡಿಕೊಳ್ಳುತ್ತಾ, ಅವನು "ಓಹೋ! ಅಂತೆಯೇ ಸಾಹೇಬರೆ!"

ಇದ್ದಕ್ಕಿದ್ದಂತೆ, ಲಯಭರಿತ ತಟ್ಟುವಿಕೆಯೊಂದು ಪ್ರಾರಂಭವಾಯಿತು.

ಮತಿಯಿಲ್ಲದ ಹುಲುಮಾನವ
ಅತಿಯಾಸೆಯ ಪಾಮರ!
ವನಗಳೆ ಭುವನದ ಭಾಗ್ಯವು–
ಮನಗಾಣು ಸಹೋದರ!
ಭಾರತಾಂಬೆ ಸಿರಿಗೊರಳೊಳು
ಹಾರವಿದುವೆ ಪರಿಸರ!"

ಒಬ್ಬ ಖಾಕಿಧಾರಿಯು ಕವಿ. ಮರಕುಟಿಗದ ಶಬ್ದವು ತಲೆಕೆಡಿಸಿತು ಎಂದವನೂ ಅವನೇ. ಸಾಹೇಬರ ಮುಂದೆ ತ್ರಿಶ್ರದಲ್ಲಿ ಪದಗಳನ್ನು ಜೋಡಿಸಿ, ಪರಿಸರವನ್ನು ಹೊಗಳಿದವನೂ ಅವನೇ. ಒಬ್ಬರ ಆಶ್ರಯದಲ್ಲಿರುವ ಕವಿಗಳ ಕಥೆಯೇ ಇಷ್ಟು. ನಂತರ ಕಾಫಿ–ಟೀ ಗದ್ದಲಗಳು ಆರಂಭವಾದವು. ಅಭಿವೃದ್ಧಿಯ ಹೆಸರಿನಲ್ಲಿ ಪಶ್ಚಿಮ ಘಟ್ಟಗಳಲ್ಲಿ ಉದಿಸಿದ ಕಾಫಿ ಹಾಗೂ ಟೀ ಸಸ್ಯಗಳು ಜಗತ್ತಿನಲ್ಲೇ ಭಾರಿ ಪ್ರಸಿದ್ಧಿಯನ್ನು ಪಡೆದಿದೆ. ಔಷಧೀಯ ಸಸ್ಯಗಳು, ಶತಕಗಳಿಂದ ನಿಂತಿರುವ ಹೆಮ್ಮರಗಳು, ಅವುಗಳಲ್ಲಿ ವಾಸಿಸುವ ಜೀವ ವೈವಿಧ್ಯದ ಮೂಲವನ್ನೇ ಕಡಿದು, ಮನಸ್ಸಿಗೆ ಮುದ ಕೊಡಲು, ಜಿಹ್ವಾ ಚಪಲವನ್ನು ತೀರಿಸಿಕೊಳ್ಳಲು ಮಾನವನು ಬಿತ್ತ ವಿಷಬೀಜವೇ ಕಾಫಿ ಹಾಗೂ ಚಹಾ. ಅಂತಹ ಕಾಫಿ–ಟೀ ಸಮಾರಂಭಗಳಲ್ಲಿ ಕಾಡಿನಲ್ಲಿರುವ ಈ ಏಕಾಂಗಿ ಹಸಿರು ಕಟ್ಟಡದೊಳಗಿರುವ ಸಾಹೇಬರಿಗೆ ವಿಚಿತ್ರ ಪ್ರಶ್ನೆಗಳನ್ನು ಕೇಳುವ 'ಹವ್ಯಾಸ'. ಅಂದು ಸಾಹೇಬರು, "ಯಾರನ್ನಾದರೂ ಕೊಲ್ಲುವುದಕ್ಕೆ ಬೇಕಿರುವುದೇನು?" ಎಂದರು.

ಒಬ್ಬೊಬ್ಬರು ಒಂದೊಂದು ಉತ್ತರವನ್ನು ಹೇಳಲಿಕ್ಕೆ ಪ್ರಾರಂಭಿಸಿದರು. ಒಬ್ಬನು 'ಆಯುಧ' ಎಂದನು. ಇನ್ನೊಬ್ಬನು 'ಧೈರ್ಯ' ಎಂದನು. ಕವಿಯಾದ ಗೋಪಿಯು ಇನ್ನೂ ಯೋಚಿಸುತ್ತಲೇ ಚಹಾ ಹೀರುತ್ತಿದ್ದನು. ಸಾಹೇಬರಿಗೆ ಈ ಉತ್ತರಗಳು ಮೆಚ್ಚುಗೆಯಾಯಿತಾದರೂ, ಯಾವುದೂ ತೃಪ್ತಿ ನೀಡಲಿಲ್ಲ. ಏನೋ ಮರೆಯಾಗಿದೆ ಎಂದೇ ಅನ್ನಿಸುತ್ತಿತ್ತು. ಆಗ, ಒಂದು ಬಿರುಸಾದ ದನಿಯು, "ಪ್ರಬಲವಾದ ಕಾರಣ" ಎಂದಿತು. ಸಾಹೇಬರಿಗೆ ಸಮಾಧಾನವಾಯಿತೆಂದು ಅವರ ಮುಖಭಾವದಿಂದ ತಿಳಿಯಿತು. ದಿಗ್ಭ್ರಮೆಗೊಳಗಾದ ಅವರು ಒಮ್ಮೆ

ಅವಲೋಕಿಸಿದರು. "ಎಂಥ ಸಮಂಜಸ ಉತ್ತರವಿದು!" ಎಂದು ನಿಶ್ಶಂಕ ಹೃದಯದಿಂದ ಹೇಳಿದರು. ಆದರೆ ಹೇಳಿದ್ದು ಯಾರೆಂದು ಹುಡುಕಿದರು. ಕತ್ತಲ ಕೋಣೆಯ ಬೀಗವನ್ನು ತೆಗೆಯಲಾಯಿತು. ಒಳಗೆ ಕಂಬಳಿ ಹೊದ್ದು ಕುಳಿತಿದ್ದ 'ಅವನು' ಆ ಉತ್ತರವನ್ನು ಹೇಳಿದ್ದ. ಮುದುಡಿಕೊಂಡು ಕುಳಿತಿದ್ದ ಅವನು, ನಿಧಾನವಾಗಿ ತಲೆಯನ್ನೆತ್ತಿದ್ದ. ಬಿಸಿಲಿಗೆ ಕಣ್ಣು ಸರಿಹೊಂದುವವರೆಗೂ ಕಂಬಳಿಯನ್ನು ಅಡ್ಡಲಾಗಿ ಹಿಡಿದ. ತಲೆಯನ್ನೆತ್ತಿ ಸಾಹೇಬರನ್ನು ನೋಡಿದ. "ಗೋಪಿ, ಯಾರೋ ಇವನು?" ಸಾಹೇಬರು ಕೇಳಿದರು. "ಸಾರ್, ನಿನ್ನೆ ಹಿಡಿದೆವು ಸಾರ್. ಜಾನ್ ಸಾಹೇಬರನ್ನ ಕೊಲ್ಲಕ್ಕೆ ಯತ್ನಿಸಿದ! ಹೆಸರು ಕಾಳ" ಗೋಪಿ ವಿವರಗಳನ್ನು ಕೊಟ್ಟ. "ಓಹೋ! ಹಾಗಾದರೆ, ಇವನು ಕೊಲೆ ಮಾಡಲು ಪ್ರಯತ್ನಿಸಿದವನು. ಅದೇನು ಪ್ರಬಲ ಕಾರಣವಿತ್ತು ನಿನಗೆ ಕೊಲೆ ಮಾಡಲಿಕ್ಕೆ?!" ಸಾಹೇಬರು ದಬಾಯಿಸಿದರು. "ಆ ಬಿಳಿಯನನ್ನು ನಾನೊಬ್ಬ ಕಳ್ಳನೆಂದುಕೊಂಡೆ. ಮತ್ತೆ ದೋಚೋಕೆ ಬಂದನಾ ಅಂತ ಕೊಲ್ಲಕ್ಕೆ ಪ್ರಯತ್ನಿಸಿದೆ!" ಎಂದ. ಸಾಹೇಬರು ಸುಮ್ಮನಾಗಲಿಲ್ಲ. "ಓಹೋ, ಅದೇನಪ್ಪಾ? ಸರ್ಕಾರ ನಮ್ಮನ್ನ ನೇಮಿಸಿಲ್ಲವೇ? ಅದ್ಯಾಕೆ ಅವರನ್ನ ಕಳ್ಳನೆಂದುಕೊಂಡೆ?" ಎಂದರು. ಇನ್ನು ಕುಪಿತನಾಗಿದ್ದ ಕಾಳ, "ಕೇಳ್ತೀರಾ ನನ್ನ ಕಥೆಯನ್ನ?" ಎಂದ. ಕೇವಲ ಕಾಡು, ಕೋತಿ, ಪಕ್ಷಿ, ಅಪರೂಪಕ್ಕೆ ವನವೃಷಭ, ಹುಲಿಗಳನ್ನು ಕಾಣುತ್ತಿದ್ದ ಸಿಬ್ಬಂದಿ, "ಅಬ್ಬ, ಒಂದು ದಿನ ನಮ್ಮ ಏಕತಾನತೆಯ ಕಥೆಯನ್ನ ಬಿಟ್ಟು ಬೇರೆ ಕಥೆಯನ್ನ ಕೇಳುವ ಅವಕಾಶ ಒದಗಿತಲ್ಲ" ಎಂದು ಚಹಾ-ಕಾಫಿ ಲೋಟಗಳನ್ನ ಪಕ್ಕಕ್ಕಿಟ್ಟು, ಕಾಳನನ್ನು ಹೊರಕ್ಕೆ ಕರೆದು ಸುತ್ತಲೂ ಕುಳಿತರು. ಮೇಜಿನ ಮೇಲೆ ಕುಳಿತಿದ್ದ ಸಾಹೇಬರು ಇಳಿದು, ಮೆತ್ತನೆಯ ಕುರ್ಚಿಯ ಮೇಲೆ ಕುಳಿತರು. ಅವರ ವ್ಯಂಗ್ಯಕ್ಕೆ ವ್ಯತಿರಿಕ್ತವಾದಂತಹ ಕಥೆಯನ್ನ ಕಾಳ ಹೇಳಲಾರಂಭಿಸಿದ.

2

ಆರಂಭ

ಇನ್ನೂ ಸಾಮ್ರಾಜ್ಯಶಾಹಿ ಬ್ರಿಟೀಷರ ಕಪಿಮುಷ್ಟಿಯಲ್ಲಿ ಭಾರತಾಂಬೆ ಬಳಲುತ್ತಿದ್ದಾಗ ನಡೆದ ಘಟನೆ ಇದು. ನನ್ನ ಬದುಕಿಗೊಂದು ಗುರಿ ಕೊಟ್ಟ ಘಟನೆ. ತಾಯಿ ಭಾರತಿಯನ್ನು ಮತ್ತೆ ಸಾಧ್ವಿನಿಯಾಗಿ, ಸ್ವತಂತ್ರಳಾಗಿ ನೋಡಲು ನಮ್ಮನ್ನು ಹಪಹಪಿಸುವಂತೆ, ಸಾಧ್ಯವಾದರೆ ಪ್ರಾಣಾರ್ಪಣೆ ಮಾಡುವಂತೆ ಪ್ರೇರೇಪಿಸಿದ ಜೀವನದ ಘಟ್ಟ.

ಹಿಮಾಲಯಕ್ಕಿಂತಲೂ ಪ್ರಾಚೀನವಾದ ಗಿರಿಶಿಖರವು ನಮ್ಮ ಭಾರತದಲ್ಲಿದೆ. ಅದುವೇ ಭಾರತದ ಕೊಂಕಣ ತೀರದ ಪಕ್ಕದಲ್ಲಿರುವ ನಮ್ಮ ಪಶ್ಚಿಮ ಘಟ್ಟಗಳು! ಗುಜರಾತದಿಂದ ಮಹಾರಾಷ್ಟ್ರ, ಕರ್ನಾಟಕ, ಗೋವಾ, ಕೇರಳ, ಹಾಗೂ ತಮಿಳುನಾಡುಗಳಲ್ಲಿ ಹರಡಿಕೊಂಡಿರುವ ಈ ಮಹತ್ತರವಾದ ಕಾಡು ಕಡಲಿಗೆ ಜೋಡಿಸಿರುವಂತೆ ಇದೆ. ನಮಗೆ ಜೀವ ನೀಡುವ ತಾಯಿ ಒಬ್ಬಳಾದರೆ ನಮ್ಮನ್ನೆಲ್ಲಾ ಪೋಷಿಸುತ್ತಿರುವ ತಾಯಿ ಈ ಅರಣ್ಯ. ನಮಗೆ ಪ್ರತ್ಯೇಕವಾಗಿ ದೇವಾಲಯವೆಂದೇನಿಲ್ಲ. ನಮಗೆ ಒಂದೊಂದೂ ವೃಕ್ಷವೂ ಒಂದು ದೇವಾಲಯ. ಅದರೊಳಗೆ ಸಂಚರಿಸುತ್ತಿರುವ ಜೀವವೇ ದೇವರು. ಅವುಗಳಲ್ಲಿನ ಪ್ರಾಣಿ ಸಂಕುಲ ಮಾಡುವ ಕಾರ್ಯಗಳೇ ಪೂಜೆ. ನಮಗೆ ಊಟ ಬೇಕೆಂದಾಗ ನಾವು ಅವುಗಳ ಬಳಿ ಕ್ಷಮೆಯನ್ನು ಕೇಳಿ ಹಣ್ಣುಗಳನ್ನು ಕೀಳುತ್ತೇವೆ.

ನನಗಿಬ್ಬರು ಸ್ನೇಹಿತರು. ಒಬ್ಬನು ನಾಗ, ಇನ್ನೊಬ್ಬನು ಬೋಕ. ನಾವು ಮೂವರು ಒಂದೊಂದು ತಿಂಗಳ ಅಂತರದಲ್ಲಿ ಹುಟ್ಟಿದ್ದು ಎಂದು ಅಮ್ಮ ಆಗಾಗ್ಗೆ ಹೇಳುತ್ತಿರುತ್ತಾಳೆ. ಚಿಕ್ಕಂದಿನಿಂದಲೂ ನಮ್ಮ ತಂದೆ ತಾಯಿಯರು ಹೋಗಿ

ಹಣ್ಣು-ತರಕಾರಿಗಳನ್ನು ತರುವವರೆಗೂ ನಾವು ಮೂವರೂ ಯಾವುದಾದರೊಂದು ಚೇಷ್ಟೆ ತರಲೆಗಳಲ್ಲಿ ತೊಡಗಿರುತ್ತಿದ್ದೆವು. ಅವರು ಹೋಗಿ ತರುತ್ತಿದ್ದ ಗೆಣಸು, ನಾರಗೆಣಸು, ಬೆಲ್ಲದ ಗೆಣಸು, ಕಾಡಗೆಣಸು, ನೂರೆಗೆಣಸು, ಎಕ್ಕಗೆಣಸು, ಕಳ್ಳೆಕಾಯಿ, ಕಾರೆಕಾಯಿ, ಮುಂತಾದವುಗಳನ್ನ ನಾವು ಚಪ್ಪರಿಸಿಕೊಂಡು ತಿನ್ನುತ್ತಿದ್ದೆವು. ತಿನ್ನುವಾಗ, ಅಪ್ಪಯ್ಯ "ಅಮ್ಮಾ ಕಾಡಿನ ತಾಯಿ, ನಮ್ಮನ್ನು ಕ್ಷಮಿಸಿ ಬಿಡಮ್ಮ. ನಮ್ಮ ಹೊಟ್ಟೆ ಪಾಡಿಗೆ ನಿನ್ನ ಮಡಿಲನ್ನು ಬಗೆದು ಇದನ್ನ ತಂದಿದೀವಿ. ದಯವಿಟ್ಟು ಇದನ್ನ ನಮ್ಮ ಪಾಲಿನ ಅಮೃತವಾಗಿಸಮ್ಮ." ಎಂದು, ಬೇಯಿಸಿದ ಗೆಣಸನ್ನ ಕಣ್ಣಿಗೊತ್ತಿಕೊಂಡು ತಿನ್ನುವರು. ಕೆಲವು ದಿನಗಳಂತೂ ಅವರು ತನ್ಮಯರಾಗಿ, ಕಣ್ಣೀರು ಸುರಿಸುತ್ತಾ, ಹಾಗೆ ಆಕಾಶವನ್ನು ನೋಡಿಕೊಂಡು ತಿನ್ನುವರು. ಅವರಿಗೆ ಈ ಅರಣ್ಯವೆಂದರೆ, ತಾಯಿಗಿಂತಲೂ ಹೆಚ್ಚು. ನಮಗೆ ಇವೆಲ್ಲವೂ ಅರ್ಥವಾಗುತ್ತಿರಲಿಲ್ಲ. ನಮ್ಮ ತುಂಟಾಟಗಳು ನಮಗೆ. ಒಮ್ಮೊಮ್ಮೆ ಚಿಕ್ಕ ಝರಿಗಳಿಗೆ ಹೋಗಿ, ಅದರಲ್ಲಿರುತ್ತಿದ್ದ ಪುಟ್ಟ ಪುಟ್ಟ ಮೀನುಗಳನ್ನು ಕೈಯಲ್ಲಿ ಎತ್ತಿಕೊಂಡು ಮತ್ತೆ ನೀರಿಗೆ ಬಿಡುತ್ತಿದ್ದೆವು. ಬೆಣಚುಕಲ್ಲುಗಳನ್ನೆತ್ತಿಕೊಂಡು ಸರಿಯಾಗಿ ಗುರಿಯಿಟ್ಟು ನೀರಿಗೆ ಹಾಕಿದರೆ, ಅದು ನಾಲ್ಕೈದು ಬಾರಿ ಎಗರಿ ಎಗರಿ ಹೋಗುವುದನ್ನ ನೋಡಿ ಬೀಗುತ್ತಿದ್ದೆವು. ಆದರೆ ಅದೇ ಝರಿಯ ಆಟ ಬೇಜಾರು ತಂದಿತು. ಮತ್ತೆ ಕಾಡಿನ ಬೇರೆ ಬೇರೆ ಭಾಗಗಳನ್ನು ಹುಡುಕಿಕೊಂಡು ಹೋಗಿ, ಅಲ್ಲಿದ್ದ ಸಿಂಗಳೀಕಗಳ ಕೂಗನ್ನ ಅನುಕರಿಸುವುದಕ್ಕೆ ಪ್ರಯತ್ನಿಸುತ್ತಿದ್ದೆವು. ನಾವು ಮಾಡುತ್ತಿದ್ದ ತಪ್ಪು ಅನುಕರಣೆಗೆ ಅವುಗಳು ಹೆದರಿಕೊಂಡು ಛಂಗನೆ ಎಗರಿ ಎಗರಿ ಹೊರಟುಬಿಡುತ್ತಿದ್ದವು. ಚಿಕ್ಕ ಮರಿಗಳು ಕೆಳಗಿರುತ್ತಿದ್ದವು. ಎಷ್ಟು ಮುದ್ದಾಗಿರುತ್ತಿದ್ದವೆಂದರೆ! ಅದನ್ನು ಮುಟ್ಟುವ ಬಯಕೆ ನಮಗೆ. ಒಮ್ಮೆ ಬೋಕನು ಯಾವುದೇ ಸದ್ದು ಮಾಡದೆ ಮರ ಹತ್ತಲು ಕಲಿಯುತ್ತಿದ್ದ ಒಂದು ಚಿಕ್ಕ ಮರಿಯನ್ನು ಮುಟ್ಟಲು ಹೋದ. ಆದರೆ ಮರಿಗೆ ಪ್ರಾಣಭಯ ಉಂಟಾಯಿತೇನೊ. ವಿಚಿತ್ರವಾಗಿ ಕಿರುಚಾಡಲಾರಂಭಿಸಿತು. ತತ್‌ಕ್ಷಣ ಅಲ್ಲಿದ್ದ ಮೌನವೆಲ್ಲ ಹಾರಿಹೋಯಿತು. ಎಲ್ಲಾ ಸಿಂಗಳೀಕಗಳೂ ಕೂಗಾಡಲಾರಂಭಿಸಿದವು. ಒಂದು ಹೆಣ್ಣು ಸಿಂಗಳೀಕ ಬಂದು ಮರಿಯನ್ನ ಎತ್ತಿಕೊಂಡು ಮೇಲಕ್ಕೆ ಹತ್ತಿ ಹೋಯಿತು. ಎಲ್ಲದ್ದಕ್ಕಿಂತ ದೊಡ್ಡದಾದ ಒಂದು ಸಿಂಗಳೀಕವು ಗಾಂಭೀರ್ಯದಲ್ಲಿ ನಡೆದು ಬಂತು. ಅದರ ಮುಖದ ಸುತ್ತಲೂ ಇದ್ದ ಬೆಳ್ಳಿ ಗಡ್ಡವನ್ನೊಮ್ಮೆ ಅಲುಗಾಡಿಸಿತು. ಅದರ ಹಿಂದೆಯೇ ಹತ್ತಾರು ಸಿಂಗಳೀಕಗಳು ಕಿರುಚಾಡಿಕೊಂಡು, ಹಣ್ಣುಗಳನ್ನಿಟ್ಟುಕೊಂಡು ಬಂದವು. ದೊಡ್ಡ ಸಿಂಗಳೀಕವು ಎರಡು ಕಾಲುಗಳ ಮೇಲೆ ನಿಂತು ಬಾಯನ್ನೊಮ್ಮೆ ತೆರೆಯಿತು. ಅದರ ಹಲ್ಲಿನ ರಚನೆಯನ್ನ ನೋಡಿ ನಮಗೆ ಹೆದರಿಕೆಯಾಯಿತು. ಇಲ್ಲೇ ಇದ್ದರೆ ಅನಾಹುತ

ತಪ್ಪಿದ್ದಲ್ಲ ಎಂದು ಮನಗಂಡು ಮೂವರೂ ಅಲ್ಲಿಂದ ದೌಡಾಯಿಸಿದೆವು. ಸಿಂಗಳೀಕಗಳು ಹಿಂಬಾಲಿಸಿದವೋ ಇಲ್ಲವೋ ತಿಳಿಯದು. ನಾವು ಓಡಿ ಓಡಿ ಗುಡಿಸಲು ಸೇರುವಷ್ಟರಲ್ಲಿ ಅಪ್ಪಯ್ಯ ಅಮ್ಮ ಎಲ್ಲರೂ ಬಂದಿದ್ದರು. ನಾವು ಮಾಡಿದ ಕಿತಾಪತಿ ಅವರಿಗೆ ಹೇಗೋ ತಿಳಿದು ಹೋಗಿತ್ತು. ಕಾಡಿನ ಒಂದು ಭಾಗದಲ್ಲಿ ಯಾವುದೋ ಒಂದು ಜಾತಿಯ ಪ್ರಾಣಿ ಗದ್ದಲ ಮಾಡಿತೆಂದರೆ, ಬೇರೆ ಬೇರೆ ಪಕ್ಷಿಗಳು, ಕೋತಿಗಳೆಲ್ಲವೂ ಕಿರುಚಾಡಲು ಆರಂಭಿಸುತ್ತದೆ. ಯಾವುದೋ ಅಪಾಯದ ಚಿಹ್ನೆ ಎಂದು ಅರಿತು, ಅವುಗಳು ತಮ್ಮ ತಮ್ಮ ಗುಂಪುಗಳಿಗೆ ಎಚ್ಚರ ಕೂಗನ್ನು ನೀಡುತ್ತವೆ. ಕಾಡಿನಲ್ಲೇ ಹುಟ್ಟಿ, ಕಾಡಿನಲ್ಲೇ ಬೆಳೆದು, ಕಾಡಿನಿಂದಲೆ ಪೋಷಿಸಲ್ಪಟ್ಟ ನಮ್ಮ ತಂದೆ ತಾಯಿಯರಿಗೆ ಇಷ್ಟು ಚಿಕ್ಕ ವಿಷಯ ತಿಳಿಯೋದಿಲ್ಲವೆ? ಸಹಜವಾಗಿಯೇ ನಾವು ಯಾವುದೋ ಪ್ರಾಣಿಗೆ ಕೈ ಹಾಕೋದಿಕ್ಕೆ ಹೋಗಿದ್ದೆವು ಎಂಬುದನ್ನ ಅವರು ಅರ್ಥ ಮಾಡಿಕೊಂಡರು. ಪ್ರಾಣಿಗಳಿಗೂ ನಮ್ಮಷ್ಟೇ ಭಯ ಇರುತ್ತದೆಂದು ನಮಗೆ ಅಂದು ಅರ್ಥವಾಯಿತು. ಅಂದಿನಿಂದ ನಾವು ಪ್ರಾಣಿಗಳ ತಂಟೆಗೇ ಹೋಗದೆ, ನಮಗೂ ಅವುಗಳಿಗೂ ಸಮವಾದ ಪ್ರಕೃತಿಯನ್ನು ಆನಂದಿಸುವುದರಲ್ಲಿಯೇ ಕಾಲ ಕಳೆಯುತ್ತಿದ್ದೆವು. ಒಂದೇ ಝರಿಯ ಬಳಿ ದಿನವೂ ಹೋಗುವುದನ್ನು ಬಿಟ್ಟು, ನೀರನ್ನಾರಿಸಿ ದೂರ ದೂರ ನಡೆಯುತ್ತಿದ್ದೆವು. ಸಾಮಾನ್ಯವಾಗಿ, ನೀರೆಲ್ಲಿರುವುದೋ ಅಲ್ಲಿ ತಣ್ಣನೆ ಗಾಳಿ ಬೀಸುತ್ತದೆ. ಜೊತೆಗೆ ಒಂದು ಪರಿಯ ಪರಿಮಳವೂ ಬೀರುತ್ತದೆ. ನಮ್ಮ ಮೂವರಲ್ಲಿ ಬೋಕನ ಆಘ್ರಾಣ ಬಹು ಸೂಕ್ಷ್ಮವಾದದ್ದು. ಅವನು ದಾರಿಯನ್ನು ಕಂಡುಹಿಡಿಯುತ್ತಿದ್ದ. ನಾವು ಹೋಗಿ ಆಟವಾಡುತ್ತಿದ್ದೆವು. ಹೀಗೆ ನಾವು ಬೆಟ್ಟದಿಂದ ನೀರು ಬೀಳುವ ಸ್ಥಳಕ್ಕೆ ಹೋಗಿ ಮೂರ್ಛೆ ಹೋಗುವಷ್ಟು ಸುಸ್ತಾಗುವವರೆಗೂ ಆಟವಾಡಿದ್ದೀವಿ. ನೀರು ಮೇಲಿನಿಂದ ಬೀಳಬೇಕಾದರೆ, ಮಧ್ಯದಲ್ಲಿನ ಕಲ್ಲಿನ ರಚನೆಯು ಅದನ್ನು ಮೂರು-ಮೂರಾಗಿ ಭಾಗಿಸಿಬಿಡುತ್ತಿತ್ತು. ಒಂದು ಭಾಗವು ಜೋರಾಗಿ ಸುರಿಯುತ್ತಿತ್ತು. ಒಂದು ಅಗಲವಾಗಿ, ಇನ್ನೊಂದು ಕೇವಲ ಚಿಮುಕಿಸುವಂತೆ. ಹೀಗೆ ಮೂವರೂ ಒಂದೊಂದು ಭಾಗದ ಕೆಳಗೆ ನಿಂತು, ಮೂರೂ ರೀತಿಯ ಜಲಪಾತಗಳನ್ನ ಆನಂದಿಸಿದ್ದೇವೆ. ಅಷ್ಟೇ ಯಾಕೆ? ಇನ್ನ ಕಲ್ಲಿನ ಮೇಲೆ ನೀರು ಬಿದ್ದು ಅದೇ ದಾರಿಯಲ್ಲಿ ಹರಿದುಬಿಡುತ್ತಿತ್ತು. ನೀರು ಬಿದ್ದೂ ಬಿದ್ದೂ ಆ ಕಲ್ಲಿನ ಮೇಲ್ಪದರ ಜಾರುವುದಕ್ಕೆ ಅನುಕೂಲಕರವಾಗಿರುತ್ತಿತ್ತು. ನಾವು ಮೇಲೆ ಮಲಗಿ ನಮ್ಮನ್ನು ನಾವು ನೂಕಿಕೊಂಡಾಗ, ಮೆತ್ತಗಾಗಿರುವ ಕಲ್ಲು, ಪಾಚಿ ಮುಂತಾದವುಗಳೇ ನಮ್ಮನ್ನು ಕೆಳಗಿನವರೆಗೂ ತಣ್ಣಗೆ, ನಿಧಾನವಾಗಿ ತಳ್ಳಿಬಿಡುತ್ತಿತ್ತು. ಅಕಸ್ಮಾತ್ ಮುಂದಿನ ದಾರಿ ತುಂಬ ಅಪಾಯಕಾರಿ ಎನಿಸಿದರೆ, ಅಲ್ಲಿಲ್ಲಿ ಬಿದ್ದಿರುತ್ತಿದ್ದ ಹಳೆಯ ಮರದ ಕೊಂಬೆ, ಚಿಕ್ಕದಾದರೂ, ಭಾರವಾದ

ಕಲ್ಲುಗಳನ್ನು ನಾವು ಹಿಡಿದುಕೊಂಡು, ಹೊರಕ್ಕೆ ಬಂದು, ಬಿಸಿಲಿನಲ್ಲಿ ಮೈ-ಕೈ ಒಣಗಿಸಿಕೊಂಡು, ದಾರಿಯಲ್ಲಿ ಸಿಗುವ ಹಣ್ಣುಗಳನ್ನೇ ಹೊಟ್ಟೆಗೆ ಹಾಕಿಕೊಂಡು, ನಿಧಾನವಾಗಿ ಮನೆಗೆ ಹೋಗುತ್ತಿದ್ದೆವು. ನಮ್ಮ ಜೀವನವೇ ತುಂಬಾ ಆರಾಮವಾದದ್ದು. ಜೀವನದುದ್ದಕ್ಕೂ ಇದೇ ಜಲಪಾತಗಳು, ಝುರಿ, ಚಿಮುಕಿಸುವ ಮಳೆ, ಹಣ್ಣು, ಒಮ್ಮೊಮ್ಮೆ ಪ್ರಾಣಿಗಳು, ಹಕ್ಕಿಯ ಕಲರವ, ಇನ್ನು ಯಾವುದಾದರೊಂದು ಹೆಣ್ಣಿನೊಂದಿಗೆ ಮದುವೆ, ನಂತರ ಇದೇ ಕೆಲಸವನ್ನು ಮಾಡಲು ಮಕ್ಕಳನ್ನು ಹುಟ್ಟಿಸುವುದೇ? ಎಂದು ನಾವು ಯೋಚಿಸಿ ತುಂಬಾ ತೃಪ್ತಿ ಪಟ್ಟದ್ದೂ ಇದೆ. ಕಾಡಿನ ಅದ್ಭುತವೇ ಇದು. ಇಲ್ಲಿರುವ ಮನುಷ್ಯರಿಗೂ, ಪ್ರಾಣಿಗಳಿಗೂ ಯಾವುದೇ ವ್ಯತ್ಯಾಸವಿಲ್ಲ. ಅವು ಸದ್ದುಗಳ ಮೂಲಕ ಮಾತನಾಡುತ್ತವೆ. ನಾವು ಭಾಷೆ ಮಾಡಿಕೊಂಡಿದ್ದೇವಷ್ಟೆ ಎನ್ನಿಸಿತು. ಎಷ್ಟು ಸುಖಕರವಾಗಿದೆ ಮುಂದಿನ ಬದುಕು ಎಂದು ಯೋಚಿಸಿ ನಾವು ಅಂದರೆ ನಾಗ, ಬೋಕ ಹಾಗೂ ನಾನು, ಹೆಚ್ಚಾಗಿ ಗಮನಿಸಿರುವ ಸಿಂಗಳೀಕಗಳಂತೆ, ಹತ್ತಿರ ವಿರುವ ಮರವನ್ನು ಹತ್ತಿ ಎಗರಿ ಎಗರಿ, ಅಲ್ಲಾಡಿಸಿ, ಬಾಯನ್ನಗಲಿಸಿ, ಮುಂತಾದ ಚೇಷ್ಟೆಗಳನ್ನು ಮಾಡಿ, ಖುಷಿಯನ್ನು ಹೊರಹಾಕುತ್ತಿದ್ದೆವು. ಇದನ್ನು ನೋಡುತ್ತಾ ನಮ್ಮ ತಂದೆ ತಾಯಿಯರೂ ಆನಂದಿಸುವರು. ಕಾಡಿರುವುದು ನಮಗೆ ಈ ಮನೋರಂಜನೆಗಳನ್ನು ನೀಡುವುದಕ್ಕಷ್ಟೇ ಎಂದು ನಾವು ಭಾವಿಸಿದ್ದೆವು. ಆದರೆ ನಮ್ಮ ವಯಸ್ಸು ಹೆಚ್ಚಾದಂತೆ, ಕಾಡಿನೆಡೆಗಿನ ವಿವಿಧ ದೃಷ್ಟಿಕೋನಗಳು ಸ್ಫುರಿಸತೊಡಗಿದವು. ಈ ಮಹಾ ಅರಣ್ಯಕ್ಕೂ-ಮನುಜನಿಗೂ ಇರುವ ಸಂಬಂಧ ಏನು ಎಂಬುದು ದೃಗ್ಗೋಚರವಾಗತೊಡಗಿತು. ನಮ್ಮ ದೃಷಿಕೋನವು ವಿಶಾಲವಾದಂತೆ, ನಾವು ಓಡಾಡುತ್ತಿದ್ದ ಅದೇ ಕಾಡು, ನೀರು ತರುವ ಅದೇ ಝುರಿ ಬೇಜಾರು ತರಿಸುತ್ತಿತ್ತು. ನಾವು ಮೂವರೂ ಒಂದೊಂದು ಕೋಲು ಹಿಡಿದು, ಬೆಂಕಿ ಹಚ್ಚಲು ಬೇಕಾದ ಸಾಮಗ್ರಿಗಳನ್ನ ಒಂದು ಚರ್ಮದ ಚೀಲದಲ್ಲಿ ಹಾಕಿಕೊಂಡು ದೂರ ದೂರ ನಡೆಯುತ್ತಿದ್ದೆವು.

ನಮ್ಮ ಗುಡಿಸಲಿರುವ ಸ್ಥಳದಲ್ಲಿ ಸದಾ ಚಳಿ, ಒಂದು ರೀತಿಯ ನೀರು ಚಿಮುಕಿಸುವಿಕೆ. ಆದರೆ ದೂರ ದೂರ ನಡೆದಷ್ಟೂ, ಕಾಡಿನ ರಚನೆಯೇ ಬದಲಾದದ್ದು ನಮಗೆ ಅಚ್ಚರಿಯನ್ನು ತಂದಿತು. ಮರಗಳೆಲ್ಲಾ ಒಣಗಿರುತ್ತಿದ್ದವು. ಕೆಲವು ಮರಗಳಂತೂ ಅಡ್ಡಲಾಗಿ ಬಿದ್ದಿರುತ್ತಿದ್ದವು. ಹೀಗೆ ನಡೆದಾಡಿಕೊಂಡು, ಹುಡುಕುತ್ತಾ ಹೋಗುವಾಗ, ನಮಗೆ ದಾರಿಯೊಂದು ಕಂಡಿತು. ಯಾರೋ ತಮ್ಮ ಅನುಕೂಲಕ್ಕೆ ಮಾಡಿಕೊಂಡಿರುವಂತೆಯೇ ಕಂಡಿತು. ನಮ್ಮ ಕಡೆಯ ಮಣ್ಣಿಗಿಂತಲೂ ಇಲ್ಲಿಯ ಮಣ್ಣು ತುಂಬಾ ಒಣ-ಒಣ. ಕಾಲಿಟ್ಟರೆ ಧೂಳೆಬ್ಬಿಸುವಂಥದ್ದು. ಹಣ್ಣು ಹಂಪಲು ಸಿಗುವುದೂ ಕಷ್ಟ ಇಂತಹ ಸಮಯದಲ್ಲಿ

ನಾವು ನಮ್ಮೊಂದಿಗೆ ತಂದಿರುತ್ತಿದ್ದ ಒಣ ಹಣ್ಣುಗಳನ್ನು ತಿಂದು, ಝರಿಗಳಲ್ಲಿ, ಅಥವಾ ಕೆರೆಗಳಲ್ಲಿ ಹರಿಯುತ್ತಿದ್ದ ನೀರಿನಲ್ಲಿ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದೆವು. ಈ ರೀತಿ ಕೆರೆಗಳಿಗೆ ಹೋದಾಗ, ನಮ್ಮ ಅದೃಷ್ಟವೋ ದುರಾದೃಷ್ಟವೋ ಗಜವ್ರಾತವು ಹಾಯಾಗಿ ಸ್ನಾನ ಮಾಡುವುದು ಕಾಣುತ್ತಿತ್ತು. ಒಮ್ಮೊಮ್ಮೆ ಚಿಕ್ಕ ಮರಿಯೂ ಇರುವುದನ್ನು ನಾವು ಕಂಡರೆ, ಅದೆಲ್ಲಿ ಕೆರಳಿ ಅನಾಹುತವಾಗುವುದೋ ಎಂದು ನಾವು ಯೋಚಿಸುತ್ತಿದ್ದರೆ, ಅವುಗಳು ಯಾವುದೇ ಚಿಂತೆಯಿಲ್ಲದಂತೆ ನಮ್ಮನ್ನು ಕಂಡೂ, ಆಟದಲ್ಲಿ ತೊಡಗಿರುತ್ತಿದ್ದೆವು.

ನಾವು ಎರಡು ಮೂರು ದಿನಗಳ ಕಾಲ ಮನೆ ಬಿಟ್ಟು ಈ ರೀತಿ ತಿರುಗಾಡುತ್ತಿದ್ದೆವು. ಇದರಿಂದ ನಮಗೆ ಕಾಡಿನ ಭಾಗಗಳ ಪರಿಚಯ ಚೆನ್ನಾಗಾಯಿತು. ಮಳೆಗಾಲದಲ್ಲಿ ತಿರುಗುವಾಗ ನಮಗೆ ವಿಧವಿಧವಾದ ಸರ್ಪ, ಕಪ್ಪೆಗಳು ಕಂಡವು. ಹುಲಿಯ ಘರ್ಜನೆ ಕೇಳಿಸಿದ್ದೂ ಉಂಟು.

ಈ ರೀತಿಯಲ್ಲಿ ನಮ್ಮ ಜೀವನವು ಸಾಗುತ್ತಿರಬೇಕಾದರೆ, ಒಂದು ದಿನ ಒಂದು ವಿಚಿತ್ರ ಘಟನೆ ನಡೆಯಿತು.

ನಮ್ಮ ಪಾಡಿಗೆ ನಾವು ದಾರಿಯಲ್ಲಿ ಸಿಗಬಹುದಾದ ವಿಶೇಷ ರೀತಿಯ ಕಲ್ಲುಗಳು, ಹುಳು, ಪ್ರಾಣಿಗಳನ್ನು ಹುಡುಕುತ್ತಾ ಹೋಗುತ್ತಿದ್ದಾಗ, "ಏಯ್ ಎಲ್ಲಿಗೇ ಹೋಗ್ತಿದ್ಯಾ?!! ಬಾರೇ ಬಾ! ಚ್ಚ ಚ್ಚ ಚ್ಚ! ಬಾಬಾ!" ಎಂದು ಕೇಳಿಸಿತು. ನಾವು ಮೂಕವಿಸ್ಮಿತರಾದೆವು. ಇದ್ಯಾವುದಪ್ಪ ನಮ್ಮ ಹಾಗೆಯೇ ಮಾತನಾಡುವ ಪ್ರಾಣಿ!! ನಮ್ಮ ಬಳಿ ಇದ್ದ ಕೋಲುಗಳನ್ನ ಸಿದ್ಧವಾಗಿಟ್ಟುಕೊಂಡೆವು. ನಾಗನು, ಪಿಸುದನಿಯಲ್ಲಿ "ಏಯ್, ಬಚ್ಚಿಟ್ಟುಕೊಳ್ಳೋಣ ಬನ್ನಿರೋ" ಎಂದು ಅಲ್ಲೇ ಇದ್ದ ದಟ್ಟ ಪೊದೆಯ ಹಿಂದೆ ಎಗರಿ ಅವಿತುಕೊಂಡ. ಬೋಕನೂ ನಾನೂ ಅದನ್ನೇ ಅನುಸರಿಸಿದೆವು. ಒಂದೆರಡು ಕ್ಷಣ ಆಗುವಷ್ಟರಲ್ಲಿ, ಪುಟ್ಟ ಕರು ಒಂದು ನಾವು ಅವಿತಿದ್ದ ಪೊದೆಯ ಕಡೆಗೆ ಬಂದಿತು. ಪೊದೆಗೆ ಬಾಯಿ ಹಾಕಿ ಹುಲ್ಲು ತಿನ್ನಲಾರಂಭಿಸಿತು. ಮತ್ತೆ ಅದೇ ದನಿ, "ಏಯ್, ಇಲ್ಲಿ ಬಾರೇ ಅಂದ್ರೇ" ಎಂದು ರಾಗ ಎಳೆಯುತ್ತಾ ನಮ್ಮತ್ತ ಬಂದಿತು. ನಮಗೋ, ಯಾರು ಏನು ಎತ್ತ ಎಂದು ನೋಡುವ ಆಸೆ. ಆದರೆ ಎಲ್ಲಿ ನಮ್ಮ ಜೀವಕ್ಕೆ ಕುತ್ತು ಬರುವುದೋ ಎಂಬ ಭಯ. ಕರುವನ್ನು ಯಾರೋ ಎಳೆದಂತಾಯಿತು. ಅದು ಕಚ್ಚಿ ಹಿಡಿದಿದ್ದ ಪೊದೆಯ ಭಾಗ ಹಾಗೆಯೇ ಹರಿಯಿತು. ನನ್ನ ಮುಖ ಕಾಣಿಸಿಬಿಟ್ಟಿತ್ತು. ನನಗೂ ಆ ದನಿಯ ಮೂಲ ಗೊತ್ತಾಯಿತು. ವಯಸ್ಸಾಗಿರುವಂತೆ ಕಾಣುತ್ತಿದ್ದ ಅವರು ನಮ್ಮ ಅಮ್ಮನ ತರಹವೇ ಇದ್ದರು. ಆದರೆ ನಮ್ಮ ಹಾಗೆ ಚರ್ಮದ ಹೊದಿಕೆ ಇರಲಿಲ್ಲ. ಯಾವುದೋ ತೆಳ್ಳಗಿನ ವಸ್ತುವನ್ನ ಸುಂದರವಾಗಿ ಸುತ್ತಿಕೊಂಡಿದ್ದರು. ನನ್ನನ್ನ ನೋಡಿದ ಅವರು, "ಏಯ್ ಯಾರೋ ನೀನು?" ಎಂದು ಆಶ್ಚರ್ಯದಲ್ಲಿ

ಪ್ರಶ್ನಿಸಿದರು. ನಾನು ಮೊದಲು ತೊದಲಾಡುತ್ತಾ, "ನಾನೇನು ಮಾಡೋದಿಲ್ಲ. ತೊಂದರೆ ಇಲ್ಲ. ನಾನು ಕಾಡಿನ ಆ ಕಡೆಯ ಭಾಗದಿಂದ ಬಂದೆ, ನನ್ನ ಸ್ನೇಹಿತರೊಂದಿಗೆ" ಎಂದಾಗ, ಅವರು ಬಂದು ನನ್ನನ್ನ ಹಿಡಿದೆತ್ತಿದರು. ನಾಗ ಬೋಕರು ತಾವಾಗಿಯೇ ಎದ್ದು ನಿಂತರು. ಆ ಹೆಣ್ಣಿನ ಮುಖದಲ್ಲಿ ನಗುವು ಕಂಡಿತು. "ಆ ಕಡೆ ಭಾಗದಲ್ಲೂ ಜನ ಇದಾರಾ?" ಎಂದರು. ಆಗ ನಾಗನು, "ಹೌದು. ನಾವೆಲ್ಲಾ ಅಲ್ಲೇ ಇರೋದು" ಎಂದ. ಒಂದಷ್ಟು ಹಸುಗಳನ್ನೂ, ಆ ಕರುವನ್ನೂ ಕರೆದುಕೊಂಡು ನಮ್ಮನ್ನೂ ಅವರು ವಾಸಿಸುತ್ತಿದ್ದ ಸ್ಥಳಕ್ಕೆ ಕರೆದುಕೊಂಡು ಹೋದರು. ಅಲ್ಲಿ ಎಷ್ಟು ಜನ! ವಿಚಿತ್ರ ಮೈ ಮೇಲಿನ ಹೊದಿಕೆ! ಎಲ್ಲಾ ರಂಗು ರಂಗಿನವು. ನಮ್ಮ ಕಾಡಿನಲ್ಲಿ ಕಾಣುವ ಬೇರೆ ಬೇರೆ ಹೂಗಳ ಬಣ್ಣ. ನಮ್ಮನ್ನು ಒಂದು ಚಿಕ್ಕ ಮರದ ತುಂಡಿನ ಮೇಲೆ ಕುಳ್ಳಿರಿಸಿ, "ಹಸುವಿನ ಹಾಲು" ಎಂದು ತಂದು ನೀಡಿದರು. ನಮ್ಮ ಅಪ್ಪಯ್ಯ ಆಗಾಗ ಹಸುಗಳನ್ನು ಸಾಕುವ ಬಗ್ಗೆ ಹೇಳುತ್ತಿದ್ದರು. ಆದರೆ ನಾವು ಎಂದೂ ಹಸುವಿನ ಹಾಲನ್ನು ಕಂಡಿದ್ದಾಗಲಿ, ಕುಡಿದಿದ್ದಾಗಲೀ ಇಲ್ಲ. ಕೊಬ್ಬರಿಯ ಚಿಪ್ಪಿನಲ್ಲಿ ನಮಗೆ ಹಾಲನ್ನ ನೀಡಿದ್ದರು. ಹಾಲು ನಾಲಿಗೆಗೆ ತಾಕಿದ ತಕ್ಷಣ, ಮೈಯೆಲ್ಲ ಒಮ್ಮೆ ಝುಂ ಎಂದಿತು. ರುಚಿ ಹತ್ತಿತು. ನಾಗ ಬೋಕರು ಎರಡೆರಡು ಬಾರಿ ಹಾಕಿಸಿಕೊಂಡು ಕುಡಿದರು. ಅವರ ಜನರೆಲ್ಲಾ ನಮ್ಮನ್ನು ನೋಡಿ ಸಂತಸ ಪಟ್ಟರು. ಕೆಲವರು, "ನೀವಿರುವ ಕಡೆ ನಾವೂ ಒಮ್ಮೆ ಬರುತ್ತೇವೆ" ಎಂದೂ ಹೇಳಿದರು. ನಾನು, ಅವರು ಧರಿಸಿದ್ದ ರಂಗು ರಂಗಿನ ವಸ್ತುವನ್ನೇ ನೋಡುತ್ತಿರಲು, ನಮ್ಮ ಮೂವರಿಗೂ ಆ ರೀತಿಯ ಒಂದೊಂದು ತುಂಡನ್ನ ನೀಡಿದರು. ಅದಕ್ಕೆ "ಬಟ್ಟೆ" ಎನ್ನುತ್ತಾರೆ ಎಂದು ಆಗ ತಿಳಿಯಿತು. ನಾವು ಝರಿಯಲ್ಲಿ ಆಟವಾಡಿದ ನಂತರ, ಈ ಬಟ್ಟೆಯಲ್ಲಿ ಒರೆಸಿಕೊಂಡರೆ ಸಾಕು, ಎಷ್ಟು ಬೇಗ ಒಣಗಿಹೋಗುತ್ತಿತ್ತು. ಇಂತಹ ಅದ್ಭುತ ಅನುಭವಗಳನ್ನೆಲ್ಲಾ ನಾವು ರಾಶಿ ಹಾಕಿಕೊಂಡು, ಮತ್ತೆ ನಮ್ಮ ಗುಡಿಸಿಲ ಕಡೆಗೆ ನಡೆಯಲಾರಂಭಿಸಿದೆವು. ಅವರು ನಮಗೆ "ಬಿಲ್ಲು-ಬಾಣ" ಎಂದು ಕರೆಯುತ್ತಿದ್ದ ಒಂದು ವಿಚಿತ್ರ ವಸ್ತುವನ್ನು ನೀಡಿದರು. ಸಣಕಲಾದರೂ ಗಟ್ಟಿಯಿರುವ ಒಂದು ಕಾಷ್ಠವನ್ನ ಬಾಗಿಸಿ, ಎರಡೂ ತುದಿಗಳಿಗೆ ಒಂದು ಗಟ್ಟಿಯಾದ ದಾರವನ್ನ ಕಟ್ಟಿ, ಚೂಪಾಗಿರುವ ಇನ್ನೊಂದು ಸಣ್ಣ ಕಡ್ಡಿಯನ್ನ ಆ ದಾರದೊಂದಿಗೆ ಹಿಡಿದು, ಬಿಟ್ಟರೆ, ಅದು ದೂರ ಹೋಗಿ ಬೀಳುತ್ತಿತ್ತು. "ಇದು ನಮ್ಮನ್ನು ನಾವು ರಕ್ಷಿಸಿಕೊಳ್ಳಲು ಸಹಾಯ ಆಗುತ್ತದೆ. ನಮ್ಮ ತಾತ ಮುತ್ತಾತಂದಿರು ಕೊಟ್ಟು ಹೋದದ್ದು ಇದು" ಎಂದು ಹೇಳಿ, ಅದನ್ನ ಉಪಯೋಗಿಸುವುದು ಹೇಗೆ ಎಂಬುದನ್ನೂ ತಿಳಿಸಿ, ನಮ್ಮನ್ನು ಕಾಲುದಾರಿಯವರೆಗೆ ಕರೆದುಕೊಂಡು ಬಂದು ಬೀಳ್ಕೊಟ್ಟರು.

ನಾವು ಮೂವರೂ ಆ ಬಿಲ್ಲು ಬಾಣಗಳ ಮಾಯೆಯಲ್ಲಿಯೇ ಇದ್ದೆವು. ಮೊದ ಮೊದಲು ಆ ಬಾಣ ಬಿಟ್ಟರೆ ಅಲ್ಲೇ ಬೀಳುತ್ತಿತ್ತು. ಎಷ್ಟೋ ಬಾರಿ ಪ್ರಯತ್ನಿಸಿದ ನಂತರ ಸ್ವಲ್ಪ ದೂರದವರೆಗೆ ಬಾಣ ಹೋಗುವಂತೆ ನಾವು ಮಾಡುತ್ತಿದ್ದೆವು. ಈ ಬಾರಿಯೂ ವಿಚಿತ್ರವಾದ ಸರ್ಪಗಳನ್ನು ನಾವು ಕಂಡೆವು. ಮರದ ಮೇಲೆ, ಎಷ್ಟು ಸಣ್ಣಗಿರುವ ಹಾವು! ಅದು ಅಲ್ಲಿದೆಯೆಂದೇ ತಿಳಿಯದಷ್ಟು! ಎಷ್ಟು ದೊಡ್ಡ ಕಂಗಳು! ನಾವು ಅದನ್ನ ನೋಡಿ ತುಂಬಾ ಖುಷಿಯೂ ಪಟ್ಟೆವು, ಭಯವೂ ಆಯಿತು. ನಡೆಯುತ್ತಾ ನಡೆಯುತ್ತಾ, ನಾವು ಒಂದು ಸಂಚು ಮಾಡಿದೆವು. ಈ ಬಿಲ್ಲು ಬಾಣಗಳಿರುವುದರಿಂದ, ಗುಡಿಸಲಿಗೆ ನೇರ ನುಗ್ಗುವುದು ಬೇಡ, ದೂರದಿಂದ ಬಾಣವೊಂದನ್ನು ಬಿಟ್ಟು ಅಲ್ಲಿ ಯಾರಿರುವರೋ ಅವರನ್ನು ಹೆದರಿಸೋಣ. ಹಾಗೆಯೇ ಮುಂದುವರೆದು, ಬಾಣವನ್ನ ಮತ್ತೆ ಮತ್ತೆ ಬಿಟ್ಟು, ಕಲಿತು, ನಮ್ಮ ಗುಡಿಸಲಿನ ಬಳಿ ಬಂದೆವು. ಸುತ್ತಲೂ ರಕ್ಷಣೆಗೆಂದೂ, ಪ್ರಾಣಿಗಳಿಂದ ಮರೆಮಾಚುವುದಕ್ಕೆಂದು ಹಾಕಿದ್ದ ಹಸಿರಿನ ರಾಶಿಯಲ್ಲಿ ನಾವು ತೂರಿಕೊಂಡೆವು. ಅಲ್ಲೆ ಕುಳಿತು ನಮ್ಮ ಮೂವರ ಅಮ್ಮಂದಿರೂ ಹರಟುತ್ತಿದ್ದರು. ನಾವು ಮೂವರೂ ಬಾಣವನ್ನು ಬಿಲ್ಲಿಗೆ ಇಟ್ಟು, ಎಳೆದು ಬಿಟ್ಟೆವು. ಅದು ಹೋಗಿ ಅವರ ಬಳಿ ಬಿದ್ದಿತು. ಇದ್ದಕ್ಕಿದ್ದ ಹಾಗೆ, "ಆ!" ಎಂದು ಕಿರುಚಿಕೊಂಡರು. ನಮಗೆ, ಇದು ಇನ್ಯಾವ ಅನಾಹುತಕ್ಕೆ ಎಡೆ ಮಾಡಿಕೊಡುವುದೋ ಎಂಬ ಭಯ ಉಂಟಾಯಿತು. ತಕ್ಷಣ, ಹಸಿರಿನಿಂದ ಹೊರ ಬಂದು, ನಾವು ಅವರನ್ನು ಸಂತೈಸಿದೆವು. ನಮ್ಮ ಕಪಾಳಕ್ಕೆ ಒಂದು ಏಟು ಹಾಕಿ, ಅವರು ಹುಸಿ ಮುನಿಸಿನಿಂದಲೇ ಬಿಲ್ಲು ಬಾಣವನ್ನು ಮುಟ್ಟಿದರು. 'ಬಟ್ಟೆ'ಯನ್ನು ಮೈ ಮೇಲೆ ಹಾಕಿಕೊಂಡು, "ಅಬ್ಬಾ! ಎಷ್ಟು ಬೆಚ್ಚಗಿದೆ ಇದು!" ಎಂದರು. ಆಗ ನಾವು ಕಾಡಿನ ಆ ಭಾಗಕ್ಕೆ ಮತ್ತೆ ಹೋಗಿ, ಈ ಬಟ್ಟೆಯನ್ನು ತಯಾರಿಸುವ ವಿಧಾನವನ್ನು ಕಲಿಯಬೇಕು ಎಂದು ಮನಸ್ಸಿನಲ್ಲೇ ನಿರ್ಧರಿಸಿದೆವು. ಅಪ್ಪಯ್ಯ ಬಂದರು. ನಾವು ಅವರಿಗೆ ನಮ್ಮ ಈ ಪ್ರಯಾಣದ ಬಗ್ಗೆ, ಮಧ್ಯದಲ್ಲಿ ಕಂಡ ವಿಚಿತ್ರ ಹಾವುಗಳ ಬಗ್ಗೆ, ಹುಲಿ, ಆನೆಗಳ ಬಗ್ಗೆ, ಇನ್ನು ಹಸು, ಹಸುವಿನ ಹಾಲಿನ ಬಗ್ಗೆಯೂ ಹೇಳಿದೆವು. ಆಗ ಅವರು, "ಎಲ್ಲರೂ ತಯಾರಿ ಮಾಡಿಕೊಳ್ಳಿ, ನಾವೆಲ್ಲರೂ ಅಲ್ಲಿಗೆ ಹೋಗಿ, ನೋಡಿಕೊಂಡು ಬರೋಣ!" ಎಂದರು. ತೀರ ಚಿಕ್ಕವರಲ್ಲದೆ, ಸ್ವಲ್ಪ ದೊಡ್ಡವರಾದ ನಮಗೆ, "ಅಪ್ಪಯ್ಯ ನಮ್ಮ ಮಾತು ಕೇಳಿ, ಅಲ್ಲಿಗೆ ಹೋಗೋಣ ಎಂದರು!" ಎಂಬ ಹೆಮ್ಮೆ.

ನಮಗೆ ಈಗ ಹೊಸದೊಂದು ಕೆಲಸವು ಆರಂಭವಾಗಿತ್ತು. ಝರಿಯಲ್ಲಿ, ಜಲಪಾತದಲ್ಲಿ ಆಟವಾಡುವುದು ಬಿಟ್ಟು, ಈ ಬಿಲ್ಲು ಬಾಣಗಳನ್ನು ಸರಿಯಾಗಿ ಪ್ರಯೋಗಿಸುವುದನ್ನ ಕಲಿಯತೊಡಗಿದೆವು. ಆದರೆ ನಮ್ಮ ಮೂವರಲ್ಲಿ ಯಾರ

ಬಾಣವೂ ಹೆಚ್ಚು ದೂರ ಚಲಿಸುತ್ತಿರಲಿಲ್ಲ. ನಾವು ಬೇಸರಿಸಿಕೊಳ್ಳದೆ ಮತ್ತೆ ಮತ್ತೆ ಪ್ರಯತ್ನಿಸುತ್ತಲೇ ಇದ್ದೆವು. ಇನ್ನು ನಾವೆಲ್ಲರೂ ಕಾಡಿನ 'ಆ' ಭಾಗಕ್ಕೆ ಹೋಗಬೇಕೆಂದರೆ, ರಕ್ಷಣೆ ಬೇಕಲ್ಲವೆ?

2

ಕಾಡು, ಗುಡಿಸಲು, ಅದೇ ಗೆಣಸು, ಅದೇ ಮನುಷ್ಯರ ಮುಖವ ನೋಡಿ ನೋಡಿ ದಣಿದುಹೋಗಿದ್ದ ನಮ್ಮ ತಾಯಂದಿರಿಗೆ ಇದೊಂದು ವಿಶೇಷ ಅನುಭವವಾಗಿತ್ತು. ನಮ್ಮ ಅಪ್ಪಯ್ಯನಾದರು ಹಿಂದೆ ಬಹಳಷ್ಟು ಕಾಡುಗಳನ್ನ ಸುತ್ತಿ ಬಂದವರು. ನಮ್ಮೊಂದಿಗೆ ಹೊರಟ ನಮ್ಮ ತಂದೆ ತಾಯಿಯರು ಒಂದು ಚರ್ಮದ ಚೀಲದಲ್ಲಿ ಒಣಗಿಸಿಟ್ಟಿರುವ, ತಿನ್ನಬಹುದಾದಂತಹ ಪದಾರ್ಥಗಳನ್ನ ಹಾಕಿಕೊಂಡರು. ಕೊಳವೆ ಆಕಾರದಲ್ಲಿ ಬಿದಿರೊಂದನ್ನು ಸಿದ್ಧ ಮಾಡಿ, ಒಂದು ಕಡೆ ಮುಚ್ಚಿ, ಅದರಲ್ಲಿ ನೀರು ತುಂಬಿಕೊಂಡರು. ನಾವು ನಮ್ಮ ಬಿಲ್ಲು-ಬಾಣಗಳನ್ನೂ, ಕೋಲನ್ನೂ ಎತ್ತಿಕೊಂಡು ಅವರಿಗೆ ದಾರಿ ತೋರುತ್ತಾ ಹೊರಟೆವು. ಕಾಡಿನ ಯಾವ ಭಾಗ ಎಂದು ಹೇಳುವಷ್ಟರಲ್ಲಿ, ನಮಗಿಂತಲೂ ನೂರು ಪಟ್ಟು ಹೆಚ್ಚಾಗಿ ಈ ಕಾಡುಗಳಲ್ಲಿ ಅಲೆದಾಡಿರುವ ನಮ್ಮ ಅಪ್ಪಯ್ಯ ನಮ್ಮನ್ನು ಬೇರೆಡೆಗೆ ತಿರುಗಿಸಿ ಕರೆದುಕೊಂಡು ಹೋಗಲಾರಂಭಿಸಿದರು. ಈ ಮಾರ್ಗ ಇನ್ನೂ ಸುಂದರವಾಗಿತ್ತು. ಸೂರ್ಯ ನೆತ್ತಿಯ ಮೇಲೇರಿದ್ದರೂ, ಮರಗಳು ಮಾಡಿರುವ ಮೇಲಾವರಣವು ಒಂದು ಕಿರಣವನ್ನೂ ನೆಲಕ್ಕೆ ತಾಕಲು ಬಿಡದೆ ತನ್ನ ಮಡಿಲನ್ನು ಕತ್ತಲಾಗಿಸಿತ್ತು. ಆದರೆ ಆ ಮಂದ ಬೆಳಕೇ ಕಣ್ಣಿಗೆ ಒಂದು ರೀತಿಯ ಆನಂದವನ್ನು ಕೊಡುತ್ತಿತ್ತು. ಅಪ್ಪಯ್ಯ ಕಾಡಿನೊಂದಿಗೆ ಮಾತನಾಡುತ್ತಿರುವಂತೆ ಅತ್ತ-ಇತ್ತ ನೋಡುತ್ತ, ಹಕ್ಕಿಗಳ ಕಲರವಕ್ಕೆ ತಾವೂ ಕೂಗುತ್ತಿದ್ದರು. ನಾಗ-ಬೋಕರು ತಮ್ಮ ತಮ್ಮ ತಂದೆಯನ್ನು ನೋಡುತ್ತಿದ್ದರು. ಅವರೂ ನಮ್ಮಂತೆ ಹಾಯಾಗಿ, ವಿಶಾಲ, ವೈವಿಧ್ಯಮಯ ಅರಣ್ಯದ ಸೊಬಗನ್ನ ಮನಸಾರೆ ಅನುಭವಿಸುತ್ತಾ ನಡೆಯತೊಡಗಿದರು. ಹೋ ಎಂದು ಗಾಳಿಯು ಮರದ ಎಲೆಗಳನ್ನ ತಾಕುತ್ತಾ ಹಾಡುತ್ತಾ, ಎಲೆಗಳು ಆ ರಾಗಕ್ಕೆ ನಾಟ್ಯವಾಡುತ್ತಾ, ಅದಕ್ಕೆ ಸರಿಯಾಗಿ ಮುಗಿಲರಾಯ ಗುಡುಗುತ್ತಾ, ಸಣ್ಣ ಸಣ್ಣ ಹನಿಗಳನ್ನು ಚಿಮುಕಿಸಲಾರಂಭಿಸಿದ. ನಡೆದೂ ನಡೆದೂ ದಣಿದಿದ್ದ ನಮ್ಮ ಕಾಯಗಳು ಈ ತುಂತುರು ಹನಿಗಳಿಗೆ ತಣಿದವು. ವೃಕ್ಷಗಳು ರಚಿಸಿದ್ದ ಆ ಮೇಲ್ಛಾವಣಿಯು ಆ ಸಣ್ಣ ಸಣ್ಣ ಹನಿಗಳನ್ನೆಲ್ಲಾ ಶೇಖರಿಸಿ, ಒಂದು ಕಡೆಯಿಂದ ಕೆಳಕ್ಕೆ ಬೀಳಿಸುತ್ತಿದ್ದವು. ಆ ಜಾಗಕ್ಕೆ ಆಕಸ್ಮಿಕವಾಗಿ ಹೋಗಲು, ಅದು ನಮ್ಮ ಶಿರದ

ಮೇಲೆ ಚೆಲ್ಲಿ, ಒಂದು ರೀತಿಯ ಜಾಗೃತಿ ನಮ್ಮಲ್ಲಿ ಉಂಟಾಯಿತು. ನೀರು ಸೋರಿ, ಅದರ ವಿಚಿತ್ರ ರುಚಿ ನಾಲಿಗೆಗೆ ಸೋಂಕಿ, ನಮ್ಮ ಬೆನ್ನ ಮೇಲೆ ಇಳಿದಾಗ ಅದ್ಭುತ ಅನುಭವವಾಯಿತು. ಪೂರ್ಣವಾಗಿ ತಲೆ ಒದ್ದೆಯಾಗಲು, ಪ್ರಾಣಿಯಂತೆ ರಪರಪನೆ ತಲೆ ಅಲ್ಲಾಡಿಸಿ, ಅಕ್ಕ ಪಕ್ಕದವರ ಮೇಲೂ ನೀರು ಬೀಳುವಂತೆ ಮಾಡುವುದೆಂದರೆ ಏನು ಖುಷಿ ನಮಗೆ!! ಇದರ ನಡುವೆ ನಮ್ಮ ರೀತಿಯಲ್ಲೇ ಕೆಲವು ಪಕ್ಷಿಗಳು ಮಳೆಯಲ್ಲಿ ನಿಂತು ಜಳಕ ಮಾಡುವುದನ್ನು ಅಪ್ಪಯ್ಯ ತೋರಿಸಿದರು. ಬೂದುತಲೆಯ ಪಿಕಳಾರ ಪಕ್ಷಿಯನ್ನ ಅಪ್ಪಯ್ಯ ತೋರಿಸಿದರು. ಮಳೆಯಲ್ಲಿ ನೆನೆಯುತ್ತಿದ್ದ ಅದು ವೇಗವಾಗಿ ಅಕ್ಕ-ಪಕ್ಕ, ಹಿಂದೆ-ಮುಂದೆ ತಿರುಗುತ್ತ ಹಣ್ಣುಗಳನ್ನೋ, ಚಿಕ್ಕ ಹುಳುಗಳನ್ನೋ ಹುಡುಕುತ್ತಿತ್ತು. ಅದರ ತಿಳಿ ಹಳದಿ ಹಣೆ ಎಷ್ಟು ಸುಂದರ! ನಾವು ಅದು ಹೇಗೆ ಕೂಗುತ್ತದೋ ಎಂದು ನೋಡಬೇಕೆಂದು ಕಾಯುತ್ತಿರಲು, ಅದು "ಚೀಂಕ್" ಎಂದು ಶಿಳ್ಳೆ ಹೊಡಿವಂತೆ ಕೂಗಿತು. ನಾವೆಲ್ಲ ನಕ್ಕೆವು. ಇನ್ನು ಹೆಚ್ಚು ಹೊತ್ತು ಹೀಗೆ ಕಳೆಯುವುದು ಕ್ಷೇಮವಲ್ಲ ಎಂದು ಅಪ್ಪಯ್ಯ ಬೇಗ ಬೇಗ ನಡೆಸಿಕೊಂಡು ಮುನ್ನಡೆದರು. ನಡೆಯುತ್ತಾ ನಡೆಯುತ್ತಾ, ಕಾಡು ಕಳೆದು, ಗಿರಿ ಒಂದನ್ನು ಏರಬೇಕಾಗಿ ಬಂದಿತು. ಗಿರಿಯೆಂದರೆ ದಟ್ಟ ಮರಗಳಿರುವ ಗಿರಿಯಲ್ಲ, ಕಣ್ಣು ಹಾಯಿಸಿದಲ್ಲೆಲ್ಲ ಹುಲ್ಲುಗಾವಲೇ ಇರುವ ಗಿರಿ. ಅದು ಎಷ್ಟು ಸೊಗಸಾಗಿತ್ತೆಂದರೆ ನಾಗ ಬೋಕರು "ಹೋ!" ಎನ್ನುತ್ತಾ ಎಗರಿ ಎಗರಿ ಹುಲ್ಲಿನ ಮೇಲೆ ಬಿದ್ದರು. ಮೆತ್ತನೆಯ ಹಾಸಿನಂತಿದ್ದ ಹುಲ್ಲಿನೊಳಕ್ಕೆ ಅವರು ಬಿದ್ದರು. ಹುಲ್ಲಿನ ಕಣಗಳು ಅವರ ಮೂಗು, ಬಾಯಿಗಳೊಳಕ್ಕೆ ಹೋದಾಗ, ಅವರು "ಪಪ್ಥೂ, ಥೂ" ಎಂದೆಲ್ಲ ಶಬ್ದಗಳನ್ನು ಮಾಡುತ್ತಾ ಆನಂದಿಸಿದರು. ಮತ್ತೆ ಎದ್ದು, ಕೋತಿಗಳಂತೆ ಉಲ್ಟ ಎಗರುವುದು, ಪಲ್ಟಿ ಹೊಡೆಯುವುದನ್ನು ಮಾಡಿದರು. ಆದರೆ, "ಇನ್ನೂ ಹತ್ತಿ ಇಳಿಯುವುದು ತುಂಬಾ ಇದೆ. ಬೇಗ ಬನ್ನಿ!" ಎಂದು ಅಪ್ಪಯ್ಯ ನಗುನಗುತ್ತ ಹೇಳಿದಾಗ ನಾವು ಮೂವರೂ ಮುಂದಕ್ಕೆ ಹೋದೆವು. ನಾವು ಈ ಶಿಖರದ ಮೇಲಿನ ಹುಲ್ಲುಗಾವಲನ್ನ ಆನಂದಿಸಿದೆವು. ಆದರೆ ಇದೇ ಬೆಟ್ಟದಿಂದ ಕೆಳಕ್ಕೆ ಕಣ್ಣು ಹಾಯಿಸಿದರೆ, ನಾವು ಆಕಾಶದ ಮೇಲಿದ್ದೀವೇನೋ ಎಂಬಂತೆ ಇತ್ತು! ಹಲವಾರು ಬೆಟ್ಟಗಳ ತುದಿಯಷ್ಟೆ ಕಾಣುತ್ತಿತ್ತು. ಅವುಗಳ ಮಧ್ಯೆಯೆಲ್ಲಾ ಮೋಡಗಳು! "ಎಷ್ಟು ಸುಂದರವಾಗಿದೆ" ಎಂದು ನಮ್ಮ ಅಮ್ಮಂದಿರು ಆಶ್ಚರ್ಯದಿಂದ ಉದ್ಗರಿಸಿದರು. ಸೂರ್ಯನೂ ಇನ್ನೇನು ಮುಳುಗುವುದರಲ್ಲಿದ್ದ. ಹಾಗಾಗಿ ನಾವು ಇನ್ನೂ ಹೆಚ್ಚು ವೇಗವಾಗಿ ನಡೆಯತೊಡಗಿದೆವು. ಮುಂದುವರೆಯುತ್ತಾ ಹೊರಟಾಗ, ಬೆಟ್ಟದ ಇಳಿಜಾರು ನಮಗೆ ಕಂಡಿತು. ಜೊತೆಗೆ, ಅಲ್ಲಿಯೇ ನಿಷ್ಕಲ್ಮಶವಾದ ನೀರೂ ಹರಿಯುತ್ತಿತ್ತು. ನಮ್ಮ ಬಿದಿರಿನ ಕೊಳವೆಯಲ್ಲಿ ನೀರು

ಖಾಲಿಯಾಗಿತ್ತು. ನಾವು ಒಣಹಣ್ಣುಗಳನ್ನೂ, ಅಮ್ಮ ಕೊಟ್ಟ ಅದೇನೋ ಬೇರನ್ನೂ ತಿಂದು, ನೀರಿನಲ್ಲಿ ಮುಖ, ಕೈ-ಕಾಲು ತೊಳೆದು, ಬೆವರಿನ ಕಮಟು ಹೋಗುವಂತೆ ಅದರಲ್ಲಿ ಮಿಂದು ಸಿದ್ಧವಾದೆವು. ಅಪ್ಪಯ್ಯ, ಒಂದು ಕಟ್ಟಿಗೆಗೆ ಬೆಂಕಿಯನ್ನ ತಗುಲಿಸಿ, ಅದನ್ನ ಹಿಡಿದು ಮುಂದೆ ಹೊರಟರು. ಹೀಗೆ ಹೊರಟ ಕೆಲವು ಸಮಯದಲ್ಲಿಯೇ ನಮಗೆ ನಮ್ಮಂತಹ ಮನುಷ್ಯರಿರುವ ಭಾಗ ಸಿಕ್ಕಿತು. ಅಂದು ನಮಗೆ ಹಾಲು, ಬಟ್ಟೆ, ಇವುಗಳನ್ನೆಲ್ಲಾ ಕೊಟ್ಟಿದ್ದ ಮಹಿಳೆಯೇ ಇಂದು ನಮ್ಮನ್ನು ನೋಡಿ, "ಬನ್ನಿ! ಬನ್ನಿ!" ಎಂದರು. ಅಪ್ಪಯ್ಯ ಇನ್ನೂ ಸಂದೇಹ ದಲ್ಲಿದ್ದರು. "ಈ ಶೋಲಾ ಕಾಡುಗಳಲ್ಲಿ ಎಷ್ಟಲ್ಲದೆ ಅಲೆದುಬಿಟ್ಟಿದ್ದೀನಿ! ಈ ಭಾಗ ನನಗೆ ಸಿಕ್ಕೇ ಇಲ್ಲವಲ್ಲ! ಇರಲಿ. ಈಗಲಾದರೂ ಸಿಕ್ಕಿತಲ್ಲ!" ಎಂದು ಅರಣ್ಯ ತಾಯಿಗೆ ಕೈಮುಗಿದರು. ಅವರ ಗುಡಿಸಲಿನಲ್ಲೇ ನಾವೂ ಮಲಗುವಂತೆ ವ್ಯವಸ್ಥೆ ಮಾಡಿದರು. ನಾವೆಲ್ಲರೂ ಅವರು ಕೊಡುವ ಹಾಲಿಗಾಗಿಯೇ ಕಾಯುತ್ತಿದ್ದೆವು. ಎಲ್ಲರಿಗೂ ಒಂದೊಂದು ತೆಂಗಿನ ಚಿಪ್ಪಿನಲ್ಲಿ ಹಾಲನ್ನು ಕೊಟ್ಟರು. ಚಪ್ಪರಿಸಿ ಕುಡಿದು, ಮಲಗಿಬಿಟ್ಟೆವು. ಬೆಳಗ್ಗೆ, ಇದ್ದಕ್ಕಿದ್ದ ಹಾಗೆ "ಢಣ್! ಢಣ್!" ಎಂಬ ಜೋರು ಶಬ್ದ ಕೇಳಿಸಿತು. ನಾವೆಲ್ಲರೂ ಬೆಚ್ಚಿಬಿದ್ದು, ಎದ್ದು ನಿಂತೆವು. ಹೊರಗೆ ಹೋಗಿ ನೋಡಿದರೆ, ಜನರೆಲ್ಲ ರಂಗುರಂಗಿನ "ಬಟ್ಟೆ" ಹಾಕಿಕೊಂಡು ಎಲ್ಲೋ ಹೊರಡುವುದಕ್ಕೆ ಸಿದ್ಧವಾದಂತಿತ್ತು. ನಾವು ಎಚ್ಚರವಾದದ್ದನ್ನು ನೋಡಿದ ತಕ್ಷಣ, "ಬನ್ನಿ! ಬನ್ನಿ!" ಎಂದು ನಮ್ಮ ಕೈಗಳನ್ನು ಹಿಡಿದು ಕರೆದುಕೊಂಡು ಹೊರಟರು. ನಮಗೆಲ್ಲಾ ವಿಸ್ಮಯ. ಸ್ವಲ್ಪ ದೂರ ನಡೆಯುವಷ್ಟರಲ್ಲೇ ಚಿಕ್ಕ ಗುಡ್ಡದಂತಿದ್ದ ರಚನೆಯ ಮೇಲೆ, ಬಿಳಿಯ ಕಲ್ಲುಗಳಲ್ಲಿ ಗಟ್ಟಿಯೂ, ದೊಡ್ಡದೂ ಆದ ಗುಡಿಸಲೊಂದನ್ನು ಕಟ್ಟಿದ್ದರು. ಗುಡಿಸಲ ಮೇಲೆ ಎರಡು ರೇಖೆಗಳು ಸೇರಿರುವ ಒಂದು ಮರದಲ್ಲಿ ಮಾಡಿರುವ ಆಟಿಕೆ ಇತ್ತು. ಒಂದು ರೇಖೆ ನಿಂತಿರು ವಂತೆಯೂ, ಇನ್ನೊಂದು ಅದರ ಮಧ್ಯೆ ಮಲಗಿರುವಂತೆಯೂ ಕಾಣುತ್ತಿತ್ತು. ಗುಡಿಸಲ ಪಕ್ಕದಲ್ಲಿ ದೊಡ್ಡ ಕೊಳವೆ ಆಕಾರದ ವಸ್ತು ಇತ್ತು. ಆ ಆಟಿಕೆಯೇ "ಢಣ್ ಢಣ್" ಶಬ್ದವನ್ನು ಮಾಡಿದ್ದು. ಎಲ್ಲರೂ ಕೈ ಮುಗಿಯುತ್ತಾ ಒಳಗೆ ಹೋದರು. ನಾವೂ ಅಂತೆಯೇ ಮಾಡಿದೆವು. ಒಳಗೆ, ಒಬ್ಬರು ಪೂರ ಬಿಳಿಯಾಗಿರುವ ಮನುಷ್ಯ, ಬಿಳಿಯ 'ಬಟ್ಟೆ' ಧರಿಸಿ ಏನನ್ನೋ ಹಿಡಿದು ನಿಂತಿದ್ದರು. ಎಲ್ಲರೂ ನಮ್ಮನ್ನು ಅವರೆಡೆಗೆ ತಳ್ಳಿದರು. ಅವರು ನಮ್ಮ ತಲೆಯ ಮೇಲೆ ಅದೆಂತದ್ದೋ ಕಡ್ಡಿ ಇಟ್ಟು, ನೀರು ಚಿಮುಕಿಸಿ, ಒಳಗಿನಿಂದ ರಂಗು ರಂಗಿನ ಬಟ್ಟೆಯನ್ನು ತಂದು ಕೊಟ್ಟರು. ತಕ್ಷಣ ನನಗೆ ಹೊಳೆಯಿತು. ಈ ಭಾಗದ ಜನಕ್ಕೆ ಬಟ್ಟೆಯನ್ನು ಕೊಡುತ್ತಿರುವುದು ಇವರೇ ಎಂದು. ಮತ್ತೆ ಎಲ್ಲರೂ ರಾಗವಾಗಿ ಹಾಡಿ, ಕೈ ಮುಗಿದು ಅವರವರ ಚಿಕ್ಕ ಗುಡಿಸಲ ಬಳಿ ನಡೆದರು.

ನಮಗೆ ಕೊಟ್ಟ ಬಟ್ಟೆಯನ್ನ ಹಾಕಿಕೊಳ್ಳುವುದು ಹೇಗೆ ಎಂದು ತಿಳಿಸಿದರು. ನಾವು ಚರ್ಮದಿಂದ ಮಾಡಿಕೊಂಡಿದ್ದ ಬಟ್ಟೆಯನ್ನು ಒಂದು ಚೀಲಕ್ಕೆ ಹಾಕಿಕೊಂಡೆವು. ಆ ಬಟ್ಟೆ ಏನೋ ಒಂದು ರೀತಿಯ ಮುಜುಗರವನ್ನು ತರುತ್ತಿತ್ತಾದರೂ ಬೆಚ್ಚಗಿತ್ತು. ರಂಗುರಂಗಾಗಿತ್ತು. "ನೀವೇಕೆ ಇಲ್ಲೇ ಇದ್ದುಬಿಡಬಾರದು?" ಎಂದು ಒಬ್ಬರು ಕೇಳಿದರು. ಅಪ್ಪಯ್ಯ ತಲೆ ಅಲ್ಲಾಡಿಸಿ, "ಇಲ್ಲ ಇಲ್ಲ! ನಮಗೆ ಆ ಭಾಗದ ಕಾಡೇ ಚೆನ್ನಾಗಿದೆ!" ಎಂದರು. ಆಗ ಅವರು "ಇಲ್ಲಿ ಆ ಬಿಳಿ ಮನುಷ್ಯ ನಮಗೆ ಕೆಲಸ ಕೊಡುತ್ತಾರೆ. ಅವರೇ ರುಚಿರುಚಿಯಾದ ಊಟವನ್ನೂ ಕೊಡುತ್ತಾರೆ. ನಾವೇನಿದ್ದರು ಹಸುವನ್ನು ಮೇಯಿಸೋದು, ಅವರು ಹೇಳುವ ಮರವನ್ನು ಕಡಿಯೋದು, ಇದನ್ನ ಮಾಡಿದರೆ ಸಾಕು!" ಎಂದರು. ಅಪ್ಪಯ್ಯನಿಗೆ ಕೋಪ ಬಂದರೂ ತಡೆದುಕೊಂಡರು. "ಇಲ್ಲ ನಾವು ಅಲ್ಲಿಗೇ ಹೋಗುತ್ತೇವೆ!" ಎಂದು ಹಠ ಹಿಡಿದರು. "ಸರಿ ಸರಿ. ಆದರೆ ಆಗಾಗ ಇಲ್ಲಿಗೂ ಬರುತ್ತಿರಿ. ನಾವೆಲ್ಲಾ ಕೂಡಿ ಆಟಗಳನ್ನಾಡಬಹುದು" ಎಂದು ಮಾತು ಬದಲಾಯಿಸಿದರು. ಅಪ್ಪಯ್ಯ ನಮ್ಮನ್ನೆಲ್ಲ ಹೊರಡಿಸಿ, ಬೇಗ ಬೇಗನೇ ಹೆಜ್ಜೆ ಹಾಕತೊಡಗಿದರು. ದಾರಿಯ ನಡುವೆ, "ಮರವನ್ನೇಕೆ ಕಡಿಯಬೇಕು!? ಅರಣ್ಯ ತಾಯಿಯ ಕೊಲೆ ಮಾಡುತ್ತಾರೆಯೇ ಯಾರಾದರೂ! ಅಯ್ಯೋ!" ಎಂದು ದುಃಖದಿಂದ ಹೇಳಿದರು. ಹುಲ್ಲುಗಾವಲಿರುವ ಗಿರಿಯನ್ನು ದಾಟಿ, ಮಂದ ಬೆಳಕಿನ ಶೋಲಾ ಕಾಡುಗಳನ್ನೂ ದಾಟಿ, 'ನಮ್ಮ' ಎನ್ನಿಸುವ ಕಾಡಿನ ಭಾಗಕ್ಕೆ ಬಂದೆವು. ದೂರದಿಂದಲೇ ನಮಗೆ ಬೆಂಕಿ ಹಚ್ಚಿರುವ ಲಕ್ಷಣ ಕಂಡು ಬಂದಿತು. ಹೊಗೆ ಮೇಲೇರುತ್ತಿತ್ತು. ಪ್ರಾಣಿಗಳು ವಿಕಾರವಾಗಿ ಕಿರುಚಾಡತೊಡಗಿದವು. ಸುಟ್ಟ ಮಾಂಸದ ವಾಸನೆ ವಾಕರಿಕೆ ತರಿಸುತ್ತಿತ್ತು. ನಾವೆಲ್ಲರೂ ಓಡಿದೆವು. ಅಪ್ಪಯ್ಯ "ಅಯ್ಯೋ! ಅಯ್ಯೋ!" ಎಂದು ಕೂಗಿದರು. ನಮ್ಮ ಗುಡಿಸಲುಗಳೆಲ್ಲಾ ಹೊತ್ತಿಕೊಂಡು ಉರಿಯುತ್ತಿದ್ದವು. ನಮ್ಮ ಜಾಗದ ಸುತ್ತಲೂ ಇದ್ದ ಮರಗಳೆಲ್ಲಾ ಧಗಧಗನೇ ಉರಿಯುತ್ತಿದ್ದವು. ಅರೆ ಸುಟ್ಟಿದ್ದ ಹಕ್ಕಿಗಳೂ ಕಂಡವು. ಏನೂ ಮಾಡಲು ತಿಳಿಯದೆ, ಅಪ್ಪಯ್ಯ ಅಳುತ್ತಾ ಕುಳಿತರು. ನಮ್ಮ ಬಳಿ ಇದ್ದ ಬಿದಿರಿನ ಕೊಳವೆಗಳನ್ನ ಝರಿಯ ಬಳಿಗೆ ತೆಗೆದುಕೊಂಡು ಓಡಿದೆವು– ನಾಗ, ಬೋಕ ಹಾಗೂ ನಾನು. ನಮ್ಮ ಬಿಲ್ಲು ಬಾಣಗಳು ನಮ್ಮ ಜೊತೆಯೇ ಇದ್ದವು. ಝರಿಯ ಬಳಿ, "ಠಕ್! ಠಕ್!" ಎಂಬ ಸದ್ದು ಕೇಳಿಸಿತು. ನಾವು "ಯಾರದು!?" ಎಂದು ಕೂಗಿದೆವು. ಇದ್ದಕ್ಕಿದ್ದ ಹಾಗೆ ಕೊಡಲಿಯೊಂದು ಹಾರಿಕೊಂಡು ಬಂದು ನಮ್ಮನ್ನು ದಾಟಿ, ನಮ್ಮ ಹಿಂದೆ ಇರುವ ಮರಕ್ಕೆ ನಾಟಿತು. ಭಯಕ್ಕೆ ನಮ್ಮ ಕಣ್ಣುಗಳು ಮಂಜು–ಮಂಜಾದವು. "ಯಾರ್‍ರೋ!? ಯಾರ್‍ರೋ ಅದು!?" ಎಂದು ಕೂಗುತ್ತಾ.

3

ಎಲ್ಲಾ ಕಡೆ ಹೊಗೆ ಆಚ್ಛಾದಿಸಿತ್ತು. ಉಸಿರಿಗೆ ಸ್ವಲ್ಪ ಅವಕಾಶ ಸಿಕ್ಕಿ ಎಚ್ಚರ ಆಯಿತು. ಬೋಕ ನಾಗರು ಕೋಲು ಹಿಡಿದು ಓಡುತ್ತಿರುವುದು ಕಂಡಿತು. ಅರ್ಧಂಬರ್ಧ ಕಡಿದ ಮರಗಳು ಎಲ್ಲೆಡೆ ಇದ್ದವು. ಬಟ್ಟೆ ಧರಿಸಿದ್ದ ಹಲವರು "ಏಯ್!" ಎಂದು ಕೂಗುತ್ತಾ ನನ್ನತ್ತ ಓಡುತ್ತಿರುವುದು ನನಗೆ ಕಂಡಿತು. ತಕ್ಷಣ ನನ್ನ ಪಕ್ಕದಲ್ಲಿದ್ದ ಒಂದು ಕಲ್ಲನ್ನ ತೆಗೆದುಕೊಂಡು ಅವನತ್ತ ಎಸೆದೆ. ಅದು ನೇರ ಅವನ ತಲೆಗೆ ಬಿದ್ದು, ಅವನು ಕೆಳಗೆ ಬಿದ್ದ. ನಾನು ಚೇತರಿಸಿಕೊಂಡು ಎದ್ದು, ನನ್ನ ಕೋಲನ್ನ ಕೈಗೆತ್ತಿಕೊಂಡೆ. ಹೇಗೆ ತಿಳಿದರೆ ಹಾಗೆ ಅದನ್ನ ಬೀಸಿಕೊಂಡು ಹೊರಟೆ. ಆದರೆ ಎಲ್ಲವೂ ನಮ್ಮ ಕೈಯಲ್ಲಿರುವುದಿಲ್ಲ. ಒಬ್ಬ ಧಡೂತಿ ಮನುಷ್ಯನು ಬಂದು ತನ್ನ ಕೊಡಲಿಯಲ್ಲಿ ನನ್ನ ಕೋಲನ್ನ ಮುರಿದುಬಿಟ್ಟ. ನಾನು ಸಿಂಗಳೀಕದಂತೆ ಬಾಯ್ತೆರೆದು ನನ್ನ ದಂತಪಂಕ್ತಿಯನ್ನ ಪ್ರದರ್ಶಿಸಿದೆ. ಆದರೆ ಅದರಿಂದ ಯಾವುದೇ ರೀತಿಯ ಪ್ರಯೋಜನವಾಗಲಿಲ್ಲ. ಮುರಿದ ನನ್ನ ಕೋಲಿನಿಂದ ಅವನಿಗೆ ಹೊಡೆಯಲಾರಂಭಿಸಿದೆ. ಆದರೆ ಪ್ರತೀ ಏಟಿಗೂ ಅವನು ಹೆದರದೆ, ನನ್ನನ್ನು ತಡೆದು, ನೂಕಿಬಿಟ್ಟ. ನಾನು ಹೋಗಿ ದೂರ ಬಿದ್ದೆ. ನನ್ನ ದೇಹದಲ್ಲಿ ಯಾವುದೇ ಶಕ್ತಿ ಉಳಿದಿರಲಿಲ್ಲ. ನನಗೆ ಎಲ್ಲವೂ ಕಾಣುತ್ತಿತ್ತಾದರೂ ಏನೂ ಮಾಡಲಾಗಲಿಲ್ಲ. ನಾಗನು ದೊಡ್ಡ ಕಲ್ಲೊಂದನ್ನೆತ್ತಿಕೊಂಡು ತಿರುಗಾಡುತ್ತಿದ್ದ. ಅವನ ಸುತ್ತಲೂ ಕೊಡಲಿ, ವಿವಿಧ ರೀತಿಯ ಕೋಲುಗಳನ್ನು ಹಿಡಿದುಕೊಂಡು ಅವನನ್ನು ಆಟವಾಡಿಸುತ್ತಿದ್ದರು. ನಾಗನು ಮಾತ್ರ ಕಲ್ಲನ್ನು ಅತ್ತ ಇತ್ತ ಬೀಸುತ್ತಿದ್ದ. ಅವನೆಲ್ಲಿ ಆ ಕಲ್ಲನ್ನು ತಮ್ಮ ಮೇಲೆ ಹಾಕಿಬಿಡುವನೋ ಎಂಬ ಎಚ್ಚರದಿಂದ ಅವರು ಅವನ ಹತ್ತಿರಕ್ಕೂ ದೂರಕ್ಕೂ ಹೋಗಿ ಬಂದು ಮಾಡುತ್ತಿದ್ದರು. ಅವನು ಬೇರೆಡೆ ತಿರುಗಿದ ತಕ್ಷಣ, ಹಿಂದಿನಿಂದ ಕೋಲಿನಲ್ಲಿ ಅವನ ತಲೆಗೆ ಹೊಡೆದರು. ಅವನು ಕಲ್ಲನ್ನು ಕೆಳಕ್ಕೆ ಹಾಕಿ ಆಯ ತಪ್ಪಿ ಬಿದ್ದುಬಿಟ್ಟ. ಆ ಗುಂಪಿನಿಂದ ಒಬ್ಬ ಬಂದು ಕಾಲಿನಲ್ಲಿ ನಾಗನನ್ನ ತಳ್ಳಿ ನೋಡಿದ. ನಾಗನು ನಿರ್ಜೀವ ವಸ್ತುವಿನಂತೆ ತಿರುಗಿದ. ನನಗೆ ಹೊಟ್ಟೆಯಲ್ಲಿ ಸಂಕಟವಾಯಿತು. ನಾಗನು ಸತ್ತುಹೋದನೆ? ನನ್ನ ಪ್ರಿಯ ಸ್ನೇಹಿತ!? ನಮ್ಮೊಂದಿಗೆ ಝರಿಯಲ್ಲಿ ಆಟವಾಡಿದವನು! ಬಿಲ್ಲು ಬಾಣಗಳನ್ನ ಸರಾಗವಾಗಿ ಬಳಸುತ್ತಿದ್ದವನು! ಅಯ್ಯೋ! ನನ್ನ ಕಣ್ಣಿನಲ್ಲಿ ನೀರು ಸುರಿಯುತ್ತಿತ್ತು. ನನ್ನ ಮುಖದ ಮೇಲಾಗಿದ್ದ ಗಾಯಗಳ ಮೇಲೆ ಕಣ್ಣೀರು ಹರಿದು, ರಕ್ತದೊಂದಿಗೆ ಬೆರೆತು ಮಣ್ಣಿನ ಮೇಲೆ ಹರಿಯಿತು. ಆ ಗಾಯಗಳು ಉರಿಯತೊಡಗಿದವು. ನನ್ನ ಕಣ್ಣು ಬೋಕನನ್ನು ಹುಡುಕತೊಡಗಿತು. ತಲೆ ಎತ್ತಲಾಗದೇ ಇದ್ದರೂ ಹೇಗೋ ನೋವಿನಲ್ಲಿಯೇ

ಸ್ವಲ್ಪ ಜರುಗಿದೆ. ಬೋಕನ ಬಾಯಲ್ಲಿ ಬಟ್ಟೆಯೊಂದನ್ನು ತುರುಕಿ, ಮರವೊಂದಕ್ಕೆ ಕಟ್ಟಿಹಾಕಿಬಿಟ್ಟಿದ್ದರು. ಅವನ ತಲೆಯಿಂದ ರಕ್ತ ಸುರಿಯುತ್ತಿತ್ತು. ಅವನ ತಲೆ ಒಂದು ಕಡೆಗೆ ವಾಲಿಬಿಟ್ಟಿತ್ತು. ಇವನೇನಾದನಪ್ಪ ಎಂದು ನನಗೆ ಎದೆ ಒಡೆದುಹೋಯಿತು. ಅಳು ಒತ್ತರಿಸಿಕೊಂಡು ಬರುತ್ತಿದ್ದರೂ ಅಳಲಾಗದಂತಹ ಪರಿಸ್ಥಿತಿ. ಬಿಕ್ಕಳಿಕೆ ಆರಂಭವಾಯಿತು. ಎಲ್ಲಿ ಆ ಕೊಡಲಿ ಹಿಡಿದವರು ಬಂದು ಬಿಡುತ್ತಾರೋ ಎಂಬ ಭಯ ನನಗೆ. ಆದರೆ ಯಾವ ಸದ್ದೂ ನನಗೆ ಕೇಳಿಸುತ್ತಿರಲಿಲ್ಲ. ಕಾಡು ನಿಶ್ಶಬ್ಧವಾಗಿತ್ತು. ಅಷ್ಟರಲ್ಲಿ ಅಪ್ಪಯ್ಯ, ಅಮ್ಮ, ನಾಗ–ಬೋಕರ ಅಪ್ಪ ಅಮ್ಮನ ನೆನಪಾಯಿತು. ನಮ್ಮನ್ನೇ ಬಿಡದ ಈ ಕ್ರೂರಿಗಳು ಅವರನ್ನು ಏನು ಮಾಡಿರಬಹುದು! ಅಳು ಬಂದು ನನ್ನ ಉಸಿರು ಬಾಯಿಂದ ಹೊರ ಬಂದಿತು. ಅಲ್ಲಿದ್ದ ಮಣ್ಣಿನ ಕಣಗಳು ನನ್ನ ನಾಲಿಗೆಗೆ ತಾಗಿತು. ಎಲ್ಲವೂ ಕಪ್ಪಾಯಿತು. ಏನಾಯಿತೋ ಗೊತ್ತಿಲ್ಲ.



3

ಆಚಾರ್ಯ

ಓಂ ನಮೋ ಭಗವತೇ ವಾಸುದೇವಾಯ
ಧನ್ವಂತರಯೇ ಅಮೃತಕಲಶಹಸ್ತಾಯ ವಜ್ರಜಲೌಕಹಸ್ತಾಯ
ಸರ್ವಾಮಯವಿನಾಶನಾಯ ತ್ರೈಲೋಕ್ಯನಾಥಾಯ
ಶ್ರೀಮಹಾವಿಷ್ಣವೇ ಸ್ವಾಹಾ ।
ಓಂ ವಾಸುದೇವಾಯ ವಿದ್ಮಹೇ ಸುಧಾಹಸ್ತಾಯ ಧೀಮಹಿ
ತನ್ನೋ ಧನ್ವಂತರಿಃ ಪ್ರಚೋದಯಾತ್ ।

ಯಾರೋ ರಾಗವಾಗಿ ಹಾಡುತ್ತಿದ್ದದ್ದು ಕೇಳಿಸುತ್ತಿತ್ತು. ನಾನು ನಿಧಾನವಾಗಿ ಕಣ್ಣು ತೆರೆದೆ. ಒಂದು ಗುಡಿಸಲು. ಅದ್ಭುತ ವರ್ಣಗಳಿಂದ ಕೂಡಿರುವಂಥದ್ದು. ಬಿಳಿಯ ಬಣ್ಣದಲ್ಲಿ ಏನೇನೋ ಗೀಚಿರುವುದು ಕಾಣುತ್ತಿತ್ತು. ಸ್ವಲ್ಪವೇ ನನ್ನ ಮೈಯನ್ನು ನಾನು ನೋಡಿಕೊಳ್ಳಲು ಯತ್ನಿಸಿದೆ. ಆಗ ನನಗೆ ಒಂದು ಬೆಚ್ಚನೆಯ ಭಾವ ಮೂಡಿತು. ನನಗೆ ಒಂದು ದೊಡ್ಡ ಬಟ್ಟೆಯನ್ನು ಹೊದಿಸಲಾಗಿತ್ತು. ಕುತ್ತಿಗೆಗೆ ನೋವಾಗದಂತೆ ಮೆತ್ತಗಿನ ಬಟ್ಟೆಯನ್ನು ಸುತ್ತಲಾಗಿತ್ತು. ನಿಧಾನವಾಗಿ ನಾನು ಪಕ್ಕದಲ್ಲೇನಿದೆ ಎಂದು ತಿರುಗಿ ನೋಡಿದೆ. ನಾನು ನೋಡಿದ ದೃಶ್ಯವೇ ನನ್ನಲ್ಲಿ ಮತ್ತೆ ಪ್ರಾಣಸಂಚಾರವನ್ನ ಆರಂಭಿಸಿತು. ಬದುಕುವ ಹಂಬಲ ಹೆಚ್ಚಾಯಿತು. ನನ್ನ ಪಕ್ಕದಲ್ಲಿ ನಾಗನು ಶಾಂತನಾಗಿ ಮಲಗಿದ್ದ. ಅವನ ಎದೆಯ ಏರಿಳಿತದಿಂದ ಅವನು ನನ್ನಷ್ಟೇ ಬದುಕಿದ್ದಾನೆ ಎಂಬುದು ಅರ್ಥವಾಯಿತು. ಅವನ ಪಕ್ಕದಲ್ಲೇ

---

2. ಧನ್ವಂತರಿ ಸ್ತೋತ್ರದ ಒಂದು ಭಾಗ

ನಮ್ಮ ಬೋಕ ಅವನ ಸಹಜ ಶೈಲಿಯಲ್ಲಿ ಮಕಾಡೆ ಮಲಗಿದ್ದ. ಅವನು ಸದಾ ಹಾಗೆಯೇ ಮಲಗುತ್ತಿದ್ದ. ನನಗೆ ಮಾತು ಬಾರದಂತಾಯಿತು. ಆದರೆ ಇಲ್ಲಿಗೆ ನಾವು ಬಂದದ್ದು ಹೇಗೆ!? ನಮ್ಮನ್ನು ಇಷ್ಟೆಲ್ಲಾ ಪೋಷಿಸಿದವರು ಯಾರು? ಖಂಡಿತವಾಗಿಯೂ ಅವರಿಗೆ ಯಾವುದೇ ದುರುದ್ದೇಶಗಳಿಲ್ಲ. ಇದ್ದದ್ದೇ ಆದರೆ, ಸಾಯುವ ಸ್ಥಿತಿಯಲ್ಲಿದ್ದ ನಮ್ಮನ್ನು ತಂದು ಕಾಪಾಡುವರೇಕೆ? ಅಷ್ಟರಲ್ಲಿ ನನಗೆ ಏನೋ ಸದ್ದು ಕೇಳಿಸಿತು. ತಕ್ಷಣ ಕಣ್ಣು ಮುಚ್ಚಿ ಮಲಗಿರುವವನಂತೆ ನಟಿಸಿದೆ.

ಜಯ ಜನನೀ ಜಯ ಜನನೀ
ಜಯ ವೀರರ ಮಾತೆ।
ಜಯ ಭಾರತಿ; ಅಡಿಗೆರಗುವೆ
ಜಯ ಸನ್ಮತಿ ದಾತೆ।
ಧರ್ಮದ ರಕ್ಷಣೆ, ಪಾಲನೆ
ನಮ್ಮಯ ಕರ್ತವ್ಯ–
ಚಾಗವು ಎಲ್ಲಿಹುದಲ್ಲಿಯೆ–
ತಾಯಿಯ ಸಾನ್ನಿಧ್ಯ!

ಭಕ್ತಿಯ ಆರ್ದ್ರತೆ ಆ ಧ್ವನಿಯಲ್ಲಿತ್ತು. ಕೊಂಚ ಕೊಂಚವಾಗಿ ಕಣ್ಣು ಬಿಟ್ಟು ಆ ಮನುಷ್ಯನನ್ನ ನೋಡಿದೆ. ಬಿಳಿಯ ಬಣ್ಣದ ಬಟ್ಟೆಯನ್ನು ವಿಚಿತ್ರವಾಗಿ ಕಟ್ಟಿಕೊಂಡಿದ್ದನು. ಸೊಂಟದಿಂದ ಮೇಲಕ್ಕೆ ಯಾವುದೇ ಬಟ್ಟೆಯನ್ನು ಧರಿಸಿರಲಿಲ್ಲ. ನೋಟದಲ್ಲೇ ಕಾಯದ ಗಟ್ಟಿತನ ಗೊತ್ತಾಗುತ್ತಿತ್ತು. ಎಡ ತೋಳಿಗೆ ಬಟ್ಟೆಯನ್ನು ತುಂಡು ಮಾಡಿ ಕಟ್ಟಿಕೊಂಡಿದ್ದನು. ಮುಖವು ತೇಜೋಮಯವಾಗಿತ್ತು. ಅವನು ಚೀಲವೊಂದರಿಂದ ಇನ್ನೊಂದು ಬಿಳಿ ಬಟ್ಟೆಯನ್ನು ತೆಗೆದುಕೊಂಡು ಮೇಲ್ಮೈ ಮುಚ್ಚುವಂತೆ ಧರಿಸಿದನು. ಪೂರ್ತಿ ಕಣ್ಣು ತೆರೆಯದೆಯೇ ನಾನು ಇವೆಲ್ಲವನ್ನೂ ನೋಡುತ್ತಿದ್ದೆ. "ಏನೋ ಕಾಳ? ಎಚ್ಚರವಾಯ್ತೇ?" ಎಂದುಬಿಟ್ಟನು! ನನಗೆ ತಡೆಯಲಾರದ ಆಶ್ಚರ್ಯ! "ನಿ..ನಿ..ನಿಮಗೆ ಹೇಗೆ ತಿಳಿಯಿತು!?" ಎಂದು ನಾನು ಕೇಳಲು, ಅವರು ಬಂದು ನನ್ನ ಪಕ್ಕದಲ್ಲಿದ್ದ ಮರದ ತುಂಡಿನ ಮೇಲೆ ಕುಳಿತು ನನ್ನ ತಲೆಯನ್ನ ಸವರಿದರು. ನನಗೆ ಅವರ ಮೇಲಿನ ಗೌರವವು ದುಪ್ಪಟ್ಟಾಯಿತು. ಅವರ ಬಗ್ಗೆ "ಏಕವಚನ"ದಲ್ಲಿ ಬರುತ್ತಿದ್ದ ಭಾವಲಹರಿ ಈಗ "ಬಹುವಚನ" ವಾಯಿತು. "ಅವೆಲ್ಲ ನಿನಗೂ ಹೇಳಿಕೊಡೋಣವಂತೆ. ಹಸಿವಾಗ್ತಿದ್ಯ?" ಎಂದರು. ನನಗೆ ಅಮ್ಮ ನೆನಪಾದರು. ಅವರ ಕೈಯನ್ನ ಹಿಡಿದುಕೊಂಡು ಮತ್ತೆ ಅಳುವುದನ್ನ ಪ್ರಾರಂಭಿಸಿದೆ. "ಯಾಕೋ? ಯಾಕೋ ಕಾಳ ಅಳ್ತೀಯ? ಈಗ ನಾನಿದ್ದೀನಿ. ನೀವು ಮೂವರೂ ಇಂದಿನಿಂದ ನನ್ನ ಮಕ್ಕಳ ಹಾಗೆಯೇ. ಮೊದಲು ಎಲ್ಲ ಸರಿ ಹೋಗಲಿ. ನಿಮ್ಮ ಕೆಲಸ ತುಂಬಾ ಇದೆ!" ಎನ್ನುತ್ತಾ ನನ್ನನ್ನ ಅಪ್ಪಿಕೊಂಡರು.

"ನಿಮ್ಮನ್ನ ಏನಂತ ಕರೆಯಬೇಕು?" ಎಂಬ ಒಂದು ಚಿಕ್ಕ, ಅಮುಖ್ಯವೂ, ಅತ್ಯಲ್ಪವೂ ಆದ ಪ್ರಶ್ನೆಯನ್ನ ನಾನು ಕೇಳಿದೆ. "ಏನೆನ್ನುವೆ?" ಎಂದು ಅವರು ಕಣ್ಣು ಮುಚ್ಚಿಕೊಂಡರು. ನಾನು ಸ್ವಲ್ಪ ನಾಚುತ್ತಲೇ, "ನಿಮ್ಮ ಹೆಸರೇನು?" ಎಂದೆ. "ಕೃಷ್ಣಾಚಾರ್ಯ" ಎಂದರು. ನಾನು ಸ್ವಲ್ಪ ಯೋಚಿಸಿ, ಆ ಪದವನ್ನು ಉಚ್ಚರಿಸಲಾಗದೆ, "ಆಚಾರ್ಯ!" ಎಂದೆ. ಅವರು ನಕ್ಕು, "ಈಗ ಮಲಗಿಕೋ. ನಂತರ ಬಂದು ಮಾತಾಡೋಣವಂತೆ" ಎಂದು, ಹೊರಗೆ ಹೊರಟರು. ನಾನು ಎಷ್ಟೋ ಹೊತ್ತು ಎಚ್ಚರವಾಗಿಯೇ ಇದ್ದೆ. ತಣ್ಣಗೆ ಗಾಳಿ ಬೀಸಲು ಶುರುವಾದಾಗ, ನಿದ್ದೆ ತಾನಾಗಿಯೇ ಆವರಿಸಿತು. ಕನಸಲ್ಲೆಲ್ಲಾ ಬೆಂಕಿ, ಕೂಗು, ಕೊಡಲಿ, ಮುರಿದ ಮರಗಳು, ಧಡೂತಿ ಮನುಷ್ಯರು, ಅಪ್ಪಯ್ಯ, ಅಮ್ಮ, ನಾಗ–ಬೋಕರ ತಂದೆ ತಾಯಿಯರು, ಹೀಗೆ ನನ್ನ ಜೀವನದಲ್ಲಾದ ಎಲ್ಲಾ ದುರ್ಘಟನೆಗಳು ಬರತೊಡಗಿದವು. ಮೈ ಬೆವರತೊಡಗಿತು. ಮೊನ್ನೆ ಮೊನ್ನೆಯೇ ಝರಿಗಳಲ್ಲಿ ಆಟವಾಡಿಕೊಂಡು, ಜಲಪಾತದ ಬಂಡೆಗಳಲ್ಲಿ ಜಾರಿಕೊಂಡು, ಎಲ್ಲೆಲ್ಲೋ ನಡೆದುಕೊಂಡು ಹೋಗುತ್ತಿದ್ದವರು ನಾವೆಯೇ? ಇನ್ನು ಜೀವನ ಪರ್ಯಂತ ಹೀಗೆ ಇರಬಹುದು, ಇದೇ ಮೋಜಿನಲ್ಲಿ ಎಂದೆಲ್ಲಾ ಯೋಚಿಸಿದ್ದವರೂ ನಾವೆ. ಅವೆಲ್ಲವೂ ಈಗ ಅಳಿಸಿಹೋಯಿತು. ಆಚಾರ್ಯರ ಮುಖದ ಚಿತ್ರ ಕಣ್ಣ ಮುಂದೆ ಬಂದಾಗ, ಒಂದು ರೀತಿಯ ಶಾಂತಿ ಪ್ರವಹಿಸಿತು. ಬೋಕನು ಹೊರಳಾಡಿದ. "ಬೋಕ! ಲೋ ಬೋಕ!" ಎಂದು ನಾನು ಕೂಗಲು, ಅವನು ನಿಧಾನವಾಗಿ ನನ್ನ ಕಡೆ ತಿರುಗಿ, "ಕಾಳ! ಕಾಳ!" ಎಂದು ಮೇಲಕ್ಕೆದ್ದ. ಅವನ ತಲೆಗೆ ಆಚಾರ್ಯರು ಒಂದು ಬಟ್ಟೆ ಕಟ್ಟಿದ್ದರು. ತಲೆ ಸ್ವಲ್ಪ ನೋವಾದಂತೆ, "ಯಪ್ಪಾ!" ಎಂದು ಎರಡೂ ಕೈಗಳಲ್ಲಿ ತಲೆಯನ್ನ ಹಿಡಿದುಕೊಂಡು ಎದ್ದು, ನನ್ನ ಬಳಿ ಬಂದ. ಅವನಿಗೆ ತಲೆಗೆ ಮಾತ್ರ ಪೆಟ್ಟು ಬಿದ್ದಿತು. "ಇದೇನೋ ಕಾಳ! ನಾವೆಲ್ಲಿದ್ದೀವಿ? ಅಪ್ಪಯ್ಯ ಎಲ್ಲಿ?" ಇತ್ಯಾದಿಯಾಗಿ ರಭಸದಿಂದ ಪ್ರಶ್ನಿಸ ಲಾರಂಭಿಸಿದ. ನಾನು ಅವನ ಕೈಗಳನ್ನು ಹಿಡಿದು, ನೇವರಿಸುತ್ತಾ, ಎಲ್ಲವನ್ನೂ ಹೇಳತೊಡಗಿದೆ. ನಾವಿಬ್ಬರೂ ಒಬ್ಬರನ್ನೊಬ್ಬರು ಅಪ್ಪಿಕೊಂಡೆವು. ಅಪ್ಪುಗೆ ಯಲ್ಲಿಯೇ ಎಷ್ಟೋ ಭಾವನೆಗಳು ನಮ್ಮಿಬ್ಬರ ಮಧ್ಯೆ ಸಂದಾಯವಾದವು. ಇಬ್ಬರೂ ಕುಳಿತು ನಾಗನು ಎಚ್ಚರವಾಗುವುದನ್ನೂ, ಆಚಾರ್ಯರು ಬರುವುದನ್ನೂ ಕಾಯುತ್ತಾ ಕುಳಿತೆವು.

2

ನಮ್ಮ ಮೂವರಲ್ಲಿ ಹೆಚ್ಚಾಗಿ ಏಟು ತಿಂದಿದ್ದವನು ನಾಗ. ಹೆಚ್ಚು ಶಕ್ತಿಯಿಂದ ಹೊಡೆದಾಡಿದ್ದೂ ಅವನೇ. ಅವನ ತಲೆಗೆ ದೊಡ್ಡ ಏಟೇ ಬಿದ್ದಿತು. ಆ ಭಾರೀ ಕಲ್ಲಿನ ಭಾರಕ್ಕೆ ಅವನ ಕೈಗೆ ಏಟಾಗಿತ್ತು. ಅವನು ಮಲಗಿದ್ದ ಆ ಮರದ ಪಕ್ಕದಲ್ಲಿ ಬೇರೆ ಬೇರೆ ಮರದ ಬೇರುಗಳು, ಎಲೆಗಳು, ಯಾವುದೋ ಪುಡಿಗಳು ಎಲ್ಲಾ ಇದ್ದವು. ನಾನು ಎದ್ದು ನಿಲ್ಲಲು ಯತ್ನಿಸಿದೆ. ಬೋಕನ ಹೆಗಲ ಮೇಲೆ ಕೈ ಹಾಕಿ ಕಾಲನ್ನು ಕೆಳಗಿಟ್ಟೆ. ಪೂರ್ತಿ ಶರೀರವೇ ಬರಿಯ ನನ್ನ ಕಾಲಿನಲ್ಲಿದೆಯೇನೋ ಎನ್ನುವಷ್ಟು ನನ್ನ ಕಾಲು ಭಾರವಿತ್ತು. ತರಚಿಕೊಂಡಿದ್ದ ನನ್ನ ಪಾದಕ್ಕೆ ಆಚಾರ್ಯರು ಏನೋ ನೀರು-ನೀರಾಗಿರುವ ಹಸಿರು ಬಣ್ಣವನ್ನ ಹಚ್ಚಿದ್ದರು. ಅದನ್ನ ನೆಲದ ಮೇಲಿಟ್ಟ ತಕ್ಷಣ "ಪಚ್ಚ್" ಎಂಬ ಶಬ್ದ ಬಂದು, ಆ ಮಣ್ಣಿನ ಮೇಲೆ ಹಸಿರು ಬಣ್ಣದ ಚಿತ್ರ ಮೂಡಿತು. ಆಚಾರ್ಯರು ನೋಡಿದರೆ ಸಿಟ್ಟಾಗಬಹುದೇನೋ ಎಂದುಕೊಂಡು ಬಟ್ಟೆ ಕಟ್ಟಿದ್ದ ಬಲಗಾಲನ್ನ ಮೇಲಕ್ಕೆತ್ತಿ, ಕುಂಟುತ್ತಾ, ನಾಗನ ಪಕ್ಕದಲ್ಲಿ ಹೋಗಿ ಕುಳಿತೆ. ಅವನ ಮುಖವನ್ನೇ ನೋಡಿದೆ. ಬೋಕನು ಖುಷಿಯ ಮನಸ್ಥಿತಿಯಲ್ಲಿದ್ದನು. "ಲೋ ಸಿಂಗಳೀಕ, ಎದ್ದೇಳೋ ಲೋ! ಗೊತ್ತು ನಿನ್ನ ಆಟಗಳು ಮಗನೆ!" ಎನ್ನುತ್ತಾ, ನಾಗನಿಗೆ ಕಚಗುಳಿ ಇಡತೊಡಗಿದ. ನಾಗನಿಗೆ ಅಷ್ಟು ಹೊತ್ತಿಗೆ ಎಚ್ಚರವಾಗಿತ್ತು. ಅವನ ಮುಖದಲ್ಲಿ ಚಿಕ್ಕದೊಂದು ನಗುವು ಮೂಡಿತ್ತು. ಆದರೆ ಅವನಿಗೆ ಕಣ್ಣು ಬಿಡುವ ಮನಸ್ಸಿರಲಿಲ್ಲ. ಬೋಕನು ಮಾಡುತ್ತಿದ್ದ ಕೀಟಲೆಯನ್ನ ಅವನು ಗುಪ್ತವಾಗಿಯೇ ಆನಂದಿಸುತ್ತಿದ್ದ. ಅವನಿಗೆ ಹೊದಿಸಿದ್ದ ಬಟ್ಟೆಯನ್ನು ನಾನು ನಿಧಾನವಾಗಿ ಸರಿಸಿದೆ. ಅವನು ತನ್ನ ಮಾಮೂಲು ಸಿಂಗಳೀಕ ಶೈಲಿಯಲ್ಲಿ ಬಾಯಿ ತೆರೆದು ಆಕಳಿಸಿದ. ಆದರೆ ಅವನ ತಲೆಗೆ ಏಟು ಬಿದ್ದಿದ್ದ ಪರಿಣಾಮವಾಗಿ ಅವನಿಗೆ ತಡೆಯಲಾರದಷ್ಟು ನೋವಾಗಿರಬೇಕು. "ಅಮ್ಮಾ!" ಎಂದು ಅವನು ನೋವಿನಲ್ಲಿ ಚೀರಿದನು. "ಏಯ್! ಏಯ್! ಹುಷಾರು ಕಣೋ" ಎಂದು ಬೋಕ ತಾಯಿಯಂತೆ ನಾಗನ ತಲೆಯನ್ನ ಮೆತ್ತಗೆ ಒತ್ತಿದನು. ನಾಗನ ಕಣ್ಣಲ್ಲಿ ನೀರು. "ಲೋ! ಅಪ್ಪಯ್ಯ ಎಲ್ಲೋ? ಅಮ್ಮ ಏನಾದ್ರೋ? ಕಾಳ! ನಿಮ್ಮಪ್ಪಯ್ಯ ಎಲ್ಲೋ? ಬೋಕ, ನಿನ್ನ ಕಥೆ ಏನೋ?" ಎಂದೆಲ್ಲ ಅವನು ಕೇಳತೊಡಗಿದನು. ಬೋಕನಿಗೆ ಅಳು ಒತ್ತರಿಸಿಕೊಂಡು ಬಂದರೂ, ಅವನು ತನ್ನ ಸಹಜ ಕೀಟಲೆಯ ಶೈಲಿಯಲ್ಲಿ, "ನಾಗ, ಮಲ್ಕೋ ಸ್ವಲ್ಪ ಹೊತ್ತು ನೀನು." ಎಂದೂ, ಆಚಾರ್ಯರ ವಿಷಯವನ್ನೂ ಹೇಳಿ ನಾಗನನ್ನ ಮತ್ತೆ ಮಲಗಿಸಿದ. ಬೋಕ ನನ್ನನ್ನ ಕರೆದುಕೊಂಡು ಗುಡಿಸಲ ಹೊರಕ್ಕೆ ಕರೆದುಕೊಂಡು ಬಂದ. ನಮಗೆ ಆಶ್ಚರ್ಯವಾಗುವಂತಹ ದೃಶ್ಯಗಳವು. ಗಾಳಿಯು ಬೀಸುತ್ತಿತ್ತು. ನನ್ನ

ಕೂದಲು ಗಾಳಿಯ ರಭಸಕ್ಕೆ ನನ್ನ ಕಣ್ಣುಗಳೊಳಕ್ಕೆ ಹೋಗತೊಡಗಿತು. ಬೋಕನ ಹೆಗಲಿಂದ ಕೈ ಬಿಟ್ಟು ನನ್ನ ಕೂದಲನ್ನ ಹಿಂದಕ್ಕೆ ಕಟ್ಟಿಕೊಂಡೆ. ಆದರೆ ನಡೆದು ಎಷ್ಟೊಂದು ದಿನವಾಗಿದ್ದ ನನಗೆ ಸಮತೋಲನ ತಪ್ಪಿ, ದಟ್ಟ ಹುಲ್ಲುಗಾವಲಲ್ಲಿ ಬಿದ್ದು ಬಿಟ್ಟೆ. ಆದರೆ ಅರಣ್ಯ ತಾಯಿಯ ಅವತಾರವಾದ ಈ ಮೆದು ಹುಲ್ಲಿನೆಸಳುಗಳು ನನ್ನನ್ನು ಮಡಿಲಿಗೆ ಹಾಕಿಕೊಂಡಂತೆ ಭಾಸವಾಯಿತು. ಬೋಕ ಆಗಲೆ ದೂರ ನಡೆದಿದ್ದ. "ಬಾರೋ ಇಲ್ಲಿ! ಕಾಳ! ಬಾ!" ಎಂದ. ನನ್ನ ಪಾದದ ಗಾಯವನ್ನೂ ಮರೆತು ಓಡತೊಡಗಿದೆ. ಮೆದು ಹುಲ್ಲು ನನ್ನ ಗಾಯವನ್ನ ಇನ್ನೂ ವಾಸಿ ಮಾಡುತ್ತಿತ್ತು. ಗುಡಿಸಲಿನಿಂದ ಸ್ವಲ್ಪ ಮೇಲೆ ಇಡೀ ಕಾಡು ಕಾಣುವಂತಹ ಗಿರಿ!! ಮೋಡಗಳೆಲ್ಲ ನಮ್ಮನ್ನು ಸಂಧಿಸಲು ಬರುತ್ತಿರುವುದೇನೋ ಎನ್ನುವಂತೆ ಅವುಗಳ ಚಲನೆಯಿತ್ತು. ಇನ್ನೂ ಸ್ವಲ್ಪ ಹತ್ತುವಷ್ಟರಲ್ಲಿ, ಯಾರೋ ಕಪ್ಪು ಮನುಷ್ಯನೊಬ್ಬ ನಿಂತಿರುವಂತೆ ಕಂಡಿತು. ದೊಡ್ಡ ದೊಡ್ಡ ಮರಗಳೇ ತೂರಾಡುವಂತೆ ಮಾಡುತ್ತಿದೆ ಈ ಗಾಳಿ. ನಾನು ಬೋಕನನ್ನು ಗಟ್ಟಿಯಾಗಿ ಹಿಡಿದು ನಿಂತಿದ್ದೆ. ಆದರೆ ಈ ಮನುಷ್ಯ ಮಾತ್ರ ಸ್ವಲ್ಪವೂ ಅಲ್ಲಾಡದೆಯೇ ಇದ್ದ. ಎಡಗೈಯಲ್ಲಿ ಏನೋ ಹಿಡಿದಿರುವಂತೆ ಇತ್ತು. ನಮಗೆ ಒಂದು ಕ್ಷಣ ಭಯವೇ ಆಯಿತು-ಎಲ್ಲಿ ಆ ಕೊಡಲಿ ಹಿಡಿದವರು ನಮ್ಮನ್ನು ಹುಡುಕಿಕೊಂಡು ಬಂದುಬಿಟ್ಟಿದ್ದಾರೋ ಎಂದು. ಆದರೆ ಹತ್ತಿರ ಹೋಗುತ್ತಾ ಹೋಗುತ್ತಾ, ಆ ಮನುಷ್ಯನ ಎದುರು ಯಾರೋ ಇದ್ದಂತೆ ಎನ್ನಿಸಿತು. ಅಲ್ಲಿ ಆಚಾರ್ಯರು ಕಣ್ಣು ಮುಚ್ಚಿಕೊಂಡು ಕುಳಿತಿದ್ದಾರೆ! ಬೆರಳುಗಳನ್ನ ವಿಚಿತ್ರವಾಗಿ ಮಡಚಿ, ಎರಡೂ ತೊಡೆಗಳ ಮೇಲಿಟ್ಟುಕೊಂಡಿದ್ದರು. ನಮಗೆ ಕುತೂಹಲ. ಈ ಕಪ್ಪು ಮನುಷ್ಯ ಯಾರು? ಆಚಾರ್ಯರು ಇವನ ಮುಂದೆ ಕುಳಿತಿದ್ದಾರೇಕೆ? ನಾವು ಬಂದಿರುವುದು, ನಮ್ಮ ಚೇಷ್ಟೆ ಎಲ್ಲವೂ ಆಚಾರ್ಯರಿಗೆ ತಿಳಿಯುತ್ತದೆಂದು ನಮಗೆ ಗೊತ್ತಾದರೂ ನಾವು ನಮ್ಮ ಮನಗಳನ್ನ ತಣಿಸಿಕೊಳ್ಳಲು ಆ ಕಪ್ಪು ಮನುಷ್ಯನ ಮುಂದೆ ಹೋದೆವು. ಬೋಕನು ಕಪ್ಪು ಮನುಷ್ಯನನ್ನ ನೋಡಿದ ತಕ್ಷಣ, ಜೋರಾಗಿ ನಗತೊಡಗಿದ. ಆಚಾರ್ಯರ ಭಯ ಒಂದು ಕಡೆ. ಇವನೇಕೆ ನಗುತ್ತಿದ್ದಾನೆ ಎಂಬ ಕುತೂಹಲ ಇನ್ನೊಂದು ಕಡೆ. ನಾನೂ ಆ ಕಪ್ಪು ಮನುಷ್ಯನ ಮುಂದೆ ಹೋದೆ. "ಇದೇನೋ..." ಎನ್ನುತ್ತಾ ನಾನೂ ಜೋರಾಗಿ ನಗಲು ಆರಂಭಿಸಿದೆ.

3

"ಬೋಕ, ಇದು ಸಿಂಗಳೀಕದ ಮುಖ ಅಲ್ವೇನೋ!?" ಎಂದು ನಾನೆಂದರೆ, "ಇಲ್ಲ ಕಣೋ. ಇದು ಮಾಮೂಲಿ ಕೋತಿಗೆ ಮನುಷ್ಯನ ದೇಹವನ್ನ ಜೋಡಿಸಿರೋದು" ಎಂದ ಅವನು. ಸರಿಯಾಗಿ ಗಮನಿಸಿದಾಗ, ಆ ಕಪ್ಪು ಮನುಷ್ಯನ (ಅಥವಾ ಮಂಗ) ಕೊರಳಲ್ಲಿ ಕಪ್ಪು ಹೂಗಳು! ಅದನ್ನ ನಾವಿಬ್ಬರೂ ನಿಧಾನವಾಗಿ ಮುಟ್ಟಿದೆವು. ನೋಡಿದರೆ, ಅದು ಕಲ್ಲು! ಕಪ್ಪು ಮನುಷ್ಯನಲ್ಲ, ಕಪ್ಪು ಕಲ್ಲು! ಕಲ್ಲನ್ನ ಹೀಗೂ ಮಾಡಬಹುದಾ! ಏನು ಈ ಸೋಜಿಗ! ನಾವು ಆ ಕಲ್ಲಿನಲ್ಲಿ ಮಾಡಿದ್ದ ಕೋತಿ–ಮನುಷ್ಯನ ಕಾಲಿನಿಂದ ಮುಟ್ಟುತ್ತಾ ಬಂದೆವು. ಥೇಟ್ ಮನುಷ್ಯನೇ! ಅದೇ ಗಟ್ಟಿ ತೊಡೆಗಳು. ಜೊತೆಗೆ, ಅದಕ್ಕೆ ಬಟ್ಟೆ ತೊಡಿಸಿರುವಂತೆ ಅಲಂಕಾರ ಬೇರೆ!! ಗಟ್ಟಿ ಮೈಕಟ್ಟನ್ನು ಸೂಚಿಸುವ ಅಲ್ಲಲ್ಲಿನ ಏರಿಳಿತಗಳು! ಎಡಗೈಯಲ್ಲಿ ಕಟ್ಟಿಗೆಯೊಂದಕ್ಕೆ ದಪ್ಪ ಗುಂಡನ್ನು ಸಿಕ್ಕಿಸಿರುವಂತಹ ವಸ್ತು. ಬಲಗೈಯನ್ನ ಎದುರಿಗಿರುವವರ ತಲೆಯ ಮೇಲಿಡುವಂತಹ ಭಂಗಿ. ಕೊರಳಲ್ಲಿ ಹೂವು ಬಿಟ್ಟು ಬೇರೆ ಬೇರೆ ವಸ್ತುಗಳು ಬೇರೆ! ಅಬ್ಬಾ ಅಬ್ಬಾ ಏನಾಶ್ಚರ್ಯವಿದು! ಒಂದು ಕಲ್ಲನ್ನ ಹೀಗೂ ಪರಿವರ್ತಿಸಬಹುದೆ? ತೋಳುಗಳಂತೂ ಅತ್ಯಂತ ಗಟ್ಟಿ. ಮೊದಲೇ ಕಲ್ಲು. ಕಲ್ಲಿನಲ್ಲಿಯೇ ಗಟ್ಟಿತನವನ್ನು ತೋರಿಸುವ ವಿಧಾನ! ಎದೆಯ ಬಳಿ ಕೈಯಾಡಿಸಿದಾಗ, ಅಲ್ಲಿ ಯಾರೋ ಗಂಡು ಹೆಣ್ಣು ಕುಳಿತಿರುವಂತಹ ಚಿತ್ರ! ಅರಣ್ಯ ತಾಯಿ! ಒಂದು ಕಲ್ಲಿನಲ್ಲಿ ಹೀಗೆಲ್ಲ ಮಾಡಬಹುದೇ? ನಿಧಾನಕ್ಕೆ ಎದ್ದು ಆ ಕಲ್ಲಿನ ಮುಖದ ಬಳಿ ಬಂದೆವು. ಇದ್ದಕ್ಕಿದ್ದ ಹಾಗೆ ಅದು ನಕ್ಕಿದಂತಾಯಿತು. ಬೋಕ ಹಾಗೂ ನಾನು ಬೆಚ್ಚಿ ಬಿದ್ದೆವು. ಸಿಂಗಳೀಕದಂತಹ ಮುಖವಿದ್ದರೂ, ಅದರಲ್ಲಿ ಏನೋ ಒಂದು ರೀತಿಯ ಬೆಳಕು. ನಮ್ಮನ್ನು ಒಂದಿಷ್ಟು ದೂರವೇ ಇಡುವಂತಹ ಶಕ್ತಿ. "ನಿಮ್ಮೊಂದಿಗೆ ನಾನಿದ್ದೇನೆ" ಎಂದು ಹೇಳುವಂತಹ ಮಂದಹಾಸ. ಅರಣ್ಯ ತಾಯಿಯ ಪುತ್ರನೇ ಇವನು ಎನ್ನುವ ಸಂದೇಹ ನಮಗೆ. ನಾವು ನಕ್ಕಿದಕ್ಕೆ ತುಂಬಾ ಪಶ್ಚಾತ್ತಾಪ ಪಡುವಂತಾಯಿತು. ನಿಧಾನವಾಗಿ ಆ ಕಲ್ಲಿನ ಹಿಂಭಾಗಕ್ಕೆ ಹೋದೆವು. ಅಲ್ಲಿಯೂ ಆ ಮಂಗ–ಮಾನವನ ರೂಪ ಪೂರ್ತಿಯಾಗಿತ್ತು. ಮುಂದೆಯಿಂದ ಕಟ್ಟಿದ್ದ ಬಟ್ಟೆಯು ಹಿಂದೆಯೂ ಎಲ್ಲೂ ಕೆಡದಂತೆ ಮಡಚಿರುವಂತೆ–ಕಲ್ಲಿನಲ್ಲಿ! ಕಲ್ಲಿನಲ್ಲಿ ಮಾಡಿದ್ದಾರೆ! ಸಿಂಗಳೀಕ ಕ್ಕಿರುವಂತೆಯೇ ಉದ್ದನೆಯ ಬಾಲ ಬೇರೆ. ಅದರ ಕೊನೆಯಲ್ಲಿ ಕೂದಲಿನ ಗುಚ್ಛ. ಅದಕ್ಕೆ ಕಟ್ಟಿದ್ದ ಚಿಕ್ಕದೊಂದು ಆಟಿಕೆ. ಅಂದು ಕಾಡಿನ ಬೇರೆ ಭಾಗದಲ್ಲಿ "ಢಣ್ ಢಣ್" ಎಂದು ಸದ್ದು ಮಾಡಿದ್ದ ಆಟಿಕೆ. ಅದರದ್ದೇ ಚಿಕ್ಕ ರೂಪ. "ಯಾರು ಬಂದರೂ ಕುಗ್ಗುವುದಿಲ್ಲ" ಎನ್ನುವಂತಹ ದಿಟ್ಟತನ ನಿಂತಿರುವ ಶೈಲಿಯಲ್ಲೇ ಗೊತ್ತಾಗುತ್ತಿತ್ತು. ನಾವು ಸ್ವಲ್ಪ ಹಿಂಜರಿಯುತ್ತಲೇ ಆ ಮಂಗ–ಮನುಷ್ಯನ ಹೆಗಲನ್ನು ಸ್ಪರ್ಶಿಸಿದೆವು.



ಇಬ್ಬರಿಗೂ ಮೈಯಲ್ಲಿ ಸಿಡಿಲು ಹೊಡೆದಂತಾಯಿತು. ಚಳಿಯಾದಾಗ ಆಗುವ ಅನುಭವದಂತೆ ಮೈಯೆಲ್ಲ ಮುಳ್ಳು-ಮುಳ್ಳಾಯಿತು. ಒಂದು ರೀತಿಯ ಸಂತೋಷ ಮೈಯಲ್ಲೆಲ್ಲಾ ಹರಡಿತು. ಇದು ಆ ಕಲ್ಲಿನ ಪ್ರಭಾವವೋ, ನಮ್ಮದೇ ಆಲೋಚನಾ ಲಹರಿಯ ಫಲವೋ ತಿಳಿಯದು. ಒಟ್ಟಿನಲ್ಲಿ ಯಾರೋ ಬಾಂಧವನನ್ನು ಮುಟ್ಟಿದಂತಹ ಅನುಭವ. ಆಚಾರ್ಯರು ಕೈಕಟ್ಟಿಕೊಂಡು ಇದನ್ನೆಲ್ಲಾ ನೋಡುತ್ತಿದ್ದರು. ಅವರ ಮುಖದಲ್ಲಿ ಸಣ್ಣದೊಂದು ನಗುವಿತ್ತು. ಅವರಿದ್ದ ಕಡೆಯಿಂದ ಅವರು ಓಡಲು ಆರಂಭಿಸಿ, ಒಮ್ಮೆ ಗಾಳಿಗೆ ಹಾರಿ, ಕೈಗಳನ್ನ ನೆಲದ ಮೇಲಿಟ್ಟು, ಮತ್ತೆ ಕಾಲುಗಳ ಸಹಾಯದಿಂದ ಮೇಲಕ್ಕೆಗರಿ ಬಂದು, ಆ ಮಂಗ-ಮನುಷ್ಯನ ಮುಂದೆ ಮೊಳಕಾಲಮೇಲೆ ಕೂರುವಂತೆ ಇಳಿದರು. ಅವರ ಬಲ ಪಾದವು ನೆಲದ ಮೇಲೂರಿತ್ತು. ಎಡಗಾಲು ಹಿಂದಕ್ಕೆ ಚಾಚಿತ್ತು. ಎಡಗೈ ಬೆನ್ನ ಹಿಂದೆ ಇತ್ತು. ಬಲಗೈಯಿಂದ ಆ ಮಂಗ-ಮನುಷ್ಯನ ಕಾಲನ್ನ ಸ್ಪರ್ಶಿಸಿ, ತಮ್ಮ ಹಣೆಯನ್ನ ಮುಟ್ಟಿಕೊಂಡರು. ಸ್ವಲ್ಪ ಹೊತ್ತು ಕಣ್ಣನ್ನು ಮುಚ್ಚಿಕೊಂಡೇ ಇದ್ದ ಅವರು, ನಿಧಾನವಾಗಿ ಕಣ್ಣು ತೆರೆದರು. ಕಣ್ಣೆವೆಯಿಕ್ಕುವಷ್ಟರಲ್ಲಿ ಎರಡು ಕಾಲುಗಳನ್ನೂ ಜೋಡಿಸಿ ಮೇಲಕ್ಕೆದ್ದರು. ಬೋಕ ಹಾಗೂ ನಾನು ಆಚಾರ್ಯರ ಈ 'ಆಟ'ವನ್ನ ಬಾಯಿ ಬಿಟ್ಟುಕೊಂಡು ನೋಡುತ್ತಿದ್ದೆವು. ಆಚಾರ್ಯರು ನಮ್ಮ ಬಳಿ ಬಂದು, ಇಬ್ಬರ ಹೆಗಲ ಮೇಲೂ ಕೈ ಹಾಕಿದರು. ನಮಗೆ ಏನು ಮಾತನಾಡಬೇಕೆಂದು ತಿಳಿಯಲಿಲ್ಲ. ಕೊನೆಗೆ ನಾನೇ ಧೈರ್ಯ ತಂದುಕೊಂಡು, "ಆಚಾರ್ಯರೆ, ಆ ಕಲ್ಲು, ಏನದು? ನೀವೇನು ಮಾಡಿದ್ದು?" ಆಚಾರ್ಯರು ನಕ್ಕರು. "ಕಾಳ! ಅದನ್ನ ಕಲ್ಲು ಎನ್ನುವುದಿಲ್ಲ. ಅದನ್ನ ಮೂರ್ತಿ ಏನುತ್ತಾರೆ ಕಣೊ. ಅದರಲ್ಲಿ ಜೀವವಿದೆ ಎಂದು ನಾವು ನಂಬಬೇಕು. ಆ ಮೂರ್ತಿ ಹನುಮಂತ ನದ್ದು. ಭಾರಿ ಶಕ್ತಿಯುಳ್ಳವನವನು. ಕಾಡಿನ ಪ್ರತಿನಿಧಿ. ಬುದ್ಧಿವಂತ, ಶಕ್ತಿಯ ಪ್ರತೀಕ! ಅರಣ್ಯ ತಾಯಿಯನ್ನ ರಕ್ಷಿಸಬೇಕೆಂದರೆ ನಮಗೆ ಇವನ ಸಹಾಯ ಬೇಕೇ ಬೇಕು! ಇವನು ಸಿಂಗಳೀಕದಂತೆಯೇ ಮೇಲೆ-ಮೇಲೆ ಎಗರಬಲ್ಲನು. ಇವನ ಕುರಿತಾದ ಕಥೆಗಳು ಬಹಳಷ್ಟಿವೆ. ಕಾಲಕ್ರಮೇಣ, ನಿಮಗೆ ಒಂದೊಂದೇ ಕಥೆಯನ್ನ ಹೇಳುತ್ತೇನೆ." ನನಗೆ ಆದರೂ ಒಂದು ಸಂದೇಹ. "ಆಚಾರ್ಯರೆ, ಅರಣ್ಯ ತಾಯಿ ಬಿಟ್ಟು ಬೇರೆ ದೇವರೂ ಇದ್ದಾರಾ? ಅವರ ರೂಪ ಕಂಡವರು ಯಾರು?" ಆಚಾರ್ಯರು ಬೆನ್ನು ತಟ್ಟುತ್ತಾ, "ಅರಣ್ಯ ತಾಯಿ ನಮ್ಮೆಲ್ಲರನ್ನೂ, ಇಡೀ ವಿಶ್ವವನ್ನು ಪೋಷಿಸುತ್ತಿರುವ ತಾಯಿ! ಅವಳನ್ನು ನಾವು ಈ ವೃಕ್ಷ, ಗಿರಿ, ಪೊದೆ, ಹಕ್ಕಿ, ಮೃಗಗಳಲ್ಲಿ ಕಾಣುತ್ತೇವಷ್ಟೆ. ಅವಳ ಮಕ್ಕಳಾದ ನಾವು, ಅವಳ ವಿವಿಧ ಶಕ್ತಿಗಳಿಗೆ ಒಂದೊಂದು ದೇವರ ರೂಪವನ್ನ ಕೊಟ್ಟಿದ್ದೇವಷ್ಟೇ!" ಎಂದರು. ಬೋಕನೂ ಗಮನವಿಟ್ಟು ಕೇಳಿಸಿಕೊಳ್ಳುತ್ತಿದ್ದ. ಅಷ್ಟರಲ್ಲಿ ಸರಿಯಾಗಿ ಗುಡಿಸಲ ಬಳಿ

ಬಂದಿದ್ದೆವು. ನಾಗನು ಕುಳಿತಿದ್ದನು. ಅವನ ಮುಖದಲ್ಲಿನ ಕಳೆಯೇ ಅವನ ನೋವು ಶಮನವಾಗಿರುವುದನ್ನು ತೋರುತ್ತಿತ್ತು. ಅಷ್ಟು ಹೊತ್ತೂ ಸುಮ್ಮನಿದ್ದ ಬೋಕನು, ನಾಗನ ಬಳಿ ಓಡಿ ಹೋಗಿ, ಹನುಮಂತನ ಮೂರ್ತಿಯ ಬಗ್ಗೆ, ಆಚಾರ್ಯರು ಹೇಳಿದ ವಿಷಯಗಳ ಬಗ್ಗೆ ಎಲ್ಲವನ್ನೂ ಹೇಳಿದ. ಆಚಾರ್ಯರು, "ಭೇಷ್! ಬೋಕ. ಚೆನ್ನಾಗಿ ನೆನಪಿಟ್ಟುಕೊಳ್ಳುತ್ತೀಯ." ಎಂದರು. "ಹನುಮಂತನ ಇಡೀ ದೇಹವನ್ನ ಯಾವ ಆಯುಧಗಳೂ ತಾಕಲಾರವು" ಎಂದು ಆಚಾರ್ಯರು ಹೇಳಲು, ನಾಗನು, "ಆಯುಧ ಅಂದರೇನು ಆಚಾರ್ಯರೆ" ಎಂದ. "ನಮ್ಮನ್ನೂ, ನಮ್ಮದೆಂದುಕೊಳ್ಳುವುದನ್ನೂ, ಎಲ್ಲರಿಗೂ ಉಪಯುಕ್ತವಾಗುವುದನ್ನೋ ರಕ್ಷಿಸಲು ಉಪಯೋಗಿಸುವ ಯಾವುದೇ ಸಾಮಗ್ರಿಗೆ ಆಯುಧ ಎನ್ನಬಹುದು. ಪ್ರಹಾರ ಮಾಡಿ, ಎದುರಿಗಿರುವವನನ್ನ ಭೌತಿಕವಾಗಿ ಘಾತಿಸಬೇಕೆಂದರೆ, ಕೊಡಲಿ, ಕಟ್ಟಿಗೆ, ಬಿಲ್ಲು ಬಾಣ ಮುಂತಾದವುಗಳು ಆಯುಧಗಳು. ಅವನಲ್ಲಿನ ಭಯ ಹುಟ್ಟಿಸುವ ಧೈರ್ಯ ನಮ್ಮಲ್ಲಿದ್ದರೆ, ಅದೂ ಒಂದು ಆಯುಧ!" ಎಂದರು ಆಚಾರ್ಯರು. ಬೋಕನು ಸೂಕ್ಷ್ಮಗ್ರಾಹಿ. "ಹಾಗಿದ್ದರೆ ಹನುಮಂತನ ಕೈಯಲ್ಲಿತ್ತಲ್ಲ, ಅದೇನು ಆಚಾರ್ಯರೆ" ಎಂದ. "ಅದಕ್ಕೆ ಹೆಸರು 'ಗದೆ' ಎಂದು. ಸರಿಯಾಗಿ ಬೀಸಿದರೆ, ದುರುಳರ ಪ್ರಾಣ ತೆಗೆದು ನಮ್ಮ ಅರಣ್ಯವನ್ನ ಕಾಪಾಡಬಲ್ಲದು ಅದು." ಎಂದರು. ಯಾವುದೇ ಸುಸ್ಪಷ್ಟತೆಯಿಲ್ಲದೆ ನಮ್ಮ ಕಲಿಕೆ ಸಾಗಿತು. ಆಗ ಆಚಾರ್ಯರು, "ನಾಳೆಯಿಂದ, ನೀವು ಮೂವರೂ ಈ ಅರಣ್ಯ ತಾಯಿಯ ಸತ್ಪುತ್ರರಾಗುವ ಹಾದಿಯಲ್ಲಿ ನಡೆಯಬೇಕು. ನಾನೂ ನಡೆಯಬೇಕು. ನಿಮ್ಮೊಂದಿಗೆ ನಾನೂ ಬರುತ್ತೇನೆ." ಎಂದು ನಿಂತರು. "ಥಡ್! ಥಡ್!" ಎಂಬ ಸದ್ದು ಕೇಳತೊಡಗಿತು. ಆಚಾರ್ಯರು ದೊಡ್ಡ ಚೀಲವೊಂದರಿಂದ ಬೃಹತ್ ಬಿಲ್ಲೊಂದನ್ನು ತೆಗೆದರು. ನಂತರ ಬಿದಿರಿನಲ್ಲಿ ಕೊಳವೆಯಾಕಾರದಲ್ಲಿ ಮಾಡಿದ್ದ ವಸ್ತು. ಅದರಲ್ಲಿ ಬೇರೆ ಬೇರೆ ವಿನ್ಯಾಸದ ಬಾಣಗಳು. ಆಚಾರ್ಯರು ತಮ್ಮ ನೀಳವಾದ ಕೂದಲನ್ನ ಕಟ್ಟಿಕೊಂಡರು. "ನಾಳೆಯೇಕೆ. ಇಂದೇ ಆರಂಭ ವಾಗಲಿ, ಬನ್ನಿ!" ಎಂದರು. ಉತ್ಸಾಹದಲ್ಲಿ ನಾವು ಮೂವರೂ ಆಚಾರ್ಯರನ್ನು ಹಿಂಬಾಲಿಸಿದೆವು. ಹನುಮಂತ ಮೂರ್ತಿ ಇದ್ದ ಕಡೆಯಿಂದ ನಿಂತು ನೋಡಿದರೆ ಕಾಡಿನ ಯಾವ ಭಾಗದಲ್ಲಿ ಶಬ್ದವಾಗುತ್ತಿದೆ ಎಂದು ತಿಳಿಯುತ್ತಿತ್ತು. ಅಲ್ಲಿನ ಖಗಮೃಗಗಳೇ ಬೇಕಾದಷ್ಟು ಸೂಚನೆಗಳನ್ನು ಕೊಡುತ್ತಿದ್ದವು. ಆಚಾರ್ಯರು ನಮಗೆ ಮೌನದಿಂದಿರಲು ಸೂಚಿಸಿದರು. ಅವರು ಎಲ್ಲಿ ಹೇಳಿದರೆ ಅಲ್ಲಿ ನಿಲ್ಲಬೇಕೆಂದು ತಿಳಿಸಿದರು. ನಾವು ತಲೆಯಲ್ಲಾಡಿಸಿದೆವು. ಮೂವರಿಗೂ ನಮ್ಮ ನೋವು-ಗಾಯಗಳು ಮರೆತಂತಾಯಿತು. ಹುಲ್ಲುಗಾವಲ ಮೇಲಿನಿಂದ ಕುಳಿತು, ನಾವು ಜಲಪಾತದ ಕಲ್ಲುಗಳಲ್ಲಿ ಜಾರುತ್ತಿದ್ದಂತೆ ಆಚಾರ್ಯರು ಜಾರಿದರು. ನಮಗೆ

ಖುಷಿಯಾಯಿತು. ನಾವು ಮಾಡುತ್ತಿದ್ದ ಚೇಷ್ಟೆಗಳೇ! ಎಂದುಕೊಳ್ಳುತ್ತಾ ಹೋ ಎಂದು ಜಾರಿದೆವು. ಆಚಾರ್ಯರಷ್ಟು ವೇಗವಾಗಿ ಅಲ್ಲದಿದ್ದರೂ, ಅವರು ತಲುಪಿ ಒಂದಷ್ಟು ಹೊತ್ತಿನಲ್ಲೇ ತಪ್ಪಲಿಗೆ ನಾವೂ ತಲುಪಿದೆವು. ಆಚಾರ್ಯರು ನಮ್ಮನ್ನ ನೋಡಿ, ಕೈಯಲ್ಲಿ ಬನ್ನಿ ಎಂದು ಸನ್ನೆ ಮಾಡಿ ಓಡಲಾರಂಭಿಸಿದರು. ಕಾಡು ಎಂದರೇನು ಸಾಮಾನ್ಯವೆ? ಗಂಟು ಹಾಕಿದ ಕೂದಲ ಹಾಗೆ. ಅತ್ಯಂತ ಜಟಿಲವಾದ ರಚನೆ. ಮನುಷ್ಯನ ಸೃಷ್ಟಿಯೊಂದಿಗೆ ಅರಣ್ಯದ ನಾಶ ಎಂದು ಅಪ್ಪಯ್ಯ ಆಗಾಗ್ಗೆ ಹೇಳುತಿದ್ದರು. ಅರಣ್ಯ ತಾಯಿ ತನ್ನನ್ನು ತಾನು ರಕ್ಷಿಸಿಕೊಳ್ಳಲು ದೊಡ್ಡ ಮರಗಳನ್ನು ತನ್ನ ಒಡಲಲ್ಲಿ ಬೆಳೆಸಿದಳು. ಖಗಮೃಗೋರಗಗಳಿಗೆ ಅನುಕೂಲವಾಗುವಂತೆಯೂ, ಮಾನವನಿಗೆ ಪ್ರತಿಕೂಲವಾಗುವಂತೆಯೂ ಮರಗಳ ಬೇರುಗಳನ್ನ ಹೊರಕ್ಕೆ ಬರುವಂತೆಯೂ ಅಡ್ಡಲಾಗಿ ಮಲಗು ವಂತೆಯೂ ಮಾಡಿದಳು. ಮಾನವನೋ ಆಶಾವಾದಿ. ಅವಕಾಶವಾದಿ. "ಇಗೋ! ಬೇರುಗಳೇ ಮೆಟ್ಟಿಲುಗಳ ತರಹ ಇದೆ" ಎನ್ನುತ್ತಾ, ತನಗೆ ಬೇಕಾದನ್ನು ಕತ್ತರಿಸುತ್ತಾ ಹೋದನು. ನಮ್ಮದೂ ಸ್ವಾರ್ಥವೆ. ಆದರೆ ಆಚಾರ್ಯರು ಇವುಗಳನ್ನು ರಕ್ಷಿಸುವ ಕೆಲಸ ಮಾಡುತ್ತಿದ್ದರು. ಎಲ್ಲೆಲ್ಲಿ ಉಬ್ಬುಗಳಿವೆಯೋ, ಮರಗಳ ಸಹಾಯ ತೆಗೆದುಕೊಂಡು, ಎಗರಿ, ಒಮ್ಮೊಮ್ಮೆ ಕೈಯ ಮೇಲೆ ಬಿದ್ದು, ಕೆಲುವೊಮ್ಮೆ ಕಾಲ ಮೇಲೆ ಬಿದ್ದು, ಒಟ್ಟಿನಲ್ಲಿ ಯಾವುದೋ ಅತ್ಯಂತ ಚಿರಪರಿಚಿತ ಜಾಗದಲ್ಲಿ ಓಡುತ್ತಿರುವಂತೆ, ತಲೆಗೆ ಏಟು ಕೊಡುವಂತಹ ಕೊಂಬೆಗಳು ಬಂದಾಗ ಬಗ್ಗುತ್ತಾ, ಕಾಲಿಗೆ ಅಡ್ಡಲಾಗಿರುವವನ್ನು ದಾಟುತ್ತಾ, ಶಬ್ದ ಬರುತ್ತಿದ್ದ ಕಾಡಿನ ಭಾಗಕ್ಕೆ ಹೋಗಿ ತಲುಪಿದರು. ನಾವೂ ಅವರ ಹಿಂದೆ ಓಡಿ ಓಡಿ, ದೊಡ್ಡ ಮರದ ಪೊಟರೆ ಯೊಂದರ ಹಿಂದೆ ನಿಂತು ನೋಡತೊಡಗಿದೆವು. ಅಲ್ಲಿ ಕೊಡಲಿ ಹಿಡಿದವರು ಬಹಳ ಮಂದಿ. ಉದ್ದುದ್ದ ಮರಗಳನ್ನ ಗುರುತಿಸಿ, ಕಡಿಯುತ್ತಿದ್ದರು. ಆಚಾರ್ಯರು ಯಾರಿಗೂ ಕಾಣದಂತೆ, ಕಂಡರೂ ಹಸಿರಿನಲ್ಲಿ ಬೆರೆತು ಹೋಗುವಂತೆ ಮುಖಕ್ಕೆ ಹಸಿರು ಬಣ್ಣವನ್ನ ಹಚ್ಚಿಕೊಂಡಿದ್ದರು. ನಮಗೂ ಚಿಕ್ಕ ಪೊದೆಯೊಂದನ್ನ ತೋರಿಸಿ, ಅವರು ಮರವೊಂದನ್ನ ಏರಿದರು. ನಾವು ಆ ಪೊದೆಯ ಬಳಿ ಹೋಗಿ, ಅದರ ಎಲೆಯನ್ನು ಹಿಂಡಿದಾಗ, ಹಸಿರು ರಸ ಬಂದಿತು. ನಾವದನ್ನು ಮುಖಕ್ಕೆ ಬಳಿದುಕೊಂಡೆವು. ನೋಡುತ್ತಿದ್ದಂತೆಯೇ, ಕೊಡಲಿ ಹಿಡಿದಿದ್ದ ಧಡೂತಿ ಮನುಷ್ಯನೊಬ್ಬ "ಧೋಪ್ಪ್" ಎಂದು ಕೆಳಗುರುಳಿದ. ಅವನ ಎದೆಗೆ ಬಾಣವು ನಾಟಿತ್ತು. ನಾವು ಮೂವರೂ ನಗುವನ್ನ ತಡೆ ಹಿಡಿದೆವು. ಆಚಾರ್ಯರನ್ನೂ, ಕೆಳಗುರುಳುವ ಒಬ್ಬೊಬ್ಬರನ್ನೂ ನಾವು ನೋಡತೊಡಗಿದೆವು.

4

ಮರಗಳನ್ನು ಕಡಿಯುತ್ತಿದ್ದ ಕೆಲವರು ಆಚಾರ್ಯರ ಬಾಣಕ್ಕೆ ತುತ್ತಾಗಿ ಪ್ರಾಣ ಬಿಟ್ಟಿದ್ದರು. ಕೆಲವರಿಗೆ ಪ್ರಾಣ ಹೋಗದಂತಹ ಅಂಗಾಂಗಗಳಿಗೆ ಆಚಾರ್ಯರು ಬಾಣ ಹೂಡಿದ್ದರು. ಕೆಲವರು ಅಪಾಯವನ್ನರಿತು ತಾವಾಗಿಯೇ ಓಡಿಬಿಟ್ಟಿದ್ದರು. ಎರಡು-ಮೂರು ದೇಹಗಳು ಅಲ್ಲಿಯೇ ಬಿದ್ದಿದ್ದವು. ಆಚಾರ್ಯರು ಮರದಿಂದ ನಿಧಾನವಾಗಿ ಅವರೋಹಣ ಮಾಡಿ ಬಂದು, "ಬನ್ನಿ, ಈಗ ಬಿಲ್ಲು ಬಾಣಗಳ ಬಗ್ಗೆ ಕಲಿಯೋಣ" ಎಂದರು. ನನಗೆ ಹಿಂದೆ ಏನೋ ಸದ್ದಾಯಿತು ಎಂದೆನ್ನಿಸಿತು. ನಾನು ಹಿಂತಿರುಗಿ ನೋಡಿದರೆ, ಆಚಾರ್ಯರು, ನನ್ನ ಕತ್ತನ್ನ ಹಿಡಿದು ಮುಂದಕ್ಕೆ ತಿರುಗಿಸಿದರು. "ನಾನಿಲ್ಲವೇ! ಹೆದರಬೇಡ" ಎಂದು ಸುಮ್ಮನೆ ನಡೆಯುತ್ತಿದ್ದರು. ನಡೆಯುತ್ತಾ ನಡೆಯುತ್ತಾ, ಅವರು ಹನುಮಂತನ ಬಗ್ಗೆ ಹೇಳಲಾರಂಭಿಸಿದರು. "ಹನುಮಂತನಿಗೆ ಭಜರಂಗಬಲಿ ಎಂಬ ಹೆಸರಿದೆ. ಅದು ವಜ್ರಾಂಗ ಬಲಿ ಎಂಬ ಪದದಿಂದ ಬಂದಿರುವಂಥದ್ದು. ವಜ್ರ ತುಂಬಾ ಗಟ್ಟಿಯಾದ ಕಲ್ಲು. ಅದು ಸದಾ ಹೊಳೆಯುತ್ತಿರುತ್ತದೆ. ಅದರಿಂದ ಏನನ್ನ ಬೇಕಾದರೂ ಕಡಿಯಬಹುದು. ಆದರೆ ಅದನ್ನ ನಾಶ ಮಾಡುವುದೇ ಅಸಂಭವ. ಅಂತಹ ದೇಹವುಳ್ಳವನು ನಮ್ಮ ಹನುಮಂತ. ಅವನಿಗೆ ಮಾಯ ಆಗುವ ಶಕ್ತಿ ಉಂಟು. ಎಷ್ಟು ದೊಡ್ಡದಾಗಿಯೂ, ಎಷ್ಟು ಚಿಕ್ಕದಾಗಿಯೂ ಆಗಬಲ್ಲ ಶಕ್ತಿ ಇದೆ ಅವನಿಗೆ! ಎಲ್ಲಿ, ಒಮ್ಮೆ ಹೇಳಿ, ಜೈ ಭಜರಂಗಬಲಿ!" ಎಂದರು ಆಚಾರ್ಯರು. ಈ ಹೊಸ ಆಟವು ಆಕರ್ಷಕವಾಗಿತ್ತು. ನಾವೂ "ಜೈ ಭಜರಂಗಬಲಿ" ಎಂದು ಕೂಗಿದೆವು. ಸಿಂಗಳೀಕಗಳೂ ನಮ್ಮೊಂದಿಗೆ ಕೂಗಿಕೊಳ್ಳಲಾರಂಭಿಸಿದವು. ನಾಗ, ಬೋಕ, ಹಾಗೂ ನನಗೆ ಈ ರೀತಿಯಲ್ಲಿ ಸಿಂಗಳೀಕಗಳು ಒಟ್ಟಿಗೆ ಕೂಗಿಕೊಂಡರೆ, ಹೋಗಿ ಮಧ್ಯದಲ್ಲಿ ನಿಂತು ಎಲ್ಲವನ್ನೂ ಕೇಳಿಸಿಕೊಳ್ಳುವ ಅಭ್ಯಾಸ. ಈ ಖುಷಿಯನ್ನ ಆಚಾರ್ಯರಿಗೂ ನೀಡಬೇಕೆಂದು ನಾವು ಆಚಾರ್ಯರ ಕೈ ಹಿಡಿದು, ಕಾಡಿನ ಸಿಂಗಳೀಕಗಳಿರುವ ಭಾಗಕ್ಕೆ ಕರೆದುಕೊಂಡು ಹೋದೆವು. ಸರಿಯಾಗಿ ಸೂರ್ಯ ಇನ್ನೇನು ತನ್ನ ಉರಿಯನ್ನ ತಣ್ಣಗಾಗಿಸಿಕೊಂಡು ನಿಧಾನವಾಗಿ ಕೆಳಗಿಳಿಯುವ ಸಮಯ. ಸಿಂಗಳೀಕಗಳು ಆ ತಂಗಾಳಿಗೆ ಮೈಯೊಡ್ಡಿ ರೆಂಬೆಗಳನ್ನು ಹಿಡಿದು, ಚಟುವಟಿಕೆಯಿಂದ ಎಳೆದಾಡುತ್ತಿದ್ದವು. ನಾವು ಸುತ್ತಲೂ ನೋಡುತ್ತಾ, ಅವುಗಳಂತೆ, ಎಗರಾಡತೊಡಗಿದೆವು. ಆಚಾರ್ಯರು, ವಿಕಾರವಾದ ಮುಖವನ್ನು ಮಾಡಿಕೊಂಡು, ಜೋರಾಗಿ ಕೈಯನ್ನು ಬೊಗಸೆ ಮಾಡಿಕೊಂಡು, ಬಾಯಿಯ ಬಳಿ ಇಟ್ಟುಕೊಂಡು ಕೂಗಿದರು. ಸಿಂಗಳೀಕಗಳೆಲ್ಲ ಇದ್ದಕ್ಕಿದ್ದಂತೆ ಸುಮ್ಮನಾಗಿ ಹೋದವು. ಆಚಾರ್ಯರು ನಮ್ಮನ್ನು ನೋಡಿ, "ಹೇಗಿತ್ತು?" ಎಂದರು. ನಾವು

ಬಾಯಿ ಬಿಟ್ಟುಕೊಂಡು ಅವರನ್ನೇ ನೋಡುತ್ತಿದ್ದೆವು. ತಕ್ಷಣ ಅವರು ಬೇರೆ ರೀತಿಯಲ್ಲಿ ಕೂಗಿಕೊಂಡರು. ಸಿಂಗಳೀಕಗಳೆಲ್ಲ ಮತ್ತೆ ತಮ್ಮ ಕೆಲಸಗಳನ್ನು ಮುಂದುವರೆಸಿದವು. ನಾವು ಮೂವರೂ ಈ ರೀತಿ ಸಿಂಗಳೀಕಗಳನ್ನು ನೋಡಿದ ನಂತರ ಆಚಾರ್ಯರು ಹಿಂದಿರುಗಿ ನೋಡುವಷ್ಟರಲ್ಲಿ ಒಂದು ಹಾಡು ಹಾಡುವ ಅಭ್ಯಾಸ ಮಾಡಿಕೊಂಡಿದ್ದೆವು.

"ಸಿಂಗಳೀಕ ಮರಮರದಲಿ" ಎಂದು ನಾನು ಕಿರುಚಿ ನಿಂತೆ. ಬೋಕ, ನಾಗರು ನನ್ನ ಹಿಂದೆ ನಿಂತು "ಕ್ರೀಚ್ ಕ್ರೀಚ್ ಹುರ್ರಾ" ಎಂದರು. ಎರಡು ಸಾಲುಗಳನ್ನ ನಾವು ಹೇಳುತ್ತಾ, ಸಿಂಗಳೀಕಗಳಂತೆ ಆಡುವುದನ್ನ ನೋಡಿ ಆಚಾರ್ಯರು ಬಿದ್ದೂ ಬಿದ್ದೂ ನಕ್ಕರು. ಬಂದು, ನಮ್ಮನ್ನು ಅಪ್ಪಿಕೊಂಡು, "ಚುರುಕು ಬುದ್ಧಿ ಕಣ್ರೋ ನಿಮ್ಮದು" ಎನ್ನುತ್ತಾ, ನಮಗೆ ಚಿರಪರಿಚಿತವಾಗಿದ್ದ ಒಂದು ದಾರಿಯಲ್ಲಿ ಕಾಲಿಟ್ಟರು. "ನಮ್ಮ ಗುಡಿಸಲ ದಾರಿ!" ಬೋಕನು ಮೆಲುದನಿಯಲ್ಲಿ ಹೇಳಿದ. ನಾವು ಮುಖ-ಮುಖ ನೋಡಿಕೊಂಡು, ಆಚಾರ್ಯರಿಗೂ ಕಾಯದೆ, ಗುಡಿಸಲ ಬಳಿ ಓಡಿದೆವು.

ಗುಡಿಸಲ ಬಳಿಯ ಬೆಂಕಿ ಆರಿದ್ದರೂ, ಅದು ನಮ್ಮ ನೆನಪುಗಳಿದ್ದ ಜಾಗ. ಹೊಗೆಯಲ್ಲೆಲ್ಲ ನಮ್ಮ ಆಟಗಳು, ಅಪ್ಪಯ್ಯರ ತನ್ಮಯತೆಯ ಕ್ಷಣಗಳು ಕಾಣುತ್ತಿದ್ದವು. ಅಲ್ಲಿ ಉರಿದು ತಣ್ಣಗಾಗಿದ್ದ ಮರಗಳ ಸ್ಥಿತಿಯೂ ನಮ್ಮ ಮನದಂತೆ. ಎಲ್ಲವೂ ಬೂದಿಯಾಗಬೇಕಿತ್ತು. ನಮಗೆ ಆಚಾರ್ಯರು ಬಂದಂತೆ, ಅವುಗಳಿಗೆ ತಂಗಾಳಿಯೋ, ಮಂಜೋ ಬಂದು ತಣ್ಣಗಾಗಿವೆ. ಒಂದಂತೂ ಸತ್ಯ. ಎರಡೂ ಉರಿದು ಸತ್ತಿವೆ. ಉರಿದ ಮರವನ್ನ ಆಯುಧವನ್ನಾಗಿ ಮಾಡಿಕೊಂಡು, ಬೆಂದ ನಮ್ಮ ಮನಸನ್ನೂ ಗಟ್ಟಿ ಮಾಡಿಕೊಂಡು ಈ ಅರಣ್ಯವನ್ನ ನಾವು ಕಾಪಾಡುತ್ತೇವೆ. ನಮ್ಮ ಗುಡಿಸಲುಗಳಿದ್ದ ಸ್ಥಳದಲ್ಲಿ ಈಗ ಆರು ಮಣ್ಣಿನ ಗುಡ್ಡಗಳಿದ್ದವು. ಅವುಗಳ ಮೇಲೆ ಆರು ಗಿಡಗಳಿದ್ದವು. ಆ ಗಿಡದ ಎಲೆಗಳನ್ನ ಅಪ್ಪಯ್ಯ ನಮಗೆ ಕೆಮ್ಮು ಬಂದಾಗ ತಿನ್ನುವುದಕ್ಕೆ ಕೊಡುತ್ತಿದ್ದರು. ನಾವು ಆ ಮಣ್ಣಿನ ಗುಡ್ಡದ ಹತ್ತಿರ ಹೋದೆವು. ಆಚಾರ್ಯರು ನಮ್ಮ ಬಳಿ ಬಂದು, ಮೂವರನ್ನೂ ಹಿಂದಕ್ಕೆ ಎಳೆದುಕೊಂಡರು. ನಾವು ಹನಿಗಣ್ಣಾಗಿ ಅವರನ್ನು ನೋಡಿದೆವು. ಆಚಾರ್ಯರೂ ಬಿಕ್ಕುತ್ತಾ, "ಈ ಗುಡ್ಡಗಳೊಳಗೆ ನಿಮ್ಮ ಅಪ್ಪಯ್ಯ-ಅಮ್ಮಂದಿರಿದ್ದಾರೆ." ಎಂದರು. ನಾವು ಅಳದೆಯೇ, ಆಚಾರ್ಯರನ್ನು ತಬ್ಬಿಕೊಂಡು, ಆ ಗುಡ್ಡಗಳನ್ನೇ ನೋಡುತ್ತಿದ್ದೆವು. "ಆ ಗಿಡ ಇದೆಯಲ್ಲ, ಅದು ತುಳಸಿ. ಅರಣ್ಯ ತಾಯಿಯ ಪ್ರತಿನಿಧಿ!" ಎಂದರು ಆಚಾರ್ಯರು. ಆಚಾರ್ಯರು ಹನುಮಂತನಿಗೆ ನಮಸ್ಕಾರ ಮಾಡಿದ್ದನ್ನ ನಾನು ಬೋಕ ಚೆನ್ನಾಗಿ ನೋಡಿದ್ದೆವು. ಅದರಂತೆಯೇ ನಾವು ನಮ್ಮ ಅಪ್ಪಯ್ಯ-ಅಮ್ಮಂದಿರಿದ್ದ ಗುಡ್ಡಕ್ಕೆ ಮೊಳಕಾಲ ಮೇಲೆ ಕುಳಿತು ಎಡಗೈಯನ್ನ

ಬೆನ್ನ ಹಿಂದೆ ಇಟ್ಟುಕೊಂಡು ಬಲಗೈಯಲ್ಲಿ ನೆಲ ಮುಟ್ಟಿ ನಂತರ ಹಣೆಯನ್ನು ಮುಟ್ಟಿಕೊಂಡೆವು. ಇದನ್ನು ನೋಡಿ ನಾಗ, ತಾನೂ ಹಾಗೆಯೇ ಮಾಡಿದ. ಆಚಾರ್ಯರು ಕೈ ಕಟ್ಟಿಕೊಂಡು ನೋಡುತ್ತಿದ್ದರು. ಅವರ ಮುಖದಲ್ಲಿ ಹೆಮ್ಮೆಯಿತ್ತು. ನಾವು ಅವರ ಬಳಿ ಹೋದೆವು. ಅವರು, "ಬನ್ನಿ, ಹೋಗಿ, ಸ್ವಲ್ಪ ಹೊತ್ತು ಮಲಗುವಿರಂತೆ. ನಾಳೆಯಿಂದ ನಿಮ್ಮನ್ನ ಆಯುಧಗಳನ್ನಾಗಿ ಮಾಡೋಣಂತೆ." ಎಂದರು. ನಾವು ಮೂವರೂ ಒಕ್ಕೊರಲಲ್ಲಿ, "ಇಂದಿನಿಂದಲೇ ಆಚಾರ್ಯರೇ!" ಎಂದೆವು. ಆಚಾರ್ಯರು ಒಪ್ಪುವಂತೆ ತಲೆ ಅಲ್ಲಾಡಿಸಿ, ಓಡಲಾರಂಭಿಸಿದರು. ನಾವೂ ಅವರ ಹಿಂದೆ ಓಡಲಾರಂಭಿಸಿದೆವು. ಅವರು ನಾವಾಡುತ್ತಿದ್ದ ಝರಿಯ ದಾರಿಯಲ್ಲಿ ಓಡಿದರು. ಅದರ ಅತ್ಯಂತ ರಭಸದ ಭಾಗದ ಕಡೆ ಓಡಿದರು. ನಾವು ನೋಡುವುದನ್ನೇ ಕಾದು, ಮಧ್ಯದಲ್ಲಿದ್ದ ಕಲ್ಲುಗಳ ಮೇಲೆ ಒಂಟಿ ಕಾಲಿನಲ್ಲಿ ಹಾರಿ ಹಾರಿ ಇನ್ನೊಂದು ತೀರಕ್ಕೆ ಎಗರಿಬಿಟ್ಟರು. ನಾವು ಝರಿಯ ಬೇರೆ ಭಾಗದಿದಂದ ಇನ್ನೊಂದು ತೀರಕ್ಕೆ ಹೋದರಾಯಿತು ಎಂದುಕೊಂಡು, ಸಣ್ಣಗೆ ಹರಿಯುತ್ತಿದ್ದ ಭಾಗಕ್ಕೆ ಬಂದೆವು. ಬೋಕ ಮೊದಲು ನೀರಿನಲ್ಲಿ ಕಾಲಿಟ್ಟ. "ಫಟ್" ಎಂದು ಬಾಣವೊಂದು ಬಂದು ಅವನು ಕಾಲಿಟ್ಟಿದ್ದ ಕಡೆಗೆ ಬಿದ್ದಿತ್ತು. ಸ್ವಲ್ಪ ಎಡವಟ್ಟಾಗಿದ್ದರೂ, ಅವನ ಕಾಲು ತೂತಾಗಿ ಬಿಟ್ಟಿರುತ್ತೇನೋ. ತಕ್ಷಣ ನಾವು ಬೇರೆ ಕಡೆಯಿಂದ ಓಡಲಾರಂಭಿಸಿದೆವು. ಆ ರಭಸದ ಭಾಗಕ್ಕೆ ಹೋಗುವುದಲ್ಲದೆ ಬೇರೆ ದಾರಿಯೇ ಇರಲಿಲ್ಲ. ಆಚಾರ್ಯರ ಬಾಣ ತನ್ನ ಗುರಿ ತಪ್ಪದೆಂದು ಈಗಾಗಲೇ ಸಾಬೀತಾಗಿತ್ತು. ರಭಸದ ಭಾಗಕ್ಕೆ ಬಂದು ನಾವು ಒಮ್ಮೆ ಉಸಿರೆಳೆದುಕೊಂಡು ಕಾಲಿಟ್ಟೆವು. ಆಚಾರ್ಯರನ್ನೇ ನೋಡುತ್ತಾ, ಒಂದೊಂದೇ ಹೆಜ್ಜೆಯನ್ನಿಟ್ಟೆವು. "ಹುಂ!" ಎಂದು ಆಚಾರ್ಯರು ಕೋಪದಲ್ಲಿ, "ವೇಗ! ವೇಗ!" ಎಂದರು. ನಾವು ಬೆವರುತ್ತಾ ಮುಂದೆ ಮುಂದೆ ಹೋಗುತ್ತಿದ್ದೆವು. ಆಚಾರ್ಯರು ಚೂಪು ಕಣ್ಣುಗಳಲ್ಲಿ ನಮ್ಮನ್ನೇ ನೋಡುತ್ತಿದ್ದರು. ಇನ್ನೇನು ತೀರ ಮುಟ್ಟಬೇಕೆನ್ನುವಷ್ಟರಲ್ಲಿ ನೀರಿನ ರಭಸ ಹೆಚ್ಚಾಗಿ ಅಲ್ಲಿದ್ದ ಕಲ್ಲು ಮುಚ್ಚಿ ಹೋಯಿತು. ಆಚಾರ್ಯರು ನಗುತ್ತಾ "ಸಿಂಗಳೀಕ ಮರಮರದಲಿ!" ಎಂದು ಕಿರುಚಿದರು. ತಕ್ಷಣ ನಾಗನು "ಸಾಗಿದೆ ಝರಿ ಭರಭರದಲಿ!" ಎಂದನು. ನಮಗೆ ನಗು ಬಂದಿತಾದರೂ ತಡೆದುಕೊಂಡೆವು. ಸಿಂಗಳೀಕವೊಂದು ಮರದಿಂದ ಮರಕ್ಕೆ ಎಗರುತ್ತಿರುವುದನ್ನ ತಟ್ಟನೆ ತೋರಿಸಿ, ತಮ್ಮ ಬಿಲ್ಲನ್ನು ಸಿದ್ಧವಾಗಿಸಿ ಕೊಂಡರು. ನನಗೆ ಟಕ್ಕನೆಂದು ಹೊಳೆಯಿತು. ಸಿಂಗಳೀಕ ಒಂದು ಮರದಿಂದ ಇನ್ನೊಂದು ಮರಕ್ಕೆ ಎಗರುವಂತೆಯೇ ನನ್ನ ಬೆನ್ನನ್ನ ಬಾಗಿಸಿ, "ಜೈ ಭಜರಂಗಬಲಿ!" ಎನ್ನುತ್ತಾ ಎಗರಿದೆ. ಇನ್ನೊಂದು ತೀರದಲ್ಲಿ ಉರುಳಿಬಿದ್ದೆ. ನನ್ನನ್ನು ನೋಡಿಕೊಂಡು ನಾಗ, ಬೋಕರೂ "ಜೈ ಭಜರಂಗಬಲಿ!" ಎನ್ನುತ್ತಾ ನಮ್ಮ

ಬಳಿ ಬಂದರು. ಆಚಾರ್ಯರು, "ಬೇಗ!" ಎನ್ನುತ್ತಾ, ಮತ್ತೆ ಆ ಹುಲ್ಲುಗಾವಲಿನ ಗಿರಿಯ ಕಡೆಗೆ ಧಾವಿಸತೊಡಗಿದರು. ನಾವೂ ಚೇತರಿಸಿಕೊಳ್ಳುತ್ತಾ, ಓಡತೊಡಗಿದೆವು. ಆಚಾರ್ಯರು ಇದ್ದಕ್ಕಿದ್ದ ಹಾಗೆ ಕಣ್ಮರೆಯಾದರು. ನಾವು ಮೇಲೆಲ್ಲ ನೋಡಿದೆವು. ಆಚಾರ್ಯರು ಶಿಳ್ಳೆ ಹೊಡೆದರು. ಓಡುತ್ತಿದ್ದ ಅವರನ್ನು ನೋಡಿ ನಾವೂ ಅವರೆಡೆಗೇ ಓಡಲಾರಂಭಿಸಿದೆವು. ಇದ್ದಕ್ಕಿದ್ದ ಹಾಗೆ ನನ್ನ ಮೊಳಕಾಲಿಗೆ ಬಲವಾದ ಏಟು ಬಿದ್ದು, ನಾನು ಮುಗ್ಗರಿಸಿ ಬಿದ್ದೆ. ನೋಡಿದರೆ ದೊಡ್ಡ ಮರವೊಂದು ಕೆಳಕ್ಕುರುಳಿತ್ತು. ಆಚಾರ್ಯರು ಇದನ್ನ ಸೂಚಿಸಲೆಂದೇ ಶಿಳ್ಳೆ ಹೊಡೆದಿದ್ದರು. ನಾನು, ನೋವಿನಲ್ಲೆ, "ಲೋ ನಾಗ, ಬೋಕ, ಇಲ್ಲಿ ನೋಡಿಕೊಳ್ರೋ ಹುಷಾರು!" ಎಂದು ಕಿರುಚಿ, ಗಿರಿಯತ್ತ ಧಾವಿಸತೊಡಗಿದೆ. ಅವರಿಬ್ಬರೂ ಬುದ್ಧಿವಂತರು. ಬೋಕನು ಮೇಲಕ್ಕೆ ಹಾರಿ ಆ ಮರವನ್ನ ತಪ್ಪಿಸಿಕೊಂಡರೆ, ನಾಗನು ಕೆಳಕ್ಕೆ ಜಾರಿ ಆ ಮರವನ್ನ ತಪ್ಪಿಸಿಕೊಂಡ. ಮತ್ತೆ ದೊಡ್ಡದೊಂದು ಹಳ್ಳ ಕಾಣಿಸಿತು. ಗುರುಗಳ ಬಾಣ ಅದರ ಮೇಲೆ ಸೇತುವೆಯಂತೆ ಹಾಕಿದ್ದ ಮರಕ್ಕೆ ಸಿಕ್ಕಿಕೊಂಡಿತ್ತು. "ಆ ಬಾಣವನ್ನ ತನ್ನಿ. ಯಾರು ತರುತ್ತಾರೋ ನೋಡೋಣ!" ಎನ್ನುತ್ತಾ ಮೇಲೆಯೇ ನಿಂತರು. ನಾವು ಮೂವರೂ ಮುಖ ನೋಡಿಕೊಂಡೆವು. ನಾನು ಯೋಚಿಸಿದೆ. ಈ ಬಾಣವನ್ನ ಅಷ್ಟು ಸುಲಭವಾಗಿ ಕೀಳಲಾಗುವುದಿಲ್ಲ. ಒಂದು ವೇಳೆ ನಾನು ಅದನ್ನ ಹೊರ ತೆಗೆದರೂ, ಈ ಮರದ ಸೇತುವೆಯನ್ನ ಬೇಗ ದಾಟಬೇಕು. ಹಳ್ಳವೇನೂ ಅಷ್ಟಾಗಿ ಆಳವಿರಲಿಲ್ಲ. ನಾನು ಓಡಿದೆ. ಬೋಕ ಹಾಗೂ ನಾಗನು ಓಡಿ ಬಂದರು. ನನ್ನ ಕೈ ಇನ್ನೇನು ಬಾಣವನ್ನ ತಾಕುವುದರಲ್ಲಿತ್ತು, ಅಷ್ಟರಲ್ಲಿ ಬೋಕ ನನ್ನನ್ನ ನೂಕಿ ಬಾಣವನ್ನ ತೆಗೆದುಕೊಂಡು ಸೇತುವೆಯನ್ನ ದಾಟಲಾರಂಭಿಸಿದ. ನಾಗ ಹಾಗೂ ನಾನೂ ಆ ಸೇತುವೆಯ ಮೇಲೆ ಹೋದೆವು. ಗಟ್ಟಿಯಾಗಿದ್ದರೂ ಚಿಕ್ಕ ಸೇತುವೆ. ಮರದ ದಿಮ್ಮಿಯಲ್ಲವೇ? ಒಂದು ಬಾರಿ ಒಬ್ಬರೇ ಹೋಗಬಲ್ಲಂತಹ ಅಗಲ. ಬೋಕನು ಬೇಗ ಬೇಗ ನಡೆದುಕೊಂಡು ಹೋಗುತ್ತಿದ್ದಾನೆ. ಅವನ ಹಿಂದೆ ನಾನು ಹಾಗೂ ನಾಗ. ಓಡುತ್ತಾ ಓಡುತ್ತಾ, ನಾನು ಬೋಕನ ಬಳಿ ತಲುಪಿದೆ. ಹುಲ್ಲುಗಾವಲಿನ ಗಿರಿಯ ಬಳಿ ಅವನು ತಲುಪಿದ್ದ. ನಾನು ಅವನ ಕಾಲನ್ನು ಹಿಡಿದು ಎಳೆದೆ. ಅವನ ಕೈಲಿದ್ದ ಬಾಣದೊಂದಿಗೆ ಅವನೂ ಜಾರಿದ. ಬಾಣವನ್ನ ನಾನೆತ್ತಿಕೊಂಡು ಮೇಲಕ್ಕೆ ಓಡಿದೆ. ನನ್ನ ಹಿಂದೆ ನಾಗ, ಅವನ ಹಿಂದೆ ಬೋಕರಿದ್ದರು. ಬೋಕನು ನಾಗನನ್ನು ನೂಕಿ, ನಾಗ ನನ್ನ ಮೇಲೆ ಬಿದ್ದು, ಬೋಕ ನಮ್ಮಿಬ್ಬರನ್ನೂ ದಾಟಿ ಬಂದು, ನನ್ನ ಕೈಲಿದ್ದ ಬಾಣವನ್ನೆತ್ತಿಕೊಂಡು ಓಡಿದ. ನಾನು ನಾಗನನ್ನು ಎಬ್ಬಿಸಿ, ನಾನೂ ಎದ್ದು ಓಡಿದೆ. ನಾಗನು ಇದ್ದಕ್ಕಿದ್ದ ಹಾಗೆ, ನನ್ನ ಹೆಗಲ ಮೇಲೆ ತನ್ನ ಕೈಗಳನ್ನಿಟ್ಟು, ಎಗರಿ, ನನ್ನನ್ನು ದಾಟಿ ಹೋಗಿ,

ವೇಗದಲ್ಲಿ ಬೋಕನ ಕೈಯಿಂದ ಬಾಣವನ್ನ ಕಸಿದುಕೊಂಡು ಆಚಾರ್ಯರನ್ನು ತಲುಪಿದ. ಆಚಾರ್ಯರು ಅವನ ಬೆನ್ನ ತಟ್ಟುತ್ತಿದ್ದರು. ನಾನು, ಬೋಕ ಹೋಗಿ ಆಚಾರ್ಯರ ಪಕ್ಕದಲ್ಲಿ ನಿಂತೆವು. ನಾಗನನ್ನ ಅಪ್ಪಿಕೊಂಡು, "ಚೂಟಿ ಇದ್ದೀಯ ಕಣೋ!" ಎಂದು ಅವನ ಹೊಟ್ಟೆಗೆ ಗುದ್ದಿದ್ದೆವು. ಆಚಾರ್ಯರು, "ಇಂದಿನ ಪಾಠ ಇದೇ. ಮೂವರೂ ಗೆದ್ದಿದ್ದೀರಿ. ನಿಮ್ಮ ನಿಮ್ಮ ಸಾಮರ್ಥ್ಯವನ್ನ ಸ್ವಲ್ಪಸ್ವಲ್ಪವಾಗಿ ಹೊರಕ್ಕೆ ತರುತ್ತಿದ್ದೀರಿ." ಬಾಣವನ್ನ ನಾಗನ ಕೈಗೆ ಕೊಟ್ಟು, "ಇದನ್ನ ನೀನೇ ಇಟ್ಟುಕೋ!" ಎಂದರು. ನಮ್ಮೆಲ್ಲರನ್ನೂ ಹನುಮಂತನ ಮೂರ್ತಿಯ ಮುಂದೆ ಕರೆದುಕೊಂಡು ಹೋಗಿ ಆಚಾರ್ಯರು, "ಒಂದು ಹಾಡು ಹೇಳಿಕೊಡ್ತೀನಿ. ನೀವು ಆ ಸಿಂಗಳೀಕದ ಬಗ್ಗೆ ಎಷ್ಟು ಚೆನ್ನಾಗಿ ಹಾಡು ಕಟ್ಟಿದ್ದೀರಿ. ಹನುಮನ ಬಗ್ಗೆ ಬೇಡವೆ!" ಎನ್ನುತ್ತಾ, ಜೋರಾಗಿ, "ನಾನು ಹೇಳಿದಂತೆ ಹೇಳಿ!" ಎನ್ನುತ್ತಾ, ಆರಂಭಿಸಿದರು:

ಜೈ ಜೈ ಜೈ ಭಜರಂಗಬಲಿ
ಕಡುಭಯವನೋಡಿಸುವ ಧೈರ್ಯ ಕಲಿ
ಹರಸಾಹಸವಿರೆ ರಣರಂಗದಲಿ
ಜಗವೆಂಬ ಕಾಡಿನಲಿ ನೀನೆ ಹುಲಿ!

ನಾವು ಒಂದು ಕ್ಷಣ ಸುಮ್ಮನಿದ್ದು, ಮಾತನಾಡಿಕೊಂಡು, "ಆಚಾರ್ಯರೆ, ನಾವು ಎರಡನೇ ಮಾತನ್ನು ಬದಲಿಸುತ್ತೇವೆ, ಕೇಳಿ" ಎನ್ನುತ್ತಾ:

ಜೈ ಜೈ ಜೈ ಭಜರಂಗಬಲಿ
ನಡಿ ಭಯಕೆ ಭಯ ಕೊಡುವ ಧೈರ್ಯ ಕಲಿ!
ಹರಸಾಹಸವಿರೆ ರಣರಂಗದಲಿ
ಜಗವೆಂಬ ಕಾಡಿನಲಿ ನೀನೆ ಹುಲಿ!

ಹೀಗೆ ಹೇಳಿದೆವು. ಆಚಾರ್ಯರು ತಕ್ಷಣ ಛಂಗನೆ ಎಗರಿ ಬಂದು, ಮೂವರನ್ನೂ ಅಪ್ಪಿಕೊಂಡು ಮುತ್ತು ಕೊಟ್ಟರು. ಹನುಮಂತನೆಡೆಗೆ ಕೈ ತೋರಿ, "ನಿನ್ನ ರೂಪಗಳೇ ಇವು!!" ಎಂದರು.

4

ಸಾಕ್ಷಿ

ಬೆಳಗ್ಗೆ ಹಾಯಾಗಿ ನಿದ್ರಿಸುತ್ತಿದ್ದ ನಮ್ಮ ಮುಖದ ಮೇಲೆ ನೀರು ಬಿದ್ದ ಹಾಗಾಯಿತು. ಬಿದ್ದ ಹಾಗಾಯಿತು ಏನು? ಆಚಾರ್ಯರೇ ಮಲಗಿದ್ದ ನಮ್ಮ ಮೂವರ ಮೇಲೂ ನೀರು ಹಾಕಿದ್ದರು. ನಾವು ಥಂಗನೆ ಎದ್ದು ಕುಳಿತೆವು. ಆಚಾರ್ಯರು ಒಂದು ಅದ್ಭುತ ಬಟ್ಟೆಯನ್ನು ತಮ್ಮ ಹೊಟ್ಟೆಯಿಂದ ಕೆಳಕ್ಕೆ ಸುತ್ತಿಕೊಂಡಿದ್ದರು. "ಬೇಗ ಎದ್ದೇಳಿ! ಕಾಡನ್ನು ಕಾಪಾಡಬೇಕು!" ಎಂದರು. ನಿದ್ರೆಯಂತಹ ಅದ್ಭುತವಾದ ಬಂಧನ ಇನ್ನಾವುದೂ ಇಲ್ಲ. ಕೆಲಸ ಮಾಡಬೇಕೆಂದರೆ ಅದು ಅತ್ಯವಶ್ಯಕ. ಆದರೆ ಮಿತಿ ಮೀರಿತೆಂದರೆ ಕೆಲಸದ ವಿನಾಶಕ. ಅದರ ಬಾಹು ಬಂಧನದಲ್ಲಿ ಒಮ್ಮೆ ಸಿಲುಕಿಕೊಂಡರೆ ಬಿಡಿಸಿಕೊಂಡು ಬರುವುದು ಅತ್ಯಂತ ಕಷ್ಟಕರವಾದ ಕೆಲಸ. ಒಂದಷ್ಟು ಹೊತ್ತು ಅಪ್ಪುಗೆಯಲ್ಲಿ ವಿಶ್ರಾಂತಿಯನ್ನು ನೀಡುತ್ತದೆ. ಆದರೆ ನಂತರ ಒಂದು ರೀತಿಯ ನಶೆಯಲ್ಲಿ ನಮ್ಮನ್ನು ಮುಳುಗಿಸಿ, ಇನ್ನಾವ ಕಾರ್ಯವೂ ಇದಕ್ಕಿಂತ ಸುಖಕರವಲ್ಲ ಎಂದು ಭ್ರಮಿಸುವಂತೆ ಮಾಡಿಬಿಡುತ್ತದೆ. ಇನ್ನೂ ನಿದ್ರೆಯಲ್ಲಿಯೇ ಮುಳುಗಿದ್ದರೆ, ಕೊನೆಗೆ ಕಣ್ಣು ಮುಚ್ಚಿದರೂ ನಿದ್ರೆ ಬಾರದಂತಹ ಸ್ಥಿತಿಗೆ ನಮ್ಮನ್ನು ತಂದಿಡುತ್ತದೆ. ಆ ಅತಿವೃಷ್ಟಿ ಸ್ಥಿತಿಗೂ ಹೋಗದಂತೆ, ಇತ್ತ ಅನಾವೃಷ್ಟಿಯ ಸ್ಥಿತಿಗೂ ಬರದಂತೆ, ಆಚಾರ್ಯರು ನಮ್ಮನ್ನು ಎಚ್ಚರಗೊಳಿಸಿದರು. ನಂತರ ನಮ್ಮ ನಮ್ಮ ಚಾಪೆಗಳ ಮೇಲೇ ಕೂರಿಸಿ, ಕೈಗಳನ್ನು ಬೊಗಸೆಯ ರೀತಿಯಲ್ಲಿ ಮಾಡಿಕೊಳ್ಳುವಂತೆ ಹೇಳಿದರು.

ಕರಾಗ್ರೇ ವಸತೇ ಲಕ್ಷ್ಮೀ ಕರಮಧ್ಯೇ ಸರಸ್ವತಿ
ಕರ ಮೂಲೇತು ಗೋವಿಂದಃ ಪ್ರಭಾತೇ ಕರ ದರ್ಶನಂ

ಆಚಾರ್ಯರು ಜೋರಾಗಿ, ಕಣ್ಣು ಮುಚ್ಚಿಕೊಂಡು ಹೇಳಿದರು. ಅವರ ಕಣ್ಣಂಚಿನಲ್ಲಿ ಸಣ್ಣ ಹನಿಯೊಂದಿತ್ತು. ಅವರು ಪ್ರತಿ ಬಾರಿ ಕಣ್ಣು ಮುಚ್ಚಿದಾಗಲೂ ಸುಲಭವಾಗಿ "ಸಮಾದಿ" ಸ್ಥಿತಿಗೆ ತಲುಪಿಬಿಡುತ್ತಾರೆಂದು ಅವರೇ ಆಗಾಗ ಹೇಳುತ್ತಿದ್ದರು. ನಮಗೆ ಈ "ಸಮಾಧಿ" ಎಂದರೆ ಏನೋ ಯಾರಿಗೆ ಅರ್ಥವಾಗ ಬೇಕು? ಆಚಾರ್ಯರು ಅದರ ಅರ್ಥವನ್ನು ನಮಗೆ ಹೇಳುತ್ತಿರಲಿಲ್ಲ. ಆದರೆ ಈ "ಕರಾಗ್ರೆ" ಎಂಬುದನ್ನು ನಾವು ಪೂರ್ತಿ ಹೇಳುವವರೆಗೂ ಬಿಡಲಿಲ್ಲ. ನಮ್ಮ ನಿದ್ರೆಯೆಲ್ಲಾ ಹಾರಿಹೋಯಿತು. ನಂತರ ನಮ್ಮನ್ನು ನದಿ ದಡಕ್ಕೆ ಹೋಗಿ ಪ್ರಾಣಿ ಸಹಜ ಕ್ರಿಯೆಗಳನ್ನ ಮುಗಿಸಿಕೊಂಡು ಬರಲು ಹೇಳಿದರು. ನಾವು ನದಿಯಲ್ಲಿ ಮಾಮೂಲಿನಂತೆ ಆಡುವಂತಿರಲಿಲ್ಲ. ಆಚಾರ್ಯರು ಎಂದಿನಂತೆ ನಗುನಗುತ್ತಾ, ನಾವು ಕೇಳಿದ್ದನ್ನೆಲ್ಲಾ ತಲೆಗೆ ಹಾಕಿಕೊಳ್ಳುತ್ತಾ, ಉತ್ತರಗಳನ್ನು ಹೇಳುತ್ತಿರಲಿಲ್ಲ. ಏನು ಕೇಳಿದರು ಸುಮ್ಮನೆ ತಲೆಯಲ್ಲಾಡಿಸಿ ಬನ್ನಿ ಎಂದು ಮೌನದಿಂದಿದ್ದರು. ನಾವು ನದಿಗೆ ಹೋಗಿ ಬರುವಷ್ಟರಲ್ಲಿ ಗುಡಿಸಲ ಬಳಿಯಿದ್ದ ಒಂದು ಮರದಡಿಯಲ್ಲಿ ಗುರುಗಳು ಕುಳಿತಿದ್ದರು. ಅವರ ಕಣ್ಣಲ್ಲಿ ಧಾರಾಕಾರವಾಗಿ ನೀರು. ಅವರ ಹಣೆಯ ಮಧ್ಯದಲ್ಲಿ ಸರಿಯಾಗಿ ಒಂದು ಬೆಳ್ಳಗೆ ಚುಕ್ಕಿ. ಅವರ ಇಡೀ ದೇಹ ನಡುಗುತ್ತಿತ್ತು. ಅವರು ನಿಧಾನವಾಗಿ ಉಸಿರಾಡುತ್ತಿದ್ದರು. ನಮಗೇನನ್ನಿಸಿತೋ ಏನೊ ತಿಳಿಯದು. ನೆಲದ ಮೇಲೆ ಮಂಡಿಯೂರಿ, ಎಡಗೈಯನ್ನು ಬೆನ್ನ ಹಿಂದೆ ಇರಿಸಿ, ಬಲಗೈಯಿಂದ ನೆಲವನ್ನು ಮುಟ್ಟಿ, ಹಣೆಯನ್ನು ಮುಟ್ಟಿ, ನಾವೂ ಅವರಂತೆಯೇ ಅವರ ಮುಂದೆ ಕುಳಿತೆವು.




ಯಾವುದೋ ಒಂದು ರೀತಿಯ ಬೆಚ್ಚಗಿನ ರಸವು ನಮ್ಮ ಮೈಯಲ್ಲೆಲ್ಲಾ ಸಂಚರಿಸಿದಂತೆನಿಸಿತು. ಕೂಗುತ್ತಿದ್ದ ಪಕ್ಷಿಗಳೆಲ್ಲವೂ ಸುಮ್ಮನಾಗಿಬಿಟ್ಟವು. ಹಾಗೇ ಗಾಳಿಯು ಬಂದು ನಮಗೆ ಮುತ್ತಿಕ್ಕಿ ಹೋದಂತೆ ಭಾಸವಾಯಿತು. ದೂರದ ನದಿಯ ರಭಸದ ರಾಗವು ಸಣ್ಣಗೆ ಕಿವಿಗೆ ಕೇಳುತ್ತಿತ್ತು. ಯಾವುದೋ ದೊಡ್ಡ ನಿರ್ವಾತದೊಳಗೆ, ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ಆಕಾಶದಲ್ಲಿ ನಾವಿರುವಂತೆ ಎನ್ನಿಸಿತು. ನಮ್ಮ ಅಡಿಯಲ್ಲಿನ ನೆಲವು ನಮ್ಮನ್ನು ತಳ್ಳುತ್ತಿರುವಂತೆ ಎನ್ನಿಸಿತು. ನಿಧಾನವಾಗಿ ಕಣ್ಣಲ್ಲಿ ನೀರು ಬಂದದ್ದು ಅನುಭವಕ್ಕೆ ಬಂದಿತು. ಮೈಯೆಲ್ಲವೂ ಒಮ್ಮೆ ಹೆಪ್ಪುಗಟ್ಟಿಕೊಂಡಂತೆ, ಇನ್ನೊಮ್ಮೆ ನೀರಿನಷ್ಟು ಸಡಿಲವಾಗಿ ಹರಿಯುತ್ತಿರುವಂತೆ, ಇನ್ನೊಮ್ಮೆ ಕಲ್ಲಿನಂತಾಗಿ, ಮತ್ತೆ ಮರಳಿನಂತೆ ಹುಡಿಹುಡಿಯಾಗಿ ಚದುರಿಹೋದಂತೆ ಆಗುತ್ತಿತ್ತು. ನನ್ನ ಮೈ ನಡುಗುತ್ತಿದ್ದುದು ನನಗೇ ನಿಧಾನವಾಗಿ ತಿಳಿಯುತ್ತಿತ್ತು. ಒಂದು ಕ್ಷಣದಲ್ಲಿ ಎಲ್ಲವೂ ಕಪ್ಪಾಗಿ, ಯಾರೋ ನನ್ನನ್ನು ಗಟ್ಟಿಯಾಗಿ ಹಿಡಿದು ಉಸಿರುಗಟ್ಟಿಸುವ ಅನುಭವವಾಯಿತು. ಆಗ ತಲೆಯ ಮೇಲೆ ಯಾವುದೋ ಬೃಹತ್ ಹಸ್ತವೊಂದು ಬಂದು ಬಿದ್ದ ಹಾಗಾಯಿತು. ಅದರ ಸ್ಪರ್ಶವಾದ ತಕ್ಷಣ ಆ ಗಟ್ಟಿ ಹಿಡಿತವು ಶಿಥಿಲವಾಗಿ ಮತ್ತೆ ಆ ಬಿಸೀ ರಸವು ಮೈಯಲ್ಲೆಲ್ಲಾ ಹರಿದಂತಾಯಿತು. ಕಣ್ಣ ನೀರು ಹರಿದು, ಉಪ್ಪುಗಟ್ಟಿದ್ದು ತಿಳಿಯಿತು. ನಿಧಾನವಾಗಿ ಕಣ್ಣು ತೆರೆಯಲು ಹೋದರೆ, ರೆಪ್ಪೆಗಳು ಒಂದಕ್ಕೊಂದು ಮೆತ್ತಿಕೊಂಡಿದ್ದವು. ಒಮ್ಮೆ ಅಂಗೈಯಲ್ಲಿ ಅದನ್ನು ಒರೆಸಿ, ಕಣ್ಣು ತೆರೆದೆ. ಆಚಾರ್ಯರು ನಮ್ಮ ಮೂವರನ್ನು ಅವರ ಕೈಯಿಂದ ಮುಟ್ಟಿ ಮುಟ್ಟಿ, ಅತ್ಯಂತ ಖುಷಿಯಿಂದ ಬೀಗುತ್ತಿದ್ದರು. ನಾನು ಬೋಕ, ನಾಗರ ಕಡೆಗೆ ತಿರುಗಿ ನೋಡಿದೆ. ಅವರ ಕಣ್ಣುಗಳಲ್ಲಿಯೂ ಯಾವುದೋ ಒಂದು ರೀತಿಯ ಬೆಳಕಿತ್ತು. ಕಣ್ಣೀರು ಹರಿದ ಚಿಹ್ನೆಗಳೂ ದೃಗ್ಗೋಚರವಾಗಿತ್ತು. ಗುರುಗಳು ಮೇಲಕ್ಕೆದ್ದರು. ಸುಂದರ ಮೌನದ ಮಂತ್ರಮುಗ್ಧತೆಯನ್ನ ಹಾಳು ಮಾಡದೆ ಹಾಗೆಯೇ ಇಟ್ಟುಕೊಂಡಿರಬೇಕು ಎಂದೆನ್ನಿಸಿ ನಾವು ಯಾರೂ ಮಾತನಾಡಲಿಲ್ಲ. ಸುಮ್ಮನೆ ಆಚಾರ್ಯರ ಹಿಂದೆ ನಡೆಯುತ್ತಾ ಹೊರಟೆವು. ನಿಧಾನವಾಗಿ ಪಕ್ಷಿಗಳು ತಮ್ಮ ಹಾಡುಗಳನ್ನ ಹಾಡತೊಡಗಿದವು. ಆಗ ನಮಗೆ ಮತ್ತೆ ಆಕಾಶಕ್ಕೇರಿದ ಅನುಭವವಾಯಿತು. ಆಚಾರ್ಯರ ಹಿಂದೆ ನಡೆಯುತ್ತಲೇ ಇದ್ದೆವು. ಪ್ರತಿ ಹೆಜ್ಜೆಗೂ ಹೊಸ ಜೀವನದ ಅನುಭೂತಿಯಾಗುತ್ತಿದ್ದಂತ್ತಿತ್ತು. ಯಾವ ಮರವನ್ನು ನೋಡಿದರು ಅದೂ ನಾನೆ, ಯಾವ ಪಕ್ಷಿಯನ್ನು ನೋಡಿದರು ಅದು ನಾನೆ! ಎಲ್ಲವೂ ನಾನೇ ಎಂಬ ಈ ವಿಚಿತ್ರ ಭಾವನೆ ನಮ್ಮ ಮೂವರಲ್ಲೂ ಬರುವಂತಿತ್ತು. ನಾಗ, ಬೋಕರ ಮುಖದ ಮೇಲಿನ ನೋಟವೆ ಅದನ್ನು ನನಗೆ ಹೇಳುವಂತೆ ಇತ್ತು. ನಡೆಯುತ್ತಾ, ನಡೆಯುತ್ತಾ, ಸಣ್ಣ ಝುರಿಯ ಬಳಿಗೆ ಬಂದೆವು.

ಝುರಿಯ ಒಂದು ಕಡೆಗೆ ಯಾವ ಮರವೂ ಇರಲಿಲ್ಲ. ಇನ್ನೊಂದು ಕಡೆಗೆ ಬರೀ ಮರಗಳು. ಮರಗಳಿಲ್ಲದ ಕಡೆಗೆ ಒಂದು ಗುಡಿಸಲು. ಅಷ್ಟು ದೊಡ್ಡ ಗುಡಿಸಲನ್ನ ನಾವು ಯಾವತ್ತೂ ನೋಡೇ ಇರಲಿಲ್ಲ. ಆಚಾರ್ಯರು ಸುತ್ತಲೂ ನೋಡಿದರು. ಬಾಯಿಗೆ ಬೆರಳಿಟ್ಟು, ಜೋರಾಗಿ ಶಿಳ್ಳೆ ಹೊಡೆದರು. "ಪ್ಯೂಯ್ಯ್ಯಾಪ್ಯೂಯ್!" ಎಂದು ಕೇಳಿಸಿತು. ಝುರಿಯ ಇನ್ನೊಂದು ಕಡೆಯ ಆಕಾಶದೆತ್ತರದ ಮರಗಳೆಲ್ಲವೂ ತಿರುಗಿ ನೋಡಿದಂತಾಯಿತು. ಒಂದೊಂದೇ ಮರವು ಅಲ್ಲಾಡತೊಡಗಿತು. ನಮಗೆ ಭಯವಾಯಿತು. ಜೊತೆಗೇ ಆಚಾರ್ಯರಿರುವಾಗ ಇನ್ಯಾವ ಭಯ ಎಂದೆನ್ನಿಸಿ ಅಲ್ಲಾಡುವ ಮರಗಳನ್ನೇ ನೋಡುತ್ತಿದ್ದೆವು. ಕೊನೆಯ ಮರ ಅಲ್ಲಾಡಿ, ಅಲ್ಲಿಂದ ಒಬ್ಬ ಮನುಷ್ಯನು ಎಗರಿ ಇಳಿದು ಬಂದು, ಝುರಿಯ ನೀರನ್ನು ಜೋರಾಗಿ ತನ್ನ ಮೇಲೆ ಎರಚಿಕೊಂಡು, ಬಂದು ಆಚಾರ್ಯರ ಕಾಲಿನ್ನು ಬಲಗೈಯಿಂದ ಮುಟ್ಟಿ, ಹಣೆಗೆ ಮುಟ್ಟಿಕೊಂಡ. ಅವನನ್ನು ನೋಡಿದ ತಕ್ಷಣ ನಮಗೆ ಏನೋ ನೆನಪಿಗೆ ಬಂದಂತಾಯಿತು. "ಆಚಾರ್ಯರೆ!" ಬೋಕ ಕಿರುಚಿದ. ನಾವೆಲ್ಲರೂ ಅವನ ಕಡೆಗೆ ತಿರುಗಿದೆವು. "ಆಚಾರ್ಯರೇ ಇವನು ಆ ಕೊಡಲಿಯವರೊಂದಿಗೆ ಇದ್ದವನು. ಮೊನ್ನೆ ನಿಮ್ಮ ಬಾಣ ಇವನಿಗೆ ನಾಟಿದ್ದು ನಾನೇ ನನ್ನ ಕಣ್ಣಾರೆ ನೋಡಿದೀನಿ!" ಎಂದು ಬೋಕ ಹೇಳಿದ. ನನಗೂ, ನಾಗನಿಗೂ ಥಟ್ಟನೆ ಹೊಳೆಯಿತು. "ಹೌದು! ಹೌದು ಆಚಾರ್ಯರೆ!" ಎಂದು ನಾನೂ ನಾಗನೂ ಅನುಮೋದಿಸಿದೆವು. ಆಚಾರ್ಯರ ಬಳಿ ನಿಂತಿದ್ದವನು ನಕ್ಕನು. ಆಚಾರ್ಯರು ನಮ್ಮ ತಲೆಗಳನ್ನು ಒಮ್ಮೆ ಸವರಿ. "ಒಳ್ಳೆ ನೆನಪಿಟ್ಟುಕೊಳುತ್ತೀರಿ. ಭೇಷ್!" ಎನ್ನುತ್ತಾ, ಅವನ ಹೆಗಲ ಮೇಲೆ ಕೈ ಹಾಕಿದರು. "ಇವನು ನಿಮ್ಮ ರೀತಿಯಲ್ಲೆ, ನನಗೆ ಒಬ್ಬ ಮಗ. ಕಾಡಿನ ಬೇರೆ ಭಾಗದಲ್ಲಿ ನಿಮ್ಮ ಹಾಗೆಯೇ ಇದ್ದವನು. ಇವನನ್ನ ಈಗಾಗಲೇ ನಾನು ಆಯುಧವನ್ನಾಗಿ ಮಾಡಿದೀನಿ. ಹೌದು. ಆ ಕೊಡಲಿಯವರೊಂದಿಗೆ ನೀವು ನೋಡಿದ್ದು ಇವನನ್ನೆ. ಇವನು ನನ್ನ ಬೇಹುಗಾರ. ನನ್ನ ಕಣ್ಣು ಕಿವಿ ಇವನೇ!" ಎಂದರು.

ನಾವು ನಮ್ಮ ನಮ್ಮನ್ನು ನೋಡಿಕೊಂಡೆವು. ನಾಗ ಮುಂದೆ ಹೋಗಿ, "ಆಚಾರ್ಯರೆ, ಬೇಹುಗಾರ ಅಂದ್ರೆ!?" ಎಂದ.

2

ಆಚಾರ್ಯರು ಒಮ್ಮೆ ನಕ್ಕರು. ನಂತರ, 'ಅವನ' ಕಡೆಗೆ ತಿರುಗಿ, "ಸಾಕ್ಷಿ, ಬಾಗಿಲು ತೆರೆಯಪ್ಪ!" ಎಂದರು. ಅವನ ಹೆಸರು "ಸಾಕ್ಷಿ" ಎಂದು ತಿಳಿಯಿತು. ವಿಚಿತ್ರ ಹೆಸರೆನ್ನಿಸಿತು. ನಮ್ಮ ಮನವನ್ನು ಓದಿದವರಂತೆ, "ಸಾಕ್ಷಿ ಎನ್ನುವುದು ವಿಷ್ಣು



ಎನ್ನುವ ದೇವರ ಹೆಸರು. ಎಲ್ಲವನ್ನು ಕಾಣುವ ಪರಮಾತ್ಮ ಅವನೇ ಅಲ್ಲವೆ ಎಂದು ಮರಗಳನ್ನು ತೋರಿದರು." ಎಂದರು. ನಮಗೆ 'ಸಾಕ್ಷಿ' ಎಂದರೆ 'ಎಲ್ಲವನ್ನೂ ನೋಡುವವನು' ಎಂದು ಅರ್ಥ ಆಯಿತು. ಆದರೆ ಈ 'ವಿಷ್ಣು' ಎನ್ನುವ ದೇವರು ನಮಗೆ ಹೊಸದು. ಅಷ್ಟರಲ್ಲಿ, ಸಾಕ್ಷಿ ಆ ಬಾಗಿಲನ್ನು ತೆರೆದಿದ್ದನು. ಗುಡಿಸಲು ಸರಿಯಾಗಿ ಸೂರ್ಯನಿಗೆದುರಾಗಿ ಕಟ್ಟಲಾಗಿತ್ತು. ಅರ್ಥಾತ್ ಬಾಗಿಲೊಳಕ್ಕೆ ಸೂರ್ಯನ ಬೆಳಕು ಹರಿದು ಬರುತ್ತಿತ್ತು. ಆಚಾರ್ಯರು ಆ ಬಾಗಿಲೊಳಕ್ಕೆ ಬಗ್ಗುತ್ತಾ ಒಳಹೊಕ್ಕರು. ಆ ಸೂರ್ಯನ ಬೆಳಕಿನ ಬೆಳ್ಳಿಯಲ್ಲಿ ಆಚಾರ್ಯರು. ಅವರು ತಮ್ಮ ಮೇಲು ಹೊದಿಕೆಯನ್ನು ತೆರೆದಿದ್ದರು. ಕೇವಲ ಬಟ್ಟೆಯಲ್ಲಿ 'ಕಚ್ಚೆ'ಯನ್ನು ಕಟ್ಟಿಕೊಂಡಿದ್ದರು. ಅವರ ದೃಢಕಾಯವು ಕಾಣುತ್ತಿತ್ತು. ಒಂದು ದಾರ ಅವರ ಎಡಹೆಗಲಿನಿಂದ ಸೊಂಟದ

ಬಲಭಾಗದವರೆಗೂ ಇತ್ತು. ಅವರು ಕೂದಲನ್ನು ಹಿಂದಕ್ಕೆ ಬಾಚಿ, ಗಂಟು ಕಟ್ಟಿಕೊಂಡರು. ನಂತರ ಕೆಳಕ್ಕೆ ಬಾಗಿ, ನೆಲವನ್ನು ಮುಟ್ಟಿದರು. ಮುಂದೆ ನಡೆದು, ಬೇರೆ ರೀತಿಯಲ್ಲಿ ಓಡಾಡಿ, ಒಂದು ಮೂಲೆಗಿದ್ದ ಏಳು ಮೆಟ್ಟಿಲುಗಳಿಗೆ ನಮಸ್ಕರಿಸಿದರು. ಸಾಕ್ಷಿಯು ಕೆಲವು ಹೂಗಳನ್ನು ತಂದು ಅವರ ಕೈಗಿಟ್ಟನು. ಆಚಾರ್ಯರು ಅದನ್ನು ಸುಂದರವಾಗಿ ಏಳು ಮೆಟ್ಟಿಲುಗಳ ಜೋಡಿಸಿದರು. ಅದರ ಪಕ್ಕದಲ್ಲಿ ಎಷ್ಟೊಂದು "ಆಯುಧ"ಗಳಿದ್ದವು. ಬೇರೆ ಬೇರೆ ರೀತಿಯವು. ಚೂಪಾಗಿರುವವು, ದಪ್ಪ ಇರುವವು, ಬೇರೆಯವರ ಏಟಿನಿಂದ ತಡೆದು ಕೊಳ್ಳುವಂಥದ್ದು, ಗುಂಡು ಗುಂಡಾಗಿರುವಂಥದ್ದು. ನಾವು ಬಾಗಿಲ ಬಳಿಯ ಮೆಟ್ಟಿಲಿನಿಂದ ಕೆಳಕ್ಕೆ ಇಳಿದೆವು. ವಿಚಿತ್ರವಾಗಿ, ಗುಡಿಸಲಿನ ಒಳಭಾಗವು ಭೂಮಿಯ ಮಟ್ಟದಿಂದ ಕೆಳಕ್ಕಿತ್ತು. ಒಂದು ರೀತಿಯ ಬಿಸಿಯಿತ್ತು. ಸಾಕ್ಷಿ ನಮ್ಮನ್ನು ನೋಡಿ, "ನಮಸ್ಕಾರ ಮಾಡ್ರೋ" ಎಂದನು. ಆಚಾರ್ಯರೇ ಏನೂ ಹೇಳಲಿಲ್ಲ. ಇವನದ್ದೇನು ಎನ್ನುವಂತೆ ನಾವು ಅವನನ್ನು ಕೋಪದಿಂದ ನೋಡಿದೆವು. ಅವನೂ ನಮ್ಮನ್ನು ನಗುತ್ತಾ ನೋಡಿ, ನಂತರ ಆಚಾರ್ಯರನ್ನು ನೋಡಿದ. ಆಚಾರ್ಯರು ನಮ್ಮನ್ನು ನೋಡಿ, "ನಮಸ್ಕಾರ ಮಾಡಿ!" ಎಂದರು. ನಮಗೆ ಈ ನಮಸ್ಕಾರ ಎಂದರೆ ಏನು ಎಂದು ತಿಳಿದೇ ಇರಲಿಲ್ಲ. ಆಗ ಆಚಾರ್ಯರು ನಮ್ಮನ್ನು ನೋಡಿ, "ನೀವು ಹನುಮಂತನಿಗೆ, ನಿಮ್ಮ ಅಪ್ಪಯ್ಯ-ಅಮ್ಮನಿಗೆ, ನನಗೆ ನೆಲವನ್ನು ಮುಟ್ಟಿ ಹಣೆ ಮುಟ್ಟಿಕೊಂಡಿರಲ್ಲ, ಅದನ್ನೇ ನಮಸ್ಕಾರ ಅನ್ನೋದು. ನೀವು ತೋರುವ ಗೌರವ ಅದು" ಎಂದರು. ನಾವು ನಮಸ್ಕರಿಸಿದೆವು. ನಾವೂ ಆಚಾರ್ಯರಂತೆ ನಮ್ಮ ಮೇಲ್ಮೈ ಮೇಲೆ ಹಾಕಿಕೊಂಡಿದ್ದ ಬಟ್ಟೆಯನ್ನು ತೆರೆದಿಟ್ಟೆವು. ಕೇವಲ ಕಚ್ಚೆಯಲ್ಲಿದ್ದ ನಾವು ಹೋಗಿ ಆಚಾರ್ಯರ ಮುಂದೆ ನಿಂತೆವು. ಆಚಾರ್ಯರು ಎರಡೂ ಕೈಗಳನ್ನು ಹಿಂದೆ ಕಟ್ಟಿದ್ದರು. "ಬೇಹುಗಾರ ಅಂದರೆ" ಎಂದು ತಮ್ಮ ವಿಶಿಷ್ಟ ಧ್ವನಿಯಲ್ಲಿ ಆರಂಭಿಸಿದರು. ಯಾವುದೋ ಕೆಲಸದಲ್ಲಿ ತೊಡಗಿದ್ದ ಸಾಕ್ಷಿಯೂ ನಮ್ಮ ಕಡೆಗೆ ತಿರುಗಿದ. ಆಚಾರ್ಯರು

ಉಪದಾಭಿಹ ಶುದ್ಧ ಅಮಾತ್ಯ ವರ್ಗೊ
ಗೂಢ ಪುರುಷಾನ್ ಉತ್ಪಾದಯೇತ್
ಕಾಪಟಿಕ ಉದಾಸ್ಥಿತ ಗೃಹಪಟಿಕ ವೈದೇಹಕ
ತಾಪಸ ವ್ಯಂಜನಾನ್ ಸತ್ರಿ ತೀಕ್ಷ್ಣ ರಸದ ಭಿಕ್ಷುಕೀಶ್ಚ ॥[3]

"ಚಾಣಕ್ಯ ಎನ್ನುವ ಬುದ್ಧಿವಂತನು, ಈ ಬೇಹುಗಾರಿಕೆಯ ಬಗ್ಗೆ ಚೆನ್ನಾಗಿ ಹೇಳಿದ್ದಾನೆ. ಒಬ್ಬ ನಾಯಕನು ಬೇಹುಗಾರರಾಗಿ ಪೂಜೆ ಮಾಡುವವರನ್ನೂ,

3. ಚಾಣಕ್ಯನ ಅರ್ಥಶಾಸ್ತ್ರ 1.11.1

ಮನೆಗಳಲ್ಲಿ ಕೆಲಸ ಮಾಡುವವರನ್ನೂ, ವ್ಯಾಪಾರ ಮಾಡುತ್ತಿರುವವನನ್ನೂ, ಸಾಧುಗಳನ್ನೂ, ಕೂಲಿ ಆಳು ಕೆಲಸ ಮಾಡುವವನನ್ನೂ ನೇಮಿಸಬೇಕು ಎಂದು ಹೇಳಿದ್ದಾನೆ. ಅಷ್ಟಕ್ಕೂ ಬೇಹುಗಾರ ಮಾಡುವ ಕೆಲಸವೇನು ಗೊತ್ತೇ? ಈ ಸಾಕ್ಷಿ ಇದ್ದಾನಲ್ಲ, ಇವನು ಆ ಕೊಡಲಿಯವರೊಂದಿಗೆ ಇರಬಹುದು. ಅವರಿಗೂ ಇವನು ಅವರಲ್ಲಿ ಒಬ್ಬ ಎಂದೆನ್ನಿಸಬಹುದು. ಆದರೆ ಇವನು ಮಾತ್ರ ಅವರು ಏನೇನು ಕೆಲಸ ಮಾಡುತ್ತಿದ್ದಾರೆ, ಎಲ್ಲಿ ಕಾಡನ್ನು ಹಾಳು ಮಾಡುತ್ತಿದ್ದಾರೆ, ಕಡಿದ ಮರಗಳನ್ನ ಯಾರ ಬಳಿಗೆ ಕೊಂಡೊಯ್ಯುತ್ತಿದ್ದಾರೆ, ಇವೆಲ್ಲವನ್ನೂ ನೋಡಿ, ಕೇಳಿ ತಿಳಿದುಕೊಂಡು ಬಂದು, ನನಗೆ ಹೇಳುತ್ತಾನೆ." ಎಂದ ತಕ್ಷಣ, ಬೋಕ, "ಅಯ್ಯೋ! ಅವರಿಗೆ ಸಾಕ್ಷಿ ಇಂತಹ ಕೆಲಸ ಮಾಡುತ್ತಿದ್ದಾನೆ ಅಂತ ತಿಳಿದುಹೋದರೆ!?" ಎಂದು ಕೇಳಿದ. ಆಚಾರ್ಯರು ಬೋಕನ ಹೆಗಲು ಮುಟ್ಟಿ, "ಇವನು ಬುದ್ಧಿವಂತ. ಕಾಡಲ್ಲಿಯೇ ತನ್ನ ಪ್ರಾಣವನ್ನು ಇರಿಸಿಕೊಂಡಿರುವವನು. ಅಲ್ಲದೆ, ಇವನಿಗೆ ನಾನು ಬಹಳಷ್ಟು ಹೇಳಿಕೊಟ್ಟಿದ್ದೀನಿ. ಅವರಿಂದ ತಪ್ಪಿಸಿಕೊಂಡು ಬರುವುದು ಇವನಿಗೆ ಸುಲಭದ ಕೆಲಸ" ಎಂದರು. ನಮಗೆ ಸಾಕ್ಷಿ ಮೇಲಿದ್ದ ಅಭಿಪ್ರಾಯವೇ ಬದಲಾಗಿ ಹೋಯಿತು. ನಾವು ಅವನನ್ನು ಕ್ಷಮಿಸು ಎಂದು ಕೇಳುವಂತೆ ನೋಡಿದೆವು. ಅವನು ತುಂಬಾ ಖುಷಿಯಾದವನಂತೆ ನೋಡುತ್ತಲಿದ್ದನು. ನಾವು ಆಚಾರ್ಯರ ಕಡೆಗೆ ತಿರುಗಿ, "ಈ ಗುಡಿಸಲು ಯಾಕೆ ಇಷ್ಟು ವಿಚಿತ್ರವಾಗಿದೆ ಆಚಾರ್ಯರೆ? ನಾವು ಇಲ್ಲಿ ಏನು ಕಲಿಯಲು ಬಂದೆವು?" ಎಂದು ಕೇಳಿದೆವು. ಆಚಾರ್ಯರು ತಮ್ಮ ಎರಡೂ ಕಾಲುಗಳನ್ನಗಲಿಸಿ, ಅರ್ಧ ಕುಳಿತಿರುವವರಂತೆ ಮಾಡಿ, ಕೈಗಳನ್ನು ವಿಚಿತ್ರವಾಗಿ ತಿರುಗಿಸಿ, ಮತ್ತೆ ಮುಖದ ಬಳಿ ತಂದರು. ಮೊಳಕೈಗಳಿಂದ ಅಂಗೈ ತನಕ ಸೇರಿಸಿ, ನೆಲದಿಂದ ತಲೆಯವರೆಗೂ ತಂದರು. ನನಗೆ ಯಾವುದೋ ಪ್ರಾಣಿ ನೆನಪಾಯಿತು.

"ಆನೆ..." ಎಂದು ಗೊಣಗಿದೆ. ಹಿಂದೆಯಿಂದ ಸಾಕ್ಷಿಯು, "ಭೇಷ್!" ಎಂದ. ಆಚಾರ್ಯರು, "ಕಲಿಯೋಣ. ಕಲರಿಪಯಟ್ಟು." ಎಂದರು.

ನಾವು ಮೂವರೂ ಒಟ್ಟಿಗೆ ಉದ್ಗರಿಸಿದೆವು: "ಕಲರಿಪಯಟ್ಟು"

3

ಸಾಕ್ಷಿಯ ಮೇಲಿನ ನಮ್ಮ ಅಭಿಪ್ರಾಯ ಬದಲಾಗಿತ್ತು. ಅವನಿಂದ ನಾವು ಕಲಿಯುವುದು ಬಹಳಷ್ಟಿತ್ತು. ಆಚಾರ್ಯರಿಗೆ ಅವನೆಂದರೆ ಭಾರೀ ಇಷ್ಟ. ಆ ವಿಚಿತ್ರವಾದ ಗುಡಿಸಲಿನಲ್ಲಿ ಅವನು ತೋರುತ್ತಿದ್ದ ನಿಪುಣತೆ, ಕಾರ್ಯದಕ್ಷತೆ, ಎಲ್ಲವೂ ನಮ್ಮನ್ನು ಮೂಕವಿಸ್ಮಿತರನ್ನಾಗಿ ಮಾಡಿತು. ಆದರೂ ಯಾವುದೋ ಅನುಮಾನ ನಮ್ಮಲ್ಲಿ ಇದ್ದೇ ಇತ್ತು. ಆದರೆ, ಈಗ ನಾವು ಆಚಾರ್ಯರ

ಆದೇಶದಂತೆ ಸಾಕ್ಷಿ ಹೇಳಿದ್ದನ್ನೆಲ್ಲಾ ಮಾಡಬೇಕಿತ್ತು. ಅವನು ದೊಡ್ಡ ದೊಡ್ಡ ಎಲೆಗಳಲ್ಲಿ ಹಣ್ಣುಗಳನ್ನು ತಂದು ನಮ್ಮ ಕೈಗಿಟ್ಟು, "ಹೋಗಿ ಇದನ್ನು ಆಚಾರ್ಯರಿಗೆ ನೀಡಿ, ನಂತರ ನಮಸ್ಕಾರ ಮಾಡಿ" ಎಂದು ಹೇಳಿದ. ಅವನು ಹೇಳಿದಂತೆಯೇ ನಾವು ಹೋಗಿ, ಆ ಹಣ್ಣುಗಳನ್ನೆಲ್ಲಾ ಆಚಾರ್ಯರಿಗೇ ನೀಡಿ, ಅವರೇ ಹೇಳಿಕೊಟ್ಟಂತೆ ನಮಸ್ಕಾರ ಮಾಡಿದೆವು. ಆಚಾರ್ಯರು ನಮ್ಮ ಶಿರದ ಮೇಲೆ ತಮ್ಮ ಅಗಲವಾದ ಹಸ್ತವನ್ನು ಇಟ್ಟು, ಕಣ್ಣು ಮುಚ್ಚಿ, ಕಣ್ಣು ತೆರೆದರು. ನಂತರ, ಸಾಕ್ಷಿ ಹೇಳಿಕೊಟ್ಟಂತೆ, ಆಚಾರ್ಯರಿಗೆ ನಮ್ಮ ಬೆನ್ನು ತೋರಿಸದೆ ಹಿಂದೆ ಹಿಂದಕ್ಕೆ ನಡೆದು ಮತ್ತೆ ನಮಸ್ಕಾರ ಮಾಡಿದೆವು. ಮೆಟ್ಟಿಲನ್ನು ಹತ್ತಿ, ಗುಡಿಸಲಿನಿಂದ ಹೊರ ಬಂದೆವು. ಹೊರಗೆ ಸಾಕ್ಷಿ ಕೈ ಕಟ್ಟಿ ನಿಂತಿದ್ದ. ಆಗ ತಾನೆ ಹೊಳೆಯಲ್ಲಿ ಮಿಂದು, ಒರೆಸಿಕೊಂಡು, ಹೊಸದಾಗಿ ಬಟ್ಟೆಯನ್ನು "ಕಚ್ಚೆ"ಯನ್ನಾಗಿ ಕಟ್ಟಿಕೊಂಡು, ಕೈಗಳನ್ನು ಕಟ್ಟಿಕೊಂಡು ನಿಂತಿದ್ದ. ಅವನ ಕೂದಲು ಇನ್ನು ಒದ್ದೆ ಒದ್ದೆಯಾಗಿಯೇ ಇತ್ತು. ಅವನ ಮುಖದಲ್ಲಿ ಅದ್ಭುತವಾದ ನಗು. ನಮ್ಮನ್ನು ನೋಡಿದ ತಕ್ಷಣವೇ, ಹಿಡಿದುಕೊಂಡು ಮೂವರಿಗೂ ಮುತ್ತು ಕೊಡಲಾರಂಭಿಸಿದ. ಆಚಾರ್ಯರೂ ಅವನನ್ನೇ ನೋಡುತ್ತಾ, "ಏನೋ ಸಾಕ್ಷಿ ಇವೆಲ್ಲಾ?" ಎಂದು ಚಿಕ್ಕ ಮಗುವನ್ನ ಕೇಳುವಂತೆ ಕೇಳಿದರು. ಸಾಕ್ಷಿಯ ಕಣ್ಣಲ್ಲಿ ನೀರು ಧಾರಾಕಾರವಾಗಿ ಸುರಿಯುತ್ತಿತ್ತು. "ಆಚಾರ್ಯರೇ, ಬರಿ ಕ್ರೌರ್ಯ, ದಾಸ್ಯ, ಕೆಲಸ, ಮೋಸ, ಇವುಗಳನ್ನೇ ನೋಡಿ ನೋಡಿ ಮನಸೆಲ್ಲಾ ತಳಮಳವಾಗಿಬಿಟ್ಟಿತ್ತು. ಎಲ್ಲಿ ನೋಡಿದರೂ ಭಯ, ಯಾರನ್ನ ನೋಡಿದರೂ ಅನುಮಾನ, ಎಲ್ಲರ ಮೇಲೂ ರೋಷ, ಅಯ್ಯೋ ನಮ್ಮನ್ನೆಲ್ಲಾ ದಾರಿ ತಪ್ಪಿಸುತ್ತಿದ್ದಾರೇ! ಎನ್ನುವ ಪರಿತಪಿಸುವಿಕೆ! ನನ್ನ ಕೈಲಿ ಏನೂ ಮಾಡಲಾಗುತ್ತಿಲ್ಲವೇ ಎನ್ನುವ ಕೋಪ! ಎಷ್ಟೋ ಬಾರಿ, ಅವರೊಂದಿಗೆ ಕೆಲಸ ಮಾಡುವಾಗ ಬಿಕ್ಕಿ ಬಿಕ್ಕಿ, ಅಳುವನ್ನು ತಡೆ ಹಿಡಿದು ಕೆಲಸ ಮಾಡಿದ್ದೇನೆ. ಅವರೊಂದಿಗೆ ಕೊಡಲಿ ಬೀಸಿದ್ದೇನೆ. ಅಯ್ಯೋ ಇದೇ ಮರಗಳಲ್ಲಿ ನಮ್ಮೆಲ್ಲರ ಪ್ರಾಣ ಇದೆ ಎಂದುಕೊಳ್ಳುತ್ತಾ, ತಲೆ ಚಚ್ಚಿಕೊಂಡು ಮರ ಕಡಿದಿದ್ದೇನೆ. ಆದರೆ, ಇವೆಲ್ಲವೂ ಅವರನ್ನು ಬುಡಸಮೇತ ಕಿತ್ತುಹಾಕಲು ಮಾಡುತ್ತಿರುವ ಕೆಲಸ ಎಂದುಕೊಂಡು ಮತ್ತೆ ಧೈರ್ಯ ತಂದು ಕೊಂಡಿದ್ದೇನೆ. ಎಷ್ಟೋ ರಾತ್ರಿಗಳು ನಿದ್ದೆಯಿಲ್ಲದೇ, ಹೊರಳಾಡಿ, ಹೊರಳಾಡಿ, ನಿಶಾಚರ ಪ್ರಾಣಿಗಳನ್ನು ನೋಡುತ್ತಾ ಕುಳಿತಿದ್ದೂ ಇದೆ. ಹಲವು ಬಾರಿ ನನ್ನ ಜೊತೆ ಇದ್ದವರು, 'ಏನೋ ರಾತ್ರಿ ನಿದ್ದೆಯಲ್ಲಿ ಕೊಲ್ಲು ಕೊಲ್ಲು ಅಂತೆಲ್ಲಾ ಗೊಣಗಾಡ್ತಿದ್ದೆ?' ಎಂದು ಕೇಳಿದ್ದಾರೆ. ಆಗ ನಾನು ಏನೇನನ್ನೋ ಹೇಳಿ ತಪ್ಪಿಸಿಕೊಂಡದ್ದೂ ಇದೆ. ಈಗ ಈ ಮಕ್ಕಳನ್ನು ನೋಡಿದಾಗ, ನನಗೆ ಜಗತ್ತಿನಲ್ಲಿ ಒಳ್ಳೆಯದ್ದೂ ಇದೆ ಎಂಬೊಂದು ಬೆಚ್ಚನೆಯ ಭಾವ ಆವರಿಸಿತು. ಮೈ ಎಲ್ಲಾ

ಹಗುರವಾದಂತಾಯಿತು. ಇವರಿಗೆ ಮುತ್ತಿಕ್ಕುವಷ್ಟರಲ್ಲಿ ನಾನು ಮತ್ತೆ ಮನುಷ್ಯನಾದೆ!" ಎನ್ನುತ್ತಾ ಸಾಕ್ಷಿ ಮತ್ತೆ ಕಣ್ಣೀರು ಹಾಕತೊಡಗಿದ. ಆಚಾರ್ಯರು ಅವನ ಬಳಿ ಬಂದು, ಎಬ್ಬಿಸಿ, ತಬ್ಬಿ ಹಿಡಿದು, "ನನ್ನ ಮಗ ಕಣೋ ನೀನು! ತಾಯಿ ಭಾರತಿಯ ಮಗ ಕಣೋ ನೀನು!" ಎಂದರು. ಅವರ ಕಣ್ಣಲ್ಲೂ ನೀರು ಜಿನುಗಿದ್ದು ನಮಗೆ ಕಂಡಿತು. ಅಂದು ನಾವು ನೋಡಿದ ಸಾಕ್ಷಿ, ನಮ್ಮ ಹೃದಯವನ್ನೇ ಆವರಿಸಿಬಿಟ್ಟ. ಅವನಿಗೆ ಉಂಟಾಗುವ ಭಾವನೆಗಳ ಕಾರಣ ನಮಗೆ ಗೊತ್ತಿಲ್ಲದಿದ್ದರೂ, ಅದರ ತೀವ್ರತೆಯ ಅರಿವು ನಮಗಾಯಿತು. ಅವನು ಹೇಳಿದ ಪರಿಸ್ಥಿತಿಯನ್ನು ಕಲ್ಪಿಸಿಕೊಂಡರೆ ನಮ್ಮ ಹೊಟ್ಟೆಯಲ್ಲಿ ಯಾರೋ ಕೈಹಾಕಿದಂತಾಗುತ್ತಿತ್ತು. ನಾವೂ ಸಾಕ್ಷಿಯನ್ನು ತಬ್ಬಿಕೊಂಡೆವು. ಅವನ ಸಂತಸ ಹೇಳತೀರದು. ಅಂದಿನಿಂದ ಆಚಾರ್ಯರನ್ನು ಬಿಟ್ಟರೆ, ಸಾಕ್ಷಿಯೇ ನಮಗೆ ಅಪ್ಪಯ್ಯ ಅಮ್ಮ ಎಲ್ಲವೂ.

ಆಚಾರ್ಯರು ಹನುಮಂತನ ಮೂರ್ತಿಯ ಬಳಿ ನಮಗೆಂದೇ ಒಂದು ಹೊಸ ಗುಡಿಸಲನ್ನು ಕಟ್ಟಿದರು. ಅಲ್ಲಿ ಕಲರಿಪಯಟ್ಟುವಿಗೆ ಬೇಕಾದ ವಸ್ತುಗಳೆಲ್ಲಾ ಇದ್ದವು. ಜೊತೆಗೆ, ಕಿಟಕಿಯಿಂದ ನೇರವಾಗಿ ಹನುಮಂತ ಕಾಣುತ್ತಲೇ ಇರುತ್ತಿದ್ದ. ಇನ್ನೊಂದು ಖುಷಿಯೆಂದರೆ ಸಾಕ್ಷಿಯನ್ನು ಆಚಾರ್ಯರು ನಮ್ಮೊಂದಿಗೆ ಇರಲು ಹೇಳಿದರು. ಅವನು ನಮಗಿಂತಲು ಯಾವುದರಲ್ಲೂ ಕಡಿಮೆ ಇರಲಿಲ್ಲ. ನಮಗಿಂತ ಎಷ್ಟೋ ದೊಡ್ಡವನು. ಮೀಸೆ ಗಡ್ಡಗಳೆಲ್ಲಾ ಇದ್ದವು. ಆದರೆ ನಮ್ಮ ಸಮಕ್ಕೆ ತರಲೆಯನ್ನು ಮಾಡುತ್ತಿದ್ದ. ದಿನವೂ ಕಾಡಿನ ವಿವಿಧ ದಾರಿಗಳಲ್ಲಿ ಓಡಿಕೊಂಡು ಹೋಗಿ ಬರಲು ಆಚಾರ್ಯರು ಹೇಳಿದ್ದರು. ನಮಗಿಂತಲೂ ವಿಚಿತ್ರವಾದ, ಭಿನ್ನ ಭಿನ್ನವಾದ ಎಗರಾಟಗಳನ್ನ, ಜಾರುಗಳನ್ನ ಮಾಡುತ್ತಿದ್ದ. ನಾವೂ ಅದನ್ನೇ ಮಾಡಲು ಹೊರಟರೆ, "ಒಬ್ಬರ ಕೃತಿಯನ್ನ ಇನ್ನೊಬ್ಬನು ಅವಲಂಬಿಸ ಬಾರದು. ಅವರವರ ಸ್ವಂತಿಕೆ ಅವರದ್ದು. ಕೊನೆಗೆ ಕಾಪಾಡುವುದೂ ಅದೇ." ಎಂದುಬಿಡುತ್ತಿದ್ದ. ಆದರೆ, ಆ ವಿಚಿತ್ರ ಎಗರಾಟಗಳಿಗೆ, ಜಾರುಗಳಿಗೆ ಬೇಕಾದ ಶಕ್ತಿ, ಯುಕ್ತಿಗಳನ್ನು ಸಾಕ್ಷಿ ನಮಗೆ ಹೇಳಿಕೊಡುತ್ತಿದ್ದ. ಬೋಕ ಮತ್ತು ಸಾಕ್ಷಿ ನಡುವೆ ಬೇಗನೆ ಬಂಧವು ಬೆಸೆದುಕೊಂಡಿತು. ಬೋಕನಿಗಿದ್ದ ಸೂಕ್ಷ್ಮ ನಾಸಿಕವು ಸಾಕ್ಷಿಯ ಆ ಜಾಗರೂಕ ಇಂದ್ರಿಯಗಳ ಮುಂದೆ ಯಾವ ಪ್ರಯೋಜನಕ್ಕೂ ಬರಲಿಲ್ಲ. ಆದರೆ ಬೋಕನ ತರಲೆಗಳಿಗೆ ಸಾಕ್ಷಿ ಕುಮ್ಮಕ್ಕು ಕೊಟ್ಟು ಕೊಟ್ಟು ಖುಷಿ ಪಡುತ್ತಿದ್ದ. ಹಾಗೆಂದು ಕೇವಲ ತಮಾಷೆಗಳಲ್ಲಿ ಅವನು ಸಮಯವನ್ನು ಕಳೆಯುತ್ತಿರಲಿಲ್ಲ. ಆಚಾರ್ಯರು ಅವನನ್ನು ಎರಡು ಮುಖ್ಯವಾದ ಕೆಲಸಗಳಿಗೆ ನೇಮಿಸಿದ್ದರು. ಒಂದು: ಆಚಾರ್ಯರ ಕಣ್ಣು ಕಿವಿ ಆಗಿರುವುದು. ಇನ್ನೊಂದು: ನಮಗೆ ಸ್ವಾತಂತ್ರ್ಯ ಹೋರಾಟದ ಬಗ್ಗೆ ತಿಳಿಸುವುದು.

ಈ ಸ್ವಾತಂತ್ರ್ಯ ಏನೋ? ಹೋರಾಟ ಏನೋ? ನಮಗೆ ಒಂದೂ ಅರ್ಥವಾಗುತ್ತಿರಲಿಲ್ಲ. ನಮ್ಮ ಕಾಡು ಬಿಟ್ಟು, ಇನ್ನೂ ದೊಡ್ಡ ಪ್ರಪಂಚವಿದೆ ಎಂದರೆ ನಾವು ನಂಬುತ್ತಲೇ ಇರಲಿಲ್ಲ. ನಾವೆಲ್ಲರೂ "ಭಾರತೀಯರು" ಮುಂತಾದವುಗಳಾಗಿ ಏನೇನೋ ಹೇಳುತ್ತಿದ್ದನು. ಸಾಕ್ಷಿಗೆ ಕಥೆ ಹೇಳುವುದು ಎಂದರೆ ನೀರು ಕುಡಿದಷ್ಟು ಸುಲಭ. ಅವನಿಗೆ ಈ ದೊಡ್ಡ ಕತೆ ಹೇಳುವುದಕ್ಕೆ ಆಗುತ್ತಿರಲಿಲ್ಲ. ತಲೆ ಕೆಡಿಸಿಕೊಂಡು, ಕೆಲವು ಬಾರಿ ಅವನು ನಮ್ಮೊಂದಿಗೆ ಕಾಡಿನ ಓಟಗಳಿಗೂ ಬರುತ್ತಿರಲಿಲ್ಲ. ಕೆಲವು ದಿನಗಳು, ಅವನು ಆಚಾರ್ಯರ ಕೆಲಸಕ್ಕೆ ಹೋಗಿ ಬರುತ್ತಿದ್ದ. ಹೀಗಿರಬೇಕಾದರೆ, ಕೆಲವು ದಿನಗಳು ಖುಷಿಯಾಗಿಯೇ ಬರುತ್ತಿದ್ದ. ಇದ್ದಕ್ಕಿದ್ದ ಹಾಗೆ ಸೊರಗಿಬಿಡುತ್ತಿದ್ದ. ಇನ್ನು ಕೆಲವು ದಿನ ಆಚಾರ್ಯರೊಂದಿಗೆ ಮಾತಿನಲ್ಲೇ ಕಳೆದುಬಿಡುತ್ತಿದ್ದ.

ಒಂದು ದಿನ, ಅದು ನಮಗೂ, ಅವನಿಗೂ ವಿಶೇಷವಾದ ದಿನ. ಅವನು ಒಬ್ಬ ವ್ಯಕ್ತಿಯು ಕತೆಯನ್ನ ಹೇಳಲಾರಂಭಿಸಿದ. "ನಾನು ನಿಮಗೆ ಒಬ್ಬನ ಕತೆ ಹೇಳುತ್ತೇನೆ. ಇದರಿಂದ ನಿಮಗೆ ದೊಡ್ಡ ಕತೆಯೇ ಗೋಚರವಾಗಬಹುದು." ಎನ್ನುತ್ತಾ, ಎದ್ದು ನಿಂತ. ಗುಡಿಸಲ ಬಾಗಿಲು ತೆರೆದು, ನಮ್ಮನ್ನೂ ಹೊರಕ್ಕೆ ಕರೆದು, ಶಿಖರದಿಂದ ದೂರದಲ್ಲಿ ಕಾಣುತ್ತಿದ್ದ ಹೊಗೆಯನ್ನು ತೋರಿಸಿ ಹೇಳಿದ: "ಹವಾ ಟೈಗರ್".



5

ಹವಾ ಟೈಗರ್

ರಾತ್ರಿಯೆಲ್ಲ ನಾವು ಮೂವರು ಹವಾ ಟೈಗರ್ ಕುರಿತು ಯೋಚಿಸುತ್ತಿದ್ದೆವು. ಮೊದಲನೆಯದಾಗಿ ನಮಗೆ ನಮ್ಮನ್ನು ಬಿಟ್ಟು ಈ ಕಾಡಿನಲ್ಲಿ ಬೇರೆಯವರೂ ಇದ್ದಾರೆ ಎಂದು ತಿಳಿದದ್ದೇ ಎಷ್ಟೋ ದಿನವಾದ ಮೇಲೆ. ಎರಡನೆಯದಾಗಿ, ಈ ಹೆಸರು ಇಷ್ಟು ವಿಚಿತ್ರವಾಗಿದೆ? "ಹವಾ ಟೈಗರ್" ಇದು ಮನುಷ್ಯನ ಹೆಸರೋ, ಜಾಗದ ಹೆಸರೋ ಒಂದೂ ಅರ್ಥವಾಗಲೊಲ್ಲದು. ಇತ್ತೀಚೆಗೆ ಆಚಾರ್ಯರ ಹಾಗೂ ಸಾಕ್ಷಿಯ ಮಾತುಗಳೇ ಅರ್ಥವಾಗುತ್ತಿಲ್ಲ. "ಭಾರತ" ಎನ್ನುತ್ತಾರೆ, "ದೇಶ" ಎನ್ನುತ್ತಾರೆ, "ಕಂಪನಿ" ಎನ್ನುತ್ತಾರೆ! ಈ ವಿಚಿತ್ರ ಪದಗಳೆಲ್ಲವೂ ನಮ್ಮ ತಲೆಯನ್ನು ತಿನ್ನುತ್ತಿತ್ತು. ಹೇಗಾದರೂ ಮಾಡಿ ಇವುಗಳ ಅರ್ಥ ತಿಳಿದುಕೊಳ್ಳಬೇಕೆಂದು ನಾವು ಹಪಹಪಿಸಿದೆವು.

ಸಾಕ್ಷಿ ನಮ್ಮನ್ನೆಲ್ಲಾ ಕಾಡಿನ ಓಟಕ್ಕೆ ಕರೆದುಕೊಂಡು ಹೊರಟ. ಒಂದು ಕಥೆ ಹೇಳುತ್ತೇನೆ. ಕೇಳಿ, ಎನ್ನುತ್ತಾ ಆರಂಭಿಸಿದ:


ಕಾಡಿನಲ್ಲಿ ಯಾವುದೋ ಒಂದು ಸಣ್ಣ ಬೆಳಕು ಆಗಾಗ ಮಿಂಚುತ್ತಿತ್ತು. ಒಂದು ಗುಂಪು, ಕಾರ್ಗತ್ತಲ ರಾತ್ರಿಯಲ್ಲಿ ಸಣ್ಣದೊಂದು ಮರದ ತುಂಡಿನ ತುದಿಗೆ ಬೆಂಕಿ ಹೊತ್ತಿಸಿ ನಡೆಯುತ್ತಿದ್ದರು. ಕಾಡಿನಲ್ಲಿ ಈ ರೀತಿಯ ಪ್ರಸಂಗಗಳು ತೀರಾ ಅಪರೂಪ. ಏಕೆಂದು ಕೇಳಿದರೆ, ಈ ಕಾಡಿಗೆ ಬಂದ ಮನುಷ್ಯರಾರೂ ಹಿಂತಿರುಗಿದವರಿಲ್ಲವೇ ಇಲ್ಲ. ಅವರೇನಾಗುವರೋ ಯಾರಿಗೂ ತಿಳಿಯುವುದೂ ಇಲ್ಲ. ಈ ಗುಂಪಿನ ಧೈರ್ಯ ಮೆಚ್ಚಬೇಕಾದದ್ದೇ.

***

ಜನರೆಲ್ಲರೂ ಖುಷಿಯಾಗಿದ್ದರು. ಎರಡು ತಿಂಗಳುಗಳಿಂದ ಯಾವುದೇ ದರೋಡೆಗಳಿಲ್ಲ, ಕೊಲೆಗಳಿಲ್ಲ, ಚೋದ್ಯವೆಂಬಂತೆ ಆತ್ಮಹತ್ಯೆಗಳೂ ಇಲ್ಲ. ವ್ಯಾಪಾರಿಗಳು ಇನ್ನಷ್ಟು ದಪ್ಪಗಾದರು. ಊರ ಹೊರಗಿನ ಗುಡಿಸಲುಗಳು ಕಡಿಮೆಯಾಗಿ ಊರೊಳಗಿನ ಮನೆಗಳು ಹೆಚ್ಚಾದವು. ಬೇರೆ ಬೇರೆ ಭಾಗಗಳಿಂದ ಬರತೊಡಗಿದ ವಲಸಿಗರು ಈ ಊರಲ್ಲೇ ಠಿಕಾಣಿ ಹೂಡಿದರು. ಊರು ಸುಭಿಕ್ಷವಾಗಿತ್ತು. ಈ ನಡುವೆ ಯಾವ ಅಂಗಡಿಯ ಮೇಲೆ 'ಆ' ಚಿಹ್ನೆ ಕಂಡರೂ, ಹೆದರದೆ ಬಾಗಿಲು ಹೊಡೆದು ನುಗ್ಗುತ್ತಿದ್ದರು.

ಎರಡು ತಿಂಗಳ ಹಿಂದೆ ಈ ಕತೆಯೇ ಬೇರೆಯಾಗಿತ್ತು. ವ್ಯಾಪಾರವೆಲ್ಲವೂ ಆ ಗುಂಪಿನ ಕೈಲಿತ್ತು. ಯಾರಿಗೂ ತಿಳಿಯದ ನಿಗೂಢ ಗುಂಪೊಂದು ಸಮಾಜವನ್ನು ತನ್ನ ಕಪಿಮುಷ್ಟಿಯಲ್ಲಿಯೇ ಇಟ್ಟುಕೊಳ್ಳಬೇಕೆಂಬ ದುರಾಸೆಯಲ್ಲಿ ಊರನ್ನು ನಡೆಸುತ್ತಿತ್ತು. ಜನರಲ್ಲಿ ಭಯ ಉಂಟು ಮಾಡಬೇಕೆಂದು ಮೊದಲು ವಿತ್ತ ಚಟುವಟಿಕೆಗಳ ಲಗಾಮನ್ನು ಕೈಗೆತ್ತಿಕೊಂಡರು. ವ್ಯಾಪಾರಿಗಳು ಇವರ ಮೂಲಕವೇ ಬೇರೆ ಊರುಗಳಿಗೆ ಹೋಗಬೇಕಾಗಿತ್ತು. ಹೊಸ ವ್ಯಾಪಾರ ಆರಂಭಿಸಬೇಕೆಂದರೆ ಈ ಗುಂಪಿನವರಿಗೆ ಒಂದಷ್ಟು ಹಣ ಕೊಡಬೇಕಾಗಿತ್ತು. ಆಗ ಅವರ ಅಂಗಡಿ ಅಥವ ಬಂಡಿಯ ಮೇಲೆ ಕೆಂಪು ಬಣ್ಣದಲ್ಲಿ ಒಂದು ಚಿಹ್ನೆಯನ್ನು ಬರೆದಿಟ್ಟು ಹೋಗುತ್ತಿದ್ದರು.

ಅವರು ಬಳಸುತ್ತಿದ್ದ ವಿಚಿತ್ರ ಕತ್ತಿಯ ಚಿಹ್ನೆ ಇದು. ಅದೇ ಚಿಹ್ನೆಯನ್ನು ಕಪ್ಪು ಬಣ್ಣದಲ್ಲಿ ಬರೆದಿದ್ದರೆ, ಆ ಅಂಗಡಿಯಿಂದಾಗಲಿ, ಬಂಡಿಯಿಂದಾಗಲಿ ಒಂದು ವಸ್ತುವೂ ಕೊಳ್ಳುವಂತಿರಲಿಲ್ಲ. ಕೊಂಡರೆ ಅಂಗಡಿಯವ, ಗ್ರಾಹಕ, ಇಬ್ಬರೂ ನಾಪತ್ತೆಯಾಗುವವರು. ಅಂಗೈಯಿನ ಮೇಲೆ ವಿಚಿತ್ರ ಕತ್ತಿಯ ಚಿಹ್ನೆ ಇದ್ದವರೆಲ್ಲ ಆ ಗುಂಪಿನವರೇ ಆಗಿರುತ್ತಿದ್ದರು. ಗುಂಪಿಗೆ ಒಬ್ಬ ನಾಯಕ ಎಂದು ಯಾರೂ ಇರಲಿಲ್ಲ. ಅಥವಾ ಇದ್ದರೂ ಯಾರಿಗೂ ತಿಳಿದಿರಲಿಲ್ಲ. ನಿಧಾನವಾಗಿ ಗುಂಪಿನ ಅಟ್ಟಹಾಸ ಹೆಚ್ಚಾಯಿತು. ಕಾಣುತ್ತಿದ್ದಂತೆಯೇ ಹಲವರು ನಾಪತ್ತೆಯಾಗ ತೊಡಗಿದರು. ಕೆಲವರ ಶವಗಳು ನದಿಯಲ್ಲಿ ಸಿಗತೊಡಗಿದವು. ಇನ್ನು ಊರಾಚೆ ಒಮ್ಮೊಮ್ಮೆ ಅರೆಬೆಂದ ಶವಗಳನ್ನು ರಣಹದ್ದುಗಳು, ನಾಯಿನರಿಗಳು ತಿನ್ನುವ ದೃಶ್ಯಗಳು ಕಾಣುತ್ತಿದ್ದವು. ಮನೆಯ ಗಂಡುಮಕ್ಕಳನ್ನು ಹೊರಕ್ಕೆ ಕಳುಹಿಸಲು ಜನ ಬೆದರುತ್ತಿದ್ದರು. ಹೊರಗೆ ಹೋಗುವ ಗಂಡುಮಗ ಎಲ್ಲಿ ಆ ವಿಚಿತ್ರ ಕತ್ತಿಯನ್ನೂ, ಅಂಗೈನ ಮೇಲೆ ಚಿಹ್ನೆಯ ಹಚ್ಚೆಯನ್ನೂ ಹಾಕಿಸಿಕೊಂಡು ಬಂದುಬಿಡುವನೆಂಬ ಭೀತಿ! ಆ ಗುಂಪಿಗೆ ನಿರ್ದಿಷ್ಟ ಹೆಸರಿರಲಿಲ್ಲ. ಕೆಲವರು 'ಕಪ್ಪು' ಎನ್ನುತ್ತಿದ್ದರು. ಕೆಲವರು 'ಶಾಪ' ಎನ್ನುತ್ತಿದ್ದರು. ಇನ್ನು ಕೆಲವರು 'ಸಾವು' ಎಂದೇ ಕರೆಯುತ್ತಿದ್ದರು. ಆದರೆ ಅದರ ಗಾತ್ರವೇನೋ ಬೆಳೆಯುತ್ತಲೇ ಇತ್ತು.



ಒಂದು ಊರಿನಿಂದ ಇನ್ನೊಂದು ಊರಿಗೆ ವ್ಯಾಪಿಸಿ ಅವರ ಬಲ ಹೆಚ್ಚಾಯಿತು. ಗುಂಪಿನ ಸದಸ್ಯರಿಗೆ ಜೀವಭಯವಿಲ್ಲ ಎಂದೇನಿಲ್ಲ. ಜನರ ಮೇಲೆ ದಬ್ಬಾಳಿಕೆ ಮಾಡಿ, ಆರಾಮಾಗಿ ಜೀವನ ಸಾಗಿಸಬಹುದೆಂಬ ಆಸೆಯಲ್ಲಿರುತ್ತಿದ್ದರಷ್ಟೆ.

ಒಂದು ದಿನ ಊರಿಗೆ ಒಬ್ಬ ಯುವಕ ದಾಪುಗಾಲಿಡುತ್ತಾ ಬಂದ. ಒಂದು ಮನೆಯ ಬಾಗಿಲು ತೆರೆಯಿತು. ಅಲ್ಲಿಂದ ಒಬ್ಬ ಮುದುಕನು ಆ ಯುವಕನನ್ನು ನೋಡುತ್ತಲೇ ಇದ್ದ. ಯುವಕನು ಕಪ್ಪು ವಿಚಿತ್ರ ಕತ್ತಿಯ ಚಿತ್ರವಿದ್ದ ಅಂಗಡಿಯೊಂದರ ಬಳಿ ಹೋಗಿ ನಿಂತ. ಅತ್ತ ಇತ್ತ ನೋಡಿ, ಅದರ ಬಾಗಿಲು ತೆರೆದು ಒಳಕ್ಕೆ ಹೋದ. ಹೊರಗೆ ಬಂದವನ ಕೈಯಲ್ಲಿ ಬಾಳೆಹಣ್ಣೊಂದು ಇತ್ತು. ನಿಧಾನಕ್ಕೆ ಅದರ ಸಿಪ್ಪೆಯನ್ನು ಸುಲಿದು ತಿನ್ನತೊಡಗಿದ. ಇವನನ್ನೇ ನೋಡುತ್ತಿದ್ದ ಮುದುಕನು ಹೋಗಿ ಎಳೆದುಕೊಂಡು ಮನೆಯೊಳಕ್ಕೆ ಹೋದ.

"ಬುದ್ಧಿ ಇದ್ಯೇನೋ? ಸಾಯ್ತೀಯಪ್ಪಾ!" ಎಂದನು. ಯುವಕ ಶಾಂತನಾಗಿದ್ದ. ನಕ್ಕು, "ಸಾಯಕ್ಕೇ ಹೊರ್ಟಿದೀನಿ ತಾತ. ನನ್ನನ್ನ ಬಿಡ್ತೀರಾ, ಅಥವಾ ನಿಮ್ಮನ್ನು ಜೊತೆಗೆ ಎಳೆದುಕೊಂಡು ಹೋಗ್ಲಾ?" ಎನ್ನುವಷ್ಟರ ಹೊತ್ತಿಗೆ, ಬಾಗಿಲು ದಡಬಡ ಬಡಿಯಿತು. "ಯಾವನೋ ಅವನು? ತೆಗೆಯೋ ಬಾಗಿಲು ಹಂದಿ!" ಎಂದಿತು ಒಂದು ಗಡುಸು ದನಿ. ಯುವಕನು ನಿಶ್ಚಿಂತತೆಯಿಂದ ಮಿಕ್ಕಿದ ಬಾಳೆಹಣ್ಣನ್ನು ತಿನ್ನುತ್ತಾ, ಹೋಗಿ ಬಾಗಿಲು ತೆರೆದ. "ಧೊಪ್" ಎಂದು ಅವನ

ಮುಖಕ್ಕೆ ಒಂದು ಗುದ್ದು ಬಿತ್ತು. ಬಾಯಲ್ಲಿದ್ದ ಬಾಳೆಹಣ್ಣು ಹೊರಕ್ಕೆ ಬಿದ್ದು ಯುವಕ ಕೆಳಕ್ಕೆ ಬಿದ್ದ. ಭಾರೀ ಗಾತ್ರದ ಮನುಷ್ಯ ಬಿದ್ದ ಯುವಕನನ್ನ ಹೆಗಲ ಮೇಲೆ ಹಾಕಿಕೊಂಡು ಹೊರಟ. ಅವನ ಕೈಯಲ್ಲಿ ವಿಚಿತ್ರ ಕತ್ತಿಯಿತ್ತು. ಅಂಗೈಯಿನ ಮೇಲೆ ಚಿಹ್ನೆ. ಮುದುಕ ಎದೆ ಬಡಿದುಕೊಂಡ, "ಅಯ್ಯೋ! ಹೇಳಿದರೂ ಕೇಳದೆ ಅನ್ಯಾಯವಾಗಿ ಹೋದ! ಪೆದ್ದು ಮುಂಡೇದು!" ಎನ್ನುತ್ತಾ ಮನೆಯೊಳಗೆ ಅವನು ಚೀರತೊಡಗಿದ. ಊರಿಗೆ ವಲಸಿಗರು ಬರುವುದೇ ಅಪರೂಪ. ಅದರಲ್ಲೂ ಇವನಂತಹ ಯುವಕ ತಾನಾಗಿಯೇ ಸಿಕ್ಕಿಕೊಂಡನಲ್ಲ ಎಂಬ ಚಿಂತೆ ಅವನಿಗೆ. ಮುಂದಿನ ದಿನ, ಊರ ಹೊರಗಿನ ಕಲ್ಲುಕಂಬಕ್ಕೆ ಯುವಕನ ಮೃತದೇಹವನ್ನು ಕಟ್ಟಿರಬಹುದೆಂದು ಊಹಿಸಿದ ಊರ ಜನರು ನಿಧಾನವಾಗಿ ಕಲ್ಲಕಂಬದ ಬಳಿ ಹೋದರು. ಆದರೆ ಅದನ್ನು ನೋಡಿದ ಅವರು ಆಶ್ಚರ್ಯಪಟಟ್ಟರು. ಅಲ್ಲಿ ಹಗ್ಗವಾಗಲಿ, ಯುವಕನಾಗಲಿ, ರಕ್ತವೂ ಕಾಣಲಿಲ್ಲ. ಹಿಂಸೆಯ, ಕೊಲೆಯ, ಯಾವುದೇ ಸೂಚನೆಗಳು ಅಲ್ಲಿರಲಿಲ್ಲ. ಏನಾಗಿರಬಹುದು ಎಂದುಕೊಳ್ಳುವಷ್ಟರಲ್ಲಿ ಕಪ್ಪಾದ ಒಂದು ಮೋಡವೇ ತಮ್ಮೆಡೆಗೆ ನೆಲಕ್ಕಿಳಿದು ಬರುತ್ತಿರುವಂತೆ ಒಂದು ತಂಡ ಕಂಡಿತು. ಅಲ್ಲಲ್ಲಿ ಚದುರಿದ್ದ ಬೂದಿ ಮೇಲಕ್ಕೆದ್ದಿತು. ಗಾಳಿಯೊಂದು ಹಾಗೆ ಬೀಸಿದಾಗ ಬೂದಿಯೊಂದಿಗೆ ಮರಳಿನ ಕಣಗಳೂ ಸೇರಿಕೊಂಡು, ಜನರು ಕಣ್ಣು ಮುಚ್ಚಿಕೊಳ್ಳುವಂತಾಯಿತು. ಇದರೊಂದಿಗೆ ರಣಬಿಸಿಲಿನ ದಬ್ಬಾಳಿಕೆ ಬೇರೆ. ಆ ಕಪ್ಪು ಗುಂಪು ಒಟ್ಟಿಗೆ ವಿಚಿತ್ರ ಕತ್ತಿಯನ್ನಾಡಿಸುತ್ತಾ ಬರುವುದನ್ನು ಕಂಡ ಜನರಿಗೆ ಗಾಬರಿ ಆಯಿತು. ಆ ಕಪ್ಪು ತಂಡದ ಮುಂದೆ ಇಬ್ಬರು ನಿಂತಿದ್ದರು. ಮರಳಿನ ನಡುವೆ ಅವರ ಆಕಾರವಷ್ಟೇ ಕಾಣುತ್ತಿತ್ತು. ಒಬ್ಬನು ಸಣ್ಣಗಿದ್ದನು. ಇನ್ನೊಬ್ಬನು ಕಟ್ಟುಮಸ್ತು. ಮರಳು, ಬೂದಿ ಎಲ್ಲವೂ ಸರಿದಾಗ ಅವರ ರೂಪಗಳು ಸ್ಪಷ್ಟವಾಗಿ ಕಾಣತೊಡಗಿತು. ಜನರ ನಡುವೆ ಇದ್ದ ಮುದುಕನು ದಿಟ್ಟಿಸಿ ನೋಡುತ್ತಿದ್ದವನು. "ಅವನೇ ಕಣೋ! ಆ ಬಾಳೇಹಣ್ಣು ತಿನ್ನುತ್ತಾ ನಮಗೆ ಚಳ್ಳೇಹಣ್ಣು ತಿನ್ನಿಸಿಬಿಟ್ಟ!" ಎನ್ನುತ್ತಾ ಪಕ್ಕದಲ್ಲಿದ್ದವನನ್ನ ದಿಟ್ಟಿಸಿದ. ಅವನ ಹಣೆಯ ಮೇಲೆ ಗಾಯದ ಕಲೆಯಿತ್ತು. ತುಂಬಾ ಹಳೆಯದ್ದೇ ಇರಬೇಕು. ತಲೆಯ ಮುಂಭಾಗದಲ್ಲಿ ಕೂದಲಿರಲಿಲ್ಲ. ಆದರೂ ಸಾಕ್ಷಾತ್ ಕ್ರೌರ್ಯವನ್ನೇ ಮನುಜರೂಪಕ್ಕೆ ತಂದವನಂತಿದ್ದ. "ಕಾಂತಾ" ಎನ್ನುತ್ತಾ ಅವನು, "ನಮ್ಮ ಗುಂಪಿಗೆ ಹೊಸ ಗುರಿಯನ್ನ ತೋರಿಸಿಕೊಟ್ಟೆ! ಈಗ ತಗೋ ನಿನ್ನದೇ ಮುಂದಾಳತ್ವ!" ಎನ್ನುತ್ತಾ ವಿಚಿತ್ರ ಕತ್ತಿಯನ್ನೂ ಅವನ ಕೈಗಿತ್ತ. ಕಪ್ಪು ತಂಡದ ನಡುವಿನಿಂದ ಬಿಳೀ ಕೂದಲಿದ್ದ ಒಬ್ಬ ಹಿರಿಯ ಮುಂದೆ ಬಂದು "ಸುರೇಂದರ್! ಯೋಚ್ನೇ ಮಾಡೂ! ಈ ಕಾಂತ ಅನ್ನೋ ಯಾರೋ ನಂಬಿಕೆಗೆ ಅರ್ಹನೆ?" ಸುರೇಂದರ್ ಎನ್ನುವ ಆ ಕ್ರೌರ್ಯರೂಪ ಹಿಂದಕ್ಕೆ ತಿರುಗಿ, "ವೆಂಕ, ನಿನ್ನ ಉಪದೇಶ ಸಾಕು! ಸುಮ್ನೆ

ಹೋಗ್ ನಿಂತ್ಕೋ!" ಬಿಳೀ ಕೂದಲಿನ ಮುದುಕ ಹೆದರಿ ನಿಂತುಬಿಟ್ಟ. ಸುರೇಂದರ್ ಅಲ್ಲಿ ನಿಂತಿದ್ದ ಜನರೆಡೆಗೆ ಕೈ ತೋರಿ, "ಕಡೀತೀನಿ ಕಣ್ರೋ. ಸಂಪೂರ್ಣ ನನ್ ಕಾಲ್ ನೆಕ್ಬೇಕು ನೀವು. ಹಾಗ್ ಮಾಡ್ತಿನಿ!" ಎಂದ. ಜನರ ಸಾಮೂಹಿಕ ನಿಟ್ಟುಸಿರು ಯುವಕನಿಗೆ ಕೇಳಿಸಿತು. ವಿಚಿತ್ರ ಕತ್ತಿಯ ಗುಂಪು ಹಿಂದಕ್ಕೆ ತಿರುಗಿತು. ಕಾಂತ ಎಂಬ ಆ ಯುವಕನು ಹಿಂದಕ್ಕೆ ತಿರುಗಿ ಜನರೆಡೆಗೆ ನೋಡಿ ನಗು ಚೆಲ್ಲಿದ. ಜನರ ನಡುವಿನ ಮುದುಕ, "ಸಾಯಿ ಮಗನೆ ಸಾಯಿ!" ಎಂದು ಶಾಪ ಹಾಕುತ್ತಾ, ಕಾಂತ ನೋಡುತ್ತಲೇ ಇದ್ದ. ಭರವಸೆಯನ್ನು ಕೊಡುವವನಂತೆ ತಲೆಯಲ್ಲಾಡಿಸಿ ಕಪ್ಪು ಗುಂಪಿನೆಡೆಗೆ ಹೊರಟುಬಿಟ್ಟ.

ಅಲ್ಲಿದ್ದ ಜನರಿಗೆ ಏನಾಗುತ್ತಿತ್ತೆಂಬುದು ತಿಳಿಯಲಿಲ್ಲ. ಈ ಯುವಕ ಯಾರು? ಸುರೇಂದರ್ ಯಾರು? ನಾವು ಅವನ ಕಾಲು ನೆಕ್ಕುವುದೆಂದರೆ ಏನು?! ಎಲ್ಲರೂ ಮುದುಕನ ಮನೆಯಲ್ಲಿ ಸೇರಿದರು. ಮಧ್ಯದಲ್ಲಿ ಮೋಂಬತ್ತಿಯೊಂದು ಮಂದವಾಗಿ ಉರಿಯುತ್ತಿತ್ತು. ಮುದುಕ ಮೋಂಬತ್ತಿಯನ್ನೇ ನೋಡುತ್ತ ಕುಕ್ಕರುಗಾಲಿನಲ್ಲಿ ಕುಳಿತಿದ್ದ. ಎಲ್ಲರೂ ಮುದುಕನನ್ನೇ ನೋಡುತ್ತಿದ್ದರು. ಒಬ್ಬನಿಗೆ ತಡೆಯಲಾಗಲಿಲ್ಲ. "ಮುದುಕಪ್ಪ! ಯಾರಾದ್ರೂ ಮಾತಾಡಿ!" ಎಂದ. ಮುದುಕ ತನ್ನ ಮುಖವನ್ನೆತ್ತಿದ್ದ. ಕಣ್ಣುಗಳು ತುಂಬಿದ್ದವು. ಮೋಂಬತ್ತಿಯ ಬೆಳಕಿನಲ್ಲಿ ಅವನ ಮುಖ ಶವದ ಮುಖದಂತೆ ಕಾಣುತ್ತಿತ್ತು. ನಾಲಗೆಯಿಂದ ಒಮ್ಮೆ ತುಟಿಗಳನ್ನು ಒದ್ದೆ ಮಾಡಿಕೊಂಡು, "ಕಾಡಿನ ದಾರಿ ಗೊತ್ತಾಗಿಬಿಡ್ತಾ ಹೇಗೆ!?" ಎಂದನು. ಅಲ್ಲಿದ್ದ ಅಷ್ಟೂ ಜನ "ಹಾ!" ಎಂದು ಉಸಿರೆಳೆದುಕೊಂಡರು. ಗುಸು ಗುಸು ಆರಂಭವಾಯಿತು. ಒಬ್ಬ ವ್ಯಾಪಾರಿ ಮುದುಕನ ಬಳಿ ಬಂದು, "ಸ್ವಾಮೀ, ಈಗಾಗ್ಲೇ ಈ ಕಪ್ಪು ಗುಂಪು ನಮ್ಮ ವ್ಯಾಪಾರಗಳನ್ನೆಲ್ಲಾ ತಮ್ಮ ಕೈಲಿಟ್ಟು ಕೊಂಡಿದ್ದಾರೆ! ಇನ್ನು ಇವರಿಗೆ ನಮ್ಮ ಮೂಲವೇ ಸಿಕ್ಕಿಬಿಟ್ಟರೆ. ನಮ್ಮದು ಅಧೋಗತಿ!" ಎಂದನು. ಒಬ್ಬ ಹೆಂಗಸು, "ಮುದುಕಪ್ಪ, ಕಾಡಲ್ಲಿನ ನಮ್ಮ ದೇವರು ಸುಮ್ಮನಿರುತ್ತಾನೆಯೇ? ಕೈ ಹಾಕಿದರೆ ಅವನ ಕಥೆ ಅಷ್ಟೆ!" ಎಂದಳು. ಮದುಕನು ಸ್ವಲ್ಪ ಯೋಚಿಸಿ, "ಅದೂ ನಿಜವೇ!" ಎಂದನು. ಇನ್ನೊಬ್ಬ ವ್ಯಾಪಾರಿ ಎದ್ದು ನಿಂತನು. ಬಹಳವಾಗಿ ಬೆವರುತ್ತಿದ್ದನು. ಅವನ ಕೈಗಳು ನಡಗುತ್ತಿದ್ದವು. "ಮುದುಕಪ್ಪ, ಕಾಡಿನ..." ಎಂದು ತಡವರಿಸಿದ. ಮುದುಕ "ಹೇಳು, ಹೇಳು, ಕಾಡಿನ...?" ಎಂದ. ಅವನು ಮತ್ತೆ, "ಕಾಡಿನ 'ಆ' ಭಾಗದಲ್ಲೇನಿದೆ ಎಂದು ಇವರಿಗೆ ತಿಳಿದುಬಿಟ್ಟಿದ್ದರೆ!!!" ಎಂದನು. ಅಲ್ಲಿದ್ದ ಸಮೂಹವೇ ಸ್ತಬ್ಧವಾಯಿತು. ಎಲ್ಲರಿಗೂ ಭಯವಾಗುತ್ತಿತ್ತು. ಮುದುಕ ಎದ್ದು ನಿಂತು ಕೈಕಟ್ಟಿದ. "ಎಲ್ಲರೂ ನಾಳೆಗೆ ಸಿದ್ಧರಾಗಿ. ಕಾಡಿನ ಬೆಟ್ಟಕ್ಕೆ ಹೋಗುತ್ತಿದ್ದೇವೆ!" ಎಲ್ಲರೂ ಎದ್ದು ನಿಂತರು. ಒಬ್ಬ ಶಿಖಾಧಾರಿಯು ಮುಂದೆ ಬಂದನು. ಎಲ್ಲರೂ ಮಂಡಿಯ ಮೇಲೆ ಕುಳಿತು

ಕಾಡಿನ ದಿಕ್ಕಿನೆಡೆಗೆ ತಿರುಗಿ ಕೈ ಜೋಡಿಸಿ, ಶಿಖಾಧಾರಿಯೊಂದಿಗೆ ದನಿ ಗೂಡಿಸಿದರು:

ಅರಣ್ಯಾನ್ಯರಣ್ಯಾನ್ಯಸೌ ಯಾ ಪರೇವ ನಶ್ಯಸಿ ।
ಕಥಾಗ್ರಾಮಂ ನ ಪರ್ಛಸಿ ನ ತ್ವಾ ಭೀರಿವ ವಿನ್ದತೀ.ಅ.ಅ.ಅನ ॥
ವರ್ಷಾರವಾಯ ವದತೇ ಯದುಪಾವತಿ ಚಿಚ್ಚಿಕಃ ।
ಆಘಾಟಿಭಿರಿವಧಾವಯನ್ನರಣ್ಯಾನಿರ್ಮಹೀಯತೇ ॥
ಉತ ಘಾವ ಇವಾದನ್ತ್ಯುತ ವೇಶ್ಮೇವ ದರ್ಶ್ಯತೇ ।
ಉತೋ ಅರಣ್ಯಾನಿಃಸಾಯಂ ಶಕಟೀರಿವ ಸರ್ಜತಿ ॥
ಘಾಮಜ್ಗ್ಯೆಷ ಆಹ್ವಯತಿ ದಾರ್ವಜ್ಗ್ಯೆಷೊ ಅಪಾವಧೀತ್ ।
ವಸನ್ನರಣ್ಯಾನ್ಯಾಂ ಸಾಯಮಕ್ರುಕ್ಷದಿತಿ ಮನ್ಯತೇ ॥
ನ ವಾ ಅರಣ್ಯಾನಿರ್ಹನ್ತ್ಯನ್ಯಶ್ಚೇನ ನಾಭಿಗಛತಿ ।
ಸವಾದೋಃಫಲಸ್ಯ ಜಗ್ಧ್ವಾಯ ಯಥಾಕಾಮಂ ನಿ ಪದ್ಯತೇ ॥
ಆಙ್ಜನಗನ್ಧಿಂ ಸುರಭಿಂ ಬಹ್ವನ್ನಾಮಕ್ರೀವಲಾಮ್ ।
ಪ್ರಾಹಮ್ಮ್ರಾಗಣಾಂ ಮಾತರಮರಣ್ಯಾನಿಮಶಂಸಿಷಮ್ ॥[4]

"ನಾಳೆ!" ಎಂದನು ಮುದುಕ. ಎಲ್ಲರೂ ಕಾಡಿನ ಕಡೆಗೆ ಮುಖ ಮಾಡಿ, ತಲೆ ಬಾಗಿ, ಕತ್ತಲಲ್ಲಿ ಕರಗಿಹೋಗುವಂತೆ ಮನೆಗಳಿಗೆ ಹೊರಟುಹೋದರು.

2

ಮರುದಿನ ಬೆಳಕಾಗುವ ಮುನ್ನವೇ ಮುದುಕ ಎಚ್ಚರಗೊಂಡ. ತನ್ನ ಹಿತ್ತಲ ಬಳಿ ಹೋಗಿ, ಅಲ್ಲಿದ್ದ ಬಾವಿಯಲ್ಲಿ ಬಿಂದಿಗೆಯನ್ನು ಇಳಿ ಬಿಟ್ಟು ನೀರನ್ನು ಸುರಿದುಕೊಂಡನು. ಚಳಿಯಲ್ಲಿ ನಡಗುತ್ತಾ, "ಆಪೋಹಿಷ್ಠಾ ಮಯೋ ಭುವಃ" ಎಂದು ಆಪಃ ಸೂಕ್ತವನ್ನು ಪಠಿಸಿದನು. ಒದ್ದೆ ಬಟ್ಟೆಯನ್ನು ತೆಗೆದಿಟ್ಟನು. ಮನೆಯೊಳಕ್ಕೆ ಬಂದು ಪೆಟ್ಟಿಗೆಯಿಂದ ಹಳೆಯ ಒಂದು ಪಂಚೆಯನ್ನು ಹೊರತೆಗೆದ. ಅದರಲ್ಲಿದ್ದ ಧೂಳನ್ನು ಹೋಗಲಾಡಿಸಿ, ಅದರ ಸುಗಂಧವನ್ನು ಆಘ್ರಾಣಿಸಿದ. ನಂತರ ಅದನ್ನು ಚೆನ್ನಾಗಿ ಸುತ್ತಿಕೊಂಡು, ಅದೇ ಪೆಟ್ಟಿಗೆಯಿಂದ ಉತ್ತರೀಯವನ್ನೂ ತೆಗೆದು ಹೊದೆಸಿಕೊಂಡ. ತೇಯ್ದಿಟ್ಟಿದ್ದ ಚಂದನದೊಂದಿಗೆ ನೀರು ಬೆರೆಸಿ, ಭ್ರೂಮಧ್ಯದಲ್ಲಿ ಧರಿಸಿದ. ಜನರೆಲ್ಲರೂ ಉತ್ಸುಕರಾಗಿರುತ್ತಾರೆಂದು ಅರಿತು ರಸ್ತೆಯ ಕಡೆಗಿನ ಕಿಟಕಿಯ ಕಡೆ ನೋಡಿದ. ಅಲ್ಲಿ ಪಂಜಿನ ಬೆಳಕಿನಂತೆ ಏನೋ ಇದ್ದದ್ದು ಭಾಸವಾಯಿತು. ಖುಷಿಯಾಗಿ ಹಿತ್ತಲಿನ ಬಾಗಿಲನ್ನು ಹಾಕಿ,

---

4. ಋಗ್ವೇದ, 10ನೇ ಮಂಡಲ, 146ನೇ ಮಂತ್ರ, 'ಅರಣ್ಯಾನಿ ಸೂಕ್ತ'

ರಕ್ಷಣೆಗೆಂದು ಚೂರಿಯೊಂದನ್ನು ಬೆನ್ನಬಳಿ ಸಿಕ್ಕಿಸಿಕೊಂಡು ಬಾಗಿಲು ತೆರೆದ.

ಬಾಗಿಲು ತೆರೆದ ತಕ್ಷಣ ಜನಸಮೂಹ ಉದ್ಗಾರ ಮಾಡಿತು. ಆದರೆ ಮುದುಕನಿಗೆ ಅದು ಸಂತಸ ತರಲಿಲ್ಲ. ಎಲ್ಲರ ಮುಖಗಳನ್ನೂ ಗಮನಿಸಿದ. ಅನುಭವಸ್ಥನಾಗಿದ್ದ ಮುದುಕನು ಬಲು ಸೂಕ್ಷ್ಮಗ್ರಾಹಿ. ಎಲ್ಲರ ಮುಖದಲ್ಲೂ ಅವನಿಗೆ ಕಿಂಚಿತ್ತು ಭಯ ಕಂಡಿತು. ಆದರೂ "ನಡೆಯಿರಿ! ಅರಣ್ಯಾನ್ಯರಣ್ಯಾನ್ಯಸೌಯಾ ಪರೇವ ನಶ್ಯಸಿ" ಎನ್ನುತ್ತಾ ಮುಂದಕ್ಕೆ ನಡೆದ.

ಮುದುಕನ ಹಿಂದೆ ಊರಿಗೆ ಊರೇ ಮುನ್ನಡೆಯಿತು. ಊರನ್ನು ದಾಟಿ, ನಿಧಾನವಾಗಿ ಮರಗಳೆಲ್ಲ ಬೆಳೆದ ಸ್ಥಳಕ್ಕೆ ಬಂದರು. ಇನ್ನೂ ಬೆಳಕಾಗಿರಲಿಲ್ಲ. ಮೊದಲೇ ಸೂರ್ಯನ ಕಿರಣಗಳಿಗೆ ಅಡ್ಡಲಾಗಿರುವ ಹೆಮ್ಮರಗಳು ಸೂರ್ಯನೇ ಬರದಿದ್ದಾಗ ಮಡಿಲನ್ನು ಎಷ್ಟು ಕತ್ತಲಾಗಿಸಿರುತ್ತೆ? ಒಂದರಿಂದ ಒಂದು ಪಂಜುಗಳು ಹೊತ್ತಿಕೊಂಡವು. ಮುದುಕನಿಗೆ ಕಾಡಿನ ಪಥವು ತನ್ನ ಅಂಗೈನಷ್ಟು ಪರಿಚಯ. ಎಲ್ಲಿ ಬಂಡೆ ಬರುವುದೋ, ಎಲ್ಲಿ ತಗ್ಗು ಇರುವುದೋ, ಎಲ್ಲಿ ಝರಿ ಹರಿವುದೋ ಅಲ್ಲಲ್ಲಿ ಜೋರಾಗಿ ಕೂಗು ಹಾಕುತ್ತಾ ಮುಂದಕ್ಕೆ ನಡೆದ. ಹೊಳೆಯೊಂದನ್ನು ದಾಟಿ, ಎರಡು ಬಿರುಸಾದ ಕಲ್ಲುಗಳು ಸೇರಿಕೊಂಡು ಇರುವಂತಹ ಒಂದು ಸೃಷ್ಟಿಯ ಬಳಿ ಬಂದರು. ಮುದುಕ ಪಂಜನ್ನು ಹಿಡಿದು, "ಬಾಯಾರಿದವರು, ಇಲ್ಲಿ ಬನ್ನಿ! ಆಸ್ವಾದಿಸಿ ಈ ಜಲವನ್ನು!" ಎಂದನು. ಎರಡು ಬಿರುಸು ಬಂಡೆಗಳ ಮಧ್ಯೆ ಸಣ್ಣಕ್ಕೆ ನೀರು ಹರಿಯುತ್ತಿತ್ತು. ಅತ್ಯಂತ ಸಿಹಿಯಾದ ನೀರು. ಬಂಡೆಯನ್ನು ಸ್ಪರ್ಶಿಸಿ ಅದಕ್ಕೆ ದೈವದ ಸ್ಥಾನವನ್ನು ಜನ ನೀಡಿ, ನಮಸ್ಕರಿಸಿ, ಮುನ್ನಡೆದರು. ಬಾಲರವಿ ಆಕಾಶಕ್ಕೇರಿದ. ಪಂಜುಗಳು ಒಂದೊಂದಾಗಿ ಆರತೊಡಗಿದವು. ಬಾಲರವಿಯ ಬೆಳಕನ್ನು ಹೆಮ್ಮರಗಳು ನಿಧಾನವಾಗಿ ತಮ್ಮ ಛಾವಣಿಗಳಿಂದ ಕೆಳಕ್ಕೆ ಬರಲು ಬಿಟ್ಟವು. ಹಸಿರಿನ ನಡುವೆ ಕೇಸರಿ ರಂಗಿನ ಶುದ್ಧ ಬೆಳಕು ಸೇರಿಕೊಂಡು 'ಹಸಿರು ಹೊನ್ನನು' ಸೃಷ್ಟಿಸತೊಡಗಿತು. ತಮ್ಮ ತಮ್ಮ ಮೈ ಮೇಲೆ ಅದು ಬೀಳಲು ಚಿಕ್ಕ ಚಿಕ್ಕ ರೋಮಗಳೆಲ್ಲವೂ ಬಂಗಾರವಾದಂತೆ ಭಾಸವಾಯಿತು. ಪಕ್ಷಿಯ ಕೂಗುಗಳೆಲ್ಲವೂ ಕೇಳಿಸತೊಡಗಿತು. ಮುದುಕನು ಸೂಕ್ಷ್ಮವಾಗಿ ಹಕ್ಕಿಗಳ ಕೂಗನ್ನು ಕೇಳುತ್ತಿದ್ದ. ಕಾಡಿನಲ್ಲಿ ಸುರಕ್ಷಿತವಾದ ಸ್ಥಳಗಳನ್ನೂ, ಎದುರಾಗುವ ಅಪಾಯಗಳನ್ನೂ ಪರೋಕ್ಷವಾಗಿ ಅವುಗಳ ಕಾರ್ಯ–ಕೂಗುಗಳು ಸೂಚಿಸುತ್ತವೆ. ಮುಂದೆ ಹೋಗುತ್ತಿದ್ದಂತೆ ಕೆಲವು ಜಾಲಿ ಮರಗಳು ಕಂಡವು. ಮುದುಕನು ಜನರೆಡೆಗೆ ತಿರುಗಿ, "ಹುಷಾರು!" ಎಂದು ತಲೆ ಬಗ್ಗಿಸಿ, ಜಾಲಿಯ ರೆಂಬೆಗಳ ಮುಳ್ಳಿನಿಂದ ತಪ್ಪಿಸಿಕೊಂಡು ನಡೆಯತೊಡಗಿದ. ಹಲವು ಜಾಲಿ ಮರಗಳ ರೆಂಬೆಗಳಲ್ಲಿ ಹರಿದ ಬಟ್ಟೆಗಳು ನೇತಾಡುತ್ತಿದ್ದವು. ಕೆಲವು ಬಟ್ಟೆಗಳ ಬಣ್ಣ ಮಾಸಿಹೋಗಿತ್ತು. ಕೆಲವು


ಬಟ್ಟೆಗಳ ಮೇಲೆ ರಕ್ತದ ಕಲೆಗಳಿದ್ದದ್ದು ಎಂಥವನಿಗೂ ತಿಳಿಯುತ್ತಿತ್ತು. ಇದನ್ನು ಕಂಡ ಹಲವರು ಕುಗ್ಗಿ-ಬಗ್ಗಿ ನಡೆಯಲಾರಂಭಿಸಿದರು. ಇನ್ನು ಕೆಲವರು ತಮ್ಮ ಬಳಿಯಿದ್ದ ಉದ್ದ ಕತ್ತಿಗಳಿಂದ ಅವುಗಳನ್ನು ಕಡಿಯುತ್ತಾ ನಡೆದರು. ಮುದುಕನು ಪ್ರತೀ ಮರವನ್ನೂ ತನ್ನ ತಾಯಿಯಂತೆಯೇ ಕಾಣುತ್ತಾ, ಅವುಗಳನ್ನು ಪ್ರೀತಿಯಿಂದ ಮುಟ್ಟುತ್ತಾ, ಹೋಗುತ್ತಿದ್ದ. ನೋಡು ನೋಡುತ್ತಿದ್ದಂತೆ ಕ್ರೂರ ಜಾಲಿ ಮರಗಳ ಗುಂಪು ಕಳೆದು, ಒಂದು ಸುಂದರ ದೃಶ್ಯ ಗೋಚರವಾಯಿತು. ವಾತಾವರಣ ಇದ್ದಕ್ಕಿದ್ದ ಹಾಗೆ ತಣ್ಣಗಾಯಿತು. ಎಲ್ಲೆಡೆ ಬಂಡೆಗಳೇ ವ್ಯಾಪಿಸಿತ್ತು. ಜಲಪಾತದ "ಧೋ" ಸದ್ದು ಕೇಳತೊಡಗಿತು. ಇದ್ದಕ್ಕಿದ್ದ ಹಾಗೆ ಜನಗಳು ಜಾರಿ ಬಿದ್ದ ಸದ್ದೂ ಕೇಳಿತು. ಮುದುಕ ಹಿಂತಿರುಗಿ ನೋಡಿದರೆ, ವಿಚಿತ್ರ ಕತ್ತಿಗಳು ಕಂಡವು. ಊರಜನಗಳ ಗುಂಪಿನಲ್ಲಿ ಅರ್ಧದಷ್ಟು ಸತ್ತಿದ್ದರು. ರಕ್ತ ಪಾಚಿ ಮಿಶ್ರಿತ ಬಂಡೆಗಳು ರಚ್ಚೆಯಾಗಿದ್ದವು. ಹಿಂದಿನಿಂದ ಕಾಂತ ಎಂಬ ಆ ಯುವಕನು ರಕ್ತದಿಂದ ತೊಯ್ದಿದ್ದ ವಿಚಿತ್ರ ಕತ್ತಿಯನ್ನು ಹಿಡಿದು ಮುಂದಕ್ಕೆ ಬಂದನು. ಅವನ ಹಿಂದೆ ಬಂದೂಕುಗಳನ್ನು ಹಿಡಿದು, ವಿಚಿತ್ರ ಕೆಂಪು ಬಣ್ಣದ ಬಟ್ಟೆಯನ್ನು ಧರಿಸಿದ ನಾಲ್ವರು ಬಂದರು. ಕಾಂತಾ ನಕ್ಕನು. "ಅರಣ್ಯಾನ್ಯರಣ್ಯಾನ್ಯಸೌ.. ಏನದು? ಹಾ ಹಾ! ಇವರು ಯಾರು ಗೊತ್ತಾ? ಇಡೀ ದೇಶವನ್ನೇ ಆಳುತ್ತಿರುವ ಘನಕುಂಪಣಿ ಸರ್ಕಾರ! ಈ ಸಂಪದ್ಭರಿತ ಕಾಡನ್ನು ನಾನು ಬಿಡುವೆನೆ?" ಅಟ್ಟಹಾಸದಲ್ಲಿ ಕಾಂತಾ ನುಡಿದನು. ಮುದುಕ ಕಣ್ಣೀರು ಸುರಿಸಿದ. ಅವನ ಕಣ್ಣು ಮುಂದೆಯೇ ಜನರು ಒಬ್ಬೊಬ್ಬರಾಗಿ ಸಾಯುತ್ತಿದ್ದರು. "ಈ ಕಪ್ಪು ಗುಂಪಿನೊಂದಿಗೆ ಕೆಂಪು ಭೂತಗಳೂ ಸೇರಿಕೊಂಡರೇ!" ಎಂದು ಪ್ರಲಾಪಿಸುತ್ತಾ ಮಂಡಿಯ ಮೇಲೆ ಕುಳಿತ. ಅಷ್ಟರಲ್ಲಿ ಜನರೆಲ್ಲರೂ ಸತ್ತಿದ್ದರು. ಹೆಣಗಳು ಚದುರಿದ್ದವು. ರಕ್ತಮಯವಾಗಿದ್ದ ವಿಚಿತ್ರ ಕತ್ತಿಗಳು ಮೆರೆದವು. ಕಾಂತಾ ಕಲ್ಲೊಂದನ್ನು ತೆಗೆದುಕೊಂಡು ಮುದುಕನ ಹಣೆಗೆ ಗುರಿಯಿಟ್ಟು ಎಸೆದನು. ಮುದುಕ ಅಲ್ಲಿಯೇ ಬಿದ್ದನು.

"ಬನ್ರೋ!" ಕಾಂತಾ ಕೂಗಿ ಜಲಪಾತದತ್ತ ನಡೆಯತೊಡಗಿದ. ಮುದುಕನ ಹಣೆಯಿಂದ ರಕ್ತ ಬರುತ್ತಿತ್ತಾದರೂ ಅವನು ಉಸಿರಾಡುತ್ತಲೇ ಇದ್ದ.

3

ವಿಚಿತ್ರ ಕತ್ತಿಗಳ ಘಾತುಕ ಏಟುಗಳಿಗೆ ಊರಿನ ಜನರ ಪ್ರಾಣವೆಲ್ಲಾ ಹೋಗಿತ್ತು. ಕಾಂತಾ ಆ ಬಂದೂಕುಧಾರಿ ಜನರೊಂದಿಗೆ ಜಲಪಾತವನ್ನು ದಾಟಿ ಬೆಟ್ಟದ ಇನ್ನೊಂದು ಮುಖದ ಬಳಿಗೆ ಹೋದ. ಅಲ್ಲಿಂದ ನೋಡಿದಾಗ ಕಂಡಿದ್ದು ರಾಶಿ ರಾಶಿ ಮರಗಳು. ಸುಂದರ ಹುಲ್ಲುಗಾವಲು ಒಂದು ಕಡೆ. ಮರಗಳಲ್ಲಿ ನೇತಾಡುತ್ತಿದ್ದ ಹಣ್ಣುಗಳು. ಬೆಟ್ಟವೂ ಏನೂ ಕಡಿಮೆ ಇಲ್ಲವೆಂದು ಹಲವು ರೀತಿಯ

ಗಿಡ ಮರಗಳು ದಟ್ಟವಾಗಿ ಬೆಳೆದಿದ್ದವು. ಕೆಂಪು ಬಟ್ಟೆ ಧರಿಸಿದ್ದ ಇಬ್ಬರು ಅಲ್ಲಿದ್ದ ಒಂದು ಗಿಡದ ಬಳಿ ಹೋದರು. ಅದಕ್ಕೆ ಅಂಟಿಕೊಂಡಿದ್ದು ಒಂದು ರೀತಿಯ ಪುಟ್ಟ ಹಣ್ಣುಗಳನ್ನು ಕಿತ್ತುಕೊಂಡರು. ಕೆಂಪು-ಕಪ್ಪು ಬಣ್ಣ ಮಿಶ್ರಿತವಾಗಿದ್ದ ಆ ಹಣ್ಣನ್ನು ಅವರು ಬಾಯಲ್ಲಿಟ್ಟುಕೊಂಡರು. "ಈ ಹಣ್ಣಿನ ಸವಿ ಸ್ಟ್ರಾಬೆರ್ರಿಯಂತೆ ಇದೆ ಅಲ್ಲವೆ?" ಎಂದರು. ಕಾಂತಾ ಅತ್ತ ತಿರುಗಿ, "ಇದು ಹಿಪ್ಪುನೇರಳೆ ಸರ್. ಚೆನ್ನಾಗಿರುತ್ತೆ ತಿನ್ನಿ" ಎಂದ. ಕೆಂಪು ಬಟ್ಟೆ ಧರಿಸಿದ್ದ ಇನ್ನೂ ಇಬ್ಬರು ಬಂದು ಆ ಹಣ್ಣನ್ನು ತಿನ್ನ ತೊಡಗಿದರು. ಜಲಪಾತದ ಸದ್ದು ಕೇಳಿಸುತ್ತಲೇ ಇತ್ತು. ಇದ್ದಕ್ಕಿದ್ದ ಹಾಗೆ "ಹ್ರೂಂಇ" ಎಂಬ ಸದ್ದು ಕೇಳಿಸಿತು. ಕಾಂತಾ "ಆನೆಗಳು!" ಎಂದ. ಎಲ್ಲರೂ ನಿಶ್ಯಬ್ಧರಾದರು. ಕೆಂಪು ಬಟ್ಟೆ ಧರಿಸಿದ್ದ ಒಬ್ಬನು ಮಾತ್ರ ನಕ್ಕು, ಅಹಂಕಾರದಲ್ಲಿ ಜಲಪಾತದ ಕಡೆಗೆ ಹೊರಟ. ವಿಚಿತ್ರ ಕತ್ತಿ ಹಿಡಿದಿದ್ದ ವೆಂಕ, "ಸಾರ್!! ಬೇಡ! ಬೇಡ!" ಎಂದು ಅವರನ್ನು ಕೂಗಿ ತಡೆದರೂ, ಅವನು "ಥೂ" ಎಂದು ಅಲ್ಲೇ ಉಗಿದು ಜಲಪಾತದ ಕಡೆ ಬಂದೂಕು ಹಿಡಿದು ನಡೆದ. ಬಂದೂಕು ಕಪ್ಪು ಬಣ್ಣದ್ದು. ಕೊಡಲಿಯ ರೀತಿ ಅದೂ ಒಂದು ಆಯುಧ. ಆದರೆ ದೂರದಿಂದಲೇ ಅದು ಒಂದು ಕಲ್ಲು ರೀತಿಯಿರುವ ಗುಂಡನ್ನು ಹೊರಡಿಸಿ ಎದುರಿನವನಿಗೆ ಹಾನಿ ಮಾಡುತ್ತದೆ. ಅದು ಕೈಲಿದ್ದರೆ ಸಾಕು ಶಕ್ತಿ ಬಂದಿತೆಂಬ ಭ್ರಮೆ. ಈ ಕೆಂಪು ಬಣ್ಣದ ಬಟ್ಟೆಯವನು ಜಲಪಾತದ ಬಳಿಯಿದ್ದ ಆನೆಗಳ ಗುಂಪನ್ನು ಕಂಡ. ಅಲ್ಲಿಯೇ ಮೀಯುತ್ತಿದ್ದ ಅವುಗಳು ತಮ್ಮ ಪಾಡಿಗೆ ತಾವು ಜಲದಲ್ಲಿ ಆಟವಾಡು ತ್ತಿದ್ದವು. ಚಿಕ್ಕ ಆನೆ ಮರಿಯೊಂದು ತಾಯಿಯನ್ನು ಮುದ್ದಿಸುತ್ತಾ, ನೀರಿನಲ್ಲಿ ಮುಳುಗುತ್ತಾ ಏಳುತ್ತಾ, ಜಲಪಾತದ ರಭಸವನ್ನು ಮೈಮೇಲೆ ಬೀಳಿಸಿಕೊಂಡು ಆನಂದಿಸುತ್ತಿತ್ತು. ಇದ್ದಕ್ಕಿದ್ದ ಹಾಗೆ "ಢಂ" ಎಂಬ ಸದ್ದೂ, ಸ್ವಲ್ಪ ಹೊಗೆಯೂ ಉದ್ಭವಿಸಿತು. ಚಿಕ್ಕ ಆನೆ ಮರಿಯು "ಹೂಂ..ಹೂಂ.." ಎಂದು ನೋವಿನಲ್ಲಿ ಚೀರುತ್ತಾ ಜಲಪಾತದ ಕೆಳಗೆ ಬಿತ್ತು. ಆನೆಗಳ ಗುಂಪಿನ ದೃಷ್ಟಿಯೆಲ್ಲವೂ ಆನೆ ಮರಿಯ ಕಡೆಗೆ ನೆಟ್ಟಿತು. ಗುಂಪಾಗಿ,



ನೀರನ್ನೆಗರಿಸುತ್ತಾ, ಕೆಳಕ್ಕಿದ್ದ ಮಣ್ಣನ್ನು ಕದಡಿಸುತ್ತಾ, ಸಾಯುತ್ತಿದ್ದ ಆನೆ ಮರಿಯ ಕಡೆಗೆ ಓಡಿತು. ಅದರ ತಾಯಿಯು ಆನೆ ಮರಿಯ ಹಣೆಗೆ ಸೊಂಡಿಲನ್ನು ತಾಗಿಸಿತು. ಆನೆ ಮರಿಯ ಹಣೆಯ ಒಂದು ಚಿಕ್ಕ ರಂಧ್ರದಿಂದ ರಕ್ತ ಸುರಿಯುತ್ತಿತ್ತು. ತಾಯಿ ಆನೆಯು ಸುತ್ತಲೂ ಗಮನಿಸಿದಾಗ, ಒಂದು ಪೊದೆಯ ಹಿಂದೆ ಹೊಗೆಯಾಡುತ್ತಿದ್ದ ಬಂದೂಕನ್ನು ಹಿಡಿದ ಕೆಂಪು ಬಣ್ಣದ ಬಟ್ಟೆ ಧರಿಸಿದ್ದವನು ಕಂಡನು. ಓಡಿ ಬಂದು ಅವನು ಪರಿಸ್ಥಿತಿಯನ್ನು ಅರಿತುಕೊಳ್ಳುವಷ್ಟರಲ್ಲಿ ಅವನನ್ನು ಮಕಾಡೆ ಮಲಗಿಸಿ ತುಳಿದು ಹಾಕಿತ್ತು. ಪೊದೆಯೊಂದಿಗೆ ಇವನೂ ಮಣ್ಣಿನಲ್ಲಿ ಹೂತು ಹೋದ. ಅಲ್ಲಿದ್ದ ಹಲವು ಹೆಣಗಳ ನಡುವೆ ಇವನದ್ದೂ ಒಂದಾಯಿತು. ಕಾಂತಾ ಮತ್ತು ಗುಂಪಿಗೆ ಇದು ಮೊದಲೇ ತಿಳಿದಿತ್ತು. ಇನ್ನೂ ಮೂವರು ಬಂದೂಕುಧಾರಿಗಳು ಇದನ್ನು ಕಂಡು ಭಾರಿ ಹೆದರಿಬಿಟ್ಟರು. ತಮ್ಮ ತಮ್ಮ ಬಂದೂಕುಗಳನ್ನು ಬೆನ್ನಹಿಂದೆ ಬಚ್ಚಿಟ್ಟುಕೊಂಡು ಕಪ್ಪು ಗುಂಪಿನ ನಡುವೆ ಬೆರೆತುಹೋದರು. ಕಾಂತಾ ಕೆಂಪು ಬಟ್ಟೆ ಧರಿಸಿದ್ದವನನ್ನು ಕರೆದು, "ಸಾಹೇಬ್ರಿಗೆ ಪತ್ರ ಕಳುಹಿಸಿಬಿಡಿ ಸರ್. ಕಾಡು ನಮ್ಮ ವಶ ಅಂತ" ಎಂದ. ಅವನು ವಿಚಿತ್ರ ಕತ್ತಿ ಹಿಡಿದಿದ್ದ ಇನ್ನೊಬ್ಬನನ್ನು ಕರೆದುಕೊಂಡು ಊರಿನ ಕಡೆಗೆ ಹೊರಟ. ಪತ್ರ ಎಂದರೆ ನಮ್ಮ ಮಾತುಗಳನ್ನು "ಕಾಗದ" ಎನ್ನುವ ವಸ್ತುವಿನ ಮೇಲೆ ಬರೆದು ಯಾರಿಗೆ ಹೇಳಬೇಕು ಎಂದುಕೊಳ್ಳುವೆವೋ ಅವರಿಗೆ ಅದನ್ನು ಇನ್ನೊಬ್ಬರು ಮೂಲಕ ತಲುಪಿಸುವುದು. ಕಾಂತಾ ಮಿಕ್ಕವರನ್ನು ಕರೆದುಕೊಂಡು ಹಲವು ರೀತಿಯ ಹಣ್ಣುಗಳು ಬೆಳೆದಿದ್ದ ಕಡೆಗೆ ಹೋದ. ಎಲ್ಲರೂ ಸುತ್ತಲೂ ನೋಡುತ್ತಿದ್ದರು. ಹಲವರ ಹೊಟ್ಟೆ ಹಸಿವಿನ ಸೂಚನೆಗಳನ್ನು ಕೊಡಲಾರಂಭಿಸಿ ದವು. ಹಕ್ಕಿಗಳು ಹಾಡುತ್ತಿದ್ದವು. ಜೊತೆಗೆ ತಣ್ಣನೆಯ ಗಾಳಿ. ಇದಲ್ಲದೆ ಜಲಪಾತದ ಹಿಮ್ಮೇಳ ಬೇರೆ. ಹೀಗಿರುವಾಗ, ಬಾಯಲ್ಲಿ ನೀರೂರಿಸುವಂತಹ ಹಣ್ಣುಗಳು ಕಂಡರೆ, ಎಂತಹ ಕ್ರೂರಿಗಾದರೂ ತಿನ್ನಬೇಕೆಂದು ಅನ್ನಿಸುವುದಿಲ್ಲವೆ? ಅಂತೆಯೇ ವಿಚಿತ್ರ ಕತ್ತಿಗಳನ್ನು ತಾವು ಹೊದ್ದಿದ್ದ ಕಂಬಳಿಯಲ್ಲಿ ಸುತ್ತಿಟ್ಟು, ಅತ್ಯಂತ ಸವಿಯಾಗಿ ಕಾಣುವ ಹಣ್ಣುಗಳಿದ್ದ ಒಂದು ಮರದ ಕಡೆಗೆ ನಡೆದರು. ವೆಂಕನು ಆ ಮರದಡಿಯಲ್ಲಿ ಕುಳಿತು ಬೆವರೊರೆಸಿಕೊಂಡನು. ಭಯ ಒಂದಿದ್ದರೆ, ಮಾನವನು ಎಂತಹ ವಾತಾವರಣದಲ್ಲೂ ಬೆವರುತ್ತಾನೆ. ವೆಂಕನ ವಯಸ್ಸಿಗನುಗುಣವಾಗಿ ಅವನ ಭಯ ಹಾಗೂ ಭಾವನೆಗಳಿದ್ದವು. ಇನ್ನು ಇಬ್ಬರು ಯುವಕರು ಮರವನ್ನು ಹತ್ತಲಾರಂಭಿಸಿದರು. ಒಬ್ಬನು ತನ್ನ ಚಿಕ್ಕ ಚೂರಿಯನ್ನು ತೆಗೆದು, ದಪ್ಪಗಿದ್ದ ಒಂದು ಹಣ್ಣನ್ನು ಕುಯ್ದನು. ಕೆಳಕ್ಕಿಳಿಯುವ ಮೊದಲೇ ಅವನಿಗೆ ಹಣ್ಣಿನ ರುಚಿ ನೋಡುವ ಹಂಬಲ. ಅದನ್ನು ಬಾಯಿಗಿಟ್ಟು ಕಚ್ಚಿದ. ಅದರ ರಸ ಅವನ ತುಟಿಯಂಚಿನಿಂದ ಸೋರುತ್ತಿತ್ತು. ಇನ್ನೇನು ಅದು ಗಂಟಲೊಳಕ್ಕಿಳಿದು ಪೂರ್ಣಸಾರ ಅನುಭವಿಸ

ಬೇಕು, ಒಂದು ಚೂಪಾದ ಬಾಣವು ಸರಕ್ಕನೆ ಬಂದು ಅವನ ಗಂಟಲನ್ನು ಹೊಕ್ಕಿತು. ಅವನು ರಕ್ತ ಕಕ್ಕುತ್ತಾ ಮರದಿಂದ ನೇರ ವೆಂಕನ ಕಾಲಿನ ಬಳಿ ಬಿದ್ದ. ಬಾಣವು ಯಾವುದೇ ಸದ್ದಿಲ್ಲದೆ ತನ್ನ ಕೆಲಸ ಮಾಡಿದುದರಿಂದ ಯಾರಿಗೂ ಬಾಣದ ಸುಳಿವೇ ಇರಲಿಲ್ಲ. ಗಂಟಲಿಗೆ ಬಾಣವು ಚುಚ್ಚಿ ಅದರ ಸಮೇತವಾಗಿ ಯುವಕನು ಕೆಳಗೆ ಬಿದ್ದಾಗಲೇ ಎಲ್ಲರಿಗೂ ಅದರ ಅರಿವಾದದ್ದು. ಎಲ್ಲರೂ ನಿಂತಲ್ಲೇ ಸ್ತಬ್ಧರಾದರೂ. ಜಾಗರೂಕರಾಗಿ ಸುತ್ತಲೂ ನೋಡತೊಡಗಿದರು. ಶಾಂತಚಿತ್ತರಾಗಿದ್ದ ಎಲ್ಲರೂ ಈಗ ಬೆವರುತ್ತಿದ್ದರು. ನಿಧಾನವಾಗಿ ಒಂದೊಂದೇ ವಿಚಿತ್ರ ಕತ್ತಿ ಹೊರಕ್ಕೆ ಬಂದಿತು. ಬೇರೊಂದು ಮರದಿಂದ ಹಣ್ಣನ್ನು ಕಿತ್ತು ಕೈಲಿಟ್ಟುಕೊಂಡಿದ್ದ ಇನ್ನೊಬ್ಬನ ಹಣೆಗೆ ಬಾಣವು ಹಿಂದೆಯಿಂದ ಬಂದು ಘಾಸಿಗೊಳಿಸಿತು. ಅವನು ಚೀರುತ್ತಾ ಕೆಳಕ್ಕೆ ಬಿದ್ದ. ವಿಚಿತ್ರ ಕತ್ತಿಯೂ ಕೈಯಿಂದ ಕೆಳಕ್ಕೆ ಬಿತ್ತು. ಬಂದೂಕು ಹಿಡಿದಿದ್ದ ಒಬ್ಬನು ಒಂದು ದಪ್ಪವಾದ ಮರದ ಹಿಂದೆ ಬಚ್ಚಿಟ್ಟುಕೊಳ್ಳತೊಡಗಿದನು. ಚಿಕ್ಕ ಕಲ್ಲೊಂದು ರೋಂಯ್ ಎಂದು ಬಂದು ಅವನ ತಲೆಗೆ ತಾಗಿತು. ಚಿಕ್ಕ ಕಲ್ಲಾದರೂ ಬಂದ ವೇಗವು ಹೆಚ್ಚಾದ್ದರಿಂದ ಅವನಿಗೆ ಉಂಟಾದ ನೋವು ನರಕವಾಗಿತ್ತು. ಅವನು ತಲೆಯನ್ನು ಹಿಡಿದು "ಯಪ್ಪಾ ದೇವಾ! ಭೂತದ ರೂಪವೇ! ಥೇಟು ಭೂತವೇ!!" ಎನ್ನುತ್ತಾ ಮರದಡಿಯಲ್ಲೇ ಕುಳಿತ. ಅವನಿನ್ನೂ ಮುಗಿಸೇ ಇರಲಿಲ್ಲ. ಇನ್ನೊಂದು ಕೊಡಲಿ ಹಾರಿ ಬಂದು ಅವನ ಎದೆಗೆ ನಾಟಿ ಅವನನ್ನು ಮುಗಿಸಿಬಿಟ್ಟಿತು. ಎಲ್ಲರೂ ಈ ಆಯುಧಗಳು ಎಲ್ಲಿಂದ ಬರುತ್ತಿದೆ ಎಂದು ಹುಡುಕಿ ಹುಡುಕಿ ರೋಸಿಹೋದರು. ಕಾಂತಾ ಸೂಕ್ಷ್ಮವಾಗಿ ಗಮನಿಸತೊಡಗಿದ. ಬೆಟ್ಟದ ಕಡೆಯಿಂದಲೂ, ಹಿಂದಿನಿಂದಲೂ ನೇರವಾಗಿ ಗುರಿ ತಪ್ಪದೆ ಬಂದು ಜನಗಳನ್ನು ಕೊಲ್ಲುವ ಈ ಬಾಣಗಳ ಹಿಂದಿನ ಆ ಬಿಲ್ಲುಗಾರ ಯಾರು! ಕಾಂತಾನಿಗೆ ಆ ನಿಗೂಢ ಬಿಲ್ಲುಗಾರರು ಅಪಾಯಕ್ಕಿಂತ ಹೆಚ್ಚಾಗಿ ಅವಕಾಶವಾಗಿಯೂ, ಶಕ್ತಿಯಾಗಿಯೂ ಕಂಡರು. ಅವರು ಅವನೊಂದಿಗೆ ಕಪ್ಪು ಗುಂಪಿನೊಂದಿಗಿದ್ದರೆ ಎಷ್ಟು ಬಲ!!! ಎಲ್ಲಾ ಕಡೆಗೆ ತಿರುಗಿದ. ಮಂಡಿಯ ಮೇಲೆ ಕುಳಿತು, "ಶರಣು! ಶರಣು! ದಯವಿಟ್ಟು ಬನ್ನಿ! ನಿಮಗೆ ಬೇಕಾದ್ದು ತೆಗೆದುಕೊಂಡು ಹೋಗಿ!" ಎಂದನು ಕಾಂತಾ. ವೆಂಕ ಎದ್ದು ನಿಂತ. ಅಲ್ಲಿದ್ದ ಕಪ್ಪು ಗುಂಪಿಗೆ ಹೇಳಿದ, "ನೋಡ್ರೋ! ಇವನು ಕಳ್ಳ ಕಣೋ! ಈ ಕಾಂತಾ ಕಳ್ಳ!!" ಗುಂಪಿನ ನಡುವಿನಿಂದ ತಾತ್ಸಾರದ ದನಿಗಳು ಕೇಳಿದವು. ವೆಂಕನ ತಲೆಗೆ ಒಂದು ಕಲ್ಲು ಬಂದು ಬಿತ್ತು. ಎಲ್ಲರೂ ಬೆಚ್ಚಿ ಬಿದ್ದರು. ವೆಂಕ ಕೆಳಗುರುಳಿದ. ಬೆಟ್ಟದ ತಪ್ಪಲಿನಿಂದ ಒಂದು ಮರದಿಂದ ಇನ್ನೊಂದು ಮರಕ್ಕೆ ಎಗರುತ್ತಾ, "ಊಹೂಹೂ ಐರ್ರ ಬ್ಲೂಹ!" ಎಂದು ಸದ್ದನ್ನು ಮಾಡುತ್ತಾ, ಇಬ್ಬರು ಬಿಲ್ಲುಗಾರರು ಕೆಳಕ್ಕಿಳಿದರು. ಅವರ ನೀಳ ಕೂದಲು ಗಾಳಿಗೆ ಹಾರುತ್ತಿತ್ತು. ಒಂದೊಂದು

ತೋಳು ಕಲ್ಲಲ್ಲಿ ಕೆತ್ತಿದ್ದ ಶಿಲ್ಪದಂತೆ ಇತ್ತು. ಇಬ್ಬರೂ ಒಟ್ಟಿಗೆ ಹೆಜ್ಜೆ ಹಾಕುತ್ತಾ ಕಾಂತಾನ ಕಡೆಗೆ ನಡೆದರು.

4

ಒಂದು ಗುಹೆಯಂತಹ ರಚನೆಯೊಳಗೆ ಕತ್ತಲ ಮಧ್ಯದಲ್ಲಿ ಕಾಂತಾನನ್ನು ಕೂರಿಸಿದ್ದರು. ಆ ಬಿಲ್ಲುಗಾರರು ಬಹಳ ಹುಡುಕಿ, ಈ ಸ್ಥಳಕ್ಕೆ ಕಾಂತಾನನ್ನ ಕರೆದು ತಂದಿದ್ದರು. ಗುಹೆಯಲ್ಲಿ ಉಂಟಾಗುತ್ತಿದ್ದ ಸದ್ದಿನಿಂದ ಎಲ್ಲೋ ಜಲಪಾತದ ಹಿಂದೆ ಇರಬೇಕೆಂದು ಕಾಂತಾ ಅಂದಾಜಿಸಿದ. ಬಿಲ್ಲುಗಾರರು ಅವನ ಎದುರಿಗೆ ಬಂದು ಕುಳಿತರು. "ನ..ನ..ನನ್ನನ್ನ ಏನ್ ಮಾಡ್ತೀರಾ! ನಿಮಗೆ ಏನು ಬೇಕು ಹೇಳಿ ಕೊಡ್ತೀನಿ!" ಎಂದು ನಡುಗುತ್ತಾ ಹೇಳಿದ ಕಾಂತಾ. "ಜನ ಬೇಕು. ಜನ. ಎಷ್ಟು ಕೊಡ್ತೀಯಾ?" ಎಂದನು ಒಬ್ಬ. ಇನ್ನೊಬ್ಬನು ಅವನ ತೋಳನ್ನು ಹಿಡಿದು "ಭವ! ಸ್ವಲ್ಪ ಸುಮ್ನಿರೋ!" ಎನ್ನುತ್ತಾ ಅವನ ಬಾಯನ್ನು ಮುಚ್ಚಿಸಿ, ತಾನು ಆರಂಭಿಸಿದ. "ನೋಡಪ್ಪಾ, ನಮಗೆ ನಮ್ಮ ಮಾತು ಕೇಳುವಂತಹ ನಿಷ್ಠಾವಂತ ಜನರು ಬೇಕು! ಈ ಬೆಟ್ಟದ ಮೇಲೆ ಇರುವಂತಹ ಅರ.." ಎನ್ನುವಷ್ಟರಲ್ಲಿ ಗುಹೆಯ ಮೇಲಿನ ಒಂದು ಕಿಂಡಿಯಿಂದ ನೀರಿನೊಂದಿಗೆ ಒಂದು ಬಾಣ ಬಂದು ನೇರ ಅವನ ತಲೆಯ ಮಧ್ಯಭಾಗಕ್ಕೆ ನಾಟಿತು. ಅವನು ವಾಕ್ಯವನ್ನು ಮುಗಿಸುವ ಮೊದಲೇ ಪ್ರಾಣ ಪಕ್ಷಿ ಹಾರಿಹೋಯ್ತು. ಅವನ ಬೃಹತ್ ದೇಹವು ಕೆಳಕ್ಕೆ ಬೀಳುವ ಮುನ್ನ ಅವನ ಪಕ್ಕದಲ್ಲಿದ್ದವನ ಮೇಲೆ ಗುಹೆಯ ಛಾವಣಿಯೇ ಬಿದ್ದು ಹೋಯಿತು. ಕಾಂತಾ ಹಿಂದಕ್ಕೆ ಎಗರಿದ. ತನ್ನ ದಾರಿಯನ್ನು ಹುಡುಕುತ್ತಾ ತಾನು ಓಡಿ ಹೋದ. ಯಾವ ಬಾಣಕ್ಕೂ ಸಿಕ್ಕದೆ, ಜಲಪಾತದ ಬಳಿ ಓಡಿ ಬಂದ. ಅಲ್ಲಿ ಹಲವರ ಹೆಣಗಳು, ಒಂದು ಆನೆ ಮರಿಯ ಹೆಣ, ಒಬ್ಬ ಕೆಂಪು ಬಟ್ಟೆಯವನ ಹೆಣ ಎಲ್ಲವೂ ಅವನಿಗೆ ಕಂಡಿತು. ಅವನಿಗೂ ಅಲ್ಲಲ್ಲಿ ಗಾಯಗಳಾಗಿದ್ದವು. ಬೆಟ್ಟದ ಇನ್ನೊಂದು ಮುಖದ ಬಳಿ ಬಂದು ನೋಡುತ್ತಾನೆ, ಕಪ್ಪು ಗುಂಪಿನ ಅಷ್ಟೂ ಜನರು ಹೆಣಗಳಾಗಿ ಬಿದ್ದಿದ್ದಾರೆ. ಎಲ್ಲರ ವಿಚಿತ್ರ ಕತ್ತಿಗಳೂ ನಾಪತ್ತೆ! ವೆಂಕ ಮಾತ್ರ ಕುಳಿತು ಬಿಕ್ಕುತ್ತಿದ್ದ. ತಲೆಗೆ ಆಗಿದ್ದ ಗಾಯವನ್ನ ಕೈಯಿಂದ ಉಜ್ಜಿಕೊಳ್ಳುತ್ತಿದ್ದ. ಕಾಂತಾ ಓಡಿ ಹೋಗಿ, "ವೆಂಕ! ಬಾಪ್ಪಾ ದಯವಿಟ್ಟು, ಪ್ರಾಣ ಉಳಿಸಿಕೊಳ್ಳೋಣ!" ಎನ್ನುತ್ತಾ ವೆಂಕನನ್ನ ಎಬ್ಬಿಸಿ ಊರಿನ ಕಡೆಗೆ ಓಡಿದ.

***

6

ಕೊಲೆ

ಸಾಕ್ಷಿ ಇಷ್ಟು ಕಥೆಯನ್ನ ನಮಗೆ ಹೇಳಿ ಒಂದು ಕಡೆ ನಿಂತ. ನಾವು ಸುತ್ತಲೂ ನೋಡಿದೆವು. ಜಲಪಾತ. ಮರಗಳು. ನಮಗೆ ಇದು ಆ ಸ್ಥಳವೇ ಇರಬಹುದೇ ಎಂಬ ಸಂದೇಹ. ಸಾಕ್ಷಿ ನಮ್ಮ ಮುಖಗಳನ್ನೇ ಗಮನಿಸುತ್ತಾ, "ಹೌದು. ಇದೇ ಆ ಸ್ಥಳ." ನಮಗೆ ಮೈಯೆಲ್ಲಾ ರೋಮಾಂಚನವಾಯಿತು. ಕಥೆ ಕೇಳುವ ಮೊದಮೊದಲಲ್ಲಿ ಊರು, ಬಂದೂಕು ಮುಂತಾದವುಗಳು ಅರ್ಥವಾಗಲಿಲ್ಲ. ಆದರೆ ಕಥೆಯು ಸಾಗಿದಂತೆ, ಅಲ್ಲಿನ ಸನ್ನಿವೇಶಗಳಿಗೆ ತಕ್ಕಂತೆ ಅವುಗಳೆಂದರೇನು ಎಂಬ ಒಂದು ಅಸ್ಪಷ್ಟ ಚಿತ್ರ ಮೂಡಿತು. ಹಾಗಿದ್ದರೆ, ನಮ್ಮ ಕಾಡಿನ ಭಾಗದಂತೆಯೇ, ದೊಡ್ಡ ಊರು ಭಾರತ. ಯಾರೋ ಬೇರೆ ಕಡೆ ಇಂದ ಬಂದು ಇದು ನಮ್ಮದು ಅಂತಿದ್ದಾರೆ. ನಮ್ಮ ಆಚಾರ್ಯರು, ಸಾಕ್ಷಿಯಂತಹ ಎಷ್ಟು ಮಂದಿ ಇದ್ದಾರೆ ಈ ಭಾರತದಲ್ಲಿ, ಎಂಬ ಹೆಮ್ಮೆ, ಭಕ್ತಿ ಎಲ್ಲವೂ ಮೂಡಿತು. ಬೋಕ ವಾತಾವರಣದ ಮೌನವನ್ನು ಮುರಿಯುತ್ತಾ, "ಸಾಕ್ಷಿ, ಹಾಗಿದ್ರೆ ಈ ಕಾಂತಾ ಮತ್ತೆ ವೆಂಕ ಎಲ್ಲಿಗೆ ಹೋದರು? ಏನಾದ್ರು?" ಎಂದು ಕೇಳಿದ. ಸಾಕ್ಷಿ ಸ್ವಲ್ಪ ಹೊತ್ತು ಸುಮ್ಮನಿದ್ದು, ನಂತರ, "ಅವನ ಬಗ್ಗೆ ಹಲವಾರು ದಂತಕಥೆಗಳಿವೆ. ಬಹಳಷ್ಟು ಮಂದಿ ಅವನು ಆ ಗುಹೆಯಿಂದ ತಪ್ಪಿಸಿಕೊಳ್ಳಲೇ ಇಲ್ಲ ಎನ್ನುತ್ತಾರೆ. ಇನ್ನು ಕೆಲವರು ಆ ಬೆಟ್ಟದ ತುದಿಯಲ್ಲೇನಿದೆ ಎಂದು ಹುಡುಕಿಕೊಂಡು ಹೋದ ಎನ್ನುತ್ತಾರೆ. ಕೆಲವರು ವೆಂಕನೊಂದಿಗೆ ಕಾಡನ್ನು ದಾಟುವಾಗ ಆನೆಗಳ ಹಿಂಡು ಕೊಂದುಹಾಕಿರಬೇಕು ಎನ್ನುತ್ತಾರೆ" ಎಂದ. ಆಗ ನಾಗನು, "ಹಾಗಿದ್ರೆ ಸತ್ಯ ಯಾವುದು? ನಿನಗೆ ಗೊತ್ತಿರಲೇ ಬೇಕಲ್ಲವೆ?" ಎಂದು ಕೇಳಿ ನನ್ನ ಕಡೆ ನೋಡಿ

ಕಣ್ಣು ಹೊಡೆದ. ಸಾಕ್ಷಿಯು ನಾಗನ ತಲೆಯ ಮೇಲೆ ಕೈಯಾಡಿಸಿ, "ಸತ್ಯ ತುಂಬಾ ಕರಾಳವಾದದ್ದು ನಾಗ. ಕಾಂತಾ ಹಾಗೂ ವೆಂಕ ತಪ್ಪಿಸಿಕೊಂಡದ್ದು ನಿಜ. ಅದಕ್ಕಿಂತ ದೊಡ್ಡ ಸತ್ಯವೇನೆಂದರೆ;" ಎಂದು ವಿಸ್ಮಯಕಾರಿ ಮೌನ ತಾಳಿದ. ನಾವು ಮೂವರೂ ಒಟ್ಟಿಗೆ "ಏನದು!" ಅಂದೆವು. ಸಾಕ್ಷಿ ನಮ್ಮನ್ನು ಜಲಪಾತದ ಹತ್ತಿರ ಕರೆದೊಯ್ದ. ಮೇಲಿನಿಂದ ಬೀಳುತ್ತಿದ್ದ ನೀರಿನ ಪದರವನ್ನು ದಾಟಿ ಒಳ ಹೊಕ್ಕೆವು. ಅಲ್ಲಿ ಒಂದು ಕಲ್ಲು ಬಂಡೆ. ಅದರ ಮೇಲ್ಭಾಗದಲ್ಲಿ ಕಪ್ಪು ಮಸಿಯಲ್ಲಿ ಗೀಚಿದ್ದ ಕಲೆ. ನಮಗೆ ಅದೇನು ಎಂದು ತಿಳಿಯದು. ಸಾಕ್ಷಿಯು ಹೇಳಿದ, "ನಾವು ಮಾತನಾಡುವುದನ್ನೇ ಚಿಕ್ಕ ಚಿಕ್ಕ ಚಿತ್ರಗಳಂತೆ ಬರೆದರೆ, ಅದೇ ಅಕ್ಷರ. ಇದೂ ಅಂಥದ್ದೆ ನೋಡಿ." ನಮಗೆ ಅದನ್ನು ಓದಲು ಬಾರದು. ನಾನು "ಏನದು!?" ಎಂದೆ. ಸಾಕ್ಷಿಯು ತಲೆಯೆತ್ತಿ, "ಇಲ್ಲಿ ಬರೆದಿರುವುದು–ಹವಾ ಟೈಗರ್" ಬೋಕನು ಸಿಂಗಳೀಕದಂತೆ ಛಂಗನೆಗರಿ ಬಂಡೆಯ ಮೇಲೆ ಕುಕ್ಕರುಗಾಲಿನಲ್ಲಿ ಕುಳಿತನು. ಮತ್ತೆ ತಲೆಯೆತ್ತಿ, "ಹಾಗಿದ್ರೆ" ಎಂದ. ನಾಗನು "ಕಾಂತಾ" ಎಂದನು. ನಾನು, "ಕಾಂತಾನೇ ಹವಾ ಟೈಗರ್!" ಎಂದೆ. ಸಾಕ್ಷಿ ನಮ್ಮ ಬೆನ್ನು ತಟ್ಟಿ, "ಪರ್ವಾಗಿಲ್ಲ ಕಣ್ರೋ ಸ್ವಲ್ಪ ದಿನಕ್ಕೇ ಬಹಳಾ ಸೂಕ್ಷ್ಮ ಆಗಿದ್ದೀರಿ!" ಎಂದ.

ನಮ್ಮ ಮೂವರಿಗೂ ಒಂದು ರೀತಿಯ ಬಂಧವಿದೆ. ಒಬ್ಬರು ಯೋಚಿಸುವುದು ಹೇಗೋ ಇನ್ನಿಬ್ಬರಿಗೂ ತಿಳಿದುಬಿಡುತ್ತದೆ. ಬೋಕ ನಮ್ಮಿಬ್ಬರನ್ನೂ ಬಿಟ್ಟಕಣ್ಣುಗಳಲ್ಲಿ ನೋಡಿದ. ನಮ್ಮಿಬ್ಬರಿಗೂ ಅವನ ತಲೆಯಲ್ಲಿ ಇರಬಹುದಾದ ವಿಷಯಗಳ ಚಿತ್ರಣ ಮೂಡಿತು. ಮೂವರು ಬಾಯ್ತೆರೆದು ಹೇಳಿದ್ದು ಇಷ್ಟೆ: "ಹಾಗಿದ್ರೆ ಮರಗಳನ್ನು ಕಡಿಸುತ್ತಿರುವುದು ಅವನೇ!"

2

ಈಗ ನಮಗೆ ಕಾಡಿನ ಒಂದು ಸ್ಪಷ್ಟ ಚಿತ್ರಣ ಮೂಡಿತ್ತು. ಒಂದು ಕಡೆ ಸುಂದರ ದೇವಸೃಷ್ಟಿ. ಇನ್ನೊಂದು ಕಡೆ ಮಾನವನ ಆಸೆಯೋ, ದುರ್ಬುದ್ಧಿಯೋ, ಇನ್ನೇನೋ. ಈ ಕಾಡುಗಳ ನಶಿಸುವಿಕೆಯ ಆರಂಭ ಆಗಿದ್ದು ಎಲ್ಲಿ? ಸಾಕ್ಷಿಯನ್ನು ಕೇಳಬೇಕು ಎಂದುಕೊಂಡು ನಾವೆಲ್ಲರೂ ಆಚಾರ್ಯರ ಗುಡಿಸಲಿಗೆ ಬಂದೆವು. ಅಂದು ಆಚಾರ್ಯರು ನಮ್ಮನ್ನೆಲ್ಲಾ ಕಲರಿಗೆ ಕರೆದುಕೊಂಡು ಹೋದರು. ಕಲರಿಪಯಟ್ಟನ್ನು ಹೇಳಿಕೊಡುವ ಸ್ಥಳಕ್ಕೆ ಹೆಸರೇ 'ಕಲರಿ'. ಮೊದಲ ಬಾರಿ ಅಲ್ಲಿಗೆ ಹೋದಾಗ ನಾವು ಗಮನಿಸಿರಲಿಲ್ಲವಾದರೂ, ನಂತರ ಆಚಾರ್ಯರ ಶಿಕ್ಷಣವು ನಮಗೆ ಅದನ್ನೆಲ್ಲಾ ಪರಿಚಯಿಸಿತು. ಮೊದಲ ಬಾರಿ ಶಿಕ್ಷಣ ಎಂಬ ಪದವನ್ನು ಕೇಳಿದಾಗ ನಮಗೆ ಅರ್ಥವಾಗಲಿಲ್ಲ. ಮಾತಿನ ಧಾಟಿಯನ್ನು ಕೇಳುತ್ತಾ ಶಿಕ್ಷಣವೆಂದರೆ "ಹೇಳಿಕೊಡುವುದು" ಎಂದು ನಾವು ಅರ್ಥೈಸಿಕೊಂಡೆವು. ಆದರೆ

ನಂತರ ಆಚಾರ್ಯರು ಹೇಳಿದ ಮಾತು ನಮ್ಮಲ್ಲಿ ಏನೋ ಒಂದು ರೀತಿಯ ಅರಿವನ್ನೂ, ಆನಂದವನ್ನೂ ಉಂಟು ಮಾಡಿತು. "ಕ್ಷ ಎಂದರೆ, ಕೇಳಿ ಮಕ್ಕಳೇ" ಎನ್ನುತ್ತಾ ಆಚಾರ್ಯರು ಕಲರಿಯ ಮೆಟ್ಟಿಲ ಮೇಲೆ ಕುಳಿತರು. "ಕ್ಷ ಎಂದರೆ ತೊಳೆಯುವುದು ಎಂದರ್ಥ. ತೊಳೆಯುವುದು ಯಾವ ಕಾರಣಕ್ಕೆ ಹೇಳಿ? ಬೇಡದಿರುವುದನ್ನು ತೊಡೆದುಹಾಕುವುದು. ಈ ತೊಳೆಯುವಿಕೆಯನ್ನು ಸುಶೀಲವಾಗಿ ನಡೆಸುವುದೇ ಶಿಕ್ಷಣ" ಎಂದರು. ನಮಗೆ ಕತ್ತಲ ದಾರಿಯಲ್ಲಿ ನಡೆಯುತ್ತಾ ಇದ್ದಕ್ಕಿದ್ದ ಹಾಗೆ ಬೆಳಕು ಕಂಡಂತಾಯಿತು. ಒಂದು ಪದಕ್ಕೆ ಇಂತಹ ಆಯಾಮ ಇರಲು ಸಾಧ್ಯವೇ ಎಂದು ನಮಗೆ ದಿಗ್ಭ್ರಮೆಯಾಯಿತು. ಕಲರಿಯಲ್ಲಿ ನಮ್ಮನ್ನು ಆಚಾರ್ಯರು ತಣಿಸುತ್ತಿದ್ದ ಪರಿಯನ್ನು ನೀವು ಕೇಳಬೇಕು. ಮೊದಲಿಗೆ ಒಂದು ಶಿಷ್ಟ ರೀತಿಯಲ್ಲಿ ಕಾಲಿನ ವ್ಯಾಯಾಮ. ಒಂದು ಕೊನೆಯಿಂದ ಇನ್ನೊಂದು ಕೊನೆಯತನಕ ಬಲ-ಎಡ, ಬಲ-ಎಡ ಕಾಲುಗಳನ್ನು ಗಾಳಿಯಲ್ಲಿ ನೇರವಾಗಿ ಒದೆಯುತ್ತಾ ಹೋಗುವುದು. ಇನ್ನೇನು ಕೊನೆ ಬಂದಿತು ಎನ್ನುವಷ್ಟರಲ್ಲಿ ಕಾಲನ್ನು ಬದಲಿಸಿ ಚಕ್ಕನೆ ಹಿಂದಕ್ಕೆ ತಿರುಗುವುದು. ಹೀಗೆ ನೂರಾರು ಬಾರಿ ಮಾಡಿಸಿ ಮಾಡಿಸಿ ನಮಗೆ ಬೆವರು ಸುರಿದುಹೋಗುತ್ತಿತ್ತು. ಲಂಗೋಟಿಯಂತೂ ನಾವು ಬಳಿದುಕೊಂಡಿದ್ದ ತೈಲ ಮಿಶ್ರಿತ ಬೆವರಿನೊಂದಿಗೆ ತೊಯ್ದು ನಮಗೆ ನಾಚಿಕೆ ತರಿಸುತ್ತಿತ್ತು. ಆದರೂ ಆಚಾರ್ಯರು ಬಿಡುತ್ತಿರಲಿಲ್ಲ. ನಂತರ ಹಲವು ಪ್ರಾಣಿಗಳ ಅನುಕರಣೆ ಮಾಡಬೇಕಾಗುತ್ತಿತ್ತು. ನಾವು ಸಾಮಾನ್ಯವಾಗಿ ಮಾಡುವ ಅನುಕರಣೆಯಂತೆ ಅಲ್ಲ! ಬೆಕ್ಕು ಎಂದರೆ ಕೈಗಳನ್ನು ಎದೆಯ ಬಳಿ ಇಟ್ಟುಕೊಂಡು "ಮಿಯಾಂವ್" ಎನ್ನುವುದಲ್ಲ. ಎರಡು ಕಾಲುಗಳನ್ನು ಬೇರ್ಪಡಿಸಿ, ಬೆನ್ನಿನಿಂದ ಬಾಗಿ, ಬಲಗಾಲನ್ನು ಹಿಂದಕ್ಕೆಳೆದು ಕೊಂಡು ಎರಡೂ ಕೈಗಳನ್ನು ಬೆಕ್ಕಿನ ಪಂಜಗಳಂತೆ ಬೆರಳುಗಳನ್ನು ಮಡಚಿ, ಬಲಗೈಯನ್ನು ಹಿಂದಕ್ಕೆ ತಂದು ಕಿವಿಯ ಬಳಿ ಇಟ್ಟುಕೊಳ್ಳುವುದು. ಇದನ್ನು ನೋಡಿದವನಿಗೆ ಬೆಕ್ಕು ಥಟ್ಟನೆ ಮೇಲೆಗರಲು ಸಿದ್ಧವಾಗಿರುವಂತೆ ಕಾಣುತ್ತದೆ. ಇದು ಕೇವಲ ಮಾರ್ಜಾಲದ ಅನುಕರಣೆಯಲ್ಲ. ಇಷ್ಟನ್ನೂ ಮಾಡುವಷ್ಟರಲ್ಲಿ ತೊಡೆ, ಮೀನುಖಂಡಗಳಲ್ಲಿ ಪ್ರಾಣ ಹೋಗುವಷ್ಟು ನೋವು. ಬಾಗಿದ ಭಂಗಿಯಲ್ಲೇ ಎಷ್ಟೋ ಹೊತ್ತು ಇರುವುದರಿಂದ ಬೆನ್ನನ್ನು ನೇರ ಮಾಡಿದಾಗ "ಟಕ್ಟಕ್ಟಕ್" ಎಂದು ಸದ್ದು ಬಂದು ನಮಗೆ ಪ್ರಾಣವೆಲ್ಲವೂ ಬೆನ್ನಿಗೇ ಹೊರಟಂತಾಗುತ್ತಿತ್ತು. ಆಗ ಆಚಾರ್ಯರು ನಮಗೆ ಉಸಿರಿನ ಸಂಚಾರದ ಮಹತ್ವವನ್ನ ತಿಳಿಸುತ್ತಿದ್ದರು. "ನೀವು ಸರಿಯಾದ ಚಲನೆಗೆ ಉಸಿರಾಟವನ್ನು ಅಳವಡಿಸಿದರೆ, ಎಲ್ಲದರ ನಂತರ ಶಕ್ತಿ ಬರುತ್ತದೆ. ಈ ರೀತಿ ನೋವಾಗುವುದಿಲ್ಲ." ಎಂದು ನಮ್ಮನ್ನು ನೋಡಿ ನಸುನಗುತ್ತಿದ್ದರು. ನಾವು ಆಚಾರ್ಯರ ಮಾತಿಗೆ ಕೋಪಗೊಂಡು, ಮೂವರೂ ಒಟ್ಟಿಗೆ ಗಜವಡಿವು

(ಗಜದಂತಹ ಚಲನೆ) ಮಾಡಲಾರಂಭಿಸುತ್ತಿದ್ದೆವು. ಆಚಾರ್ಯರಿಗೆ ನಮ್ಮ ಉಸಿರಾಟ ಕೇಳುವಷ್ಟು ಜೋರಾಗಿ, ಬೇಕೆಂದು, "ಹೂಂ" ಎಂದು ಉಸಿರೆಳೆದು ಕೊಂಡು ನಿಂತು, ಮೊಣಕೈಯಿಂದ ಅಂಗೈಯವರೆಗೂ ಜೋಡಿಸಿ ನಮಸ್ಕಾರ ಮುದ್ರೆಯಲ್ಲಿ ನಿಧಾನವಾಗಿ ಕೆಳಕ್ಕೆ ತೆಗೆದುಕೊಂಡು ಹೋಗಿ, ನೆಲಕ್ಕಿಂತ ಸ್ವಲ್ಪ ಮೇಲೆ ಬರುವಷ್ಟರಲ್ಲಿ ಆನೆಯು ಸೊಂಡಿಲನ್ನು ಬಾಗಿಸುವಂತೆ ಜೋಡಿಸಿದ ಕರಗಳನ್ನು ಮೂಗಿನ ಬಳಿ ತರುವಷ್ಟರಲ್ಲಿ ಕಾಲುಗಳು ತಾವಾಗಿಯೇ ಬೇರ್ಪಟ್ಟಿರುತ್ತೆ. ಕೈಗಳು ಮೂಗಿನ ಬಳಿ ಸೊಂಡಿಲಂತೆ ಇದ್ದು ನಾವು ಆನೆಯಂತೆ ಕಾಣುತ್ತೇವೆ. ಇದನ್ನು ನಾವು ಆಚಾರ್ಯರ ಮೇಲಿನ ಕೋಪದಿಂದ ಜೋರಾಗಿ ಉಸಿರಾಡುತ್ತಾ, ನಿಧಾನವಾಗಿ ಚಲಿಸುತ್ತಿರಲು, ನಮ್ಮ ಕಣ್ಣು ಮೂಗುಗಳಲ್ಲಿ ನೀರು ತುಂಬಿಕೊಂಡು, ಸೀನುವಂತಾಗುತ್ತಿತ್ತು. ಆಚಾರ್ಯರು, ತಡೆದುಕೊಂಡಿದ್ದ ನಗುವನ್ನು ಒಮ್ಮೆಗೇ ಹೊರಹಾಕುತ್ತಾ ಜೋರಾಗಿ ನಗುತ್ತಿದ್ದರು. ನಮಗೂ ನಮ್ಮ ದಡ್ಡತನದ ಅರಿವಾಗಿ, ನಗಲಾರಂಭಿಸುತ್ತಿದ್ದೆವು. ಆಗ ತೀವ್ರ ಉಸಿರಾಟದಿಂದ ಹಲವು ಬದಲಾವಣೆಗಳನ್ನು ಕಂಡಿದ್ದ ನಮ್ಮ ನಾಸಿಕದಿಂದ ಸಿಂಬಳ ಹೊರ ಬೀಳುವುದು. ಹಾಸ್ಯವು ಇಮ್ಮಡಿಗೊಂಡು ಹೊರಗೆ ಎಲ್ಲೋ ಏನೋ ಕೆಲಸ ಮಾಡುತ್ತಿದ್ದ ಸಾಕ್ಷಿಯೂ ಒಳಕ್ಕೆ ಜಿಗಿದು ಬಂದು, ಕಾರಣವೇ ತಿಳಿಯದೆ ನಮ್ಮೊಂದಿಗೆ ನಗುತ್ತಿದ್ದ. ಆದರೆ ಕಲರಿ ಚಲನೆಗಳು ಮಾತ್ರ ನಮ್ಮ ತಲೆಯಲ್ಲಿ ಅಚ್ಚೊತ್ತಿದಂತಿದ್ದವು. ಅದಕ್ಕೆ ಕಾರಣ ನಮ್ಮನ್ನು ಆಚಾರ್ಯರು ಕಾಡಿನೊಳಕ್ಕೆ ಕರೆದುಕೊಂಡು ಹೋಗಿ ಮಾರ್ಜಾಲ, ಗಜ, ಮಯೂರ, ಕುಕ್ಕುಟ, ಸರ್ಪಗಳನ್ನು ತೋರಿಸುತ್ತಿದ್ದರು. ಮಯೂರ, ಕುಕ್ಕುಟಗಳು ಸುಲಭವಾಗಿ ಕಾಣುತ್ತಿದ್ದವಾದರೂ, ಗಜ, ಮಾರ್ಜಾಲ, ಸರ್ಪಗಳನ್ನು ಹುಷಾರಾಗಿಯೂ, ನಿಶ್ಶಬ್ಧವಾಗಿಯೂ ಹುಡುಕಬೇಕಾಗಿತ್ತು. ಒಂದು ದಿನ ಸಿಂಹವನ್ನೂ ತೋರಿಸಿದ್ದರು. ಅದರ ಆಕಾರ ನೋಡಿಯೇ ನಮಗೆ ಎರಡು ದಿನ ನಿದ್ರೆ ಬರಲಿಲ್ಲ. ಇವುಗಳಲ್ಲದೇ ಆಚಾರ್ಯರು ನಮಗೆ ಮೇಯ್ತಾರಿ ಎಂಬ ಹದಿನೆಂಟು ವ್ಯಾಯಾಮಗಳನ್ನು ಹೇಳಿಕೊಟ್ಟಿದ್ದರು. ಯಾವುದೇ ಆಶ್ಚರ್ಯಕರ ದಾಳಿಗೆ ದೇಹವು ಸನ್ನದ್ಧವಾಗಿರಲು ಈ ವ್ಯಾಯಾಮಗಳು ಬಹು ಸಹಕಾರಿಯಾಗಿದ್ದವು. ಒಮ್ಮೊಮ್ಮೆ ಆಚಾರ್ಯರೇ ರಾತ್ರಿ ಹೊತ್ತಿನಲ್ಲಿ ಬಂದು ನಮ್ಮ ಮೇಲೆ ದಾಳಿ ಮಾಡುತ್ತಿದ್ದರು. ಮನವು ಸದಾ ಜಾಗೃತಿಯಲ್ಲಿರಬೇಕೆಂದು ಆಚಾರ್ಯರು ಹೇಳುತ್ತಿದ್ದರಿಂದ, ನಾವು ನಿದ್ರೆ ಮಾಡಿದರೂ, ಮನದ ಒಂದು ಮೂಲೆಯಲ್ಲಿ "ಸತತ ಜಾಗೃತಿ" ಎಂಬ ಆಚಾರ್ಯರ ದನಿ ಕೇಳುತ್ತಲೇ ಇರುವುದು. ಇನ್ನೇನು ಮನಸ್ಸು ದೀರ್ಘವಾದ ಒಂದು ಕನಸಿನಲ್ಲಿ ಜಾರುವುದು ಎನ್ನುವಷ್ಟರಲ್ಲಿ, "ಸತತ ಜಾಗೃತಿ" ಕೇಳಿಬರುತ್ತಿತ್ತು. ಆಚಾರ್ಯರ ಈ ಅಚಾನಕ್ಕಾದ ದಾಳಿಗಳನ್ನು ನಾವು ಯಶಸ್ವಿಯಾಗಿ

ಎದುರಿಸುತ್ತಿದ್ದೆವು. ಒಮ್ಮೆಯಂತೂ ಬೋಕನು ತನ್ನ ದಂಡವನ್ನೂ ತೆಗೆದು ಆಚಾರ್ಯರ ಶಿರಕ್ಕೆ ಏಟು ಮಾಡಿಬಿಟ್ಟಿದ್ದ. ಆಚಾರ್ಯರಿಗೆ ಖುಷಿಯಾಯಿತಾದರೂ, ಅವರ ಹಣೆಯು ಕೆಂಪಗೆ ಊದಿಕೊಂಡಿತ್ತು. ಈ ರೀತಿಯಲ್ಲಿ ಬೆಳಗಿನ ಕಾಡಿನ ಓಟಗಳನ್ನು ಬಿಟ್ಟರೆ, ಸ್ನಾನಕ್ಕೆ ನದಿ. ನಂತರ ನಮ್ಮ ಅಸ್ತಿತ್ವವೆಲ್ಲವೂ ಕಲರಿಯಲ್ಲೇ. ನಮ್ಮ ಪಾದಗಳೂ ಕಲರಿಯ ಹಳದಿ ಮಣ್ಣಿನ ಬಣ್ಣಕ್ಕೆ ತಿರುಗಿಬಿಟ್ಟಿತ್ತು. ಒಂದು ಕಡೆ ನಮ್ಮ ಉಲ್ಲಾಸವಾದರೆ, ಇನ್ನೊಂದು ಕಡೆ ಯುದ್ಧದ ತಯಾರಿ. ಅದಕ್ಕಾಗಿ ಆಚಾರ್ಯರು ನಮಗೆ ವಿಶೇಷ ಪಾಠವೊಂದನ್ನು ಆರಂಭಿಸಿದರು: ಮರ್ಮವಿದ್ಯೆ.

3

ನಾವುಗಳು ಮೊದಲ ಬಾರಿ ಕಾಡಿನಲ್ಲಿ ಹವಾ ಟೈಗರ್ ಮನುಷ್ಯರಿಂದ ಏಟು ತಿಂದು, ಅಪ್ಪ ಅಮ್ಮನನ್ನು ಕಳೆದುಕೊಂಡು ಪ್ರಾಣ ಕಳೆದುಕೊಳ್ಳುವ ಸ್ಥಿತಿಯಲ್ಲಿ ಬಿದ್ದಿದ್ದಾಗ ನಮ್ಮನ್ನು ಮತ್ತೆ ಎಂದಿನಂತೆ ಮಾಡಿದವರೇ ಆಚಾರ್ಯರು. ಅವರು ಈ ಪವಾಡವನ್ನು ಹೇಗೆ ಮಾಡಿದರೋ ಎಂದು ನಾವು ಬಹಳಷ್ಟು ಬಾರಿ ಕೇಳಿದರೂ, ಅವರು "ಸಮಯವಿದೆ" ಎಂಬ ಒಂದೇ ಪದದಲ್ಲಿ ಉತ್ತರಿಸಿ ಹೊರಟು ಬಿಡುತ್ತಿದ್ದರು. ಈ ಮರ್ಮ ಚಿಕಿತ್ಸೆಯ ಪಾಠವನ್ನು ಆರಂಭಿಸುವಾಗ ನಮಗೆ ಅದರ ಉತ್ತರ ಸಿಕ್ಕಿತು. "ನೀವು ಇಂದು ಈ ಸ್ಥಿತಿಯಲ್ಲಿ ಕಲರಿಪಯಟ್ಟು ಮಾಡುವಷ್ಟು ಶಕ್ತರಾಗಿದ್ದೀರೆಂದರೆ ಅದಕ್ಕೆ ಕಾರಣವೇ ಮರ್ಮ!" ಎಂದಾಗ ಆಚಾರ್ಯರು ನಮಗೆ ಚೋದ್ಯವಾಯಿತಾದರೂ, ಈ 'ಮರ್ಮ' ಎಂದರೇನು ಎಂದೇ ತಿಳಿಯದು. ಆಚಾರ್ಯರು ಹೇಳುತ್ತಾ ಹೋದರು. "ಮರ್ಮ ಎಂದರೆ ರಹಸ್ಯ. ಯಾವುದು ಮರೆಮಾಚಲಾಗಿದೆಯೋ ಅದು ಎಂದರ್ಥ. ನಮ್ಮ ದೇಹವು ಮಾಂಸ ಮೂಳೆಗಳಿಂದಷ್ಟೇ ಅಲ್ಲ. ನರನಾಡಿಗಳಿಂದಲೂ ಕೂಡಿದೆ. ಇದರಲ್ಲಿ ಹರಿಯುವ ಪ್ರಾಣವೇ ನಮ್ಮನ್ನು ಜೀವಂತವಾಗಿಟ್ಟಿರುತ್ತವೆ. ಅಲ್ಲಿರುವ ಆ ಏಳು ಮೆಟ್ಟಿಲುಗಳ ಪೂತರ ನೋಡಿ;" ಎಂದು ಆಚಾರ್ಯರು ಕಲರಿಯ ಮೂಲೆಯಲ್ಲಿದ್ದ ಪೂತರವನ್ನು ತೋರಿದರು. "ಅದು ಕಲರಿಯನ್ನು ಅಭ್ಯಸಿಸುತ್ತಿರುವ ಅಥವಾ ಅಭ್ಯಾಸಿಯದ್ದೇ ಪ್ರತಿರೂಪ. ಒಂದೊಂದು ಮೆಟ್ಟಿಲು ನಮ್ಮ ದೇಹದಲ್ಲಿರುವ ಒಂದೊಂದು ಚಕ್ರದ ಪ್ರತಿರೂಪ. ಒಂದೊಂದೂ ಚಕ್ರ, ದೇಹದ ಒಂದೊಂದು ಭಾಗದಲ್ಲಿರುತ್ತದೆ. ಅವೆಲ್ಲವೂ ಶಕ್ತಿಕೇಂದ್ರಗಳು. ಅವುಗಳನ್ನು ಉತ್ತೇಜಿಸಬಲ್ಲ ಅಥವಾ ನಾಶಗೊಳಿಸಬಲ್ಲ ಚಿಕ್ಕ ಚಿಕ್ಕ ಕೇಂದ್ರಗಳೂ ದೇಹದಲ್ಲಿವೆ. ಆ ನಿರ್ದಿಷ್ಟ ಭಾಗಗಳಲ್ಲಿ ಒತ್ತಡ ಹೇರುವುದರಿಂದ ಚಕ್ರಗಳಿಗೆ ಶಕ್ತಿ ಸಂಚಾರವಾಗುತ್ತದೆ ಇಲ್ಲವೇ, ಶಕ್ತಿಯ ಸಂಚಾರವೇ ನಿಂತು ವ್ಯಕ್ತಿಯೇ ಪ್ರಾಣ

ಬಿಡುತ್ತಾನೆ!" ಎಂದು ಆಚಾರ್ಯರು ಮರ್ಮದ ಬಗ್ಗೆ ಹೇಳಿದರು. ಮಾಂಸ ಮರ್ಮ, ಅಸ್ಥಿ ಮರ್ಮ, ಸ್ನಾಯು ಮರ್ಮ, ಸಂಧಿ ಮರ್ಮ, ಮತ್ತು ಶಿರ ಮರ್ಮಗಳೆಂದು ವಿಂಗಡಿಸಲಾದ ಈ ವಿವಿಧ ಕೇಂದ್ರಗಳ ಪರಿಚಯವನ್ನು ಆಚಾರ್ಯರು ನಮಗೆ ಮಾಡಿದರು. ಹಿಂದೆ "ರಾಜ್ಯ-ರಾಜ"ರಿದ್ದಾಗ ಹೇಗೆ ಯುದ್ಧಗಳಲ್ಲಿ ಮರ್ಮವಿದ್ಯೆಯನ್ನು ಉಪಯೋಗಿಸುತ್ತಿದ್ದರೆಂದು ಆಚಾರ್ಯರು ಹೇಳುತ್ತಿರಬೇಕಾದರೆ, ಸಾಕ್ಷಿ ನಮಗೆ ಈ ರಾಜ, ರಾಜ್ಯದ ಅರ್ಥಗಳನ್ನು ತಿಳಿಸಿದ. ನಾವು ಬೇರೆಯವರ ಮರ್ಮಕೇಂದ್ರಗಳಿಗೆ ಆಘಾತ ಮಾಡುವುದು ಹೇಗೆ, ನಮ್ಮ ಮರ್ಮಕೇಂದ್ರಗಳನ್ನು ಕಾಪಾಡಿಕೊಳ್ಳುವುದು ಹೇಗೆ ಎಂದು ಆಚಾರ್ಯರು ನಮಗೆ ಹಲವು ದಿನಗಳಲ್ಲಿ ಹೇಳಿಕೊಟ್ಟರು.

ಈ ರೀತಿಯಾಗಿ ನಮ್ಮ ದೇಹವೇ ಆಯುಧವಾಯಿತು. ಇನ್ನು ಅದರೊಂದಿಗೆ ದಂಡ, ಮರದ ಕತ್ತಿ ಮುಂತಾದವುಗಳಲ್ಲಿ ಅಭ್ಯಾಸ ಮಾಡುತ್ತಿದ್ದ ನಮ್ಮ ಮುಂದೆ ಆಚಾರ್ಯರು ಒಂದು ದಿನ ತಮ್ಮ ಪೆಟ್ಟಿಗೆಯೊಂದರಿಂದ ಒಂದು ಕತ್ತಿಯನ್ನು ತೆರೆದು ಮುಂದಿಟ್ಟರು. ಮೂವರಿಗೂ ಅದನ್ನು ಪ್ರಯೋಗಿಸುವ ಅವಕಾಶ ಕೊಟ್ಟರು. ಬೋಕ ಹಾಗೂ ನಾನು ತಕ್ಕ ಮಟ್ಟಿಗೇ ಅದನ್ನು ತಿರುಗಿಸಿದೆವು. ಆಚಾರ್ಯರ ಮುಖದಲ್ಲಿ ಮೆಚ್ಚುಗೆಯ ನಗೆ ಇತ್ತು. ಆದರೆ ಅದರಲ್ಲಿನ ನಾಗನ ಪ್ರಾವೀಣ್ಯತೆಯನ್ನು ಸಾಕ್ಷಿ ಕೂಡ ಬೆರಗಾಗಿ ನೋಡುತ್ತಿದ್ದ. ಆಚಾರ್ಯರು ಎದ್ದು ಬಂದು ನಾಗನನ್ನು ತಬ್ಬಿಕೊಂಡು ಆ ಕತ್ತಿಯನ್ನು ಅವನಿಗೇ ಕೊಟ್ಟುಬಿಟ್ಟರು.

ಬೋಕ ಹಾಗೂ ನಾನು ನಾಗನನ್ನು ತಬ್ಬಿಕೊಂಡು ಸಂತಸಪಟ್ಟೆವು. ಅವನ ತಂದೆಯಿದ್ದಿದ್ದರೆ ಎಷ್ಟು ಖುಷಿಯಾಗುತ್ತಿದ್ದರೋ ಎಂದು ನಾವು ಯೋಚಿಸುತ್ತಾ ದುಃಖವನ್ನು ನುಂಗಿಕೊಂಡೆವು. ಅಂದು ಸೂರ್ಯ ಮುಳುಗುವ ಮುನ್ನವೇ ನಮ್ಮ ತಂದೆ ತಾಯಿಯರು ಶಾಶ್ವತವಾಗಿ ಮಲಗಿದ್ದ ಸ್ಥಳಕ್ಕೆ ಹೋಗಿ ನಮಗನ್ನಿಸಿದ್ದನೆಲ್ಲಾ ಹೇಳಿದೆವು. ಅವರು ಕೇಳಿಸಿಕೊಳ್ಳುತ್ತಿರುವಂತೆ ಅಲ್ಲಿದ್ದ ಒಂದು ಹೆಮ್ಮರದಿಂದ ಎಲೆಗಳು ನಮ್ಮ ತಲೆಯ ಮೇಲೆ ಉದುರಿದವು.

ತಲೆಯ ಮೇಲಿನ ಎಲೆಗಳೊಂದಿಗೆ ಒಂದು ಬಾಣ "ಸ್ವಿಷ್" ಎಂದು ಬಂದು ಎದುರಿಗಿದ್ದ ಮಣ್ಣಿನ ಒಂದು ದಿಬ್ಬಕ್ಕೆ ತಗುಲಿತು. ನಾವೆಲ್ಲರೂ ಜಾಗೃತರಾದೆವು. ಆಚಾರ್ಯರ ದನಿಯು ತಲೆಯೊಳಗೆ ಮೊಳಗಿತು: "ಸತತ ಜಾಗೃತಿ!". ನಾಗನು ತನ್ನ ಹೊಸ ಕತ್ತಿಯನ್ನು ಬೆನ್ನ ಹಿಂದೆ ಅಡಗಿಸಿದ್ದ ಕತ್ತಿಯ ಕವಚದಿಂದ ಹೊರತೆಗೆದ. ಬೋಕನು ಅಲ್ಲೇ ಬಿದ್ದಿದ್ದ ಒಂದು ಮರದ ತುಂಡನ್ನು ಕೈಗೆತ್ತಿಕೊಂಡ. ನಾನು ಬರೀ ಕೈಯಲ್ಲಿ ನಿಂತಿದ್ದೆ. ಇನ್ನೊಂದು ಬಾಣವು ವಿಪರೀತವಾದ ವೇಗದಲ್ಲಿ ನಮ್ಮೆಡೆಗೆ ಬಂದಿತು. ನಾಗನು ತನ್ನ ಕತ್ತಿಯಲ್ಲಿ ಅದನ್ನು

ತುಂಡು ಮಾಡಿದನು. ಹತ್ತಿರದ ಒಂದು ಮರದಿಂದ ಯಾರೋ ಎಗರಿ ಓಡಿದಂತೆ ಆಯಿತು. ಹಂತಕನು ಅಲ್ಲೇ ಇರಬೇಕೆಂದು ಶಂಕಿಸಿ ಅಲ್ಲೇ ಓಡಬೇಕು ಎಂದುಕೊಳ್ಳುವಷ್ಟರಲ್ಲಿ, "ಲೋ, ಸತತ ಜಾಗೃತಿ!" ಎಂದನು ನಾಗ. ನಾನು ತಲೆಯಲ್ಲಾಡಿಸಿ ಇನ್ನೊಂದು ಕಡೆಗೆ ಓಡಿದೆ. ಒಟ್ಟಿಗೆ ಮೂವರೂ ಮೂರು ದಿಕ್ಕುಗಳಲ್ಲಿ ಓಡಿದೆವು. ನನ್ನ ಮುಂದೆಯೇ ಒಂದು ಕಪ್ಪು ಆಕೃತಿ ಚಲಿಸಿದಂತಾಯಿತು. ಅವನ ಮುಖವನ್ನು ಕಾಣದಂತೆ ಬಟ್ಟೆಯನ್ನು ಸುತ್ತಿಕೊಂಡಿದ್ದನು. ನಾನು ಸದ್ದು ಮಾಡದಂತೆ ಓಡಿದೆ. ಒಂದು ಮರದ ಮೇಲೆ ಹತ್ತಿ ನೋಡಿದೆ. ಅವನು ಓಡುತ್ತಿದ್ದ ದಾರಿ ಸ್ಪಷ್ಟವಾಗಿತ್ತು. ಇದು ಯಾಕೋ ಪರಿಚಿತದ ದಾರಿಯಂತೆಯೂ ಇತ್ತು. ಅವನ ಹೆಗಲಲ್ಲಿ ಏನೋ ಇರುವಂತೆಯೂ ಇತ್ತು. ನಾನು ಶಂಕಿಸಿದ ದಾರಿಯಲ್ಲಿಯೇ ಓಡಿದೆ. ಮರದ ಪೊಟರೆಯ ಬಳಿ ಯಾರೋ ಕುಳಿತಂತೆ ಇತ್ತು. ವೇಗವಾಗಿ ಓಡಿ, ಮರದ ಹಿಂಭಾಗದಿಂದ ರೆಂಬೆಯನ್ನು ಹಿಡಿದು ಮರದ ಮೇಲಕ್ಕೆ ಹೋದೆ. ಹಂತಕನೇ ಅಲ್ಲಿ ಕುಳಿತಿದ್ದ. ಅವನ ಹೆಗಲಲ್ಲಿ ಬಿಲ್ಲುಗಳಿಂದ ಕೂಡಿದ್ದ ಬತ್ತಳಿಕೆಯೂ, ಸುಂದರವಾದ ಒಂದು ಬಿಲ್ಲೂ ಇತ್ತು. ಹನುಮಾನ್ವಾಯಿ ಎಂದು ನಾನು ಯೋಚಿಸುತ್ತಾ, ಅವನ ಮೇಲಕ್ಕೆ ಎಗರಿದೆ. ಆಚಾರ್ಯರು ಹೇಳಿಕೊಟ್ಟಿದ್ದ ಮರ್ಮವಿದ್ಯೆಯು ಜ್ಞಾಪಕಕ್ಕೆ ಬಂದಿತು. ಅವನ ಜ್ಞಾನ ತಪ್ಪಿಸಿದೆ. ಅವನ ಬಿಲ್ಲೂ, ಬಾಣದ ಬತ್ತಳಿಕೆಯನ್ನು ನಾನು ಎತ್ತಿಕೊಂಡೆ. ಪಕ್ಕದಲ್ಲೇ ಅಪಾರ ವೇಗದಲ್ಲಿ ಇನ್ನೊಬ್ಬನು ಕಪ್ಪು ಬಟ್ಟೆಯಲ್ಲಿ ಓಡಿದ್ದು ಕಂಡಿತು. ನನ್ನ ಬಳಿ ಈಗ ಬಿಲ್ಲು-ಬಾಣಗಳಿದ್ದವು. ಗುರಿಯಿಟ್ಟು, ಅವನ ಮೇಲೆಯೇ ರೆಂಬೆಯೊಂದು ಬೀಳುವಂತೆ, ಅದು ಸಾಧ್ಯವಾಗದಿದ್ದರೆ ಅವನ ದಾರಿಗೆ ಅಡ್ಡಲಾಗುವಂತೆ ಒಂದು ಬಾಣವನ್ನು ಬಿಟ್ಟೆ. ಆದರೆ ಅವನು ಚತುರನಾಗಿದ್ದ. ಅವನು ತನ್ನ ಮೇಲೂ ಬೀಳದಂತೆ, ಬಿದ್ದ ತಕ್ಷಣ ದಾರಿಯನ್ನೇ ಬದಲಿಸಿ, ಓಡಿದ. ಈ ಬಾರಿ ನಾನು ಇನ್ನೂ ಹುಷಾರಾದೆ. ಇದ್ದ ಎರಡು ದಾರಿಗಳನ್ನು ರೆಂಬೆಗಳನ್ನು ಬೀಳಿಸಿ ಮುಚ್ಚಿಹಾಕಿದೆ. ಅವನು ಅಸಾಮಾನ್ಯ ಬಲದವನು. ಬರುತ್ತಿದ್ದ ಒಂದಕ್ಕಿಂತ ಒಂದು ಬಾಣಗಳಿಂದ ಅದ್ಭುತವಾಗಿ ತಪ್ಪಿಸಿಕೊಂಡನು. ಆಚಾರ್ಯರು ಹೇಳಿಕೊಟ್ಟಿದ್ದ "ರಥಸ್ಥೇನ ಗಜಸ್ಥೇನ" ನೆನಪಿಗೆ ಬಂದಿತು. ಅಷ್ಟೇ ಅಲ್ಲದೆ "ವಾಯೋರಪಿ ಬಲಂ ದೃಷ್ಟ್ವಾ ವಾಮದಕ್ಷಿಣವಾಹತಃ"[5] ನೆನಪಿಗೆ ಬಂದಿತು. "ಮೊದಲು ವಾಯುವಿನ ಬಲವನ್ನೂ ಅದು ದಕ್ಷಿಣೋತ್ತರಗಳಲ್ಲೇ ಬೀಸುತ್ತಿದೆ ಎಂಬುದನ್ನು ಖಚಿತಪಡಿಸಿಕೊಂಡು ಬಾಣವನ್ನು ಹೂಡು" ಎಂದು ಆಚಾರ್ಯರು ಸಾವಿರ ಬಾರಿ ಹೇಳಿದ್ದರು. ನಾನು ಸ್ಪಷ್ಟವಾಗಿ ದಿಕ್ಕುಗಳನ್ನು

5. ವಸಿಷ್ಠ ಧನುರ್ವೇದ ಸಂಹಿತಾ: 63

ಗುರುತಿಸದಿದ್ದರೂ ಬಾಣವು ನನಗೆ ಬೇಕಂತೆಯೇ ಹೋಗುತ್ತದೆ ಎಂಬ ಅಚಲ ವಿಶ್ವಾಸದೊಂದಿಗೆ ಅವನೊಂದಿಗೇ ಓಡುತ್ತಾ, ಬಾಣವನ್ನು ಹೂಡಿದೆ. "ಆ" ಎಂಬ ಕೂಗು ಕೇಳಿಸಿತು. ಜೊತೆಗೆ ಹಕ್ಕಿಯಂತಹ ಕೂಗು "ಕೂಹು ಕೂಹು ಕುಕುಕು". ಇದು ಕೇವಲ ನನಗೆ, ಬೋಕ ಹಾಗೂ ನಾಗನಿಗೆ ಗೊತ್ತಿದ್ದಿದ್ದ ರಹಸ್ಯ ಸಂದೇಶ. ಒಂದೇ ಕಡೆ ನಾವು ಸೇರಬೇಕೆಂಬುದಕ್ಕೆ ಇದು ಎಚ್ಚರದ ಕರೆಯಾಗಿತ್ತು. ನನಗೆ ಅವರ ಸ್ಥಳವು ಸ್ಪಷ್ಟವಾಗಿ ತಿಳಿಯಲಾಗದಿದ್ದ ಕಾರಣ, ಮರವನ್ನು ಹತ್ತಿ, "ಕೂಹು ಕೂಹು ಕುಕುಕೂ" ಎಂದು ಮತ್ತೊಮ್ಮೆ ಕೂಗಿದೆ. ಹಲವು ಮರಗಳಲ್ಲಿ ಒಂದು ಮರ ಅಲ್ಲಾಡಿದ್ದು ನನಗೆ ಕಂಡಿತು. ತಕ್ಷಣ ಇಳಿದು ಓಡಲಾರಂಭಿಸಿದೆ. ಅಲ್ಲಾಡಿದ ಮರದ ಸ್ಥಳ ನನ್ನ ಮನದಲ್ಲಿ ಅಚ್ಚೊತ್ತಿದಂತಿತ್ತು. ಮರವನ್ನು ಸಮೀಪಿಸುತ್ತಿದ್ದಂತೆ ನನಗೆ ಅಲ್ಲಿ ನಾಲ್ವರು ಇದ್ದದ್ದು ಕಂಡಿತು. ಇಬ್ಬರಂತೂ ನಾಗ ಬೋಕರು ಎಂದು ಗೊತ್ತು. ಇನ್ನಿಬ್ಬರಾರು ಎಂಬ ಭಯದಲ್ಲಿ ಮರವನ್ನು ಸಮೀಪಿಸುತ್ತಿದ್ದಂತೆ ಅಲ್ಲಿ ಬಿಳಿ ಬಟ್ಟೆಯಲ್ಲಿ ಕಂಗೊಳಿಸುತ್ತಿದ್ದ ಆಚಾರ್ಯರೂ, ಕಪ್ಪು ಬಟ್ಟೆಯಲ್ಲಿ ಬೆವರುತ್ತಿದ್ದ ಸಾಕ್ಷಿಯೂ ಕಂಡರು. ಪಕ್ಕದಲ್ಲೇ ಇನ್ನೊಂದು ಕಪ್ಪು ಬಟ್ಟೆಯು ಬಿದ್ದಿತ್ತು. ಅದಕ್ಕೆ ನಾನು ಹೂಡಿದ ಬಾಣವು ಸಿಕ್ಕಿಕೊಂಡಿತ್ತು. ಸಾಕ್ಷಿಯು ಸುಸ್ತಿನಲ್ಲಿ ಏದುಸಿರು ಬಿಡುತ್ತಾ, "ಏನ್ಗುರಿ ಕಾಳ ನಿಂದು! ಅಲ್ನೋಡು ಆಚಾರ್ಯರು ಬಟ್ಟೆಯ ಮೇಲೆ ಚರ್ಮದ ಕವಚ ಹಾಕಿಕೊಂಡಿದ್ದರಿಂದ ಅವರ ತೊಡೆ ಬದುಕಿಕೊಂಡಿತು. ಆಚಾರ್ಯರು ನನ್ನ ಬಳಿ ಬಂದು ಹೆಗಲ ಮೇಲೆ ಕೈ ಹಾಕಿದರು. ನನಗೆ ಹೆಮ್ಮೆ ಎಂದೆನಿಸುತ್ತಿದ್ದರೂ ಒಳಗೊಳಗೇ ನಗುತ್ತಾ ತಲೆ ಬಾಗಿಸಿದೆ. ಆಚಾರ್ಯರು, "ಬಿಲ್ಲು ಚೆನ್ನಾಗಿದೆ ಅಲ್ವೇನೊ?" ಎಂದರು. ಅಂತಹ ಅದ್ಭುತ ಬಿಲ್ಲನು ಸುಂದರ ಎನ್ನದೆ ಇನ್ನೇನು ಹೇಳಲಾದೀತು? "ಅದ್ಭುತವಾಗಿದೆ ಆಚಾರ್ಯರೆ" ಎನ್ನುತ್ತಾ ನಾನು ಬಿಲ್ಲಿನ ಹೆದೆಯನ್ನೊಮ್ಮೆ ಎಳೆದು ಬಿಟ್ಟೆ. ಅದು "ಠಂಗ್!" ಎಂದು ತರಂಗವನ್ನು ಉಂಟು ಮಾಡಿತು. ಆಚಾರ್ಯರು, "ಇದನ್ನು ನೀನೇ ಇಟ್ಟುಕೋ!" ಎಂದರು. ನನಗೆ ಜಲಪಾತದಲ್ಲಿ ಜಾರಿದಷ್ಟು ಖುಷಿಯಾಯಿತು. ತಕ್ಷಣ ಆಚಾರ್ಯರ ಪಾದವನ್ನು ಮುಟ್ಟಿ ನನ್ನ ಹಣೆಯನ್ನು ಮುಟ್ಟಿಕೊಂಡೆ. ನಾಗ, ಬೋಕರು ಬಂದು ನನ್ನ ಹೆಗಲಿಗೆ ಹೆಗಲು ಕೊಟ್ಟು ನಿಂತರು. ನಾಗನು ತನ್ನ ಕತ್ತಿಯನ್ನು ಬಲಗೈಯಲ್ಲಿ ಹಿಡಿದಿದ್ದನು. ಅವನ ಕೈಯ ನರಗಳ ಉಬ್ಬುವಿಕೆ ಕಾಣುತ್ತಿತ್ತು. ಆಶ್ಚರ್ಯವೆಂಬಂತೆ ಬೋಕನು ತನ್ನ ಸೊಂಟಕ್ಕೆ ಕಟ್ಟಿಕೊಂಡಿದ್ದ ಉದ್ದ ಉರುಮಿಯನ್ನು ತೆಗೆದು ಒಮ್ಮೆ ನೆಲಕ್ಕೆ ಬಡಿದ. "ಛಳ್!" ಎಂಬ ಅದರ ದನಿಯು ಮರದಲ್ಲಿದ್ದ ಪಕ್ಷಿಗಳನ್ನೆಲ್ಲಾ ಓಡಿಸಿಬಿಟ್ಟಿತು. "ಹಾ! ನನ್ನ ಸೈನ್ಯ!" ಎಂದರು ಆಚಾರ್ಯರು. ಮೂವರೂ ಆಚಾರ್ಯರ ಪಾದವನ್ನು ಸ್ಪರ್ಶಿಸಿದೆವು. ಸಾಕ್ಷಿಯು ನಮ್ಮನ್ನು ತಬ್ಬಿಕೊಂಡ. "ಬೆಳಗ್ಗೆ ನಿಮ್ಮ ನಿಮ್ಮ ಆಯುಧಗಳೊಂದಿಗೆ ಸಿದ್ಧರಾಗಿ!" ಎಂದನು ಸಾಕ್ಷಿ.

7

ಕಾಂತಾ

ಸಾಕ್ಷಿಯು ನಮ್ಮನ್ನು ಸಾಮಾನ್ಯ ಕಾಡಿನ ಓಟಕ್ಕೆ ಕರೆದುಕೊಂಡು ಹೋಗುವನೆಂದು ನಾವು ಭ್ರಮಿಸಿದ್ದೆವು. ಆದರೆ ನಮಗೆ ಸತ್ಯ ತಿಳಿದಿದ್ದು ನಂತರವೇ. ಮಾಮೂಲು ಓಟದ ದಾರಿಯನ್ನು ಬಿಟ್ಟು, ಸಾಕ್ಷಿ ನಮ್ಮನ್ನು ಬೇರೆ ಪಥದಲ್ಲಿ ಕರೆದುಕೊಂಡು ಹೋದನು. ಕಾಲುದಾರಿಯೂ ಕಾಣುತ್ತಿರಲಿಲ್ಲ. ಆದರೆ ಸಾಕ್ಷಿಗೆ ಈ ದಾರಿಯು ಬಹಳ ಪರಿಚಿತದಂತಿತ್ತು. ಸೂರ್ಯನು ನಿಧಾನವಾಗಿ ಮೇಲೇರಿದರೂ, ಮರಗಳ ಕೆಳಗೆ ಮಂದವಾದ ಬೆಳಕಿತ್ತಷ್ಟೆ ನಡೆಯುತ್ತಾ ನಡೆಯುತ್ತಾ, ಮರಗಳ ಆಕಾರದಲ್ಲಿನ ಬದಲಾವಣೆ, ಒಂದು ರೀತಿಯ ಬರಡುತನ ನಮ್ಮ ಗಮನಕ್ಕೆ ಬಂದಿತು. ಸೂರ್ಯನು ನೇರವಾಗಿ ನಮ್ಮ ನೆತ್ತಿಗೆ ಚುಚ್ಚುತ್ತಿದ್ದಂತಿತ್ತು. ಬಹಳಷ್ಟು ಮರಗಳು ಒಣಗಿ ಬಿದ್ದುಹೋಗಿದ್ದವು. ಒಣಗಿದ ಅವುಗಳ ಮೇಲ್ಪದರವು ಬಿಟ್ಟುಕೊಂಡು ಇಬ್ಭಾಗವಾಗಿತ್ತು. ಅದು ದೊಡ್ಡದೊಂದು ಹಾವು ಪೊರೆಬಿಟ್ಟು ಹೋದಂತೆ ಕಾಣುತ್ತಿತ್ತು. ಇವು ಸಾಮಾನ್ಯವಾಗಿ, ನೆಲದ ನೀರು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯದ ಮೇಲೆ ಅವಲಂಬಿತವಾಗಿರುತ್ತದೆ. ನಮ್ಮ ಕಡೆಯ ಕಾಡು ಎಷ್ಟು ಹಸಿರಾಗಿರುತ್ತದೆ! ಇಲ್ಲಿ ಗುಡ್ಡಗಳೂ ಅಲ್ಲಲ್ಲಿ ಕುಸಿದು ಹೋಗಿದ್ದವು. ಗಟ್ಟಿಯಾಗಿರ ಬೇಕಿದ್ದ ಮಣ್ಣು ಶಿಥಿಲವಾಗಿ ಉದುರಿಯೇ ಹೋಗಿತ್ತು! ಇವೆಲ್ಲವನ್ನೂ ಗಮನಿಸುತ್ತಿದ್ದ ನಮಗೆ ಅಲ್ಲಾಗುತ್ತಿದ್ದ ಸದ್ದುಗಳ ಅರಿವೇ ಆಗಲಿಲ್ಲ. ಸಾಕ್ಷಿಯು "ಸತತ ಜಾಗೃತಿ" ಎಂದಾಗ ನಮ್ಮ ಕಿವಿಗಳು ಚುರುಕಾದವು. ಹೌದು! ಅದು ಕೊಡಲಿಯ ಏಟಿನ ಶಬ್ದ! ಮರಗಳನ್ನು ಕಡಿಯುತ್ತಿದ್ದಾರೆ! ನಾಗನು ಕತ್ತಿಯನ್ನು ನಿಧಾನವಾಗಿ ತೆರೆದ. ಬೋಕನ ಕೈ ಅವನ ಸೊಂಟಕ್ಕೆ ಕಟ್ಟಿದ್ದ ಉರುಮಿಯ

ಬಳಿ ಹೋದದ್ದನ್ನು ನಾನು ಕಂಡೆ. ಹೆಗಲಿಗೆ ನೇತುಹಾಕಿಕೊಂಡಿದ್ದ ನನ್ನ ಬಿಲ್ಲನ್ನು ನಾನು ಕೈಯಲ್ಲಿ ಹಿಡಿದೆ. ನಾವು ಮೂವರೂ ಒಬ್ಬರನ್ನೊಬ್ಬರು ನೋಡಿಕೊಂಡೆವು. ನಯನಮಿಲನವಾಯಿತು. ಅವರು ಸಿದ್ಧವೆಂಬಂತೆ ಇಬ್ಬರ ಕಣ್ಣ ಸಂಜ್ಞೆ ಇತ್ತು. ಸಾಕ್ಷಿ ಮುನ್ನಡೆಯುತ್ತಿದ್ದಂತೆ, ನಾವು ಮೂವರೂ ಅವನ ಹಿಂದೆ ನಡೆಯತೊಡಗಿದೆವು. ಬರಡು ಬರಡಾಗಿದ್ದ ಭೂಮಿಯಿಂದ ಮತ್ತೆ ಕೊಂಚ ಕೊಂಚವೇ ಹಸಿರಾಗಿದ್ದ ಭೂಮಿಯ ಕಡೆಗೆ ನಡೆದೆವು. ಸಾಕ್ಷಿಯು ನಮ್ಮನ್ನು ನಿಶ್ಶಬ್ಧವಾಗಿಸಿ ನಿಧಾನವಾಗಿ ನಡೆದ. ದಟ್ಟ ಮರಗಳಿಂದ ಕೂಡಿದ ಪ್ರದೇಶ ಅದು. ಒಂದು ಮರದ ಹಿಂದೆ ಸಾಕ್ಷಿ ಅವಿತನು. ನಾವೂ ಅವನನ್ನು ಅನುಸರಿಸಿದೆವು. ಸುತ್ತಲೂ ಉದ್ದುದ್ದ ಮರಗಳು. ಮಧ್ಯದಲ್ಲಿ ಒಂದಷ್ಟು ಮನುಷ್ಯರು ಕೊಡಲಿ ಹಿಡಿದು ಒಂದೊಂದೇ ಮರವನ್ನು ಕಡಿಯುತ್ತಿದ್ದರು. ಇನ್ನೊಂದು ಕಡೆ, ಕಡಿದ ಮರಗಳ ತುಂಡುಗಳನ್ನು ಸಾಲಾಗಿ ಜೋಡಿಸಲಾಗಿತ್ತು. ಅದರ ಮೇಲೆ ಒಬ್ಬನು ಕುಳಿತಿದ್ದ. ತೋಳುಗಳನ್ನು ಮುಚ್ಚದ ಬಿಳಿ ಬಟ್ಟೆಯೊಂದನ್ನು ಧರಿಸಿದ್ದನು. ಹೆಗಲಿನಿಂದ ಸೊಂಟಕ್ಕೆ ಚಿಕ್ಕ ಬಂದೂಕನ್ನು ಸಿಕ್ಕಿಸಿಕೊಂಡಿದ್ದ. ಅದನ್ನು ನೋಡಿದ ತಕ್ಷಣ ನಮಗೆ ಸಾಕ್ಷಿ ಹೇಳಿದ್ದ ದಂತಕಥೆಯೇ ನೆನಪಿಗೆ ಬಂತು. ಸೊಂಟದಿಂದ ಕೆಳಕ್ಕೆ ವಿಚಿತ್ರವಾದ ಬಟ್ಟೆಯೊಂದನ್ನು ಧರಿಸಿದ್ದನು. ದಪ್ಪದಾದ ಬಟ್ಟೆ ಅದು. ಹಸಿರು ಬಣ್ಣ. ತೊಡೆಯಿಂದ ಮೀನಖಂಡಗಳ ತನಕ ಆ ಬಟ್ಟೆಗೆ ಚಿಕ್ಕಚಿಕ್ಕ ಚೀಲಗಳಿದ್ದವು. ಅವನ ತಲೆಯ ಮೇಲೆ ಹಾಗೂ ಮುಂದೆ ಕೂದಲಿರಲಿಲ್ಲ. ಆದರೆ ಹಿಂದೆ ಹಾಗೂ ಬಲ ಎಡಗಳಲ್ಲಿ ಹೇರಳವಾಗಿದ್ದವು. ಮರವನ್ನು ಕಡಿಯುವಾಗ ಬರುವ ಚಿಕ್ಕಚಿಕ್ಕ ಧೂಳಿನ ಕಣಗಳು ಆ ಕೂದಲಿನಲ್ಲಿರುವುದು ನಮ್ಮ ಗಮನಕ್ಕೆ ಬಂದಿತು. ಅವನ ಮೀಸೆಯು ತುಟಿಯ ಮೇಲೆ ಆರಂಭವಾಗಿ ಬಲ-ಎಡದ ಕೂದಲನ್ನು ಸೇರಿತ್ತು. ಅವನ ಕಣ್ಣಿನಲ್ಲಿ ರೋಷವು ಎದ್ದು ಕಾಣುತ್ತಿತ್ತು. ಅವನ ತೋಳುಗಳಂತೂ ನಮ್ಮ ಹನುಮನ ವಿಗ್ರಹಕ್ಕಿದ್ದ ಗಟ್ಟಿ ತೋಳುಗಳಂತಿದ್ದವು. ಅವನ ಬಲಶಾಲಿ ದೇಹವು ಆ ಬಿಳಿ ಬಣ್ಣದ ಬಟ್ಟೆಯ ನಡುವಿನಿಂದಲೇ ಕಾಣುತ್ತಿತ್ತು. ಅವನು ನಿಧಾನವಾಗಿ ಎದ್ದು ನಿಂತ. ಅವನ ಹಿಂಭಾಗಕ್ಕೆ ಮೆತ್ತಿಕೊಂಡಿದ್ದ ಧೂಳನ್ನು ಕೈಗಳಲ್ಲಿ ಉದುರಿಸಿದ. ನಿಧಾನವಾಗಿ ನಡೆಯುತ್ತಾ, ಸೊಂಟಕ್ಕೆ ಇದ್ದ ಒಂದು ಚೀಲದಿಂದ ಚಿಕ್ಕದೊಂದು ಮರದ ತುಂಡನ್ನು ಹೊರತೆಗೆದ. ಅದನ್ನು ಬಾಯಿಗಿಟ್ಟುಕೊಂಡ. ಅದು ಮರದ ತುಂಡೇ? ಬೋಕ ಬೆರಗುಗಣ್ಣಿನಲ್ಲಿ ನೋಡುತ್ತಾ, "ಕಾಗದ!" ಎಂದ. ಅದನ್ನು ಬಾಯಿಗಿಟ್ಟು ಕೊಂಡವನು ಮತ್ತೆ ಕಡ್ಡಿಯೊಂದನ್ನು ತೆಗೆದು, ಕಾಲಿಗೆ ಧರಿಸಿದ್ದ ಚರ್ಮದಂತಹ ಪಾದರಕ್ಷೆಗೆ ಉಜ್ಜಿದ. ಥಟ್ಟನೆ ಬೆಂಕಿ ಉದ್ಭವಿಸಿತು. ಕಡ್ಡಿಯಿಂದ, ಆ ಕಾಗದ

ತುಂಡಿಗೂ ಬೆಂಕಿ ತಗುಲಿಸಿದ. ಬೆಂಕಿ ಮುಟ್ಟಿಸಿ ಅದನ್ನು ಆರಿಸಿದ. ಅದರಿಂದ ಹೊಗೆ ಬರತೊಡಗಿತು. ಅವನು ಹೊಗೆಯನ್ನು ಒಳಕ್ಕೆಳೆದುಕೊಂಡು ಬಿಡುತ್ತಿರುವಂತೆ ಕಾಣುತ್ತಿತ್ತು. ನಾಗನು ನಿಟ್ಟುಸಿರು ಬಿಡುತ್ತಾ, "ಹವಾ ಟೈಗರ್" ಎಂದ. ನಾವೆಲ್ಲರೂ ಸಾಕ್ಷಿಯ ಕಡೆಗೆ ತಿರುಗಿದೆವು. ಅವನೂ ಆ ಮನುಷ್ಯನನ್ನೇ ನೋಡುತ್ತಿದ್ದ. ನಿಧಾನವಾಗಿ, ಹೌದು ಎಂಬಂತೆ ತಲೆಯಾಡಿಸಿದ. ಹವಾ ಟೈಗರ್ ಅವನೇ! ಇವನೇ ಹಿಂದೆ ಕಾಂತಾ ಆಗಿದ್ದವನು! ಬೋಕನು, "ಲೋ! ಅಂಗೈ ನೋಡ್ರೋ!" ಎಂದ. ಅವನ ಅಂಗೈನ ಮೇಲೆ ಆ ವಿಚಿತ್ರ ಕತ್ತಿಯ ಚಿಹ್ನೆ ಇತ್ತು. ಸಾಕ್ಷಿ "ನನ್ನ ಜೊತೆ ಬನ್ನಿ" ಎಂದು ಪಿಸುಗುಟ್ಟುತ್ತಾ, ಆ ದಟ್ಟ ಮರಗಳ ಭಾಗವನ್ನು ಸುತ್ತುವರೆದು ಕರೆದುಕೊಂಡ ಹೋಗತೊಡಗಿದ. ನೋಡುನೋಡುತ್ತಿದ್ದಂತೆ, ಸಾಕ್ಷಿ ಒಂದು ಮರವನ್ನು ಹತ್ತಿದ. ನಮ್ಮನ್ನು ಕೆಳಗೇ ಕಾವಲಿರುವಂತೆ ಸೂಚಿಸಿ ಸಿಂಗಳೀಕ ಒಂದರಂತೆ ಕೂಗತೊಡಗಿದ. ಎಂಜಲನ್ನು ಬಾಯಲ್ಲೇ ಇಟ್ಟುಕೊಂಡು "ಗರ್ರ್" ಎಂಬ ಸದ್ದನ್ನು ಥೇಟ್ ಸಿಂಗಳೀಕದಂತೆ ಮಾಡಿದ. ಆದರೆ ಯಾವುದೇ ಪ್ರತಿಕ್ರಿಯೆ ಇರಲಿಲ್ಲ. ನಾವು ಸಾಕ್ಷಿಯನ್ನು ಕುತೂಹಲದಿಂದ ನೋಡುತ್ತಲೇ ಇದ್ದೆವು. ಅವನು ಈಗ ಪಕ್ಷಿಯಂತೆ "ಕುಹೂ ಕುಹೂ ಕುಕುಕೂ!" ಎಂದು ಕೂಗಿದ. ಎರಡೇ ಕ್ಷಣಗಳಲ್ಲಿ, "ಕುಹೂ ಕುಹೂ ಕುಕುಕೂ!" ಎಂಬ ಅದೇ ಕೂಗು ನಮಗೆ ಕೇಳಿಸಿತು. ಸಾಕ್ಷಿ ಈಗ ಸಿಂಗಳೀಕದಂತೆ ಕೂಗಿ, ನೇರವಾಗಿ ಕೆಳಗಿಳಿದುಬಿಟ್ಟ. ನಾವು ಅವನನ್ನೇ ಸಂಶಯದಲ್ಲಿ ನೋಡುತ್ತಿದ್ದೆವು. ಅಷ್ಟರಲ್ಲಿ ನಮಗೆ ಹೆಜ್ಜೆಯ ಸಪ್ಪಳ ಕೇಳಿಸಿತು. ನಮ್ಮ ಆಯುಧ ಗಳನ್ನು ಸಿದ್ಧವಾಗಿಟ್ಟುಕೊಂಡೆವು. ಒಣ ಎಲೆಗಳು ಯಾರದ್ದೋ ಹೆಜ್ಜೆಗೆ ಸದ್ದು ಮಾಡುತ್ತಲೇ ಇದ್ದವು. ಎದುರಿನಲ್ಲೇ ನಮಗೊಂದು ಆಕಾರ ಕಂಡಿತು. ಅದು ಯಾರದ್ದೋ ಅಲ್ಲ! ನಮ್ಮೆಡೆಗೇ ನಡೆಯುತ್ತಿತ್ತು ಅದು. ನಾವು ಕನಸಿನಲ್ಲೂ ಕಲ್ಪಿಸಿಕೊಳ್ಳಲಾರದಂತಹ ಸಂದರ್ಭ! ನಮ್ಮೆಡೆಗೆ ನಡೆದು ಬರುತ್ತಿದ್ದವನು ಅವನೇ! ಹವಾ ಟೈಗರ್!

ನಾನು ಬಾಣವೊಂದನ್ನು ತೆಗೆದು ಬಿಲ್ಲನ್ನು ಸಿದ್ಧವಾಗಿಟ್ಟುಕೊಂಡೆ. ಅಷ್ಟರಲ್ಲಿ ಸಾಕ್ಷಿಯು ನಮ್ಮನ್ನು ತಡೆದು, "ಏಯ್! ಸ್ವಲ್ಪ ತಡೀರೋ! ಹವಾ ಟೈಗರ್ ಏನೂ ಮಾಡೋದಿಲ್ಲ. ಅವನು ನನ್ನ ಸ್ನೇಹಿತ!" ಎಂದನು. ನಾವು ಮೂವರೂ ಒಟ್ಟಿಗೆ "ಹಾಂ!?" ಎಂದು ಉದ್ಗರಿಸಿದೆವು.

2

ಹವಾ ಟೈಗರ್ ಬಂದೇ ಬಿಟ್ಟ. ಅವನ ಮುಖದ ಮೇಲಿದ್ದ ಕ್ರೋಧದ ಭಾವನೆ ಮಾಯವಾಗಿ ನಗುವೊಂದಿತ್ತು. ಆ ನಗುವೂ ಎಷ್ಟು ಸುಂದರವಾಗಿತ್ತು. ಎಂಥವರನ್ನೂ ಮೋಡಿ ಮಾಡುವಂಥದ್ದು. ಆಗಲೇ ದ್ರೋಹಿಯಂತೆ, ಕಾಡನ್ನು

ಕೊಲೆ ಮಾಡುವವನಂತೆ ಕಂಡವನು, ಈಗ ವೀರನಂತೆ ಕಾಣುತ್ತಿದ್ದ! ನಾನು ಎಚ್ಚೆತ್ತು ಅವನನ್ನೇ ನೋಡುತ್ತಿದ್ದೆ. ಹವಾ ಟೈಗರ್ ನಮ್ಮನ್ನೇ ನೋಡುತ್ತಾ, "ಏನಪ್ಪಾ ಸಾಕ್ಷಿ, ಇವರೇನಾ ನೀನು ಹೇಳಿದ ಆಯುಧಗಳು?" ಎಂದು ಸಾಕ್ಷಿಯನ್ನು ಕೇಳಿದನು. ಸಾಕ್ಷಿಯು ಹವಾ ಟೈಗರ್‌ನ ಹೆಗಲ ಮೇಲೆ ಕೈ ಹಾಕುತ್ತಾ, "ಇವರೇ ಕಣೋ ಕಾಂತಾ. ಪಾಪ ನಿನ್ನನ್ನ ನೋಡಿದರೆ ಇವರಿಗೆ ವಿಪರೀತ ಭಯ. ಜೊತೆಗೆ ನೀನು ಕಾಡನ್ನು ಹಾಳು ಮಾಡುತ್ತಿದ್ದೀಯ ಎಂಬ ಕೋಪ ಬೇರೆ. ಇವರಿಗೆ ನಿಜವನ್ನ ಹೇಳುವ ಸಮಯ ಬಂದಿದೆ." ಎಂದನು. ಹವಾ ಟೈಗರ್ ಅಲ್ಲೇ ಇದ್ದ ಒಂದು ಹೆಬ್ಬಂಡೆಯ ಮೇಲೆ ಕುಳಿತು, ಪಕ್ಕದಲ್ಲಿ ಕೂರುವಂತೆ ಸನ್ನೆ ಮಾಡಿದನು. ನಾವೂ ಅವನ ಪಕ್ಕದಲ್ಲಿ ಕುಳಿತೆವು. ಹವಾ ಟೈಗರ್ ಆರಂಭಿಸಿದನು–

"ಭಾರತ ಎನ್ನುವ ನಮ್ಮ ದೇಶವು ಎಷ್ಟು ದೊಡ್ಡದು ಗೊತ್ತಾ?

ರತ್ನಾಕರಧೌತಪದಾಂ ಹಿಮಾಲಯ ಕಿರೀಟಿನೀಮ್

ಬ್ರಹ್ಮರಾಜರ್ಷಿರತ್ನಾಢ್ಯಾಂ ವಂದೇ ಭಾರತಮಾತರಮ್!"

ಸಮುದ್ರರಾಜನಿಂದ ಪಾದ ತೊಳೆಸಿಕೊಂಡು, ಹಿಮಾಲಯವೆಂಬ ಕಿರೀಟವನ್ನು ಧರಿಸಿಕೊಂಡು, ಉತ್ತಮೋತ್ತಮರಾದ ಅಸಂಖ್ಯ ಬ್ರಹ್ಮರ್ಷಿ, ರಾಜರ್ಷಿ ರತ್ನಗಳಿಂದ ಅಲಂಕೃತಳಾಗಿರುವ ಭಾರತಮಾತೆಗೆ ನಮಸ್ಕಾರಗಳು. ಇದು ಏಕಾತ್ಮತಾ ಸ್ತೋತ್ರದ ಒಂದು ಭಾಗ. ಏಕ ಆತ್ಮ! ಎಂತಹ ಶಬ್ದ ನೋಡಿ ಹುಡುಗರೇ! ಈ ಭಾರತವು ಅಖಂಡವಾಗಿರಬೇಕು!"

ತಕ್ಷಣ ಬೋಕನು, "ಅಖಂಡ ಅಂದ್ರೆ!?" ಎಂದು ಕೇಳಿದ.

ಹವಾ ಟೈಗರ್ ಬೋಕನ ಕಡೆ ತಿರುಗಿ, "ನಿಮಗೆ ಹೇಳಿದರೆ ಅರ್ಥವಾಗೋದಿಲ್ಲ. ಎಲ್ಲಿ, ಒಂದು ಆಟ ಆಡೋಣ ಬನ್ನಿ!" ಎಂದ. ನಾವು ಮೂವರೂ ಎದ್ದೆವು. ಹವಾ ಟೈಗರ್ ಗಂಟಲು ಸರಿ ಮಾಡಿಕೊಳ್ಳುತ್ತಾ, "ನೀವು ನನ್ನನ್ನ ಕಾಂತಾ ಅಂತಲೇ ಕರೀಬಹುದು. ನಾನು ನಿಮಗೆ ಸಾಕ್ಷಿಯ ತರಹ ಅಷ್ಟೆ. ಹವಾ ಟೈಗರ್‌ನ ಕಥೆಯನ್ನ ನಿಮಗೆ ಆಮೇಲೆ ಹೇಳ್ತೇನೆ." ಎಂದ. ನಾವು ತಲೆಯಲ್ಲಾಡಿಸಿದೆವು. ನಂತರ ಕಾಂತಾ (ಇವನನ್ನ ಹೀಗೇ ಕರೆಯೋಣ) ಸಾಕ್ಷಿಯನ್ನ ಕರೆದು, ಅವನ ಕಿವಿಯಲ್ಲಿ ಏನೋ ಪಿಸುಗುಟ್ಟಿದ. ಸಾಕ್ಷಿಯು ನಸುನಗುತ್ತಾ ಸರಿ ಎನ್ನುವಂತೆ ತಲೆ ಅಲ್ಲಾಡಿಸಿದ. ನಂತರ ನಾಗನನ್ನ ಕರೆದ. ನಾಗ ತನ್ನ ಕತ್ತಿಯನ್ನ ಸಿದ್ಧಪಡಿಸಿಕೊಂಡು ಕಾಂತಾನ ಬಳಿಗೆ ಹೋದ. ಕಾಂತಾ ನಾಗನ ಕಿವಿಯಲ್ಲಿ ಏನೋ ಪಿಸುಗುಟ್ಟಿದ. ನಾಗನ ಕೋಪಗೊಂಡವನಂತೆ ಕಾಂತಾನ ಕಿವಿಯಲ್ಲಿ ಏನೋ ಹೇಳಿದ. ಕಾಂತಾ ಮತ್ತೆ ಏನೋ ಹೇಳಿದ ತಕ್ಷಣ ನಾಗನು ಕುಪಿತಗೊಂಡ ತನ್ನ ಕತ್ತಿಯನ್ನು ಹೊರ ತೆಗೆದು ದಟ್ಟ ಮರಗಳ ನಡುವೆ ಮಾಯವಾದ. ನಂತರ ಅವನು ಬೋಕನನ್ನು ಕರೆದ. ನಾಗನೊಂದಿಗೆ ಏನೇನು

ಮಾಡಿದನೋ, ಕಾಂತಾ ಬೋಕನೊಂದಿಗೆ ಅದನ್ನೇ ಮಾಡಿದನು. ಆದರೆ ಬೋಕನ ಪ್ರತಿಕ್ರಿಯೆ ವಿಚಿತ್ರವಾಗಿತ್ತು. ಅವನು ನಾಗನು ಹೋದ ದಿಕ್ಕಿನಲ್ಲಿ ಓಡುತ್ತಾ ಹೊರಟ. ನನಗೆ ಆಶ್ಚರ್ಯವಾಯಿತು. ಈಗ ತಿಳಿಯುತ್ತದೆ ಎಂದು ನಾನು ಕಾಂತಾನ ಬಳಿ ಹೋದೆ. ಅವನು ನನ್ನ ಕಿವಿಯ ಬಳಿಗೆ ಬಂದ. ಅವನ ಮೀಸೆಯು ನನಗೆ ಕಚಗುಳಿ ನೀಡುತ್ತಿತ್ತು. ಆದರೂ ಕೇಳಿಸಿಕೊಳ್ಳತೊಡಗಿದೆ. "ನೋಡು, ನಾನು ಅವರಿಬ್ಬರನ್ನ ಏನು ಕೇಳಿದೆ ಗೊತ್ತಾ?" ಎಂದನು. ನಾನು 'ಏನು?' ಎನ್ನುವಂತೆ ಅವನ ಕಣ್ಣುಗಳನ್ನ ನೋಡಿದೆ. "ನಿನ್ನ ಬಗ್ಗೆ ಅವರಿಗೆ ಏನು ಅನ್ನಿಸುತ್ತದೋ ಪ್ರಾಮಾಣಿಕವಾಗಿ ಹೇಳಿ ಎಂದೆ" ಎಂದನು ಕಾಂತಾ. ನಾನು ಕುತೂಹಲದಿಂದ, "ಏನು ಹೇಳಿದರು?" ಎಂದು ಮತ್ತೆ ಕೇಳಿದೆ. "ನಿನಗೆ ಭಾರಿ ಅಹಂಕಾರ ಅಂತೆ. ನಿನಗೆ ಬಿಲ್ಲು ಸರಿಯಾಗಿ ಹಿಡಿದುಕೊಳ್ಳಲು ಬಾರದಿದ್ದರೂ ತುಂಬಾ ಬೀಗುತ್ತೀಯಂತೆ. ನೀನು ಇದುವರೆಗೂ ಬಿಟ್ಟ ಬಾಣಗಳು ಗುರಿಗೆ ಹತ್ತಿರ ಹೋಗಿ ಚುಚ್ಚಿದ್ದು ಅದೃಷ್ಟವಂತೆ. ಅಷ್ಟೇ ಅಲ್ಲ, ಬೋಕ ಏನಂದ ಗೊತ್ತಾ? ಅವನ ಉರುಮಿಯ ಮುಂದೆ ನೀನು ಎರಡು ಕ್ಷಣ ಉಳಿಯುವುದಿಲ್ಲವಂತೆ. ನಾಗನಂತೂ, ಬೋಕನು ಒಬ್ಬ ದೊಡ್ಡ ತಿಂಡಿಪೋತ, ಅವನ ಹೊಟ್ಟೆ ನೋಡಿದ್ದೀರಾ? ಆ ಕಾಳ ಅಂತೂ ಅಬ್ಬಬ್ಬಾ! ಏನೂ ಬರದಿದ್ದರೂ ಏಗರಾಡ್ತಾನೆ ಅಂತೆಲ್ಲಾ ಹೀಯಾಳಿಸಿದ" ಎಂದನು ಕಾಂತಾ. ನನಗೆ ಹೊಟ್ಟೆಯೊಳಗೆ ಯಾರೋ ಕೈ ಹಾಕಿ ತಿರುಚಿದಂತಾಯಿತು. ಕಣ್ಣು ಕೆಂಪಗಾಯಿತು. "ಸುಳ್ಳು! ಸುಳ್ಳು! ನೀನು ಸುಳ್ಳು ಹೇಳ್ತಿದ್ದೀಯಾ!" ಎಂದು ಪಿಸುಗುಟ್ಟಿದೆ. ಕಾಂತಾನ ಕಣ್ಣು ನನ್ನ ಮನಸೊಳಕ್ಕೆ ಹೊಕ್ಕಿ ತಾನು ಹೇಳಿದ್ದು ಸತ್ಯ ಎಂದು ನಂಬಿಸುವಂತಿತ್ತು. ನನ್ನ ಕಣ್ಣುಗಳು ಅವನ ತೀಕ್ಷ್ಣ ನೋಟಕ್ಕೆ ದಾರಿ ಮಾಡಿಕೊಟ್ಟುಬಿಟ್ಟವು. ಅವನು ಬಿಡಲಿಲ್ಲ, ಮತ್ತೆ ಹೇಳಿದ, "ಅವನಿಗೆ ಧೈರ್ಯ ಇದ್ದರೆ, ನನ್ನ ಕತ್ತಿಯನ್ನ ಎದುರಿಸಲಿ ಅಂತ ಹೇಳಿ ಹೋದ ನಾಗ. ಬೋಕನೂ ಅವನ ಹಿಂದೆಯೇ ಹೋದ!" ನನಗೆ ಎಲ್ಲಾ ಭಾವನೆಗಳೂ ಒಳಗಿನಿಂದ ರಭಸವಾಗಿ ಬರತೊಡಗಿದವು. ಕೆಂಪಗಾದ ಕಣ್ಣಿನಲ್ಲಿ ಈಗ ನೀರು ಬೇರೆ ಸುರಿಯುತ್ತಿತ್ತು. ನನ್ನ ಬಿಲ್ಲು ಬಾಣಗಳನ್ನೆತ್ತಿಕೊಂಡು "ಏನ್ಮಾಡ್ತಾನೋ ನೋಡ್ತೀನಿ!" ಎಂದು ಯೋಚಿಸುತ್ತಾ, ಆ ದಟ್ಟ ಮರಗಳ ನಡುವೆ ಓಡಿದೆ. ಒಣ ಎಲೆಗಳು ಚದುರಿಹೋಗುತ್ತಿದ್ದ ಸದ್ದು ಕೇಳಿಸಿತು. ಎರಡು ಪ್ರಾಣಿಗಳು ಹೋರಾಡುವಾಗ ಕೇಳಿಸುವಂತಹ ಸದ್ದು ಅದು. ಅದೇ ಸದ್ದಿನ ಜಾಡು ಹಿಡಿದು ನಾನು ನಿಧಾನವಾಗಿ ನಡೆಯತೊಡಗಿದೆ. ಒಂದು ಕಡೆ ಒಣಎಲೆಗಳೆಲ್ಲಾ ಪಕ್ಕಕ್ಕೆ ಸರಿದುಹೋದಂತೆ ಕಂಡು, ಅಲ್ಲಿಂದ ಮುಂದಕ್ಕೆ ಬರಿಯ ಧೂಳಿತ್ತು. ಆ ಧೂಳಿನಲ್ಲಿ "ಛಳ್!" "ಢಣಾರ್" ಮುಂತಾದ ಶಬ್ದಗಳು ಕೇಳಿದವು. ಎರಡು ಕತ್ತಿಗಳು ಒಂದಕ್ಕೊಂದು ತಗುಲಿದಾಗ ಉಂಟಾಗುವ ಶಬ್ದವದು. ನನಗೆ ತಕ್ಷಣ

ಅರಿವಾಯಿತು. ಬೋಕ ನಾಗರು ಆಯುಧಗಳನ್ನು ಹೊರತೆಗೆದಿದ್ದರು! ಇದಲ್ಲದೆ ನನ್ನನ್ನೂ ಛೇಡಿಸಿದರಲ್ಲವೆ! ಹೊಟ್ಟೆಯಲ್ಲಿ ಇಷ್ಟು ವಿಷ ಇಟ್ಟುಕೊಂಡು ಏನು ಸ್ನೇಹ ತೋರುತ್ತಿದ್ದರು! ಥೂ! ನಾನು ಒಂದು ಬಾಣವನ್ನು ಹೊರತೆಗೆದೆ. ಅಲ್ಲೇ ಇದ್ದ ವಿಸ್ತೃತವಾದ ಒಂದು ಆಲದ ಮರದ ರೆಂಬೆಯ ಮೇಲೆ ಹತ್ತಿ, ಬೋಕನ ಕೈಯ ಹಿಡಿತಕ್ಕೆ ಗುರಿಯಿಟ್ಟು ಬಾಣವನ್ನು ಹೂಡಿದೆ. ರೆಂಬೆಯಿಂದ ಎಗರಿದಾಗ ಬಿಲ್ಲಿನಿಂದ ಬಾಣವನ್ನು ಬಿಟ್ಟೆ. ಆ ಬಿಲ್ಲು ನೇರವಾಗಿ ಹೋಗಿ ನಾಗನ ಕತ್ತಿಯನ್ನು ಎದುರಿಸುತ್ತಿದ್ದ ಉರುಮಿಗೆ ತಗುಲಿತು. "ಠಣ್!" ಎಂಬ ಸದ್ದಿನೊಂದಿಗೆ ಉರುಮಿಯಲ್ಲಿ ಆ ಬಾಣವು ಸಿಕ್ಕಿಕೊಂಡಿತು. ನಾಗನ ಕತ್ತಿಯ ಏಟಿನೊಂದಿಗೆ ಅ ಬಾಣವು ಎರಡು ಭಾಗವಾಯಿತು. ನಂತರ ಅವನು ಕತ್ತಿಯನ್ನು ಕೆಳಕ್ಕಿಳಿಸಿ, "ಬಂದ ನೋಡಪ್ಪ, ಭೂಪ, ಆಹಾಹಾ ಬಿಟ್ಟ ಬಾಣ ನೋಡು–ಕೈಗೆ ಚುಚ್ಚುವ ಬದಲು, ಉರುಮಿಯನ್ನ ಚುಚ್ಚಿತು!" ಎಂದು ನಕ್ಕುಬಿಟ್ಟ. ಬೋಕನು, "ನೀನು ಬಾಯಿ ಮುಚ್ಚು, ಅಹಂಕಾರದ ಸಿಂಗಳೀಕ!" ಎನ್ನುತ್ತಾ ಉರುಮಿಯನ್ನು ನಾಗನ ಮುಂದಿದ್ದ ನೆಲಕ್ಕೆ ಜೋರಾಗಿ ಅಪ್ಪಳಿಸಿದ. ಅದು ಇನ್ನಷ್ಟು ಧೂಳನ್ನೆಬ್ಬಿಸಿತು. ನಾನು, "ಯಾಕೋ ಬೋಕ, ಅವನು ಕಾಲು ಕಾಣ್ಲಿಲ್ವಾ? ಹೊಟ್ಟೆ ಅಡ್ಡ ಆಯ್ತೇನೋ!" ಎಂದೆ. ಅವನು ಉರುಮಿಯನ್ನು ಬಿಸಾಡಿ, ಬರೀ ಕೈಗಳಲ್ಲಿ ನನ್ನ ಮೇಲೆ ಬಂದು ಬಿದ್ದ. ನಾಗನು, ತಾನು ಹೊರತಲ್ಲ ಎನ್ನುವಂತೆ ಬಂದು ಮುಷ್ಟಿಯಲ್ಲಿ ನನ್ನನ್ನೂ ಬೋಕನನ್ನೂ ಗುದ್ದತೊಡಗಿದ. ನಾನು, "ಏನ್ರೋ! ನನಗೆ ಅಹಂಕಾರಾನ? ನನಗೆ ಬಾಣ ಹೂಡೋದಿಕ್ಕೆ ಬರಲ್ವಾ? ಲೇ ನಾಗ! ನಿನಗಿಲ್ವೇನೋ ಅಹಂಕಾರ!?" ಎಂದು ಕೇಳಿ, ಬೆನ್ನಿಗೆ ಒಮ್ಮೆ ಗುದ್ದಿದೆ. ಮೂವರೂ ಮಣ್ಣ ಮೇಲೆ ಬಿದ್ದು ಒದ್ದಾಡುತ್ತಿದ್ದೆವು. ಇದ್ದಕ್ಕಿದ್ದ ಹಾಗೆ ನಮ್ಮ ಮೇಲೆ ಯಾರೋ ಮಣ್ಣನ್ನು ಎಸೆದರು. ಮೂವರ ಕಣ್ಣುಗಳಲ್ಲೂ ಮಣ್ಣು ಬಿದ್ದು, ಕಿರುಚಾಡತೊಡಗಿದೆವು. ಬಲಿಷ್ಠ ಕೈಯೊಂದು ನನ್ನನ್ನು ಹಿಡಿದೆತ್ತಿ ಎಳೆದೊಯ್ಯು ತ್ತಿರುವಂತೆ ಭಾಸವಾಯಿತು. ಇದ್ದಕ್ಕಿದ್ದ ಹಾಗೆ ನನ್ನನ್ನು ನೀರಿನಲ್ಲಿ ಮುಳುಗಿಸಿದರು. ನಾನು ಎಚ್ಚರಗೊಂಡು ಕೈಕಾಲುಗಳನ್ನು ಆಡಿಸತೊಡಗಿದೆ. ನನ್ನ ಕಣ್ಣುಗಳ ಉರಿ ಕಡಿಮೆಯಾಗತೊಡಗಿತು. ಈಜುತ್ತಾ ಮೇಲಕ್ಕೆ ಬಂದೆ. ಹೊಳೆಯ ದಡದಲ್ಲಿ ಸಾಕ್ಷಿ ನಿಂತಿದ್ದ. ನಾನು ಅವನ ಬಳಿ ಓಡಿ ಹೋದೆ. ಅವನ ಹತ್ತಿರ ಹೋದಂತೆಯೇ ಅವನು ನನ್ನನ್ನು ದೂರ ನೂಕಿ, "ನಾನು ನಿಮಗೆ ಸಹಾಯ ಮಾಡುವೆನೆಂದುಕೊಂಡೆಯಾ? ಆಚಾರ್ಯನನ್ನ ಕೊಲ್ಲಕ್ಕೆ ಬಂದವನು!" ಎನ್ನುತ್ತಾ ಓಡಿ ಹೋದ. ನನಗೆ ರೋಷ ಉಕ್ಕಿ ಬಂದಿತು. ಸಾಕ್ಷಿಯ ಮೇಲೆ ಸಂದೇಹ ಇದ್ದೇ ಇತ್ತು ಎಂದುಕೊಳ್ಳುತ್ತಾ, ಅಲ್ಲೇ ಇದ್ದ ಕಲ್ಲೊಂದನ್ನು ಎತ್ತಿಕೊಂಡು ಓಡತೊಡಗಿದೆ. ಒಂದಷ್ಟು ದೂರದಲ್ಲಿ ಸಾಕ್ಷಿ ನಿಂತುಕೊಂಡ. ನಸುನಗುತ್ತಾ "ನಾಗ,

ಬೋಕರು ನಿನ್ನ ಬಗ್ಗೇ ಏನೂ ಹೇಳಿಲ್ಲ! ಎಲ್ಲಾ ನಾನೇ ಹೇಳಿದ್ದು, ನೀವು ಹೊಡೆದಾಡಿಕೊಂಡು ಸಾಯಲಿ ಅಂತ!" ಎಂದನು. ನಾನು ತಕ್ಷಣ, "ನಾಗ! ಬೋಕ! ಬನ್ರೋ, ಈ ಸಾಕ್ಷಿ ಕಥೆಯನ್ನ ಮುಗಿಸಿ ಇವನ ದೇಹವನ್ನ ತೋಳಗಳಿಗೆ ಹಾಕೋಣ!" ಎಂದೆ. ಎಲ್ಲೋ ಇದ್ದ ನಾಗ ಬೋಕರಿಗೆ ಸಾಕ್ಷಿಯ ದನಿ ಕೇಳಿ, ಅವನು ಹೇಳಿದ ಸತ್ಯವೂ ಕೇಳಿಸಿತು. ಮೂವರೂ ಅವನನ್ನು ಬೇಟೆಯಾಡತೊಡಗಿದೆವು. ಸಿಕ್ಕ ಕಲ್ಲುಗಳನ್ನು ಅವನ ಬೆನ್ನಿಗೆ ಸರಿಯಾಗಿ ಎಸೆದಾಗ, ಅವನು ಸರಿಯಾಗಿ ತಪ್ಪಿಸಿಕೊಳ್ಳುತ್ತಿದ್ದ. ನಾಗ ಬೋಕನನ್ನು ನೋಡಿ, "ಸತತ ಜಾಗೃತಿ" ಎಂದ. ಬೋಕ, ನನ್ನನ್ನು ನೋಡಿ ತಲೆಯಲ್ಲಾಡಿಸಿದ. ಮೂವರೂ ಓಡುವುದನ್ನು ನಿಲ್ಲಿಸಿ, ಸದ್ದು ಮಾಡದೆ ದಿಕ್ಕನ್ನು ಬದಲಾಯಿಸಿದೆವು. ಬೋಕನು ಆಲದ ಮರದಲ್ಲಿ ನೇತಾಡುತ್ತಿದ್ದ ಉದ್ದದಾದ, ಸಣ್ಣದಾದ ಒಂದು ಬೇರನ್ನು ಕಿತ್ತುಕೊಂಡು ಮರದಿಂದ ಮರಕ್ಕೆ ವಾನರನಂತೆ ಎಗರುತ್ತಾ, ಸಾಕ್ಷಿಯು ಬರಬಹುದು ಎನ್ನುವಂತಹ ಸ್ಥಳದಲ್ಲಿ ನನಗೆ ಸಿಕ್ಕಿದ. ಆ ಬೇರಿನ ಒಂದು ಕೊನೆಯನ್ನು ನನಗೆ ನೀಡಿದ. ಸಾಕ್ಷಿಯು ಓಡಿ ಬರುವ ಸದ್ದು ಕೇಳಿಸಿತು. ಅವನ ಹಿಂದೆ ನಾಗನೂ ಕಂಡನು. ಬೋಕನು ಸನ್ನೆ ಮಾಡಿದನು. ನಾವು ಒಟ್ಟಿಗೆ ಆ ಬೇರನ್ನು ಮೇಲಕ್ಕೆತ್ತಿದೆವು. ತನ್ನ ಗಮನವೆಲ್ಲಾ ನಾಗನ ಮೇಲೆ ಇದ್ದುದರಿಂದ ಸಾಕ್ಷಿಗೆ ಈ ಬೇರು ಕಾಣಲಿಲ್ಲ, ಸರಿಯಾಗಿ ಅವನ ಎದೆಗೆ ತಗುಲಿ ಅವನು ಕೆಳಕ್ಕೆ ಬಿದ್ದ. ನಾಗನು ಆ ಬೇರನ್ನು ಹಿಡಿದು ಸಾಕ್ಷಿಯ ಕೊರಳಿಗೆ ಸುತ್ತಿದ. ತಕ್ಷಣ ಕಾಂತಾ ಚಪ್ಪಾಳೆ ಹೊಡೆಯುತ್ತಾ ಓಡಿ ಬಂದು, ನಮ್ಮನ್ನೂ ಸಾಕ್ಷಿಯನ್ನೂ ಬೇರ್ಪಡಿಸಿದ. "ಹೇಗಿತ್ತು ಆಟ?" ಎಂದ. ನಮಗೆ ಆಶ್ಚರ್ಯವಾಯಿತು. ಇದು ಯಾವ ಥರದ ಆಟ? ಪ್ರಾಣಕ್ಕೇ ಕುತ್ತು ತರುವಂಥದ್ದು? ಕಾಂತಾ ಹೇಳಿದ, "ಇಲ್ಲಿ ನಡೆದದ್ದು ಯಾವುದೂ ನಿಜವಲ್ಲ. ನಿಮಗೆ ಅಖಂಡತೆಯ ಬಗ್ಗೆ ಹೇಳಲು ಏರ್ಪಡಿಸಿದ ಒಂದು ಪಾಠವಷ್ಟೇ" ಎನ್ನುತ್ತಾ, ನಮ್ಮ ಬೆನ್ನುಗಳನ್ನು ಸವರಿ ಕೆಳಗೆ ಕುಳಿತ. "ಭಾರತ ಎನ್ನುವ ದೇಶ, ನೀವು ಮೂವರಂತೆ, ಹಲವು ಚಿಕ್ಕ ಚಿಕ್ಕ ಭಾಗಗಳಾಗಿದ್ದರೂ ಒಟ್ಟಿಗೆ ಹೊಂದಾಣಿಕೆ ಮಾಡಿಕೊಂಡು ಇದ್ದವು. ಹೊರಗಿನಿಂದ ಬಂದು ಈ ಬ್ರಿಟೀಷರು, ನಾನು ನಿಮಗೆ ಸುಳ್ಳುಗಳನ್ನು ಗುಟ್ಟುಗಳಾಗಿ ಹೇಳಿದಂತೆ ಇವರಿಗೂ ಹೇಳಿದರು. ಒಬ್ಬರಿಗೊಬ್ಬರು ನಿಮ್ಮಂತೆಯೇ ಕಿತ್ತಾಡಿದರು! ನೀವು ನಿಮ್ಮ ಮರ್ಮವಿದ್ಯೆ, ಎಲ್ಲವನ್ನೂ ಮರೆತಿರಿ. ಈಗ ನಾವೆಲ್ಲರೂ ಸಾಕ್ಷಿಯನ್ನು ಬೇಟೆ ಆಡಿದಂತೆ, ಆ ಬ್ರಿಟೀಷರನ್ನು ಹಿಡಿದು ಹೊರಹಾಕಬೇಕಾಗಿದೆ. ನೀವು ಒಟ್ಟಿಗೆ ಬಂದ ತಕ್ಷಣ, ಸಾಕ್ಷಿಯಂತಹ ಪ್ರವೀಣನೆ ಬೀಳಲಿಲ್ಲವೆ, ಈ ಒಗ್ಗಟ್ಟಿನಲ್ಲಿದೆ ಅಖಂಡತೆ!!" ಎಂದನು. ನಮಗೆ ಜ್ಞಾನೋದಯವಾಯಿತು. ರೋಷ ಉಕ್ಕಿತು. "ನಿನ್ನ ಕತೆ ಹೇಳು ಕಾಂತಾ" ಎಂದನು ಸಾಕ್ಷಿ.

ಕಾಂತಾ ಮುಂದುವರೆಸಿದನು.

"ನಾನು ಮುಂದವರೆಸುವುದಲ್ಲ. ಶುರು ಆಗಿದ್ದು ಎಲ್ಲಿ ಎನ್ನುವುದನ್ನೇ ನಿಮಗೆ ಹೇಳಬೇಕು. ನಾನು ಒಬ್ಬ ಯುವಕನಾಗಿ ಕಾಡಿನ ಆ ಹಳ್ಳಿಗೆ ಹೋಗಿದ್ದು ಆಕಸ್ಮಿಕವೇ? ಆ ವಿಚಿತ್ರ ಕತ್ತಿಯ ಗುಂಪನ್ನು ಸಂಪರ್ಕಿಸಿದ್ದು ಕೇವಲ ಕಾಕತಾಳೀಯವೆ? ನಾನು ಹೇಳಿದ ವಿಷಯವು ಆ ಗುಂಪಿನ ಮುಖ್ಯಸ್ಥನಿಗೆ ಇಷ್ಟವಾಗಿ, ಒಂದಷ್ಟು ವಿಚಿತ್ರ ಕತ್ತಿಯುಳ್ಳವರನ್ನು ನನ್ನ ಕೆಳಗೆ ನೇಮಿಸಿದ್ದು ಸುಮ್ಮನೆಯೇ? ನಿಮಗೆ ಈ ರೀತಿಯ ಸಂದೇಹಗಳು ಕತೆಯನ್ನು ಸಾಕ್ಷಿ ಹೇಳಿದಾಗಲೇ ಬಂದಿರಬೇಕು."

ನಾವು ಮೂವರೂ ಒಪ್ಪಿಗೆಯಲ್ಲಿ ತಲೆಯಾಡಿಸಿದೆವು.

"ನಾನು ಯಾರು? ನಾನು ಕಾಡಿನಲ್ಲಿ ಬೆಳೆದವನೇ ಅಲ್ಲ. ನೀವು ಕಾಡಿನಲ್ಲೇ ಹುಟ್ಟಿ ಬೆಳೆದವರು. ನಿಮಗೆ ಹೊರಗೆ ಹೇಗಿರುತ್ತದೆಂಬ ಕಿಂಚಿತ್ತೂ ಅನುಭವವಿಲ್ಲ. ಅಸಲಿಗೆ ನಿಮಗೆ 'ಹೊರಗೆ' ಎಂದರೆ ಈ ಕಾಡೇ. ಆದರೆ ಈ ಕಾಡಿನಾಚೆಗೆ ಒಂದು ನಾಡಿದೆ. ಅಲ್ಲಿ ಕೇವಲ ಜನರಿರುತ್ತಾರೆ. ಅಲ್ಲಿ ಒಬ್ಬರ ಕೆಳಗೆ ಇನ್ನೊಬ್ಬ ರಂತೆ ವ್ಯವಸ್ಥೆ ಇದೆ, ಒಂದು ಕ್ರಮ ಇದೆ. ಒಬ್ಬರು ರಾಜ ಎಂದು ಇರುತ್ತಾರೆ. ಒಬ್ಬನು ಇನ್ನೊಬ್ಬನೊಂದಿಗೆ ಸ್ನೇಹವನ್ನೋ ಅಥವಾ ವೈರವನ್ನೋ ಕಟ್ಟಿಕೊಂಡಿ ರುತ್ತಾನೆ. ಒಂದೇ ರೀತಿಯ ಯೋಚನೆ ಮಾಡುವವರು ತಮಗೆ ಇಷ್ಟವಾಗದವರ ವಿರುದ್ಧ ಗುಂಪು ಕಟ್ಟಿಕೊಂಡು ಅವರನ್ನು ಹೊಡೆಯುವುದೋ, ಅಥವಾ ಜನರನ್ನೇ ಅವರ ವಿರುದ್ಧ ಪ್ರಚೋದಿಸುವುದನ್ನೋ ಮಾಡುತ್ತಾರೆ. ಪ್ರಸ್ತುತಕ್ಕೆ, ಎಲ್ಲರೂ ಸ್ವಾತಂತ್ರ್ಯಕ್ಕೆ ಹಪಹಪಿಸುತ್ತಿದ್ದಾರೆ."

ನಾವು ಮೂವರೂ ಒಬ್ಬರೊಬ್ಬರ ಮೂಕಮುಖವನ್ನು ನೋಡಿಕೊಂಡೆವು. ಯಾರೋ ಹೇಳಿದಂತೆಯೇ ಕೇಳಿಕೊಂಡು ನಮ್ಮ ಕಾಡಲ್ಲಿ ನಾವೇ ಇರಬೇಕು ಎಂಬ ಸ್ಥಿತಿಯನ್ನು ನೆನೆಸಿಕೊಂಡರೆ ನಮಗೆ ಅಸಹ್ಯವಾದ ರೋಷ ಉಕ್ಕಿತು.

"ನಾನು ನಿಮ್ಮಷ್ಟಿದ್ದಾಗ ಎಲ್ಲೋ ಸ್ನೇಹಿತರೊಂದಿಗೆ ಚೆಂಡು ಕಡ್ಡಿ ಇತ್ಯಾದಿಗಳಲ್ಲಿ ಆಟವಾಡಿಕೊಂಡಿದ್ದೆ. ಆದರೆ ಬೆಳೆಯುತ್ತಾ ಬೆಳೆಯುತ್ತಾ, ನಿಮಗೆ ನಾನು ಕತೆ ಹೇಳುತ್ತಿರುವ ಹಾಗೆ, ನನ್ನ ಅಪ್ಪಯ್ಯ ನನಗೂ ದೇಶದ ಸ್ಥಿತಿಯನ್ನು ವಿವರಿಸಿದರು. ಇಷ್ಟು ವರ್ಷ ಏನೂ ಶ್ರಮವಹಿಸದೆ ಕಳೆದುಬಿಟ್ಟೆನಲ್ಲ ಎಂದು ನನಗೆ ಬೇಸರವಾಯಿತು. ಆಗ ನನ್ನ ಅಪ್ಪಯ್ಯ ಒಂದಿಷ್ಟು ಪುಸ್ತಕಗಳನ್ನು ತಂದುಕೊಟ್ಟರು." ಎನ್ನುತ್ತಾ ಕಾಂತಾ, ತನ್ನ ಕೈಚೀಲದಿಂದ ಒಂದು ಪುಸ್ತಕವನ್ನು ತೆಗೆದ. ಉದ್ದವು ಕಡಿಮೆಯಿದ್ದು, ದೊಡ್ಡ ಗಾತ್ರದ ಕಾಗದದ ಪುಸ್ತಕ ಅದಾಗಿತ್ತು. ನಾಗನು ಎರಡೂ ಕೈಗಳಲ್ಲಿ ಅದನ್ನು ತೆಗೆದುಕೊಂಡನು. ಅದರ ಮೇಲೆ ಕಪ್ಪು ಬಣ್ಣದಲ್ಲಿ ಸುಂದರವಾಗಿ ಬರೆಯಲಾಗಿತ್ತು:

1857ರ ಭಾರತೀಯ ಸ್ವಾತಂತ್ರ್ಯ ಸಂಗ್ರಾಮ. ಬೋಕನು ಅಕ್ಷರಗಳನ್ನು ಜೋಡಿಸಿಕೊಂಡು ನಿಧಾನಗತಿಯಲ್ಲಿಯೂ, ಜೋರಾಗಿಯೂ ಓದಿದನು. ನಾಗ ಹಾಗೂ ನಾನು ಕೊನೆಯದಾಗಿ ಸಂಗ್ರಾಮ ಎಂದು ಮತ್ತೆ ಹೇಳಿದೆವು. ಅದರ ಕೆಳಗೆ ಮತ್ತೆ ಮೂರು ಪದಗಳಿದ್ದವು. ಮೇಲಿದ್ದ ಅಕ್ಷರಗಳಿಗಿಂತ ಅವು ಚಿಕ್ಕದಾಗಿದ್ದವು. ನಾನು ಪುಸ್ತಕವನ್ನು ಕೈಗೆತ್ತಿಕೊಂಡು ಅದನ್ನು ಓದಿದೆ: ವಿನಾಯಕ ದಾಮೋದರ ಸಾವರ್ಕರ್.

ಕಾಂತಾ, "ಹೌದು, ವೀರ ಸಾವರ್ಕರ್" ಎಂದ. ಮತ್ತೆ ಆ ಪುಸ್ತಕವನ್ನು ತೆಗೆದುಕೊಂಡು ಒಂದು ವಾಕ್ಯವನ್ನು ಓದಿದ: "ಪಿತೃಗಳ ಚಿತಾಭಸ್ಮಕ್ಕಾಗಿ ಮತ್ತು ದೇವರುಗಳ ದೇವಾಲಯಗಳಿಗಾಗಿ ರಾಷ್ಟ್ರವೂ, ಪೂರ್ವಜರೂ ಹೋರಾಡಿದ ಕಥೆಯನ್ನು ಹೇಳುವ ಸಲುವಾಗಿ."

ಒಂದು ದೊಡ್ಡ ಸಮಸ್ಯೆ ನಮ್ಮ ನಡುವೆ ಇತ್ತು: ಅರ್ಥವಾಗದ ಹಲವಾರು ಪದಗಳು. ಚಿತಾಭಸ್ಮ ಎಂದರೇನು? ಅದನ್ನು ಸಾಕ್ಷಿ ನಮಗೆ ಹೇಳಿದ. ಸತ್ತವರ ದೇಹವನ್ನು ಸುಟ್ಟಾಗ ಉಂಟಾಗುವ ಬೂದಿ. ದೇವಾಲಯದ ಬಗ್ಗೆ ಕೇಳಿ ತಿಳಿದಿದ್ದೆವು. ಅಷ್ಟಕ್ಕೂ ಈ ಪುಸ್ತಕದ ಮಹತ್ವ ನಮಗೆ ತಿಳಿಯಲಿಲ್ಲ. ಜೊತೆಗೆ ಕತ್ತಲೂ ಆಗಿತ್ತು. ಕಾಂತಾ ನಮಗೆ ಆ ಪುಸ್ತಕವನ್ನು ಕೊಟ್ಟ. "ಹುಷಾರು. ನಾಳೆ ಸಿಗೋಣ" ಎನ್ನುತ್ತಾ ನಡೆದು ಹೊರಟೇ ಹೋದ. ನಾಗ, ಸಾಕ್ಷಿ, ಬೋಕ, ಹಾಗೂ ನಾನು ಆ ಪುಸ್ತಕವನ್ನೇ ಹಿಡಿದು ಗುಡಿಸಲತ್ತ ಹೊರಟೆವು.

3

ಕಾಡಿನ ಓಟವು ಕತ್ತಲಲ್ಲೇ ಸಾಗಿತು. ಸ್ವಲ್ಪ ದೂರ ನಡೆದ ಮೇಲೆ ಸಾಕ್ಷಿಯು ಪಂಜೊಂದನ್ನು ಹೊತ್ತಿಸಿದನು. ನಮಗೆ ಅತ್ಯಂತ ಉತ್ಸಾಹ. ಕಾಂತಾ ಕೊಟ್ಟಿದ್ದ ಪುಸ್ತಕವನ್ನು ಕೈಯಲ್ಲೇ ಹಿಡಿದು ಓಡುತ್ತಿದ್ದೆವು. ಸಾಕ್ಷಿಯು ನಮ್ಮ ಕಣ್ಣಿಗೆ ಕಾಣುವ ರೀತಿಯಲ್ಲಿ ಪಂಜನ್ನು ಹಿಡಿದಿದ್ದನು. ಮೂವರೂ ಬೇರೆ ಬೇರೆ ದಾರಿಗಳಲ್ಲಿ ಓಡುತ್ತಿದ್ದರೂ, "ಸತತ ಜಾಗೃತಿ" ನಮ್ಮ ಮನದಲ್ಲೇ ಮೊಳಗುತ್ತಿತ್ತು. ಜೊತೆಗೆ ಕಾಂತಾನ ಕಥೆ ಕೇಳುವ ಕಾತುರ. ಯಾವಾಗ ಇರುಳು ಕಳೆದು ಮತ್ತೆ ಕಾಂತಾ ಸಿಗುವನೋ ಎಂಬ ತವಕ.

ನಾವು ಬೆಟ್ಟವನ್ನು ಏರಿ ಹನುಮನ ಮೂರ್ತಿ ತಲುಪುವಷ್ಟೊತ್ತಿಗೆ ಅಲ್ಲಿ ಒಂದು ದೀಪವು ಬೆಳಗುತ್ತಿತ್ತು. ಅದು ನಮಗೆಲ್ಲಾ ಶಕ್ತಿಯಂತೆ ಕಾಣುತ್ತಿತ್ತು. ಸಾಕ್ಷಿಯು ತನ್ನ ಮೇಲ್ವಸ್ತ್ರವನ್ನು ತೆಗೆದ. ಅವನ ದೇಹಧಾರ್ಢ್ಯ ನೋಡಿದ ಎಂಥವನಿಗೂ ಅವನ ಮೇಲೆ ಗೌರವವೂ, ಅವನಿದ್ದರೆ ಧೈರ್ಯ ಎಂಬ ಭಾವನೆಯೂ ಮೂಡದೆ ಇರದು. ಅವನು ಆಂಜನೇಯನ ಮುಂದೆ ಸಾಷ್ಟಾಂಗ ಪ್ರಣಾಮವನ್ನು ಮಾಡಿದ.

ನಾವೂ ಅದನ್ನೇ ಅನುಸರಿಸಿದೆವು.

ಗುಡಿಸಲ ಒಳಗಿನಿಂದ ಒಂದು ಅದ್ಭುತವಾದ, ಉತ್ತೇಜಿಸುವಂತಹ ಒಂದು ನಾದ ಹೊರಹೊಮ್ಮುತ್ತಿತ್ತು:

ಗಿ ಕಂ
ನ ಕ ತ ರ ಕಂ
ಧಿ ರಿ ಕಿ ಡ ತ ಕ ತ ರ ಕಂ
ನ ಕ ತ ರ ಕಂ
ಧಿ ಕ್ಕ ನ್ನ ನ್ನ ಕಂ
ಧು ಧು
ಧಿ ರಿ ಕಿ ಡ ತ ಕ ತ ರ ಕಂ[6]

ಅದು ಆಚಾರ್ಯರ ಅಪೂರ್ವ ಧ್ವನಿಯಾಗಿತ್ತು. ಆ ಲಯಭರಿತ ಉಚ್ಚಾರಾಂಶಗಳಿಗೆ ತಕ್ಕಂತೆ ಒಂದು ತಾಳ ಆರಂಭವಾಯಿತು. ಯಾವುದೋ ಒಂದು ಮರದ ತುಂಡಿನ ಮೇಲೆ ಮರದ ತುಂಡಿನಿಂದಲೇ ಹೊಡೆದರೆ ಬರುವ ಸದ್ದು. ನಮಗೆ ಆ ತಾಳವನ್ನು ಕೇಳುತ್ತಿದ್ದಂತೆಯೇ ಕಲರಿಯನ್ನು ಹೊಕ್ಕಿ ಅಭ್ಯಸಿಸಬೇಕೆಂಬ ಹಂಬಲ ಉಂಟಾಯಿತು. ಆದರೆ ಆ ಇರುಳ ಹೊತ್ತಿನಲ್ಲಿ ಅಭ್ಯಸಿಸುವುದೆಲ್ಲಿ? ದೇಹವು ದಣಿದಿತ್ತು. ಆಚಾರ್ಯರ ನುಡಿಸುವಿಕೆ ಈಗ ನಿದ್ರೆಯನ್ನು ಆಹ್ವಾನಿಸುವ ಕರೆಯಂತೆ ಕೇಳಿತು. ಹಾಗೆ ಕೇಳುತ್ತಾ ಕೇಳುತ್ತಾ, ಒಂದು ರೀತಿಯ ವಿಶ್ರಾಂತಿಯು ನಮ್ಮನ್ನು ಆವರಿಸಿತು. ಯಾವುದೇ ಯೋಚನೆಗಳೇ ಇಲ್ಲದ ಒಂದು ಸ್ಥಿತಿಗೆ ತಲುಪಿದಂತಾಯಿತು. ಹನುಮನ ಮೂರ್ತಿಯ ಮುಂದೆ ಧ್ಯಾನಭಂಗಿಯಲ್ಲಿ ಕುಳಿತ ನಾವು ಧ್ಯಾನದಲ್ಲಿ ತೊಡಗಿದೆವು. ಮುಚ್ಚಿದ ಕಣ್ಣಿಗೆ ವಿವಿಧ ರೀತಿಯ ವಿನ್ಯಾಸಗಳು ಕಂಡವು. ಆ ವಿನ್ಯಾಸಗಳು ಓಡಾಡುತ್ತಾ ಅದಲಿ-ಬದಲಿ ಆಗುತ್ತಿದ್ದವು. ಆಚಾರ್ಯರ ಉಚ್ಚರಿಸುವಿಕೆಯು ವೇಗವಾದಂತೆ ಆ ವಿನ್ಯಾಸಗಳು ಚಿಕ್ಕದಾಗುತ್ತಾ, ಕೇವಲ ಕಪ್ಪು ಮಿಕ್ಕಿತು. ಹೋಗು ಹೋಗುತ್ತಿದ್ದಂತೆ ಆ ಕಪ್ಪೂ ಮಾಯವಾಗಿ ಆಕಾಶದಲ್ಲಿ ಹಾರಾಡುವಂತಹ ಅನುಭವವಾಯಿತು.

ಎಚ್ಚರವಾದಾಗ ಬೆಳಗ್ಗೆಯಾಗಿತ್ತು. ಕಣ್ಣು ತೆರೆದಾಗ ಆಗಸ ಕಾಣಿಸುವುದೆಂದು ನಿರೀಕ್ಷಿಸಿದ್ದ ನನಗೆ ಕಂಡಿದ್ದು ಗುಡಿಸಲ ಛಾವಣಿ! ಇನ್ನೂ ಸರಿಯಾಗಿ ಬೆಳಕಾಗಿರಲಿಲ್ಲ. ಅಕ್ಕ ಪಕ್ಕ ಯಾರಿದ್ದಾರೆ ಎಂದು ಗೊತ್ತಾಗದಷ್ಟು ಕತ್ತಲು. ಆದರೆ ಅವರ ಉಸಿರಿನಿಂದಾಗಿ ಆಗುತ್ತಿದ್ದ ದೇಹದ ಏರಿಳಿತದಿಂದ ಅವರು ಯಾರು ಎಂದು ಹೇಳಬಹುದಿತ್ತು. ನನ್ನ ಪಕ್ಕದಲ್ಲೇ ಚಾಪೆಯ ಮೇಲೆ

---

6. ಗಣಪತಿ ಕೈ: ಚಂಡೆ

ಬೋಕ. ಅವನ ಪಕ್ಕದಲ್ಲಿ ನಾಗ. ಇನ್ನೊಂದು ಕಡೆ ಸಾಕ್ಷಿ. ಗುಡಿಸಲ ಬಾಗಿಲು ತೆಗೆದಿತ್ತು. ಹೊರಗಡೆ ಇನ್ನೂ ಬೆಳಕಾಗಿಲ್ಲ. ಅದೇ ಚಂದ್ರನ ಬೆಳಕಿನಲ್ಲಿ ನನಗೆ ಆಚಾರ್ಯರು ಕಂಡರು. ಅವರ ಸ್ನಾನ ಆದಂತೆ ಇತ್ತು. ಅವರ ಕೂದಲು ಇನ್ನೂ ಒದ್ದೆ ಇದ್ದಂತೆ ಇತ್ತು. ಶ್ವೇತವರ್ಣದ ಬಟ್ಟೆ ಧರಿಸಿದ್ದ ಅವರೇ ವೇದಗಳಲ್ಲಿ ಹೇಳಿದ ಇಂದ್ರನಂತೆ ಇದ್ದರು. ಹಿಂದೆ ಕೈ ಕಟ್ಟಿದ್ದರು. ನಾನು ಎದ್ದೆ. ತಕ್ಷಣ, ಹೇಳಬೇಕಿದ್ದ ಶ್ಲೋಕಗಳು ನೆನಪಾಯಿತು.

ಕರಾಗ್ರೇ ವಸತೇ ಲಕ್ಷ್ಮೀ ಕರ ಮಧ್ಯೇ ಸರಸ್ವತಿ
ಕರ ಮೂಲೇತು ಗೋವಿಂದಃ ಪ್ರಭಾತೇ ಕರ ದರ್ಶನಂ

ಎನ್ನುತ್ತಾ ಮೊದಲು ನನ್ನ ಹಸ್ತಗಳನ್ನು ಒಂದಕ್ಕೊಂದು ಉಜ್ಜಿಕೊಂಡು, ಕಣ್ಣಿನ ಮೇಲೆ ಇಟ್ಟುಕೊಂಡೆ. ನಂತರ ನೆಲವನ್ನು ಮುಟ್ಟಿ,

ಸಮುದ್ರವಸನೇ ದೇವಿ ಪರ್ವತಸ್ತನಮಂಡಲೇ
ವಿಷ್ಣುಪತ್ನಿ ನಮಸ್ತುಭ್ಯಂ ಪಾದಸ್ಪರ್ಶಂಕ್ಷಮಸ್ವಮೇ

ಎಂದು ನನ್ನ ಪಾದವನ್ನು ಅವಳ ಮೇಲೆ ಇಡುತ್ತಿರುವುದಕ್ಕಾಗಿ ಭೂತಾಯಿಯ ಕ್ಷಮೆಯನ್ನು ಕೇಳಿದೆ. ಆಚಾರ್ಯರು ಹೇಳಿಕೊಟ್ಟಿದ್ದ ಏಕಾತ್ಮತಾ ಸ್ತೋತ್ರದಲ್ಲಿ ಬರುವ ಎಲ್ಲಾ ವೀರರ ಹೆಸರನ್ನೂ ಸ್ಮರಿಸಿ ನಂತರ ಹೊರಕ್ಕೆ ನಡೆದೆ. ಆಚಾರ್ಯರು ಮಂದ್ರಸ್ಥಾಯಿಯಲ್ಲಿ ಸುಂದರವಾದ ಮಂತ್ರವನ್ನುಚ್ಚರಿಸುತ್ತಿದ್ದರು.

ನಮಸ್ತೇ ರುದ್ರ ಮನ್ಯವ ಉತೋತ ಇಷವೇ ನಮಃ ।
ನಮಸ್ತೇ ಅಸ್ತು ಧನ್ವನೇ ಬಾಹುಭ್ಯಾಮುತ ತೇ ನಮಃ ।
ಯಾ ತ ಇಷುಃ ಶಿವತಮಾ ಶಿವಂ ಬಭೂವ ತೇ ಧನುಃ ।
ಶಿವಾ ಶರವ್ಯಾ ಯಾ ತವ ತಯಾ ನೋ ರುದ್ರ ಮೃಡಯ ।[7]

"ಆಚಾರ್ಯರೇ", ಅವರ ಅದ್ಭುತ ಪಠಣಕ್ಕೆ ಅಡ್ಡಿಯಾಗಲು ಇಚ್ಛಿಸದಿದ್ದರು ಆ ಮಂತ್ರದ ಅರ್ಥವನ್ನು ತಿಳಿದುಕೊಳ್ಳುವ ಆಸಕ್ತಿಯಿಂದ ನಾನು ಅವರನ್ನು ಕರೆದೆ. ಆಚಾರ್ಯರು ಹಿಂದಕ್ಕೆ ತಿರುಗಿದರು. "ಕೇಳೋ ಕಾಳ! ನಿನ್ನ ಹೆಸರಿನ ಅರ್ಥದ ಬಗ್ಗೆ ಯಾವತ್ತಾದರೂ ಯೋಚಿಸಿದ್ದೀಯ?"

ನಮ್ಮ ಹೆಸರುಗಳಿಗೂ ಒಂದು ಅರ್ಥವಿರುತ್ತದೆಂದು ನಾನು ಯಾವತ್ತೂ ಯೋಚಿಸಿರಲಿಲ್ಲ. "ಆಚಾರ್ಯರೇ, ನಮ್ಮ ಹೆಸರಿಗೂ ಅರ್ಥ ಇರುತ್ತಾ? ಹಾಗಾದರೆ ನನ್ನ ಹೆಸರಿನ ಅರ್ಥ ಏನು?" ಎನ್ನುತ್ತಾ ಯಾವುದೋ ದೊಡ್ಡ ರಹಸ್ಯವನ್ನೇ ತಿಳಿದುಕೊಳ್ಳುತ್ತಿರುವಂತಹ ಉತ್ಸಾಹದಲ್ಲಿ ಅವರನ್ನು ಕೇಳಿದೆ. ಆಚಾರ್ಯರು ದೀರ್ಘ ಉಸಿರನ್ನೆಳೆದುಕೊಂಡು, ತಿರುಗಿ ನನ್ನ ಹೆಗಲ ಮೇಲೆ ಕೈ ಹಾಕಿದರು. "ಹೋಗು, ಹೂವಿನ ಬುಟ್ಟಿ ತೆಗೆದುಕೊಂಡು ಬಾ!" ಎಂದರು.

---

7. ಕೃಷ್ಣ ಯಜುರ್ವೇದೀಯ ತೈತ್ತಿರೀಯ ಸಂಹಿತಾ ಚತುರ್ಥಂ – ವೈಶ್ವದೇವಂ ಕಾಂಡಂ

ನಾನು ಓಡಿ ಹೋಗಿ ಗುಡಿಸಲ ಒಳಗೆ ಮರದಲ್ಲೇ ಆಚಾರ್ಯರು ಸುಂದರವಾಗಿ ತಯಾರಿಸಿದ್ದ ಬುಟ್ಟಿಯನ್ನು ತೆಗೆದುಕೊಂಡು ಬಂದೆ. ಈಗ ಹನುಮಂತನ ಪೂಜೆ, ಪೂತರ ಪೂಜೆಗಳಿಗೆ ಹೂವು ತರುವ ಕೆಲಸಕ್ಕೆ ಹೊರಟಿದ್ದೇವೆಂದು ನನಗೆ ಭಾಸವಾಯಿತು. ಆಚಾರ್ಯರು ಮತ್ತೆ ಹೆಗಲ ಮೇಲೆ ಕೈ ಹಾಕುತ್ತಾ, "ಹನುಮಂತ ನಿನಗೆ ಗೊತ್ತಲ್ವೇನೋ?" ಎಂದರು. ನಾನು ಒಪ್ಪಿಗೆಯಲ್ಲಿ ತಲೆ ಅಲ್ಲಾಡಿಸಿದೆ. "ಅದೇ ರೀತಿ ಇನ್ನೂ ಹಲವು ಶಕ್ತಿವಂತರು ಇದ್ದಾರೆ" ಎಂದರು ಆಚಾರ್ಯರು. ನಮಗೆ ಆ ಶಕ್ತಿವಂತರೇ ದೇವರೆಂದು, ಅವರೇ ನಮಗೆ ಚೈತನ್ಯ ನೀಡುವವರೆಂದು ಹಲವು ಬಾರಿ ಸಾಕ್ಷಿ ಹೇಳಿದ್ದ. "ಹೌದು ಆಚಾರ್ಯರೆ. ಸಾಕ್ಷಿ ಹೇಳಿದ್ದಾನೆ" ಎಂದು ನಾನು, ನನಗೆ ತಿಳಿದಿದೆ ಎಂಬ ಹಮ್ಮಿನಲ್ಲಿ ಹೇಳಿದೆ. "ಹಾಗಿದ್ದರೆ, ಮಹಾದೇವ ಶಿವನ ಬಗ್ಗೆ ಹೇಳಿದ್ದಾನಾ ಸಾಕ್ಷಿ?" ಎಂದು ಕೇಳಿದರು ಆಚಾರ್ಯರು. ಸಾಕ್ಷಿಯು ಹಲವಾರು ಬಾರಿ ಈ ಹೆಸರನ್ನು ಉಪಯೋಗಿಸಿದ್ದಾನೆ. ಆದರೆ ಆಚಾರ್ಯರ ಮುಂದೆ ತೋರಿಸಿಕೊಳ್ಳಲೂ ಆಗುತ್ತಿಲ್ಲವಲ್ಲ! ಹಲವು ಬಾರಿ ಹೀಗೆಯೇ. ಸಾಕ್ಷಿ ಕಥೆಗಳನ್ನೂ, ಅವನ ಅನುಭವಗಳನ್ನೂ ಹೇಳುತ್ತಿರುವಾಗ, ನಾವು ಅವನನ್ನು ಮೆಚ್ಚಿಸುವ ಸಲುವಾಗಿ "ಹೋ! ಹೋ!" ಎಂದು ಕೇಳುತ್ತೇವೆ. ಆದರೆ ಅದರ ಮನನದಲ್ಲಿ ತೊಡಗಿದಾಗ, ನೆನಪಾಗುವುದು ಕೇವಲ ಒಂದೋ ಎರಡೋ ವಿಷಯಗಳು. ನಾನು, "ಹೇಳಿದ್ದಾನೆ ಆಚಾರ್ಯ, ಆದರೆ ನೆನಪಿಲ್ಲ" ಎಂದೆ, ತಲೆತಗ್ಗಿಸುತ್ತಾ. ಆಚಾರ್ಯರು ಮಂದಹಾಸ ಬೀರುತ್ತಾ, "ಶಿವ ಎಂದರೆ ಒಳ್ಳೆಯದು ಅಂತ ಕಣೋ. ನಿನ್ನ ಹೆಸರು ಕಾಳ ಎನ್ನುವುದೂ ಅವನ ಹೆಸರೇ! ಅವನು ನೋಡುವುದಕ್ಕೆ ಹೇಗಿರುತ್ತಾನೆ ಗೊತ್ತಾ? ಅವನಿಗೆ ಆಕಾಶವೇ ಕೂದಲು. ಅವನ ಕೊರಳು ನೀಲಿ ಬಣ್ಣ. ಕುತ್ತಿಗೆಯಲ್ಲಿ ಹಾವೂ ಇರುತ್ತದೆ. ಜೊತೆಗೆ ಮೈಯೆಲ್ಲಾ ಬೂದಿ ಬಳಿದುಕೊಂಡಿರುತ್ತಾನೆ ಕಣೋ." ನನಗೆ ಈ ರೀತಿಯ ಕಲ್ಪನೆಯೇ ಯಾವುದೋ ಒಂದು ರೀತಿಯ ಆನಂದವನ್ನು ನೀಡಿತು. ನದಿಯಲ್ಲಿ ಮುಳುಗಿಬಿಟ್ಟು ಎಲ್ಲಿಗೋ ಕೊಚ್ಚಿಕೊಂಡು ಹೋಗಿ, ಕೊನೆಗೆ ಎದ್ದಾಗ ನಮ್ಮ ಗುಡಿಸಲ ಮುಂದೆಯೇ ಬಂದರೆ ಎಷ್ಟು ಸಂತಸ ಅಲ್ಲವೇ? ಹಾಗಾಯಿತು ನನಗೆ. ಆಚಾರ್ಯರು ಮುಂದುವರೆಸಿದರು–"ಅವನ ತಲೆಯಲ್ಲಿ ಅವನು ಬಾಲಚಂದ್ರನನ್ನೇ ಇಟ್ಟುಕೊಂಡಿದ್ದಾನೆ ಕಣೋ. ಅವನಿಗೆ ಮೂರು ಕಣ್ಣು! ಅವನ ಮೂರನೇ ಕಣ್ಣೇ ಕಾಲದ ಕಣ್ಣು. ಅವನು ಕಾಲಾಕ್ಷ. ಆ "ಕಾಲ" ಎಂಬ ಪದವೇ ಇಲ್ಲಿಗೆ ಬಂದು ಕಾಳ ಎಂಬ ನಿನ್ನ ಹೆಸರಾಗಿದೆ!" ನನಗೆ ತುಂಬಾ ಹೆಮ್ಮೆಯಾಗುತ್ತಿತ್ತು. ಎಂತಹ ಶಿವನ ಹೆಸರು ನನಗೆ ಇಟ್ಟಿದ್ದಾರೆಯೇ? ಎಷ್ಟು ಬುದ್ಧಿವಂತರು ಅಪ್ಪಯ್ಯ! ಇಷ್ಟೇ ಅಲ್ಲ. ಇದನ್ನು ಮೊದಲು ನಾಗ ಬೋಕರಿಗೆ ಹೇಳಿ, ಆಚಾರ್ಯರ ಬಳಿ ಅವರ ಹೆಸರುಗಳ ಅರ್ಥವನ್ನೂ ಕೇಳಬೇಕೆಂಬ ಕಾತುರ ನನಗೆ. ಆಚಾರ್ಯರು

ಬೇರೆ ಬೇರೆ ಬಣ್ಣದ ಹೂಗಳನ್ನು ನಿಧಾನವಾಗಿ ಗಿಡದಿಂದ ಬಿಡಿಸಿ, ಬುಟ್ಟಿಗೆ ಹಾಕಿಕೊಳ್ಳುತ್ತಿದ್ದರು. "ಶಿವನ ಹೆಸರನ್ನಿಟ್ಟುಕೊಂಡವರು, ಎಂತಹ ವೀರರು ಗೊತ್ತಾ?" ಎಂದರು ಆಚಾರ್ಯರು. ಹೂಗಳ ಸೌಂದರ್ಯವನ್ನೂ, ನನ್ನ ಹೆಸರಿನ ಅರ್ಥವನ್ನೂ ಜೀರ್ಣಿಸಿಕೊಳ್ಳುತ್ತಿದ್ದ ನನಗೆ ಬಾಯಲ್ಲಿ ಇನ್ನೊಂದು ತುತ್ತು ಇಟ್ಟಂತಾಯಿತು. "ಯಾರು ಆಚಾರ್ಯ?" ಎಂದೆ ನಾನು. "ಶಿವಾಜಿ ಎನ್ನುವ ಒಬ್ಬ ರಾಜ" ಎನ್ನುತ್ತಾ, ಆಚಾರ್ಯರು, ಹಿಂದಕ್ಕೆ ತಿರುಗಿ ಸುತ್ತಲೂ ತಿರುಗಿ, "ಈ ಕಾಡುಗಳೇ ಅವನ ಅರಮನೆ! ಈ ವೃಕ್ಷಗಳೇ ಅವನ ಸೈನ್ಯ. ನಿನ್ನಂತಹ ಹುಡುಗರ ಸ್ನೇಹವೇ ಅವನ ಬಲ" ಎಂದರು. ಒಂದೊಂದು ದಿನಕ್ಕೆ ಒಂದೊಂದು ಹೊಸ ಪರಿಚಯ ನಮಗೆ! ಇಷ್ಟನ್ನೂ ಅರಗಿಸಿಕೊಂಡು ನೆನಪಿಟ್ಟುಕೊಳ್ಳುವ ವಿಧ ಏನು ಎಂಬ ಪ್ರಶ್ನೆ ಒಂದು ಕಡೆ ಆದರೆ, ಇವರೆಲ್ಲರೂ ಭಾರತಕ್ಕಾಗಿಯೇ ಹುಟ್ಟಿದವರು. ಭಾರತಕ್ಕಾಗಿ ನಾವು ಮಾಡುತ್ತಿರುವುದೇನು ಎಂಬ ಸಂಕಟ ಇನ್ನೊಂದು ಕಡೆ. ಇದು ಸಾಲದೆಂಬಂತೆ, ಸ್ವಾತಂತ್ರ್ಯ ಸಂಗ್ರಾಮ ಪುಸ್ತಕವನ್ನು ಓದಿದ ಕಾಂತಾ ಮುಂದೇನು ಮಾಡಿದ ಎಂಬ ಕುತೂಹಲ. ಇಷ್ಟೇ ಅಲ್ಲ, ಆಗಾಗ ಕಾಡಿನಲ್ಲಿ ಕಂಡು ಬರುವ ಕೆಂಪು ಬಟ್ಟೆಯ ಸೈನಿಕರು. ಇನ್ನೂ ಬಗೆಹರಿಯದ ವಿಚಿತ್ರಕತ್ತಿಯ ಕಥೆ. ನನಗೆ ತಡೆದುಕೊಳ್ಳಲಾಗಲಿಲ್ಲ. "ಆಚಾರ್ಯ!" ಎಂದು ಅವರ ಗಮನವನ್ನು ಸೆಳೆಯುತ್ತಾ, "ಇಂದು ಸಂಜೆ ನಾನು, ನಾಗ, ಬೋಕ ಬರುತ್ತೇವೆ. ದಯವಿಟ್ಟು ನಮ್ಮ ಹಲವು ಸಂದೇಹಗಳನ್ನು ಬಗೆಹರಿಸಿ!" ಎಂದೆ. ಪ್ರತಿಯೊಂದು ವಿಷಯಕ್ಕೂ ಆಚಾರ್ಯರ ಬಳಿ ಏನೋ ಒಂದು ಜ್ಞಾನ ಇರುತ್ತದೆ. "ಪರಶುರಾಮ ಕಲ್ಪಸೂತ್ರ ಎನ್ನುವುದರಲ್ಲಿ ಹೇಳಿರುವುದೇ ಇದನ್ನ ಕಣೋ! ಶಿಷ್ಯರಿಗೆ ಭಯವಾಗಬೇಕು, ಆಚಾರ್ಯ ಇರುವನೆಂಬ ಧೈರ್ಯವೂ ಇರಬೇಕು. ಆಚಾರ್ಯನಿಗೆ ಆ ಭಯವನ್ನು ಹೋಗಲಾಡಿಸುವ ವಾತ್ಸಲ್ಯ ಇರಬೇಕು!" ಎನ್ನುತ್ತಾ ನನ್ನ ತಲೆಯನ್ನು ನೇವರಿಸಿದರು. ಬುಟ್ಟಿಯನ್ನು ನನ್ನ ಕೈಗಿತ್ತು, "ಹೋಗು, ಪೂಜೆ ಮುಗಿಸಿ, ಎಲ್ಲರೂ ಕಾಂತಾನ ಬಳಿ ಹೋಗಬೇಕೆಂದು ಹೇಳು" ಎಂದು ಆಚಾರ್ಯರು ಆಜ್ಞೆಯನ್ನಿತ್ತರು. ನಾನು ಬುಟ್ಟಿಯನ್ನು ಹಿಡಿದುಕೊಂಡು, ಕಾಡಿನ ಓಟವನ್ನೂ ಅಭ್ಯಸಿಸುತ್ತಾ, 'ಸತತ ಜಾಗೃತಿ' ಎಂದು ಜಪಿಸುತ್ತಾ ಬೆಟ್ಟವನ್ನು ಏರತೊಡಗಿದೆ. ಆಚಾರ್ಯರ ಗಂಭೀರ ದನಿಯು ಕೇಳಿಸುತ್ತಿತ್ತು:

> ಯಾ ತೇ ರುದ್ರ ಶಿವಾ ತನೂರಘೋರಾ? ಪಾಪಕಾಶಿನೀ ?
> ತಯಾ ನಸ್ತನುವಾ ಶಂತಮಯಾ ಗಿರಿಶಂತಾಭಿಚಾಕಶೀಹಿ ?

ಪಂಚಮಃ ಪ್ರಪಾಠಕಃ

4

ನಾಗ ಬೋಕ ಸಾಕ್ಷಿ ಇವರಿಗೆ ಬೆಳಗ್ಗೆ ನಡೆದದ್ದನ್ನು ಹೇಳದೇ ಇರಲು ನನ್ನ ಕೈಯಲ್ಲಿ ಆದರೆ ಅಲ್ಲವೇ? ಸ್ನಾನಕ್ಕೆ ಓಡುತ್ತಾ ಹೋಗುವಾಗ ಸಕಲವನ್ನೂ ಅವರಿಗೆ ನಡೆದಂತೆಯೇ ಹೇಳಿದರು. ಸಾಕ್ಷಿಗೆ ತನ್ನ ಹೆಸರಿನ ಅರ್ಥ ತಿಳಿದಿತ್ತು. 'ಎಲ್ಲವನ್ನೂ ನೋಡುತ್ತಿರುವವನು, ನೋಡಿರುವವನು' ಎಂದು ಅವನು ಹೇಳಿದ. ಗೂಢಾಚಾರನಿಗೆ ತಕ್ಕ ಹೆಸರು ಎಂದು ನಾವು ಮನಗಂಡೆವು. ನದಿಯಲ್ಲಿ ಬೇಗ ಬೇಗ ಮಿಂದು, ಶಕ್ತಿಮೂಲವಾಗಿರುವ ಆ ಸೂರ್ಯನಿಗೆ ನಮಿಸಿ, ನಾವು ಕಾಂತಾನನ್ನು ಹುಡುಕುತ್ತಾ ಹೊರಟೆವು. ಒಂದೊಂದು ದಿನ ಕಾಡಿನ ಒಂದೊಂದು ಭಾಗದ ಮರಗಳನ್ನು ವಧಿಸುವ ಕೆಲಸವನ್ನು ನೋಡಿಕೊಳ್ಳುವ ಕೆಲಸ ಕಾಂತಾನದ್ದು. ಆದರೆ ಅವನು ಮಾಡುತ್ತಿರುವ ಕೆಲಸಕ್ಕೂ, ಹೇಳುತ್ತಿರುವ ಕಥೆಗೂ ಯಾವುದೇ ಸಂಬಂಧ ಕಾಣುತ್ತಿಲ್ಲ! 'ಸತತ ಜಾಗೃತಿ'ಯ ಸ್ಥಿತಿಗೆ ನಾವೆಲ್ಲಾ ಅನಿವಾರ್ಯವಾಗಿ ಬಂದು, ಖಗ-ಮೃಗಗಳ ಚಲನೆಯನ್ನು ಗಮನಿಸುತ್ತಾ, ಸದ್ದು ಮಾಡದೆ ನಡೆಯತೊಡಗಿದೆವು. ಸಿಂಗಳೀಕದ ದನಿ ಕೇಳಿಸಿತು. ಥಟ್ಟನೆ, ಬೇರೆ ಬೇರೆ ದಿಕ್ಕಿನಲ್ಲಿ ಓಡುತ್ತಿದ್ದ ನಾವೆಲ್ಲರೂ ಆ ಶಬ್ದದ ದಿಕ್ಕಿನೆಡೆಗೆ ಓಡತೊಡಗಿದೆವು. ಜೊತೆಗೇ ಕೊಡಲಿಯ ಏಟುಗಳ ಕ್ರೂರ ಸದ್ದೂ ಕೇಳಿಸಿತು. ದೂರದಲ್ಲಿ ಕಪ್ಪು ಬಟ್ಟೆ ಧರಿಸಿ, ಕೈಯನ್ನು ಹಿಂದೆ ಕಟ್ಟಿಕೊಂಡು ನಮ್ಮ ಬರುವನ್ನೇ ಕಾಯುತ್ತಿದ್ದ ಕಾಂತಾ ಕಂಡನು. ನಮ್ಮನ್ನು ನೋಡಿದ ತಕ್ಷಣ, ತಿರುಗಿ ಕಾಲುದಾರಿ ಒಂದರಲ್ಲಿ ನಡೆಯತೊಡಗಿದ. ನಾವು ಅವನ ಮನಸ್ಸನ್ನು ಅರಿತು, ಅವನನ್ನು ಹಿಂಬಾಲಿಸಿ ಹೋದೆವು. ಅವನು ನಮ್ಮನ್ನೆಲ್ಲಾ ನದೀತೀರಕ್ಕೆ ಕರೆದೊಯ್ಯುತ್ತಿರುವಂತೆ ಕಂಡಿತು. ನದೀತೀರವನ್ನು ತಲುಪಿದೆವು. ಕೊಂಚವೂ ತಡಮಾಡದಂತೆ ನಾವು ಅಲ್ಲೇ ಇದ್ದ ಬಂಡೆಯ ಮೇಲೆ ಹಾಯಾಗಿ ಕುಳಿತೆವು. ಕಾಂತಾ ನಮಗೆಲ್ಲಾ ಸುಟ್ಟಿದ್ದ ಜೋಳವನ್ನು ಕೊಟ್ಟನು. ಹಸಿ ಹಣ್ಣು ತರಕಾರಿಯಿಂದ ಬೇಸತ್ತಿದ್ದ ನಮ್ಮ ದೇಹ ಈ ಜೋಳವನ್ನು ನೋಡಿದ ತಕ್ಷಣ ಹಸಿವನ್ನು ಹುಟ್ಟಿಹಾಕಿತು. ಸಾಕ್ಷಿ ಸಮೇತವಾಗಿ ನಾವೂ ಅದನ್ನು ಚಪ್ಪರಿಸಿ ತಿನ್ನತೊಡಗಿದೆವು. ಜೊತೆಗೆ ಕಾಂತಾನ ರೋಚಕ ಕತೆ ಆರಂಭವಾದರೆ ಇನ್ನೂ ಎಷ್ಟು ಚೆಂದ! ನಮ್ಮ ಮನೋಭಿಲಾಷೆ ಯನ್ನರಿತವನಂತೆ, ಕಾಂತಾ ಗಂಟಲನ್ನು ಸರಿ ಮಾಡಿಕೊಂಡು, ತನ್ನ ವೃತ್ತಾಂತವನ್ನು ಮುಂದುವರೆಸಿದ.

"ನಿಮಗೆ ಕೊಟ್ಟ ಪುಸ್ತಕವನ್ನು ಬರೆದ ವೀರನೇ ಒಂದು ಸಂಘಟನೆಯನ್ನೂ ಹುಟ್ಟು ಹಾಕಿದ್ದ."

ಹೇಳಿದ್ದು ಒಂದೇ ವಾಕ್ಯ. ಬೋಕನು ಥಂಗನೆ, "ಸಂಘಟನೆ ಅಂದ್ರೆ?" ಎಂದ, ಜೋಳವನ್ನು ಅಗಿಯುತ್ತಾ.

"ಒಂದೇ ಗುರಿ ಹೊಂದಿರುವ ಹಲವರು ಸೇರಿ, ಒಂದಾಗಿ, ಆ ಗುರಿಯ ಕಡೆ ನಡೆಯುವುದೇ ಸಂಘಟನೆ!" ಎನ್ನುತ್ತಾ, ಕಾಂತಾ ಮುಂದುವರೆಸಿದ. "ಆ ಸಂಘಟನೆಗೆ ಎರಡು ಮುಖಗಳು. ನಮ್ಮನ್ನು ಮೋಸದಿಂದ ಆಳುತ್ತಿದ್ದ ಬ್ರಿಟೀಷರ ವಿರುದ್ಧ ಹೋರಾಡಿದರೆ, ನಮಗೆ ಶಿಕ್ಷೆಯಾಗುತ್ತಿತ್ತು. ಅಂದರೆ ಅಂತಹವರನ್ನೆಲ್ಲಾ ಒಂದು ಕಡೆ ಬಂಧಿಸಿ, ಹೊಡೆದು, ಇತ್ಯಾದಿ ಕ್ರೂರ ಹಿಂಸೆಗಳನ್ನು ನೀಡುತ್ತಿದ್ದರು. ಆದರೆ, ಅವರನ್ನು ಎದುರಿಸಬೇಕೆಂದರೆ, ನಮಗೆ ತಿಳಿಯಬೇಕಿದ್ದ ಹಲವು ವಿಚಾರಗಳಿದ್ದವು. ಅದನ್ನೆಲ್ಲಾ ತಿಳಿಸಲು ಮಿತ್ರ ಮೇಳ ಎಂಬ ಸಂಘಟನೆ. ವಿಚಾರಗಳನ್ನು ತಿಳಿದು, ನಿಧಾನವಾಗಿ ಬುಡದಿಂದ ಬ್ರಿಟೀಷಾಸುರನನ್ನು ಕಿತ್ತು ಬಿಸಾಡಲು- ಆಯುಧಗಳನ್ನು ಉಪಯೋಗಿಸಿ ಬ್ರಿಟೀಷಾಧಿಕಾರಿಗಳ ಮೇಲೆ ದಾಳಿ ಮಾಡಲು, ಹೊರದೇಶಗಳಿಂದ ಸಹಾಯ ಪಡೆಯಲು ಅಭಿನವ ಭಾರತ ಎಂಬ ಸಂಘಟನೆ. ಎರಡನೆಯದು ರಹಸ್ಯವಾದ ಸಂಘಟನೆ. ಅದರ ಇರುವಿಕೆಯ ಕುರಿತಾಗಿ ತಿಳಿದಿದ್ದರೂ, ಬ್ರಿಟೀಷಾಧಿಕಾರಿಗಳು ಸಾಕ್ಷಿಗಳಿಲ್ಲದ ಕಾರಣ ಅದನ್ನು ಏನೂ ಮಾಡಲಾಗಲಿಲ್ಲ. ಆದರೆ ಅನಂತ ಲಕ್ಷ್ಮಣ ಕಾನ್ಹೆರೆ ಎಂಬ ಹುಡುಗ ಜಾಕ್ಸನ್ ಎಂಬ ಅಧಿಕಾರಿಯನ್ನು ಕೊಂದಾಗ, ಎಲ್ಲೋ ಹೊರದೇಶದಲ್ಲಿದ್ದ ಸಾವರ್ಕರ್‌ರನ್ನು ಕರೆತಂದು, ಬ್ರಿಟೀಷ್‌ರಾಣಿಯ ವಿರುದ್ಧ ಮಸಲತ್ತು ಮಾಡಿದ್ದಕ್ಕಾಗಿ ದೂರದ ಸಮುದ್ರದ ಮಧ್ಯದಲ್ಲಿರುವ ದ್ವೀಪದಲ್ಲಿ ಬಂಧಿಸಿ ಹಿಂಸೆ ಕೊಡತೊಡಗಿದರು. ಆದರೆ ಇಲ್ಲಿ ಅಭಿನವ ಭಾರತ ಹಾಗೂ ಮಿತ್ರ ಮೇಳಗಳು ತಮ್ಮ ಕೆಲಸವನ್ನು ಬಿಡಲಿಲ್ಲ. ಅಷ್ಟಕ್ಕೂ ನಾನು ಇದರ ಬಗ್ಗೆ ನಿಮಗೆ ಹೇಳಿದ್ದೇಕೆ?" ಎನ್ನುತ್ತಾ ಕಾಂತಾ ಪ್ರಶ್ನೆಯೊಂದಿಗೆ ವಿರಾಮಿಸಲು, ನಾಗ, "ನೀವೂ ಆ ಸಂಘಟನೆಯಲ್ಲಿದ್ದಿರಿ ಅಲ್ಲವೇ?" ಎಂದನು. ಸಾಕ್ಷಿ, ಕಾಂತಾ, ಇಬ್ಬರೂ ನಾಗನ ಬೆನ್ನು ತಟ್ಟಿದರು. "ಭೇಷ್ ಕಣೋ. ಹೌದು. ನಾನೂ ಮಿತ್ರ ಮೇಳ-ಅಭಿನವ ಭಾರತದಲ್ಲಿ ಒಬ್ಬನಾಗಿದ್ದೆ. ಅಲ್ಲಿ ನಾವು ಮಾಡುತ್ತಿದ್ದ ಕೆಲಸಗಳು ಹಲವು. ಅಷ್ಟೇ ಅಲ್ಲ, ನಮ್ಮ ಕೃಷ್ಣಾಚಾರ್ಯರನ್ನು ನಾನು ಸಂಧಿಸಿದ್ದು ಅಲ್ಲಿಯೇ!" ಈ ಅನಿರೀಕ್ಷಿತ ತಿರುವು ನಮ್ಮನ್ನು ದಿಗ್ಭ್ರಮೆಗೊಳಪಡಿಸಿತು. ಇಷ್ಟು ದಿನ ಆಚಾರ್ಯರು, ಸಾಕ್ಷಿ, ಹಾಗೂ ಕಾಂತಾರ ನಡುವೆ ಸಂಬಂಧ ಇರುವುದೇ ತಿಳಿಯದ ನಮಗೆ, ಇಂದು ಬೃಹತ್ತಲ್ಲದಿದ್ದರೂ ಒಂದು ಜಾಲದ ಇರುವಿಕೆಯ ಅರಿವಾಯಿತು. ಇನ್ನೇನೂ ಕೇಳದೆಯೇ ಕಥೆಯನ್ನು ಕೇಳೋಣವೆಂದು ನಾವು ಕಣ್ಣು ಬಿಟ್ಟುಕೊಂಡೇ ಕಾಂತಾನ ಕಥೆ ಕೇಳತೊಡಗಿದೆವು. "ಕೃಷ್ಣಾಚಾರ್ಯರು, ಅಥವಾ ನೀವೆಲ್ಲರೂ ಕರೆಯುವಂತೆ ಆಚಾರ್ಯರು ನಮಗೆ ದೇಹದಂಡನೆಯನ್ನು ಹೇಳಿಕೊಡುತ್ತಿದ್ದರು. ನನ್ನ ವಯಸ್ಸಿನ ಹತ್ತಾರು ಹುಡುಗರು ಒಂದು ಹಳೆಯ ಕೋಟೆಯ ಬಳಿ ಸೇರುತ್ತಿದ್ದೆವು. ಆಚಾರ್ಯರು ನಿಂತು ಗಟ್ಟಿ ನದಿಯಲ್ಲಿ ನಾವು ಏನೇನು

ಮಾಡಬೇಕೆಂದು ಹೇಳುತ್ತಿದ್ದರು. ಅರ್ಥವಾಗದಿದ್ದರೆ ತೋರಿಸುತ್ತಿದ್ದರು. ನಾವು ಮಾಡುತ್ತಿದ್ದ ವ್ಯಾಯಾಮಗಳು ನಮ್ಮ ದೇಹವನ್ನಲ್ಲದೇ ಮನಸ್ಸನ್ನು ಶಕ್ತಿಶಾಲಿಯಾಗಿಡುತ್ತಿತ್ತು. ಇದರಿಂದ ದೇಶದ ಕುರಿತಾಗಿ ಹೇಳುತ್ತಿದ್ದ ವಿಷಯಗಳೆಲ್ಲವೂ ಬೇಗ ಬೇಗ ತಲೆಗೆ ಹತ್ತುತ್ತಿದ್ದವು. ನಾವು ಹುಡುಗರೆಲ್ಲರೂ ಸೇರಿ, ಆಚಾರ್ಯರು ಹೇಳಿಕೊಟ್ಟ ದಂಡ-ಬೈಠಕ್ ಇತ್ಯಾದಿಗಳನ್ನು ಮಾಡುತ್ತಿದ್ದೆವು. ಸಾಧಾರಣ ದಂಡ, ರಾಮಮೂರ್ತಿ ದಂಡಗಳನ್ನೇ ಹೆಚ್ಚಾಗಿ ಮಾಡುತ್ತಿದ್ದೆವು. ಬೈಠಕ್ ಅಂತೂ ಆಗಾಗ ಮಾಡಿಸುತ್ತಲೇ ಇದ್ದರು. ಇದರಿಂದ ತೊಡೆ, ಭುಜ, ಎದೆಗಳು ವಿಪರೀತವಾಗಿ ನೋಯುತ್ತಿದ್ದವಾದರೂ, ಚೈತನ್ಯದ ಹರಿವು ನಮಗೇ ತಿಳಿಯುತ್ತಿತ್ತು. ಛತ್ರಪತಿ ಶಿವಾಜಿ ಜಯಂತಿ ಇತ್ಯಾದಿ ಉತ್ಸವಗಳಲ್ಲಿ ನಾವು ಊರೆಲ್ಲಾ ಮೆರವಣಿಗೆ ಮಾಡುತ್ತಿದ್ದೆವು. ಇದರಿಂದ ಊರ ಜನರಲ್ಲೂ ದೇಶಭಕ್ತಿ ಮೂಡುತ್ತಿತ್ತು. ಇವೆಲ್ಲವೂ ಹೊರನೋಟಕ್ಕೆ ಸಾಂಸ್ಕೃತಿಕ, ದೈಹಿಕ ಶಿಬಿರಗಳಾಗಿದ್ದವು. ಬ್ರಿಟೀಷ್ ಅಧಿಕಾರಿಗಳಿಗೆ ಕಾಣುವಂತೆ ಸಾಂಪ್ರದಾಯಿಕ ಉತ್ಸವ ಇತ್ಯಾದಿಗಳನ್ನು ಏರ್ಪಡಿಸುತ್ತಿದ್ದೆವು. ಆದರೆ ಒಳಗೊಳಗೇ ಹಲವು ಕಾರ್ಯಗಳ ಸಂಚನ್ನೂ ರೂಪಿಸುತ್ತಿದ್ದೆವು. ಹಾಗೆ ರಹಸ್ಯವಾಗಿ ನಡೆಸುತ್ತಿದ್ದ ಕಾರ್ಯಗಳ ಕೆಲವು ರೋಚಕ ಘಟನೆಗಳಿವೆ. ಹೇಳುತ್ತೇನೆ ಕೇಳಿ."

ಬಂಡೆಯ ಮೇಲೆ ಕುಳಿತಿದ್ದ ಭಂಗಿಯನ್ನು ನಾವು ಬದಲಿಸಿದೆವು.

"ವೀರ ಸಾವರ್ಕರ್‌ರವರ 1857ರ ಸ್ವಾತಂತ್ರ್ಯ ಸಂಗ್ರಾಮ ಪುಸ್ತಕವನ್ನು ಬ್ರಿಟೀಷ್ ಸರ್ಕಾರವು ನಿಷೇಧಿಸಿತ್ತು. ಅದನ್ನು ಹೊಂದಿರುವ ಪ್ರತಿಯೊಬ್ಬನನ್ನೂ ಬಂಧಿಸಿ, ಪುಸ್ತಕದ ಪ್ರತಿಯನ್ನು ಸುಟ್ಟು ಹಾಕುತ್ತಿದ್ದರು. ಆದರೆ ಅದು ಸ್ವಾತಂತ್ರ್ಯ ಹೋರಾಟಗಾರರಿಗೆ, ಪ್ರತಿಯೊಬ್ಬ ದೇಶವಾಸಿಗೂ ಭಗವದ್ಗೀತೆಯಂತೆ ಆಗಿತ್ತು. 1857ರ ಆ ಸ್ವಾತಂತ್ರ್ಯ ಸಂಗ್ರಾಮದ ಕುರಿತಾಗಿ ತಿರುಚಿದ ಕಥೆಯನ್ನು ಬ್ರಿಟೀಷ್ ಭಾರತೀಯರಿಗೆ ಹೇಳಿತ್ತು. ಆದರೆ ಸತ್ಯ ಬೇರೆ ಎಂದಾಗ, ಆ ಕಾಲದ ವೀರರ ಸ್ಫೂರ್ತಿ ಕಂಡಾಗ, ಅವರ ಹಿಂದಿನ ಕಾರಣ ಕಂಡಾಗ, ಜನರಲ್ಲಿ ಉಕ್ಕಿದ್ದು ಸಾಮಾನ್ಯವಾದ ಕೋಪ ಅಲ್ಲ. ಮನ್ಯು! ಆಚಾರ್ಯರು ಆಗಾಗ ಹೇಳುತ್ತಿರಬೇಕಲ್ಲ, ನಮಸ್ತೆ ರುದ್ರ್ಯ ಮನ್ಯವ ಉತೋ ತ ಇಷವೇ ನಮಃ ಅಂತ?[8]" ಎಂದು ಕಾಂತಾ ನಿಲ್ಲಿಸಲು, ಅಂದು ಬೆಳಗ್ಗೆಯೇ ಆಚಾರ್ಯರ ನದಿಯಲ್ಲಿ ಅದನ್ನು ಕೇಳಿದ್ದ ನಾನು, "ಹೌದು ಹೌದು" ಎಂದೆ. ಕಾಂತಾ ಅದರ ಅರ್ಥವನ್ನು ಹೇಳಿದ. "ಹೇ ರುದ್ರ! ನಿನ್ನ ಕೋಪಕ್ಕೆ ಹಾಗೂ ನಿನ್ನ ಬಾಣಕ್ಕೆ ನಮಸ್ಕಾರ. ಧನಸ್ಸು ಕ್ರಿಯೆ ಅಥವಾ ಕರ್ಮಕ್ಕೆ ಪ್ರೇರಣೆ ನೀಡುವ ಪ್ರೇರಕ ತತ್ವವಾದರೆ, ಬಾಣವು ಕ್ರಿಯೆ ಅಥವಾ

8. ತೈತ್ತಿರೀಯ ಸಂಹಿತೆಯ ರುದ್ರ ಮಂತ್ರಗಳು – ಅರ್ಥ ಹಾಗೂ ವ್ಯಾಖ್ಯಾನ – ಆರ್‌ಎಲ್ ಕಶ್ಯಪ್; ಪುಟ 26

ಕರ್ಮವನ್ನು ಪೂರೈಸುವ ಸಾಧನ. ಇಲ್ಲಿ ಧನಸ್ಸು ಎಂದರೆ ಸಂಚಲನ ಶಕ್ತಿಯ ಸಂಕೇತ." ಈ ಬಾರಿ ಸಾಕ್ಷಿ ಪ್ರಶ್ನೆಯೊಂದನ್ನು ಕೇಳಿದ. "ರುದ್ರನ ಕೋಪಕ್ಕೆ ನಮಸ್ಕರಿಸುವುದು ಎಂದರೆ ಏನು ಕಾಂತಾ?" ಹೌದಲ್ಲವೇ? ಎಂತಹ ವಿಚಿತ್ರ ಪ್ರಕ್ರಿಯೆ? ಕಾಂತಾ ಎಷ್ಟಾದರೂ ಆಚಾರ್ಯರ ಬಳಿ ಕಲಿತವನು. ಅವನು, "ಮನ್ಯು ಎಂದರೆ ಕೋಪ ಅಥವಾ ಸಿಟ್ಟು. ಆದರೆ ಇದು ಸಹಜವಾದ ಮಾನುಷೀ ಕೋಪಕ್ಕೆ ಅನ್ವಯಿಸುವ ಶಬ್ದವಲ್ಲ. ಪಾಪವನ್ನು ಹಾಗೂ ಅನ್ಯಾಯವನ್ನು ತೊತ್ತಳ ತುಳಿಯುವಂತಹ ಪರಮೇಶ್ವರೀಯ ಪ್ರತಾಪಕ್ಕೆ ಮನ್ಯು ಎಂದು ಕರೆಯುತ್ತಾರೆ. ಈ ರುದ್ರನ ಪ್ರಬಲ-ಪ್ರತಾಪವು ಶತ್ರುವನ್ನು ಹಾಗೂ ವಿಘ್ನಕಾರಿಯನ್ನು ಸದೆಬಡಿಯುತ್ತದೆ" ಎಂದಾಗ, ಜನರ ಸಮೂಹ ಆಕ್ರೋಶ ಈಗಲೂ ಹೇಗಿರಬಹುದೆಂದು ನಾವು ಯೋಚಿಸಿದೆವು.

5

"ಬ್ರಿಟೀಷಿನ ಕೆಂಪು ಬಟ್ಟೆಯ ಸಿಪಾಯಿಗಳು ಆ ಪುಸ್ತಕ ಇದ್ದರೆ ನಮ್ಮನ್ನು ಎಳೆದೊಯ್ಯುತ್ತಾರಾ? ಏನು ಮಾಡುತ್ತಾರೋ ನೋಡುವ ಎನ್ನುವ ಕೋಪಕ್ಕಾದರೂ ಗುಟ್ಟಾಗಿ ಬರುತ್ತಿದ್ದ ಹಲವು ಪ್ರತಿಗಳನ್ನು ಕೊಳ್ಳುತ್ತಿದ್ದರು. ಪುಸ್ತಕಕ್ಕೆ ನಿಗದಿಯಾದ ಬೆಲೆಗಿಂತಲೂ ಹೆಚ್ಚು ಕೊಟ್ಟು! ಕೆಲವೊಮ್ಮೆ, ಬ್ರಿಟೀಷ್ ಸೈನಿಕರು ಊರಿನೊಳಕ್ಕೆ ಪಹರೆ ಬರುತ್ತಿದ್ದರು. ಆಗ ಈ ರೀತಿಯ ಪುಸ್ತಕಗಳು, ಆಯುಧಗಳು ಇತ್ಯಾದಿಯನ್ನು ಅವರು ಹುಡುಕಿ ಜಪ್ತಿ ಮಾಡಿಕೊಂಡು, ಕೈಗಳಿಗೆ ಬೇಡಿ ಹಾಕಿ ಕರೆದುಕೊಂಡು ಹೋಗುತ್ತಿದ್ದರು. ಆದರೆ ಎಷ್ಟು ದಿನ ಎಂದು ಇದನ್ನು ಸಹಿಸುವುದು? ಪುಸ್ತಕವನ್ನು ಯಾರೂ ಊಹಿಸಲಾರದ ಸ್ಥಳಗಳಲ್ಲಿ ಬಚ್ಚಿಡುತ್ತಿದ್ದರು. ಇನ್ನೂ ಕಟ್ಟುತ್ತಿದ್ದ ಮನೆಯ ಗೋಡೆಯೊಳಗೆ, ಅಕ್ಕಿ ಚೀಲಗಳಲ್ಲಿ, ಇತ್ಯಾದಿ. ಇನ್ನೂ ಬುದ್ಧಿವಂತು, ಆ ಸೈನಿಕರ ಪವಿತ್ರ ಗ್ರಂಥವಾದ ಬೈಬಲ್ಲಿನ ಹಾಗೆ ಅದರ ಹೊರನೋಟವನ್ನೇ ಬದಲಿಸಿ, ದೇವರ ಮುಂದೆ ಇಡುತ್ತಿದ್ದರು. ಇವರ 'ಪವಿತ್ರ' ಭಕ್ತಿಯನ್ನು ಕಂಡು, ಸೈನಿಕರು ಮಾರುಹೋಗಿ, ಅದಕ್ಕೆ ನಮಸ್ಕರಿಸಿ ಹೋಗುತ್ತಿದ್ದರು! ಹೀಗೆ ಆ ಪುಸ್ತಕವನ್ನು ಅಲ್ಲರೂ ಓದತೊಡಗಿದರು. ಅದು ಬೇರೆ ಭಾಷೆಯಲ್ಲಿದ್ದುದರಿಂದ ಅದನ್ನು ಕನ್ನಡಕ್ಕೂ ಅನುವಾದ ಮಾಡಿದರು. ನಾವೆಲ್ಲರೂ ಅದನ್ನು ಓದಿ, ಝಾನ್ಸಿ ರಾಣಿ, ಬಹದ್ದೂರ್‌ಶಾ ಜಫರ್, ಮಂಗಲ್ ಪಾಂಡೆ ಮುಂತಾದವರನ್ನು ಆರಾಧಿಸತೊಡಗಿದೆವು. ಇಷ್ಟೇ ಅಲ್ಲದೆ ಇನ್ನೂ ಪೂರ್ವದಲ್ಲಿ ದೇಶವನ್ನು ಆಳಿದ ಛತ್ರಪತಿ ಶಿವಾಜಿ, ಮುಂತಾದ ರಾಜರ ಕಥೆಗಳನ್ನು ಕೇಳಿ ಸ್ಫೂರ್ತಿಯನ್ನು ಪಡೆಯುತ್ತಿದ್ದೆವು. ಮುಖ್ಯವಾಗಿ ಅವರ ಗೆರಿಲ್ಲಾ ಯುದ್ಧತಂತ್ರಗಳು ನಮಗೆ ಅಚ್ಚುಮೆಚ್ಚಾದವು. ಊರಲ್ಲಿದ್ದ ಹಳೆಯ ಕೋಟೆಯಲ್ಲಿ

ಆ ಗೆರಿಲ್ಲಾ ಯುದ್ಧತಂತ್ರಗಳನ್ನು ಅಭ್ಯಸಿಸುತ್ತಿದ್ದೆವು. ಬ್ರಿಟೀಷ್ ಜನ 'ಪಟ್ಟಾಭಿಷೇಕ' ಎಂದು ನಮ್ಮವರಲ್ಲಿ ಕೆಲವರು ಹಿಗ್ಗುವುದನ್ನು ನೋಡಿ ಅಸಹ್ಯವಾಗುತ್ತಿತ್ತು. ಈ ಭಾವವನ್ನು ಹೋಗಲಾಡಿಸಬೇಕೆಂದು ನಾವು ಒಂದು ಅದ್ಭುತ ಕೆಲಸ ಮಾಡಿದೆವು. ಈಗ ನೆನೆಸಿಕೊಂಡರೂ ಮೈಯೆಲ್ಲಾ ರೋಮಾಂಚನ ಉಂಟಾಗುವಂತಹ ಕೆಲಸ ಅದು. ಅಭಿನವ ಭಾರತದವರೆಲ್ಲರೂ ಸೇರಿ ಊರಿನಲ್ಲೇ ಇದ್ದ ಬ್ರಿಟೀಷ್ ರಾಣಿ ಒಬ್ಬಳ ಮೂರ್ತಿಗೆ ಮಸಿ ಬಳಿಯಬೇಕು ಎಂದು ಅಂದುಕೊಂಡೆವು. ಕಷ್ಟಸಾಧ್ಯವಾದ ಕೆಲಸ ಇದು ಎಂದು ಕೆಲವರು ಅಭಿಪ್ರಾಯಪಟ್ಟರೆ, ಕೆಲವರು ಏ! ಇದು ಯಾವ ಲೆಕ್ಕ ಎನ್ನುವಂತೆ ಇದ್ದರು. ಎಲ್ಲರೂ ಸೇರಿ ಈ ಕೆಲಸವನ್ನು ಮಾಡುವುದು ಹೇಗೆ ಎಂದು ಯೋಚಿಸತೊಡಗಿದೆವು. ಎಲ್ಲವೂ ತನ್ನಂತಾನೆ ಹೊಳೆಯಿತು. ಬೆಳಕು ಕಳೆದು, ರಾತ್ರಿ ಆಯಿತು. ಮಧ್ಯರಾತ್ರಿಯ ಕಾರ್ಗತ್ತಲು. ಎಲ್ಲಿಯಾದರೂ ಸೈನಿಕರು ತಿರುಗಾಡುತ್ತಿರಬಹುದು, ಅಥವಾ ಮದಿರೆಯ ಮತ್ತಿನಲ್ಲಿರಬಹುದು. ಅವರನ್ನು ಏಮಾರಿಸುವುದು ಒಂದು ಕೆಲಸವೇ? ಒಬ್ಬೊಬ್ಬರಾಗಿ, ಕಪ್ಪು ಬಟ್ಟೆ ಧರಿಸಿ, ಮಸಿಯನ್ನು ಸಿದ್ಧಗೊಳಿಸಿ, ಚಿಕ್ಕ ಪಂಜೊಂದನ್ನೂ ಹೊತ್ತಿಸಿಕೊಂಡು, ಒಬ್ಬೊಬ್ಬರಾಗಿ ಹೊರಡತೊಡಗಿದೆವು. ಯಾರೂ ಇರುವುದಿಲ್ಲ ಎಂದು ತಿಳಿದಿದ್ದರೂ ನಾವು ಯಾವ ಸದ್ದೂ ಮಾಡದೆ ನಡೆಯತೊಡಗಿದೆವು. ಯಾರಿಗೆ ಗೊತ್ತು? ಯಾರಾದರೂ ದ್ರೋಹಿ ಒಬ್ಬ ಎದ್ದು, ಸೈನಿಕರಿಗೆ ಮಾಹಿತಿ ಕೊಟ್ಟುಬಿಟ್ಟರೆ? ಗಲ್ಲಿ ಗಲ್ಲಿಗಳಲ್ಲಿ ಚಿಕ್ಕ ಸದ್ದು ಬಂದರೂ ಬಚ್ಚಿಟ್ಟುಕೊಳ್ಳುತ್ತಾ, ಎದುರು ಬರುವ ನಾಯಿಗಳಿಗೆಲ್ಲಾ ಮಾಂಸದ ತುಂಡುಗಳನ್ನೆಸೆದು ಬಾಯಿ ಮುಚ್ಚಿಸುತ್ತಾ, ಬ್ರಿಟೀಷ್ ರಾಣಿಯ ವಿಗ್ರಹ ಇದ್ದ ವೃತ್ತಕ್ಕೆ ಬಂದೆವು. ಮಧ್ಯದಲ್ಲಿ ಅವಳ ಮೂರ್ತಿ, ನಾಲ್ಕು ದಿಕ್ಕುಗಳಿಂದ ನಾಲ್ಕು ಗಲ್ಲಿಗಳು. ನಾಲ್ಕು ಗಲ್ಲಿಗಳಿಂದಲೂ ಅಭಿನವ ಭಾರತದ ನಾಲ್ಕು ನಾಲ್ಕು ಮಂದಿ-ಒಟ್ಟು ಹದಿನಾರು. ಇನ್ನೇನು ಗಲ್ಲಿಯ ಕತ್ತಲೆಯನ್ನು ಬಿಟ್ಟು ಹೊರ ಬರಬೇಕು, ಖಾಕಿ ಧರಿಸಿದ್ದ ಸೈನಿಕನೊಬ್ಬ ಲಾಠಿಯನ್ನು ಕುಟ್ಟುತ್ತಾ ಬಂದ. ಅವನು ಭಾರತದವನೇ, ಆದರೆ ಬ್ರಿಟೀಷರಿಗಾಗಿ ಕೆಲಸ ಮಾಡುವವನು. ಇಂತಹವರನ್ನು ಕಂಡರೆ ನಮಗೆ ರಕ್ತ ಕುದಿಯುತ್ತಿತ್ತು. ಆದರೆ ಇಲ್ಲಿ ಅಚಾತುರ್ಯದ ಕೆಲಸ ಮಾಡುವಂತಿರಲಿಲ್ಲ. ಯಾರೂ ದುಡುಕಬೇಡಿ ಎಂದು ನಮ್ಮಲ್ಲಿಯ ಒಬ್ಬ ಹಿರಿಯ ನಾಲ್ಕೂ ಗಲ್ಲಿಗಳಲ್ಲಿರುವವರಿಗೆ ಸನ್ನೆ ಮಾಡಿ ತೋರಿಸಿದ. ಇದ್ದಕ್ಕಿದ್ದ ಹಾಗೆ ಹಿಂದಿನಿಂದ ಒಬ್ಬನು ಓಡಿ ಹೋಗಿ, ತನ್ನ ಬಳಿಯಿದ್ದ ದೊಣ್ಣೆಯಿಂದ ಆ ಸಿಪಾಯಿಯ ತಲೆಗೆ ಹೊಡೆದ. ಅವನು ಮೂರ್ಛೆ ಹೋದ. ತಕ್ಷಣ, ಅವನ ಬಳಿ ಇದ್ದ ಬಟ್ಟೆಯಿಂದ ಆ ಸಿಪಾಯಿಯನ್ನು ಬಂಧಿಸಿದ, ಗಟ್ಟಿಯಾಗಿ ಕಟ್ಟಿ, ಅವನ ಬಟ್ಟೆಯ ಮೇಲೆ

ಮಸಿಯಲ್ಲಿ 'ದ್ರೋಹಿ' ಎಂದು ಬರೆದ. ನಂತರ, ನಮ್ಮೆಲ್ಲರನ್ನೂ ನೋಡಿ, "ಬನ್ನಿರೋ" ಎಂದ. ನಾವು ನಿಧಾನವಾಗಿ ಹೋದೆವು. ಇನ್ನು ಯಾರು ಇತ್ತ ಸುಳಿಯುತ್ತಿರುವಂತೆ ನಮಗೆ ಕಾಣಲಿಲ್ಲ. ದರ್ಪದಿಂದ ನಿಂತಿದ್ದ ಬ್ರಿಟೀಷ್ ರಾಣಿಯ ಮೂರ್ತಿ ಇದ್ದ ಪೀಠದ ಮೇಲೆ ಮೂವರು ಹತ್ತಿದರು. ಪಾತ್ರೆಯಲ್ಲಿದ್ದ ಮಸಿಯನ್ನು ತೆಗೆತೆಗೆದು ಅವಳ ತಲೆಯಿಂದ ಹಿಡಿದು ಕಾಲಿನ ತನಕ 'ಪಟ್' 'ಪಟ್' ಎಂದು ಎಸೆದರು. ಹಾಲುಗಲ್ಲಿನ ಆ ಮೂರ್ತಿಗೆ ಆಗಬೇಕಾದಷ್ಟು ಅವಮಾನ ಆಗಿತ್ತು. ನಂತರ ಪೀಠದ ಮೇಲಿದ್ದ ಖಾಲಿ ಜಾಗದಲ್ಲಿ, ಸ್ವಾತಂತ್ರ್ಯ ಲಕ್ಷ್ಮಿಗೆ ಜೈ ಎಂದು ದಪ್ಪ ಅಕ್ಷರಗಳಲ್ಲಿ ಒಬ್ಬ ಬರೆದನು. ಬಂದ ದಾರಿಯಲ್ಲೇ ಹಿಂದಿರುಗುತ್ತಿರುವಾಗ, ಗೋಡೆಗಳ ಮೇಲೆ, ದೊಡ್ಡ ಮರದ ಮೇಲೆ ಎಲ್ಲಾ ಬ್ರಿಟೀಷರೇ ತೊಲಗಿ, ಎಂದೂ, ಭಾರತ್ ಮಾತಾ ಕೀ ಜೈ ಎಂದೂ ಬರೆಯುತ್ತಾ ಹೋದೆವು. ಕೋಟೆಯನ್ನು ತಲುಪಿದ ತಕ್ಷಣ ನಮ್ಮ ಬಟ್ಟೆಗಳನ್ನೆಲ್ಲಾ ಬದಲಾಯಿಸಿ, ಮಸಿಯಾಗಿದ್ದ ಮೈ-ಕೈಗಳನ್ನು ತೊಳೆದುಕೊಂಡು, ನಮ್ಮ ವ್ಯಾಯಾಮವನ್ನು ಆರಂಭಿಸಿದೆವು. ಎಂದಿನಂತೆ ಎದ್ದ ಊರಿನ ಜನಗಳಿಗೆ 'ಓ ಮಿತ್ರ ಮೇಳ ವ್ಯಾಯಾಮ ಆರಂಭಿಸಿದೆ' ಎಂದು ಅನ್ನಿಸಬೇಕು. ರಾಣಿಯ ಮೂರ್ತಿಯ ಕಡೆ ನೋಡಿದಾಗ ಆಶ್ಚರ್ಯವಾಗಬೇಕು. ಅದು ನಡೆದದ್ದೂ ಹಾಗೆಯೇ. ಜೊತೆಗೆ ಕೆಳಗೆ ದ್ರೋಹಿ ಎಂದು ಬರೆಸಿಕೊಂಡಿದ್ದ ಸಿಪಾಯಿ ಬೇರೆ! ಬ್ರಿಟೀಷ್ ಸೈನಿಕರು ಆ ಸಿಪಾಯಿಯನ್ನು ಇಟ್ಟುಕೊಳ್ಳಲೇ ಇಲ್ಲ! ಅವನ ಕಟ್ಟುಗಳನ್ನು ಬಿಚ್ಚಿ ಕಳುಹಿಸಿಬಿಟ್ಟರು. ಅದೇ ಅವನು ಬಿಳಿಯ ಸೈನಿಕನಾಗಿದ್ದರೆ, ಇಷ್ಟು ಹೊತ್ತಿಗೆ ಅನುಕಂಪದ ಕಟ್ಟೆ ಒಡೆದು ಅವನಿಗೆ ರಾಣಿಯ ಸೇವೆಯ ಪದಕ ದೊರೆಯುತ್ತಿತ್ತೋ ಏನೋ! ಇಷ್ಟಾದರೂ ಅವರ ಸೇವೆಯಲ್ಲೇ ಹೋಗಿ ಸೇರಿಕೊಳ್ಳುವ ಭಾರತೀಯರಿಗೆ ಬುದ್ಧಿ ಬರುವುದಿಲ್ಲ! ರಾಣಿಯ ಮೂರ್ತಿಗೆ ಮಸಿ ಬಳಿದಿರುವ ಸುದ್ದಿ ಜೋರಾಗಿ ಹರಡಿತು. ನಮ್ಮ ಆನಂದಕ್ಕೆ ಪಾರವೇ ಇರಲಿಲ್ಲ. ಅಷ್ಟಕ್ಕೂ ಸ್ವಾತಂತ್ರ್ಯದ ಕಡೆಗೆ ಇದೊಂದು ಚಿಕ್ಕ ಹೆಜ್ಜೆ ಅಷ್ಟೆ. ಇದೇ ರೀತಿಯಲ್ಲಿ ನಮ್ಮ ಮಿತ್ರ ಮೇಳ, ಅಭಿನವ ಭಾರತ ಸಂಘಟನೆಗಳು ಸಾಗುತ್ತಿತ್ತು. ಆದರೆ ದ್ರೋಹಿಗಳು ಎಲ್ಲ ಕಡೆ ಇರುತ್ತಾರಲ್ಲವೇ? ನಾವು ನಮ್ಮ ವ್ಯಾಯಾಮ ಮಾಡುತ್ತಿದ್ದ ಕೋಟೆಯಲ್ಲಿ ಕತ್ತಿ, ಬಿಲ್ಲು-ಬಾಣ, 1857ರ ಸ್ವಾತಂತ್ರ್ಯ ಸಂಗ್ರಾಮದ ಪುಸ್ತಕಗಳು, ಕೆಲವು ಹೊರದೇಶದ ಕ್ರಾಂತಿಕಾರಿಗಳು ಬರೆದ ಗ್ರಂಥಗಳನ್ನು ಇಟ್ಟಿದ್ದೆವು. ಆ ಕೋಟೆಯೊಳಗೆ ಒಬ್ಬನು ಸದಾ ಇರುತ್ತಿದ್ದ. ಈ ರಹಸ್ಯ ಸಂಘಟನೆಗಳ ಒಂದು ಕಾರ್ಯರೀತಿ ಇರುತ್ತದೆ. ಇದರಲ್ಲಿ ಸಂಕೇತಗಳ ಉಪಯೋಗ ಬಹು ಸಾಮಾನ್ಯ. ಅದರಂತೆಯೇ ನಾವು ಆ ಕೋಟೆ ಒಳಗೆ ಯಾರೇ ಇದ್ದರೂ ಅವನನ್ನು ಗಣೇಶ ಎನ್ನುತ್ತಿದ್ದೆವು. ಯಾವುದೋ ಒಂದು

ಸಮಾಲೋಚನೆಗೆ ಸೇರಬೇಕು ಎಂದಾಗ, ಗಣೇಶನ ದೇವಸ್ಥಾನಕ್ಕೆ ಹೋಗಿ ಬರೋಣಾಪ್ಪ ಎಂದು ಸದಸ್ಯರಿಗೆ ಹೇಳುತ್ತಿದ್ದೆವು. ಆಚಾರ್ಯರಿಗೆ ಸಂಕೇತ ಭಾಷೆಯಲ್ಲಿ 'ಪೂಜಾರಿ' ಎನ್ನುತ್ತಿದ್ದೆವು. ಅವರು ಅಂದು ಏನಾದರೂ ವಿಶೇಷವಾಗಿ ತಿಳಿಸುವುದಿದ್ದರೆ 'ಇಂದು ಮಹಾಪ್ರಸಾದ ಇರುತ್ತೆ, ತಪ್ಪದೆ ಬರಬೇಕು' ಎನ್ನುತ್ತಿದ್ದೆವು. ಹೀಗೆ, ಆಚಾರ್ಯರು ನಮ್ಮನ್ನು ಆಗಾಗ ಕರೆದು, ಬೇರೆಡೆ ನಡೆಯುತ್ತಿದ್ದ ಮಹತ್ವದ ಘಟನೆಗಳು, ಸಂಘಟನೆಯ ಬಲವರ್ಧನೆ, ಸುದ್ದಿಪತ್ರಿಕೆಗಳ ಓದು, ಇತ್ಯಾದಿಗಳನ್ನು ಮಾಡಿಸುತ್ತಿದ್ದರು. ನಾವು ಇವೆಲ್ಲವನ್ನೂ ದೊಡ್ಡದೊಂದು ಕೊಠಡಿಯಲ್ಲಿ ಮಾಡುತ್ತಿದ್ದೆವು. ಆ ಕೊಠಡಿಗೊಂದು ಶಕ್ತಿಶಾಲಿ ಬಾಗಿಲಿತ್ತು. ಅದನ್ನು ತೆಗೆಯಬೇಕೆಂದರೆ, 'ದೇಶಪೂಜೆ ಮಾಡುವ ಪೂಜಾರಿ ಇದ್ದಾರಾ?' ಎಂದು ಕೇಳಬೇಕಾಗಿತ್ತು. ಆಗ ನಮಗೆ ನಮ್ಮದೇ ಸದಸ್ಯ ಅವನೆಂದು ತಿಳಿಯುತ್ತಿತ್ತು. ಅದೇ ಬೇರೆಯವರು ಬಂದರೆ, ಅವರಿಗೆ ಕೇಳುವುದೇನೋ ತಿಳಿಯುತ್ತಿರಲಿಲ್ಲ. ಅಕಸ್ಮಾತ್ ಅವರನ್ನು ಒಳಗೆ ಬಿಟ್ಟರೂ, ಅವರು ಬರುವಷ್ಟರಲ್ಲಿ ನಮ್ಮ ಅವತಾರಗಳೆಲ್ಲ ಬದಲಾಗುತ್ತಿದ್ದವು. ನಿಜವಾಗಲೂ ಅಲ್ಲಿ ಗಣೇಶನ ಪೂಜೆ ನಡೆಯುತ್ತಿದೆ ಎನ್ನುವಂತೆ ಆಗುತ್ತಿತ್ತು. ಅದರೆ ಇಲ್ಲೂ ದ್ರೋಹಿಗಳಿರುತ್ತಾರಲ್ಲ! ನಮ್ಮ ಸಂಘಟನೆಯವನೇ ಒಬ್ಬನು ದುಡ್ಡಿನ ಆಸೆಗೆ ಬ್ರಿಟೀಷ್ ಸೈನಿಕರನ್ನು ಕರೆದುಕೊಂಡು ಬಂದು 'ದೇಶಪೂಜೆ ಮಾಡುವ ಪೂಜಾರಿ ಇದ್ದಾರಾ?' ಎಂದು ಕೇಳಿದ. ನಮಗೆ ಸಂದೇಹವೇ ಬರಲಿಲ್ಲ! ದೇಶದ್ರೋಹ ಎಂಬುದು ಅತ್ಯಂತ ಹೀನವಾದ ಪಾಪ ಎಂಬುದು ನಮ್ಮ ಅಭಿಪ್ರಾಯ. ಎಲ್ಲರದ್ದೂ ಅದೇ ಆಗಿರಬಹುದೆಂದು ನಾವು ಭ್ರಮಿಸಿದ್ದೆವು. ನಾವು ಬಾಗಿಲು ತೆರೆಯುವಷ್ಟರಲ್ಲಿ, ಬಂದೂಕು ಹಿಡಿದ ಹತ್ತು ಮಂದಿ ಸೈನಿಕರು ಆಚಾರ್ಯರನ್ನೂ, ನನ್ನನ್ನೂ, ಇನ್ನೂ ಐದಾರು ಮಂದಿಯನ್ನು ಬಂಧಿಸಿದರು. ನಮ್ಮ ಕೈಗಳಿಗೆ ಬೇಡಿ ಹಾಕಿದರು. ಕೊಠಡಿಯೆಲ್ಲವನ್ನೂ ಪರಿಶೀಲಿಸಿ, ಕತ್ತಿ ಬಿಲ್ಲು ಬಾಣ ಇತ್ಯಾದಿಗಳನ್ನು ವಶಪಡಿಸಿಕೊಂಡರು. ಆಗ ಮುಸ್ಸಂಜೆ. ನನಗೆ ಚೆನ್ನಾಗಿ ನೆನಪಿದೆ. ಊರೊಳಗೆ ಎಲ್ಲರಿಗೂ ಕಾಣುವಂತೆ ನಮ್ಮನ್ನು ಎಳೆದೊಯ್ದರು. ನಾವು 'ಸ್ವಾತಂತ್ರ್ಯಲಕ್ಷ್ಮೀ ಕೀ ಜೈ!' 'ಭಾರತ್ ಮಾತಾ ಕೀ ಜೈ' ಇತ್ಯಾದಿ ಘೋಷಣೆಗಳನ್ನು ಗಂಟಲು ಹರಿವಂತೆ ಕೂಗುತ್ತಿದ್ದೆವು. ಆಚಾರ್ಯರು ಮಾತ್ರ ಅಂತರ್ಮುಖಿಯಾಗಿ, ಏನೂ ಮಾತನಾಡದೆ ನಡೆಯುತ್ತಿದ್ದರು. ಜನರೆಲ್ಲರೂ ತಮ್ಮ ತಮ್ಮ ಮನೆಗಳಿಂದ ಹೊರ ಬಂದು ನಮ್ಮನ್ನು ನುಂಗುವವರಂತೆ ನೋಡುತ್ತಿದ್ದರು. ಪ್ರಾಣಭಯ! ನಮ್ಮನ್ನು ಅನುಮೋದಿಸುವವರೇ ಇಲ್ಲ! ನಮ್ಮನ್ನು ಬೆಂಬಲಿಸುತ್ತಿದ್ದ ಕೆಲವು ಸಾಮಾನ್ಯ ಜನರಂತೂ ತಲೆ ಮರೆಸಿಕೊಂಡುಬಿಟ್ಟರು. ಇನ್ನು ನಮಗೆ ಯಾವ ಗಂಡಾಂತರ ಕಾದಿದೆಯೋ ಎಂದು ನಾನು ಯೋಚಿಸುತ್ತಿದ್ದೆ. ನಾವು ಪ್ರಾಣದ ಮೇಲಿನ

ಆಸೆಯನ್ನು ತೊರೆದೇ ಅಭಿನವ ಭಾರತಕ್ಕೆ ಸೇರಿಕೊಂಡಿದ್ದೆವು. ನನಗೆ ನಾವು ಸೇರಿಕೊಳ್ಳುವಾಗ ಮಾಡಿದ ಪ್ರತಿಜ್ಞೆಯು ಜ್ಞಾಪಕಕ್ಕೆ ಬರುತ್ತಿತ್ತು:

ದೇವರ ಹೆಸರಿನಲ್ಲಿ,
ಭಾರತ ಮಾತೆಯ ಹೆಸರಿನಲ್ಲಿ,
ಭಾರತ ಮಾತೆಗಾಗಿ ತಮ್ಮ ರಕ್ತವನ್ನು ಸುರಿಸಿದ ಎಲ್ಲಾ ಹುತಾತ್ಮರ ಹೆಸರಿನಲ್ಲಿ,
ನನ್ನ ಪಿತೃಗಳ ಚಿತಾಭಸ್ಮ ಇರುವ, ನನ್ನ ಮಕ್ಕಳ ತೊಟ್ಟಿಲಾಗಿರುವ ಜನ್ಮಭೂಮಿಯ ಮೇಲಿನ ಜನ್ಮಜಾತ ಪ್ರೀತಿಯ ಸಲುವಾಗಿ,
ವಿದೇಶಿಗನು ಗುಲಾಮರನ್ನಾಗಿಸಿ, ಜೈಲಿನಲ್ಲಿಟ್ಟು, ಚಿತ್ರಹಿಂಸೆ ನೀಡಿ ಕೊಂದ ತಮ್ಮ ಮಕ್ಕಳಿಗಾಗಿ ತಾಯಂದಿರ ಕಣ್ಣೀರಿನ ಸಲುವಾಗಿ,
ನಾನು, ಕಾಂತಾ,
ಸಂಪೂರ್ಣ ರಾಜಕೀಯ ಸ್ವಾತಂತ್ರ್ಯ ಅಥವಾ ಸ್ವರಾಜ್ಯವಿಲ್ಲದೆ ನನ್ನ ದೇಶವು ಭೂಮಿಯ ರಾಷ್ಟ್ರಗಳ ನಡುವೆ ಉನ್ನತ ಸ್ಥಾನಕ್ಕೆ ಏರಲು ಸಾಧ್ಯವಿಲ್ಲ ಎಂದೂ,
ವಿದೇಶಿಯರ ವಿರುದ್ಧ ರಕ್ತಸಿಕ್ತ ಮತ್ತು ಪಟ್ಟುಬಿಡದ ಯುದ್ಧದ ಹೊರತಾಗಿ ಸ್ವರಾಜ್ಯವನ್ನು ಎಂದಿಗೂ ಸಾಧಿಸಲಾಗುವುದಿಲ್ಲ ಎಂದೂ ಮನಗಂಡು,
ಈ ಕ್ಷಣದಿಂದ ತಾಯ ಸ್ವರಾಜ್ಯ ಕಮಲ ಕಿರೀಟವನ್ನು ಪುನಃ ಸ್ಥಾಪಿಸಲು, ಸ್ವಾತಂತ್ರ್ಯಕ್ಕಾಗಿ ಹೋರಾಡಲು ನನ್ನ ಸಂಪೂರ್ಣ ಸಾಮರ್ಥ್ಯ, ಶಕ್ತಿಗಳನ್ನು ವಿನಿಯೋಗಿಸುತ್ತೇನೆಂದೂ, ಈ ದಿವ್ಯೋದ್ದೇಶದೊಂದಿಗೆ, ನಾನು ಅಖಿಲ ಹಿಂದೂಸ್ಥಾನದ ಕ್ರಾಂತಿಕಾರಿ ಸಮಾಜವಾದ ಅಭಿನವ ಭಾರತಕ್ಕೆ ಸೇರುತ್ತೇನೆ ಮತ್ತು ನಾನು ಈ ನನ್ನ ವಿಷಯದಲ್ಲಿ ಎಂದಿಗೂ ಸತ್ಯ ಮತ್ತು ನಿಷ್ಠನಾಗಿರುತ್ತೇನೆ ಎಂದು ಪ್ರಮಾಣ ಮಾಡುತ್ತೇನೆ!
ಈ ಗಂಭೀರ ಪ್ರತಿಜ್ಞೆಯ ಯಾವುದೇ ಭಾಗಕ್ಕೆ ಅಥವಾ ಈ ಸಂಘಟನೆಗೆ ದ್ರೋಹ ಬಗೆದರೆ, ನನಗೆ ಘೋರ ಅವನತಿ ಉಂಟಾಗಲಿ! [9]

ಇಂತಹ ಪ್ರತಿಜ್ಞೆಯನ್ನು ಆಚಾರ್ಯರಂತಹವರ ಮುಂದೆ ತೆಗೆದುಕೊಂಡೂ ದ್ರೋಹ ಬಗೆದವನ ಕಥೆ! ಅವನಿಗೆ ಒಂದಷ್ಟು ಹಣವನ್ನೂ, ಸೈನ್ಯದಲ್ಲಿ ಕೆಲಸವನ್ನೂ ನೀಡಿದರು! ಆದರೆ ಅವನ ಮನಸ್ಸಾಕ್ಷಿ ಅವನನ್ನು ಕೊಲ್ಲದೇ ಬಿಡುತ್ತದೆಯೇ?" ಎಂದು ಕಾಂತಾ ನಿಟ್ಟುಸಿರು ಬಿಟ್ಟ.

"ಇದು ಎಂತಹ ಹಠಾತ್ ತಿರುವು? ನಿಂತೇಹೋಯಿತೆ? ನಂತರ ಏನಾಯಿತು?" ಎಂದು ನಾವು ಪ್ರಶ್ನಿಸಲು, ಕಾಂತಾ ತಲೆಯೆತ್ತಿ, ಸಾಕ್ಷಿಯತ್ತ

---

9. http://savarkar.org/en//Encyc/2017/5/22/The-Oath-of-Abhinav-Bharat.html (ಜಾಲತಾಣ ಪರಿಶೀಲಿಸಿದ ದಿನಾಂಕ 25–10–2022)

ನೋಡಿ, "ನಮ್ಮ ಸಂಘಟನೆಯೇ ಮನಸ್ಸು. ದೇಶಭಕ್ತಿಯೇ ಚೈತನ್ಯ. ದೇಶವೇ ದೇಹ. ಇದು ಯಾರು ಗೊತ್ತೆ? ನಮ್ಮ ಪ್ರೀತಿಯ ಸಾಕ್ಷಿ. ನಾನು ಆ ದ್ರೋಹಿಯನ್ನು ಮನಸ್ಸಾಕ್ಷಿ ಕೊಲ್ಲದೇ ಬಿಡುತ್ತದೆಯೇ ಎಂದು ಕೇಳಿದ್ದು ಸುಮ್ಮನೆ ಅಲ್ಲ. ಮೂರು ದಿನಗಳ ನಂತರ ಆ ಬ್ರಿಟೀಷ್‌ರಾಣಿಯ ಮೂರ್ತಿಯ ಕೆಳಗೆ 'ದ್ರೋಹಿ' ಎಂಬ ಪಟ್ಟಿಯಲ್ಲಿ ಬಿದ್ದಿದ್ದ ಒಂದು ದೇಹ ಸಿಕ್ಕಿತು. ಅದು ಆ ದ್ರೋಹಿಯದ್ದೇ! ಅವನನ್ನು ಯಾರೂ ಕೊಂದಿರಲಿಲ್ಲ." ಎಂದು ನಗುತ್ತಾ ಕಾಂತಾ ಸಾಕ್ಷಿಯತ್ತ ನೋಡಿದ. ಸಾಕ್ಷಿಯೂ ನಗುವಿನಲ್ಲೇ ಉತ್ತರಿಸುತ್ತ, "ಅವನು ಆತ್ಮಹತ್ಯೆ ಮಾಡಿಕೊಂಡ" ಎಂದ. ನಾವು ಬಾಯಿ ಬಿಟ್ಟುಕೊಂಡು, ಈ ಇಬ್ಬರು ವೀರ ದೇಶಭಕ್ತರನ್ನೂ ನೋಡತೊಡಗಿದೆವು.

ಸಾಕ್ಷಿಯು, "ಆಚಾರ್ಯರ ಪಾಠ. ನಾನು ಅವನನ್ನು ರಹಸ್ಯವಾಗಿ ಭೇಟಿಯಾಗಿ, ಅವನು ಮಾಡಿದ ತಪ್ಪಿನಿಂದ ಆಗುವ ಪರಿಣಾಮಗಳನ್ನು ವಿವರಿಸಿದೆ ಅಷ್ಟೆ. ಅವನಿರುವ ನೆಲದ ಹಿರಿಮೆಯನ್ನು ಅವನೇ ಕಳೆದು ತನ್ನ ಸಮಾಧಿಯೊಳಗೆ ತಾನೇ ಜೀವಂತವಾಗಿ ಮಲಗುತ್ತಿದ್ದಾನೆ ಎಂದು ಅರ್ಥೈಸಿದೆ. ದ್ರೋಹಿ! ಎಂದು ಛೀಮಾರಿ ಹಾಕಿದೆ. ತನ್ನ ಮನೆಯಲ್ಲಿದ್ದ ಕತ್ತಿಯಲ್ಲಿ ಕುತ್ತಿಗೆ ಕುಯ್ದುಕೊಂಡು ಪ್ರಾಣಬಿಟ್ಟ. ಇದು ಒಂದು ಕೆಟ್ಟ ಕನಸಾಗಲಿ ಎಂದು ನಾನು, ದ್ರೋಹಿ ಎಂದು ಅವನ ಬಟ್ಟೆಯ ಮೇಲೆ ಬರೆದು, ಬ್ರಿಟೀಷ್‌ರಾಣಿಯ ಮೂರ್ತಿಯ ಕೆಳಗಿಟ್ಟು, ನೀನು ಮಾಡಿದ್ದೂ ಪ್ರಾಣಾರ್ಪಣೆಯೇ! ಆದರೆ ಒಂದು ತಪ್ಪು ಮಾಡಿದ ನಂತರ ಎಂದು ಹೇಳಿ ತಲೆ ಮರೆಸಿಕೊಂಡೆ."

ಮಾತಿಗೆ ಇಷ್ಟು ಶಕ್ತಿ ಇರುತ್ತದೆಂದು ನಮಗೆಲ್ಲಿ ತಿಳಿದಿತ್ತು! ನಾವು ಮೂವರೂ ಯೋಚಿಸಿ ಆಗಿತ್ತು. ಒಬ್ಬರನ್ನೊಬ್ಬರು ನೋಡಿಕೊಂಡೆವು. ನಮ್ಮ ಮಧ್ಯೆ ಇದ್ದ ಭಾವ ಒಂದೇ, "ನಾವೂ ಅಭಿನವ ಭಾರತ ಸೇರುತ್ತೇವೆ!"

6

ಸಾಕ್ಷಿ ಹಾಗೂ ಕಾಂತಾ ಒಬ್ಬರನ್ನೊಬ್ಬರು ನೋಡಿ, ಬೀಗಿದರು. ಕಾಂತಾ, "ಅದಕ್ಕೆ ಸರಿಯಾದ ಸಮಯ ಬರಲಿ. ಈಗ ನನ್ನ ಕಥೆ ಕೇಳಿರಿ" ಎಂದನು. ನಾವು ತಲೆಯಲ್ಲಾಡಿಸಿ ಮತ್ತೆ ಅವನ ಕಡೆ ನೋಡಿದೆವು. ಅವನ ಹಿಂದೆ ಇದ್ದ ಹಣ್ಣಿನ ಮರವೊಂದರಲ್ಲಿ ಗುಂಪು ಗುಂಪಾಗಿ ಸಿಂಗಳೀಕಗಳು ಇಳಿಯತೊಡಗಿದವು. ನಮ್ಮ ಗಮನ ಅತ್ತ ಹೋಯಿತು. ಅದು ಯಾವ ಹಣ್ಣಿರಬಹುದು ಎಂದು ನಾನು ಯೋಚಿಸುತ್ತಿದ್ದೆ. ಮರದ ಮೇಲಿಂದ ನಾವು ಕಾಣಲಿಲ್ಲವಾದ ಕಾರಣ ಸಿಂಗಳೀಕಗಳು ತಮ್ಮ ಕೆಲಸವನ್ನು ಮಾಡುತ್ತಿದ್ದವು. ಇಲ್ಲವಾದರೆ ನಮ್ಮ ಮೇಲೆ ದಾಳಿ, ಅಥವಾ ಅಲ್ಲಿಂದ ಪರಾರಿ ಆಗುತ್ತಿದ್ದವು. ಮರದ ತುಂಬಾ ಎಲ್ಲಾ ಹಣ್ಣು

ಗಳಿದ್ದವು. ನಮಗೇ ತಿಳಿಯದೆ ನಮ್ಮ ಬಾಯಲ್ಲಿ ನೀರೂರುತ್ತಿತ್ತು. ಕಾಂತಾ ಬೋಕನ ಬೆನ್ನು ಸವರಿ, "ಚಕ್ಕೋತ ಹಣ್ಣು ಕಣ್ರೋ" ಎಂದನು. ಅದರ ಹೆಸರೇ ನಾವು ಕೇಳಿರಲಿಲ್ಲ. ಹಿಪ್ಪು ನೇರಳೆ, ಇತ್ಯಾದಿ ಪುಟ್ಟ ಪುಟ್ಟ ಹಣ್ಣುಗಳನ್ನೇ ನಾವು ಹೆಚ್ಚು ತಿನ್ನುತ್ತಿದ್ದೆವು. ಕಾಂತಾ, ಎದ್ದು ನಿಧಾನವಾಗಿ ಆ ಮರದ ಕಡೆಗೆ ಹೋದನು. ಸಿಂಗಳೀಕಗಳು, ಗಲಿಬಿಲಿಯಲ್ಲಿ ಕೆಲವು ಹಣ್ಣುಗಳನ್ನು ಕೆಳಕ್ಕೂ ಬೀಳಿಸಿದ್ದವು. ಒಂದೇ ಒಂದನ್ನು ತಂದು ಕಾಂತಾ ನಮ್ಮ ಮುಂದೆ ಇಟ್ಟ. ಅದರ ಸಿಪ್ಪೆಯನ್ನು ಬಿಡಿಸಿ, ಒಳಗಿದ್ದ ಪುಟ್ಟ-ಪುಟ್ಟ ತಿರುಳಿನ ಭಾಗವನ್ನು ನಮಗೆ ಕೊಟ್ಟ. ಮೆತ್ತಮೆತ್ತಗಿದ್ದ ಅದನ್ನು ಜಗಿದ ತಕ್ಷಣ ಸಿಹಿ-ಹುಳಿಗಳು ಮಿಶ್ರಿತವಾದ ರಸವು ಬಂದಿತು. ಆ ಹುಳಿಗೆ ಮೈಯನ್ನು ಒಮ್ಮೆ ಅಲ್ಲಾಡಿಸುವಂತಾಯಿತು. ಆದರೂ ಬಾಯ ಚಪಲಕ್ಕೆ ಅದು ತುಂಬಾ ಹಿತವಾಗಿತ್ತು. ಒಂದು ಹಣ್ಣನ್ನು ತಿಂದು ಮುಗಿಸಿದ ಮೇಲೆ ಕಾಂತಾ ತನ್ನ ಕಥೆಯನ್ನು ಮುಂದುವರೆಸಿದನು. "ನಮ್ಮನ್ನೆಲ್ಲಾ ಬಂಧಿಸಿದ ಸೈನಿಕರು, ನಮ್ಮನ್ನು ಕಾಡಿನ ಅಂಚಿನಲ್ಲಿರುವ ಒಂದು ಜೈಲಿನಲ್ಲಿಟ್ಟರು. ನಾವು ತಪ್ಪು ಮಾಡಿದ್ದರೆ, ಅಥವಾ ನಮ್ಮ ಮೇಲೆ ಆರೋಪ ಇದ್ದರೆ, ಅದನ್ನು ಸಾಬೀತುಪಡಿಸಿದರೆ ಮಾತ್ರ ಶಿಕ್ಷೆ. ಬ್ರಿಟೀಷರ ಕೈ ಕೆಳಗೆ ಭಾರತೀಯರಿಗೆ ಶಿಕ್ಷೆ ಆಗುವುದು ಅತ್ಯಂತ ಸುಲಭದ ಮಾತು. ನಮ್ಮ ಆರೋಪ ಸಾಬೀತಾಗಿ ನಮ್ಮನ್ನು ಜೈಲಿನಲ್ಲಿಟ್ಟರು. ಜೈಲು ಕಾಡಿನ ಬಳಿ ಇತ್ತಾದ್ದರಿಂದ ಆಗಾಗ ನಮ್ಮನ್ನು ಕಾಡಿಗೆ ಕರೆದುಕೊಂಡು ಹೋಗಿ ಸೊಪ್ಪು-ಹಣ್ಣು ಇತ್ಯಾದಿಗಳನ್ನು ನಮ್ಮ ಕೈಯಲ್ಲೇ ಕೀಳಿಸಿ ತರುತ್ತಿದ್ದರು."

ನಾಗನು ನನ್ನ ಕಿವಿಯ ಬಳಿ ಬಂದು, "ಜೈಲೆಂದರೆ ಅದೇ ಚಿಕ್ಕ ಕೊಠಡಿಯ ಹಾಗೆ, ಬಂಧಿಸಿಡುವುದು, ಅಲ್ವಾ?" ಎಂದ. ನಾನು 'ಹೌದು' ಎನ್ನುವಂತೆ ತಲೆ ಅಲ್ಲಾಡಿಸಿದೆ.

"ನಾವು ತಂದ ಸೊಪ್ಪಿನಲ್ಲೇ ನಮಗೆ ಊಟ. ಯಾವ ರುಚಿಯೂ ಇಲ್ಲದ, ಆಗಾಗ ಹುಳುಗಳೆಲ್ಲಾ ಸಿಗುತ್ತಿದ್ದ ಊಟ. ಜೊತೆಗೆ ಯಾರೊಂದಿಗೂ ಮಾತನಾಡುವಂತಿರಲಿಲ್ಲ. ನಾವೆಲ್ಲಾ ಏನಾದರೊಂದು ಮಾರ್ಗ ಹುಡುಕಲೇ ಬೇಕಿತ್ತು. ನಮ್ಮನ್ನು ಯಾವಾಗಲೂ ಒಂದೇ ಜೈಲಿನಲ್ಲಿ ಇಡುತ್ತಿರಲಿಲ್ಲ. ವಾರಕ್ಕೊಂದು ಕೊಠಡಿಯಂತೆ ಬದಲಾಯಿಸುತ್ತಿದ್ದರು. ಆಚಾರ್ಯರು ಆಗ ಒಂದು ಕಾರ್ಯನೀತಿ ರೂಪಿಸಿದರು. ಅವರಿದ್ದ ಕೊಠಡಿಯಲ್ಲಿ ಕಲ್ಲನ್ನು ಬಳಸಿ, ಗೋಡೆಯ ಮೇಲೆ ತಾವು ಹೇಳಬೇಕಾದ ವಿಷಯವನ್ನು ಬರೆಯುತ್ತಿದ್ದರು. ಅವು ಚಿತ್ರಗಳಂತೆ ಕಾಣುತ್ತಿದ್ದವಾದರೂ, ಸೂಕ್ಷ್ಮವಾಗಿ ಗಮನಿಸಿದರೆ ಅದರಲ್ಲಿನ ಸಂದೇಶ ಸಿಗುತ್ತಿತ್ತು. ಸೈನಿಕರು ಅವೆಲ್ಲವೂ ತಿರುಕನ ಚಿತ್ರಗಳು ಎಂದು ಅಲ್ಲಗಳೆದರು. ಆದರೆ ನಮ್ಮ ಕೊಠಡಿ ಬದಲಾದಾಗ, ನಾವು ಅದನ್ನು

ನೆನಪಿನಲ್ಲಿಟ್ಟುಕೊಂಡು, ಬೇರೆ ಕೊಠಡಿಗಳಲ್ಲೂ ಅದನ್ನು ಬರೆದಿಡುತ್ತಿದ್ದೆವು. ಈ ರೀತಿಯಾಗಿ ಒಂದು ದೊಡ್ಡ ಮಟ್ಟದ ಕೆಲಸದ ಪ್ರಸ್ತಾವನೆ ಆಯಿತು. ಒಮ್ಮೆ ಕಾಡಿಗೆ ಹೋಗಿದ್ದಾಗ, ಆಚಾರ್ಯರಿಗೆ ಜಾಲಿ ಮರದ ಅಡಿಯಲ್ಲಿ ಒಂದು ಅಸ್ಥಿಪಂಜರ ದೊರಕಿತಂತೆ."

ನಾನು "ಅಸ್ಥಿ ಪಂಜರ ಸಿಕ್ಕಿತೆಂದರೆ, ಅಲ್ಲಿ ಯಾರೋ ಸತ್ತಿದ್ದರು ಅಂತ ಅಲ್ವಾ?" ಎಂದೆ.

"ಹೌದು ಕಣೋ. ಸಾಮಾನ್ಯ ಅಲ್ಲವೇ? ಯಾರೋ ಖೈದಿ ಕಾಡಿಗೆ ಹೋದಾಗ ಆತ್ಮಹತ್ಯೆ ಮಾಡಿಕೊಂಡಿರಬಹುದು, ಅಥವಾ ಆ ಜಾಲಿಯ ಮುಳ್ಳುಗಳಿಗೆ ಸಿಕ್ಕಿ ಸತ್ತಿರಬಹುದು, ಅಥವಾ ಸತ್ತ ಖೈದಿಯನ್ನ ಸೈನಿಕರೇ ಅಲ್ಲಿ ಹೂತುಹಾಕಿರಬಹುದು. ಒಟ್ಟಿನಲ್ಲಿ ನಮ್ಮ ಅನುಕೂಲಕ್ಕೆ ತಕ್ಕಂತೆ, ಕೆಲಸ ಸುಲಭವಾಗಿ ನಡೆಯುವಂತೆ ಅಸ್ಥಿಪಂಜರ ದೊರಕಿದ್ದಂತೂ ಸತ್ಯ. ಪ್ರತಿ ವಾರದಂತೆ, ನನ್ನ ಕೊಠಡಿಯೂ ಬದಲಾಯಿತು. ಈ ಬಾರಿ, ಆಚಾರ್ಯರು ಚಿತ್ರವಲ್ಲದೆ, ಒಂದಷ್ಟು ವಾಕ್ಯಗಳನ್ನು ಬರೆದಿಟ್ಟಿದ್ದರು. ಅದು ನನಗಿನ್ನೂ ನೆನಪಿನಲ್ಲಿದೆ:


ಮಾಯಾ
ಪೃಥ್ವಿ ಆಪಃ ತೇಜ
ವಾಯು ಆಕಾಶ
ಮುಕ್ತಿ! [10]

ಆಚಾರ್ಯರು ನಮಗೆ ಆಗಾಗ ವೇದಾಂತ ಇತ್ಯಾದಿಗಳ ಬಗ್ಗೆ ಹೇಳುತ್ತಿದ್ದರಾದರೂ ಅದು ಅಷ್ಟು ಸುಲಭವಾಗಿ ಅರ್ಥವಾಗುತ್ತಿರಲಿಲ್ಲ. ಪಂಚಭೂತಗಳ ಬಗ್ಗೆ ಬರೆದಿದ್ದಾರೆ, ಸರಿ. ಮಾಯಾ ಎಂದಿದ್ದಾರೆ– ಎಂದರೆ ಭ್ರಮೆ. ದೇಹವು ಪ್ರಾಣ ಬಿಟ್ಟಾಗ, ಮತ್ತೆ ಪಂಚಭೂತಗಳನ್ನೇ ಸೇರುತ್ತದೆ. ಮುಕ್ತಿ ಅದರ ನಂತರ. ಆದರೆ ಆಚಾರ್ಯರ ದೃಷ್ಟಿ ಏನು? ಇದನ್ನು ಬೇರೆ ರೀತಿಯಲ್ಲಿ ವ್ಯಾಖ್ಯಾನ ಮಾಡಿದರೆ? ಅದರಲ್ಲೂ 'ತೇಜ' ಎನ್ನುವುದಕ್ಕೆ ಹೆಚ್ಚು ಒತ್ತು ಕೊಟ್ಟು ಬರೆದಿದ್ದಾರೆ! ಅಸ್ಥಿಪಂಜರ ದೊರಕಿದ್ದು ಗೊತ್ತೇ ಇದೆ! ನನಗೆ ತಕ್ಷಣೆ ಹೊಳೆಯಿತು!!!"

ನಾವು ಮೂವರೂ ಎದ್ದು ನಿಂತು, "ಎಂದರೆ? ನಮಗೆ ಸರಿಯಾಗಿ ಅರ್ಥ ಆಗಲಿಲ್ಲ!" ಎಂದೆವು.

---

10. https://guruvaakya.wordpress.com/advaitham/human-body-pancha-bhoota/ (ಜಾಲತಾಣ ಪರಿಶೀಲಿಸಿದ ದಿನಾಂಕ 25–10–2022)


ಮಾಯಾ
ಪೃಥ್ವಿ ಆಪ: ತೇಜ
ವಾಯು ಆಕಾಶ
ಮುಕ್ತಿ!

ಕಾಂತಾ, "ಏನಿಲ್ಲಾ ಕಣ್ರೋ, ಬೆಂಕಿಯ ಮಾಯಾ-ಭ್ರಮೆಯನ್ನು ಸೃಷ್ಟಿಸುವುದು. ನಮ್ಮಲ್ಲಿ ಸಮರ್ಥನಾದ ಒಬ್ಬನನ್ನು ತಪ್ಪಿಸಬೇಕು. ಅದಕ್ಕೆ, ಕಾಡಿಗೆ ಹೋದಾಗ, ಬೆಂಕಿ ಹಚ್ಚಿ, ಅವನು ಬೆಂಕಿಯಲ್ಲಿ ಸುಟ್ಟು ಸತ್ತನೆಂದು ಕಥೆ ಕಟ್ಟಬೇಕು. ಅದಕ್ಕೆ ಪೂರಕವಾಗಿ, ಆಚಾರ್ಯರಿಗೆ ಜಾಲಿ ಮರದ ಬಳಿ ಸಿಕ್ಕಿದ ಅಸ್ಥಿ ಪಂಜರವನ್ನು ತೋರಬೇಕು. ಅವನು ಕಾಡಿನಲ್ಲಿ ತನ್ನ ದಾರಿಯನ್ನು ಹುಡುಕುತ್ತಾ ಹೋಗಬೇಕು."

ಬೇರೆ ಬೇರೆ ಕಡೆ ಇದ್ದ ಸುಳಿವುಗಳೆಲ್ಲವೂ ಒಂದೇ ಕಡೆ ಸೇರಿ, ಒಂದು ದೊಡ್ಡ ಮಹಾನ್ ಕಾರ್ಯ ಆದ ರೀತಿ ನೋಡಿ ನಮ್ಮ ಹೃದಯದಲ್ಲಿ ಹೇಳಲಾರದ ಭಾವನೆಗಳೆಲ್ಲಾ ಮೂಡಿದವು! ಎದ್ದು ಕುಣಿ ಕುಣಿದು ಬೀಳಬೇಕೆಂದು ಅನ್ನಿಸಿತು. ಆದರೆ ಆ ಮಾಯಾ-ಮುಕ್ತಿ ಪ್ರಕ್ರಿಯೆ ಹೇಗೆ ನಡೆಯಿತೆಂದು ನಮಗೆ ತಿಳಿದುಕೊಳ್ಳುವ ಕುತೂಹಲ.


ಮತ್ತೆ ಸುಮ್ಮನಾಗಿ ಕುಳಿತುಬಿಟ್ಟೆವು. ನಮಗೆ ಕೇಳುವ ಕಾತರ, ಕಾಂತಾನಿಗೂ ಹೇಳುವ ಆತುರ. ಎಷ್ಟಾದರೂ, ಉಸಿರು ಬಿಗಿ ಹಿಡಿದು ಕೇಳುವಂತಹ ಸನ್ನಿವೇಶ ಅಲ್ಲವೇ!

ಕಾಂತಾ ಮುಂದುವರೆಸಿದ. "ನನಗೆ ಕಾರ್ಯನೀತಿ ಅರ್ಥವಾಯಿತು. ಅದನ್ನು ಎಲ್ಲರಿಗೂ ತಲಪುವಂತೆ ಮಾತಿನ ಮೂಲಕ, ಗೋಡೆ ಬರಹಗಳ ಮೂಲಕ, ಸನ್ನೆಗಳ ಮೂಲಕ ಹೇಳಿಸಲಾಯಿತು. ಆದರೆ ಒಂದೇ ಒಂದು ಪ್ರಶ್ನೆ ಮಿಕ್ಕಿತ್ತು. ಎಂದು? ಅದಕ್ಕೂ ಆಚಾರ್ಯರೇ ಉತ್ತರ ನೀಡಿದರು. ಒಂದು ದಿನ ಬೆಳಗ್ಗೆ ಜೋರಾದ ಕಿರುಚಾಟ ಕೇಳಿಸುತ್ತಿತ್ತು. ದಣಿದು ನಿದ್ದೆಯಲ್ಲಿದ್ದ ನಾವೆಲ್ಲಾ ಎಚ್ಚರಗೊಂಡೆವು. ಆಚಾರ್ಯರ ಕೊಠಡಿಯ ಬಳಿ ಇಬ್ಬರು ಸೈನಿಕರು ಕೋಲುಗಳನ್ನು ಹಿಡಿದು ಆಚಾರ್ಯರನ್ನು ಹೆದರಿಸುತ್ತಿದ್ದರು. ಆಚಾರ್ಯರು, 'ಅಮಾವಾಸ್ಯೆ! ಅದು ಬಂದರೆ, ನನಗೆ ಹುಚ್ಚು ಹಿಡಿಯುತ್ತದೆ! ಮಾಯಾ ಮುಕ್ತಿ!' ಎಂದು ಹುಚ್ಚರಂತೆ ನಟಿಸುತ್ತಿದ್ದರು. ನಮಗೆ ಸಿಗಬೇಕಾದ ಸುಳಿವು ಸಿಕ್ಕಾಯಿತಲ್ಲ! ಇನ್ನೇನು ಅಮಾವಾಸ್ಯೆ ಬರುವುದರಲ್ಲಿತ್ತು. ನಾವೆಲ್ಲ ಕಾಯತೊಡಗಿದೆವು. ದಿನವೂ ಕಾಡಿಗೆ ಹೋಗುತ್ತಿದ್ದ ನಮ್ಮ ಸಂಘಟನೆಯವರು, ಒಂದು ಕಡೆ ಒಣ ಮರದ ತುಂಡುಗಳನ್ನೆಲ್ಲಾ ಹಾಕಿ ಬರುತ್ತಿದ್ದರು. ಅಮಾವಾಸ್ಯೆ ಬಂದೇ ಬಿಟ್ಟಿತು. ಅದೃಷ್ಟವಶಾತ್, ಆಚಾರ್ಯರ ಹಾಗೂ ನನ್ನ ಸರದಿ ಅದೇ ದಿನ ಬಂದಿತು. ನಾವಿಬ್ಬರೂ ಕಣ್ಣು ಸನ್ನೆಯಲ್ಲೇ ಮಾತನಾಡಿಕೊಂಡು, ಸೊಪ್ಪು ಇತ್ಯಾದಿಗಳನ್ನು ಕೀಳತೊಡಗಿದೆವು. ನಡೆಯುತ್ತಾ ನಡೆಯುತ್ತಾ, ಒಣಮರಗಳಿದ್ದ ಸ್ಥಳಕ್ಕೆ ಬಂದೆವು. ಆಚಾರ್ಯರು ಒಪ್ಪಿಗೆಯನ್ನು ಸೂಚಿಸಿ ತಮ್ಮ ಅಂಗಿಯನ್ನು ಬಿಚ್ಚಿದರು. ನಾನು ಮೊದಲೇ ತಂದಿದ್ದ ಎರಡು ಕಲ್ಲುಗಳನ್ನು ಒಮ್ಮೆ ಉಜ್ಜಿ ಒಣ ಎಲೆಗಳ ಮೇಲೆ ಕಿಡಿ ಬೀಳುವಂತೆ ಮಾಡಿದೆ. ನಿಧಾನವಾಗಿ ಹೊಗೆಯು ಆಚ್ಛಾದಿಸಿ, ಬೆಂಕಿಯು

ಹೊತ್ತಿಕೊಂಡಿತು. ಚೆನ್ನಾಗಿ ಒಣಗಿದ್ದ ಮರದ ತುಂಡುಗಳು ಧಗ ಧಗ ಉರಿಯತೊಡಗಿದವು. ಆಚಾರ್ಯರು ನನ್ನನ್ನು ನೋಡಿ, ಮೆಚ್ಚುಗೆಯನ್ನು ಸೂಚಿಸುವಂತೆ, ಓಡಲಾರಂಭಿಸಿದರು. ಆಚಾರ್ಯರಿಗೆ ಅರಣ್ಯಗಳ ಜ್ಞಾನ ಹಾಸುಹೊಕ್ಕಾಗಿತ್ತು. 'ಗೆರಿಲ್ಲಾ' ಮಾದರಿಯ ಯುದ್ಧದ ಬಗ್ಗೆ ಅವರು ತುಂಬಾ ಹೆಚ್ಚಾಗಿ ಓದಿಕೊಂಡಿದ್ದರು. ದೂರದಲ್ಲಿ, ಮರದ ಮೇಲೆ ಅವರು ಏನೋ ಬರೆಯುತ್ತಿರುವಂತೆ ಕಂಡಿತು. ಅವರು ನನ್ನನ್ನು ಕರೆವಂತೆ ಕೈ ಎತ್ತಿದರು. ನಂತರ ಮರವನ್ನು ತೋರಿಸಿ, ಮತ್ತೆ ಅದೃಶ್ಯರಾದರು. ಅಸ್ಥಿಪಂಜರವನ್ನು ಬೆಂಕಿಯ ನಡುವೆ ಇಟ್ಟಾಗಿತ್ತು. ಆಚಾರ್ಯರ ಅಂಗಿಯೂ ಅರ್ಧಂಬರ್ಧ ಸುಡುವಂತೆ ಮಾಡಿ ಹಾಕಿ ಆಯಿತು. ಈಗ ನನ್ನ ಕೆಲಸ. ನಾನು, "ಅಯ್ಯೋ! ಅಯ್ಯೋ ಬೆಂಕಿ! ಬೆಂಕಿ! ಸುಟ್ಟುಹೋದ! ಅವನು ಯಾರೋ ಸುಟ್ಟು ಕರಕಲಾಗಿ ಹೋದ! ಅಯ್ಯೋ!" ಎಂದೆನ್ನತೊಡಗಿದೆ. ನಮ್ಮೊಂದಿಗೆ ಕಾವಲಾಗಿ ಬಂದಿದ್ದ ನಾಲ್ವರು ಸೈನಿಕರು ಓಡಿ ಬಂದರು. ಅವರು ಆಚಾರ್ಯರ ಸುಟ್ಟ ಅಂಗಿಯನ್ನು ನೋಡಿದ ತಕ್ಷಣ, ಅವರ ಭಾಷೆಯಲ್ಲೇ, "ಈ ಹುಚ್ಚನೇ! ಸಾಯಲಿ ಬಿಡು, ಒಂದು ದರಿದ್ರ ತೊಲಗಿತು" ಎಂದು ನಗುತ್ತಾ, ನಮ್ಮನ್ನೆಲ್ಲಾ ಮತ್ತೆ ಬಂಧಿಸಿ ಜೈಲಿಗೆ ಕರೆದುಕೊಂಡು ಹೊರಟರು. ಇವರ ತಾತ್ಸಾರವೇ ನಮ್ಮ ಬಲ ಎಂದುಕೊಂಡು ನಾನು ನಸುನಗುತ್ತಾ ನನ್ನ ಕೊಠಡಿಯನ್ನು ಹೊಕ್ಕಿದೆ. ಆಚಾರ್ಯರು ಮರದ ಮೇಲೆ ಬರೆದಿರುವುದೇನು ಎಂಬುದು ನನಗೆ ಇನ್ನೂ ತಿಳಿದಿರಲಿಲ್ಲ. ತಿಳಿದುಕೊಳ್ಳಲೇಬೇಕೆಂದು ಕಾಯತೊಡಗಿದೆ. ನನ್ನ ಜೊತೆಗಾರ ರಿಗೆಲ್ಲ ಆಚಾರ್ಯರು ಪಾರಾದರೆಂಬುದೆ ಹಬ್ಬವಾಗಿತ್ತು. ಸೈನಿಕರು ಕೊಡುತ್ತಿದ್ದ ಏಟುಗಳನ್ನೆಲ್ಲಾ ಅವರು ನಗುನಗುತ್ತಾ ಸ್ವೀಕರಿಸುತ್ತಿದ್ದರು. ಅವರ ಹುಮ್ಮಸ್ಸು ಹೆಚ್ಚಾಗಿತ್ತು. ಇನ್ನು ಯಾವುದೇ ಕ್ಷಣದಲ್ಲಿ ನಮಗೂ ಒಳ್ಳೆಯದಾಗಬಹುದೆಂಬ ಭರವಸೆ ನಮ್ಮಲ್ಲಿ ಮೂಡಿತ್ತು. ಹಾಗೆಯೇ, ನಾನು ಕಾಯುತ್ತಿದ್ದ ದಿನವೂ ಬಂದಿತು. ಕಾಡಿಗೆ ಹೋದ ದಿನ ಮೊದಲು ಆ ಅಸ್ಥಿಪಂಜರದ ಬಳಿ ಹೋದೆ. ಸುಟ್ಟು ಕೆಂಡವಾಗಿತ್ತು. ನಂತರ ನಿಧಾನವಾಗಿ ಓಡಿ ಹೋಗಿ, ಆಚಾರ್ಯರು ಮರದ ಮೇಲೆ ಬರೆದಿದ್ದ ವಾಕ್ಯವನ್ನು ಓದಿದೆ:

1. ಶತ್ರು ವಿಶ್ವಾಸ
2. ಅರಣ್ಯಾನಿ

ಶತ್ರು ವಿಶ್ವಾಸದ ಕುರಿತಾಗಿ ಆಚಾರ್ಯರು ನನಗೆ ಚಾಣಕ್ಯ ಅರ್ಥಶಾಸ್ತ್ರದ ಬಗ್ಗೆಯೂ, ಚಾಣಕ್ಯನ ಪ್ರಿಯ ಶಿಷ್ಯ ಇಂದುಶರ್ಮನು ಜೀವಸಿದ್ಧಿ ಎಂಬ ಹೆಸರಿನ ಬೈರಾಗಿ ಆಗಿ, ಶತ್ರುವಿನ ವಿಶ್ವಾಸವನ್ನು ಗೆದ್ದು, ತನ್ನ ಅನುಕೂಲಕ್ಕೆ ಬಳಸಿಕೊಂಡ ಬಗೆಯನ್ನೂ ವಿವರಿಸಿದ್ದರು. ಈಗ ಕಾಲ ಬದಲಾಗಿದೆ. ಈ ಶತ್ರುವಿಗೆ ತಕ್ಕಂತೆ



ನಾನು ನಟಿಸಿ, ಇವರ ವಿಶ್ವಾಸ ಗಳಿಸಬೇಕೆಂದು ನನಗೆ ಅರಿವಾಯಿತು. ಆದರೆ ಈ ಅರಣ್ಯಾನಿ ಎಂದರೆ ಏನೆಂದು ನನಗೆ ಅರ್ಥವಾಗಲಿಲ್ಲ. ಆದರೂ, ಮೊದಲು ಈ ಶತ್ರುವಿನ ವಿಶ್ವಾಸವನ್ನು ಗೆದ್ದು, ನಂತರ ಕಾಡಿನೊಳಕ್ಕೆ ಹೋಗಿ ಕಂಡುಹಿಡಿಯಬಹುದು ಎಂದುಕೊಂಡೆ. ಶತ್ರುವಿನ ವಿಶ್ವಾಸವನ್ನು ನಾನು ಗೆಲ್ಲುತ್ತಿದ್ದೇನೆಂಬುದು ನನ್ನ ಜೊತೆಗಾರರಿಗೂ ತಿಳಿಯಬಾರದು. ಅವರು ನಾನು ನಿಜವಾಗಲು ಪಕ್ಷ ಬದಲಾಯಿಸಿದೆ ಎಂದುಕೊಳ್ಳಲಿ ಎಂದು ನನ್ನ ಕೊಠಡಿಗೆ ಹೋದೆ."

ಸಾಕ್ಷಿಯು, "ನಾನು ಇಲ್ಲಿತನಕ ನಿನ್ನ ಕಥೆಯನ್ನ ಕೇಳಿದ್ದೇನೆ. ಆದರೆ ನೀನು

ಶತ್ರುವಿನ ವಿಶ್ವಾಸವನ್ನು ಗೆದ್ದಿದ್ದು ಹೇಗೆ? ಇಲ್ಲಿ ಬಂದಿದ್ದು ಹೇಗೆ?" ಎಂದು ಕೇಳಿದ.

ಕಾಂತಾ ತನ್ನ ಕತೆಯನ್ನು ಹೇಳಿ ದಣಿದವನಂತೆ ಕಂಡ. "ಬನ್ನಿ" ಎನ್ನುತ್ತಾ, ನಮ್ಮನ್ನು ನದಿಯ ದಡಕ್ಕೆ ಕರೆದುಕೊಂಡು ಹೊರಟ.

7

ನದಿಯ ಬಳಿ ಸಿಕ್ಕ ಶಾಂತಿ ನಮ್ಮ ದಣಿವನ್ನು ಹೋಗಲಾಡಿಸಿತು. ನದಿಯ ಬಳಿ ಹೋದ ಕಾಂತಾ ತನ್ನ ಕಾಲನ್ನು ನೀರಿನಲ್ಲಿ ಇಳಿಬಿಟ್ಟ. ನಾವೂ ಅವನ ಪಕ್ಕದಲ್ಲಿ ಹೋಗಿ ಕುಳಿತೆವು. ಕಾಂತಾ ಪಕ್ಕದಲ್ಲೇ ಕೂರಬೇಕೆಂದು ನಾವು ಸ್ಪರ್ಧೆಯ ಮೇಲೆ ಹೋಗಿ ನುಸುಳಿ ನುಸುಳಿ ಕುಳಿತೆವು. ನಾಗ ಬೋಕರು ಅವನ ಪಕ್ಕದಲ್ಲಿ ಕುಳಿತರೆ, ನಾನು ಸಾಕ್ಷಿ ಅವನ ಹಿಂದೆ ನಿಂತೆವು. ನಾವು ಅದೂ ಇದೂ ಮಾತನಾಡ ತೊಡಗಿದೆವು. ಕಾಂತಾ, "ಶ್ ಶ್" ಎಂದನು. ನಂತರ "ಆ ಆ" ಎಂದು ಕೂಗಿದ. ಎಲ್ಲಿಂದಲೋ ಪಕ್ಷಿಯು ಬರುವ ಸದ್ದು ಕೇಳಿಸಿತು. ಕಾಂತಾ ಮತ್ತೆ ಕೂಗಿದ. ನದಿಯ ಇನ್ನೊಂದು ದಡದಲ್ಲಿ ಎರಡು ನವಿಲುಗಳು ಬಂದವು. ತನ್ನ ಉದ್ದ ಕತ್ತನ್ನು ಚಾಚಿ ನೋಡತೊಡಗಿತು. ಕಾಂತಾ ಮತ್ತೆ ಕೂಗಿದ. ನವಿಲುಗಳೆಲ್ಲಾ ಸ್ತಬ್ಧವಾಗಿ ನಮ್ಮ ಕಡೆಯೇ ನೋಡತೊಡಗಿದವು. ಕಾಂತಾ ನಿಂತನು. ಅವನ ಪಕ್ಕದಲ್ಲಿ ಕುಳಿತಿದ್ದ ನಾಗ ಬೋಕರು ಆಶ್ಚರ್ಯದಿಂದ ಎದ್ದು ನಿಂತರು. ಕಾಂತಾ ತನ್ನ ದೇಹವನ್ನು ಒಮ್ಮೆ ಸಡಿಲಿಸಿ, ಕಣ್ಣು ಮುಚ್ಚಿಕೊಂಡು ಉಸಿರೆಳೆದುಕೊಂಡನು. ಎರಡೂ ಕೈಗಳನ್ನು ಮುಖದ ಬಳಿ ತಂದು, ಮಂಡಿಯನ್ನು ಮಡಚಿ, ಎಡಗಾಲನ್ನು ಮೇಲಕ್ಕೆತ್ತಿದನು. ನಿಧಾನವಾಗಿ ಎಡಗಾಲನ್ನು ಹಿಂದಕ್ಕೆ ನೇರವಾಗಿ ಚಾಚಿ, ಎರಡೂ ಕೈಗಳನ್ನು ಪಕ್ಕಕ್ಕೆ ಚಾಚಿ, ರೆಕ್ಕೆಯಂತೆ ಮಾಡಿದನು. ನಮಗೆ ತಕ್ಷಣ ಹೊಳೆಯಿತು. ಇವನು ಮಾಡುತ್ತಿರುವುದು ಕಲರಿಪಯಟ್ಟಿನ ಮಯೂರವಡಿವು. ಮಯೂರ ಎಂದರೆ ನವಿಲು. ಇಷ್ಟು ಹೊತ್ತು ಬೆಪ್ಪರಂತೆ ನಿಂತು ನೋಡುತ್ತಿದ್ದ ನಾವು ಮಯೂರವಡಿವನ್ನು ಸಾಲಾಗಿ ಮಾಡಿದೆವು. ಕಾಂತಾ, ಮತ್ತೆ ನವಿಲಿನ ಕೂಗನ್ನು ಅನುಕರಿಸಿದ. ಅಲ್ಲಿದ್ದ ಎರಡು ನವಿಲುಗಳು ಮತ್ತೆ ಕೂಗಿದವು. ಹಿಂದೆಯಿಂದ ನಾಲ್ಕು ನವಿಲುಗಳು ಓಡಿ ಓಡಿ ಬಂದವು. ನಮ್ಮನ್ನು ನೋಡುತ್ತಾ, ಅವು ತಮ್ಮ ರೆಕ್ಕೆಯನ್ನು ಬಿಚ್ಚಿ ಕತ್ತನ್ನು ಮೇಲಕ್ಕೆ ಎತ್ತುತ್ತಾ ಭಾವಪರವಶತೆಯಲ್ಲಿ ಕೂಗತೊಡಗಿದವು. ಕಾಂತಾ ನಿಧಾನವಾಗಿ ಸಹಜ ಸ್ಥಿತಿಗೆ ಬಂದನು. ನಾವೂ ಅವನನ್ನು ಅನುಸರಿಸಿದೆವು. ಸುಂದರ ರೆಕ್ಕೆಯನ್ನು ಬಿಚ್ಚಿದ್ದ ನವಿಲುಗಳು, ನಮ್ಮನ್ನೇ ನೋಡತೊಡಗಿದವು. ಕಾಂತಾ ಇಷ್ಟು ಸುಲಭವಾಗಿ ಅರಣ್ಯದ ಜೀವಿಯನ್ನು ಒಲಿಸಿಕೊಂಡನು ಎಂದರೆ, ಇವನು ಕಾಡನ್ನು ಹೇಗೆ

ಅರಿತಿರಬಹುದು!? ಈ ಭಾರತವೇ ಸಾಮಾನ್ಯವಲ್ಲ! ಎಲ್ಲೆಡೆಗೆ ಬೆಳಕು ನೀಡಬಲ್ಲ ಭೂಮಿ! ನಾನು ಚಕಿತನಾಗಿದ್ದೆ. ಕಾಂತಾನ ಬಳಿ ಹೋಗಿ, "ಇವೆಲ್ಲ ನಿನಗೆ ಹೇಗೆ ಗೊತ್ತು!?" ಎಂದೆ. ಕಾಂತಾ, ಹನುಮಂತನಿದ್ದ ಬೆಟ್ಟದ ಕಡೆಗೆ ತಿರುಗಿ, "ಎಲ್ಲಾ ಆಚಾರ್ಯರ ದಯೆ ನನ್ನಪ್ಪ" ಎನ್ನುತ್ತಾ ಕೈಮುಗಿದ. ಅವನಿಗೆ ಎಳ್ಳಷ್ಟೂ ಅಹಂಕಾರ ಇರಲಿಲ್ಲ. ನನಗೆ ಆಚಾರ್ಯರು ಹೇಳುತ್ತಿದ್ದ ಕೃಷ್ಣನ ಒಂದು ವಾಕ್ಯ ನೆನಪಿಗೆ ಬಂತು:

ಅಹಂಕಾರಂ ಬಲಂ ದರ್ಪಮ್
ಕಾಮಂ ಕ್ರೋಧಂ ಪರಿಗ್ರಹಮ್।
ವಿಮುಚ್ಯ ನಿರ್ಮಮಃ ಶಾಂತೋ
ಬ್ರಹ್ಮಭೂಯಾಯ ಕಲ್ಪತೇ ॥[11]

"ಅಹಂಕಾರ, ಕ್ರೋಧ, ದರ್ಪ, ಆಸೆ, ಇವುಗಳನ್ನು ಬಿಟ್ಟು ಶಾಂತವಾಗಿರುವವನಿಗಷ್ಟೇ ಬ್ರಹ್ಮಜ್ಞಾನ ಒಲಿಯುವುದು!" ಈ ಕಾಂತಾ ಸಾಮಾನ್ಯನಲ್ಲ ಎಂದು ಆಗ ಅನ್ನಿಸಿತು. ಸಾಕ್ಷಿಗೆ ಸಾಕಾಗಿತ್ತು. "ಲೋ ಕಾಂತಾ, ಆಮೇಲೇನಾಯ್ತು ಹೇಳೋ!" ಎನ್ನುತ್ತಾ ಗೋಗರೆಯಲು ಪ್ರಾರಂಭಿಸಿದ. ನದಿಯ ತಂಪು ಗಾಳಿ, ಆ ನೀರು, ಇತ್ಯಾದಿಗಳು ಚೆನ್ನಾಗಿದ್ದವು. ನಾವು ಅಲ್ಲೇ ಕುಳಿತೆವು.

"ಆಯ್ತು ಹೇಳ್ತೀನಿರಪ್ಪ!" ಎಂದು ನಗುತ್ತಾ, ಕಾಂತಾ ಮುಂದುವರೆಸಿದ. "ಶತ್ರುವಿನ ವಿಶ್ವಾಸ ಗೆಲ್ಲುವುದು ಬುದ್ಧಿಗೆ ಸವಾಲಿನ ಕೆಲಸ. ಭಾರತದಂತೆಯೇ ಚೀನಾ ಎಂಬ ಒಂದು ದೇಶ ಇದೆ. ಅಲ್ಲಿ ಸನ್ಸು ಎಂಬ ಒಬ್ಬ ಸೇನಾಧಿಪತಿಯು ಯುದ್ಧಕಲೆ ಎಂಬ ಪುಸ್ತಕವನ್ನ ಬರೆದಿದ್ದಾನೆ. ಅದರಲ್ಲಿ ಶತ್ರುವಿನ ಕುರಿತಾಗಿ ಹೇಳುತ್ತಾನೆ: ನಿನ್ನ ಶತ್ರುವನ್ನು ತಿಳಿದುಕೊಳ್ಳಲು, ನೀನೇ ನಿನ್ನ ಶತ್ರುವಾಗಬೇಕು. ಅದರಂತೆಯೇ ಮೊದಲು ನನ್ನ ಶತ್ರು ನಾನಾಗತೊಡಗಿದೆ. ಜೈಲಿನಲ್ಲಿ ಭಾರತ್ ಮಾತಾ ಕೀ ಜೈ ಎಂದು ಕೂಗಿದವರನ್ನೆಲ್ಲಾ ಥಳಿಸುತ್ತಿದ್ದೆ. ಕೆಂಪು ಬಟ್ಟೆ ಧರಿಸಿದ್ದ ಸೈನಿಕರು ಹೇಳಿದ್ದನ್ನೆಲ್ಲಾ ನಿಷ್ಠೆಯಿಂದ ಮಾಡತೊಡಗಿದೆ. ನಿಧಾನವಾಗಿ ಅವರ ಭಾಷೆಯನ್ನೂ ಅವರಿಂದಲೇ ಕಲಿಯತೊಡಗಿದೆ. ಅವರಿಗೂ ನನ್ನ ಮೇಲಿನ ಸಂಶಯ ಕಡಿಮೆಯಾಗಿ ನಂಬಿಕೆ ಹೆಚ್ಚಾಯಿತು. ಕಾಡಿಗೆ ಕರೆದುಕೊಂಡು ಹೋಗುವಾಗ, ನನಗೆ ಸುಲಭವಾದ ಕೆಲಸಗಳನ್ನು ಕೊಡುತ್ತಿದ್ದರು. ಜೊತೆಗೆ ಬೇರೆ ಖೈದಿಗಳ ಚಲನ-ವಲನಗಳನ್ನು ಗಮನಿಸುತ್ತಿರುವ ಕೆಲಸವನ್ನೂ ಕೊಟ್ಟರು. ನಿಧಾನವಾಗಿ ನನ್ನ ಊಟದ ಗುಣಮಟ್ಟವೂ ಹೆಚ್ಚಾಗುತ್ತಿದ್ದಂತೆ ಭಾಸವಾಯಿತು. ನನಗೆ ಬೇಕಾದಷ್ಟು ಬಡಿಸುತ್ತಿದ್ದರು. ಒಮ್ಮೊಮ್ಮೆ ಸೈನಿಕರಿಗೆ ಮಾತ್ರ ಸಿಗುವ

---

11. ಭಗವದ್ಗೀತಾ ಅಧ್ಯಾಯ 18, ಶ್ಲೋಕ 53

ಹಾಲನ್ನು ನನಗೂ ನೀಡುತ್ತಿದ್ದರು. ಹೀಗೆ ನಡೆಯುತ್ತಿರುವಾಗ, ಕಾಡಿನಲ್ಲಿ ನಡೆದ ಒಂದು ಘಟನೆ ನನ್ನನ್ನು ಮುಕ್ತಗೊಳಿಸಿತು. ಜೊತೆಗೆ ಬಹಳಷ್ಟು ಅನುಕೂಲವಾಗುವಷ್ಟು ಶತ್ರುವಿನ ವಿಶ್ವಾಸವನ್ನು ಗೆದ್ದು ಕೊಟ್ಟಿತು. ಮಾಮೂಲಿಯಾಗಿಯೇ ಸೊಪ್ಪು-ತರಕಾರಿ-ಹಣ್ಣು ಇತ್ಯಾದಿಗಳನ್ನು ತರಲು ಜೈಲಿನಿಂದ ಕಾಡಿಗೆ ಹೊರಟಿದ್ದೆವು. ನಮ್ಮೊಂದಿಗೆ ಆರು ಮಂದಿ ಸೈನಿಕರಿದ್ದರು. ಒಬ್ಬೊಬ್ಬರು ಒಂದೊಂದು ಕಡೆ ಪಹರೆ ತಿರುಗುತ್ತಿದ್ದರು. ಅವರು ಎಲ್ಲರ ಮೇಲೂ ನಿಗಾ ವಹಿಸಬೇಕೆಂದಾಗ, ಗುಂಪಿನ ಒಳಗಿರದೆ, ಗುಂಪಿನ ಹೊರಗೆ, ಬಂಡೆಯೊಂದರ ಮೇಲೆ ನಿಂತು ಕಾಯಬೇಕಿತ್ತು. ಹಾಗೆ ನಿಂತು ಕಾಯುತ್ತಿದ್ದಾಗ ಮೃಗವೊಂದರ ಘರ್ಜನೆ ಕೇಳಿಸಿತು. ಘರ್ಜನೆಯ ಸದ್ದು ಕೇಳಿ ಅದು ಹುಲಿಯೇ ಇರಬೇಕೆಂದು ನಿಶ್ಚಯಿಸ ಲಾಯಿತು. ಆದರೆ ಸೈನಿಕರಿಗೆ ಅಹಂಕಾರ. ಅವರ ಬಳಿ ಬಂದೂಕು ಇರುವಾಗ ಹೆದರಿಕೆ ಏಕೆ. ಆದರೆ ರಾಜನಂತೆ ಓಡಾಡುವ ವ್ಯಾಘ್ರ ಮಹಾಶಯನಿಗೆ ಯಾವ ಬಂದೂಕಾದರೇನು? ಯಾವ ಮಹಾ ದೇಶದ ಸೈನಿಕನಾದರೇನು? ಅವನಿಗೆ ಕೋಪ ಬಂದರೆ ಯಾರೂ ಎದುರು ಹೋಗಲಾರರು. ಇದನ್ನು ಮನಗಂಡು ನಾನು, ಮರದ ತುಂಡೊಂದಕ್ಕೆ ಬಟ್ಟೆಯನ್ನು ಸುತ್ತಿ, ಬೆಂಕಿಯನ್ನು ಹಚ್ಚಿದೆ. ಘರ್ಜನೆ ಎಲ್ಲಿಂದ ಬರುತ್ತಿದೆ ಎಂದು ಹುಡುಕಲು ಕಣ್ಣು ಮುಚ್ಚಿಕೊಂಡೆ. ಎಲ್ಲಿಂದ ಬರುತ್ತಿದೆ ಎಂಬ ಒಂದು ಅಂದಾಜು ಸಿಕ್ಕಿದ ತಕ್ಷಣ, ಸೈನಿಕನಿದ್ದ ಬಂಡೆಯ ಮೇಲೆ ಹೋಗಿ ನಿಂತೆ. ನನ್ನ ಎದೆಗಾರಿಕೆಯನ್ನು ನೋಡಿ ಅವನು ಬೆಚ್ಚಿದ. ಹತ್ತಿರದ ಪೊದೆಯಿಂದ ಬೃಹತ್ ಹುಲಿಯೊಂದು ಎಗರಿ ಬಂದಿತು. ನಾನು ಸೈನಿಕನನ್ನು ಹಿಂದಕ್ಕೆ ತಳ್ಳಿದೆ. ಇನ್ನೇನು ಹುಲಿಯು ನನ್ನ ಮೇಲೆ ಬಂದು ಬಿದ್ದು ನನ್ನನ್ನು ಗುರುತೇ ಹಿಡಿಯದಂತೆ ಮಾಂಸವನ್ನು ಕಿತ್ತು ತಿಂದು ತೇಗಬೇಕೆಂದುಕೊಳ್ಳುವಷ್ಟರಲ್ಲಿ, ನಾನು ಬಂಡೆಯನ್ನು ಕೆಳಕ್ಕೆ ತಳ್ಳುತ್ತಾ ಮೇಲಕ್ಕೆಗರಿದೆ. ಕೈಯಲ್ಲಿದ್ದ ಪಂಜನ್ನು ಹುಲಿಯ ಮುಖಕ್ಕೆ ಎಸೆದು ಪಕ್ಕಕ್ಕೆ ಬಿದ್ದೆ. ಪಂಜಿನ ಬೆಂಕಿಯ ಶಾಖದಿಂದ ಹುಲಿಯ ಕ್ರೋಧ ಹೆಚ್ಚಾಯಿತು. ನಾನು ತಕ್ಷಣ ಪಂಜನ್ನು ತೆಗೆದುಕೊಂಡು, ಇನ್ನೊಂದು ಕಡ್ಡಿಗೂ ಬೆಂಕಿ ತಗುಲಿಸಿ, ಎರಡೂ ಕೈಗಳಿಂದ ಅದನ್ನು ಹೆದರಿಸತೊಡಗಿದೆ. ಹುಲಿಯು ನನ್ನ ಗಾತ್ರದ ನಾಲ್ಕರಷ್ಟು ದೊಡ್ಡದಾಗಿತ್ತು. ನಾನು ಸೈನಿಕರಿಗೆ ಗಾಳಿಯಲ್ಲಿ ಗುಂಡು ಹಾರಿಸುವಂತೆ ಹೇಳಿದೆ. ಅವರು ನಿಬ್ಬೆರಗಾಗಿ ನಿಂತಿದ್ದರು. ನನಗೆ ಕ್ರೋಧ ನೆತ್ತಿಗೇರಿತ್ತು. ಆದರೆ ಆ ಸಮಯಕ್ಕೆ ಆ ಕೋಪ ಅತ್ಯವಶ್ಯಕವಾಗಿತ್ತು. ಅವರು ನನ್ನನ್ನು ನೋಡುತ್ತಾ, ಹೆದರುತ್ತಾ, ಬಂದೂಕನ್ನು ಮೇಲೆಕ್ಕೆತ್ತಿ ನಾಲ್ಕು ಬಾರಿ "ಥಾಮ್!ಥಾಮ್! ಥಾಮ್!ಥಾಮ್!" ಎಂದು ಗುಂಡು ಹಾರಿಸಿದರು. ಹುಲಿಯು ನಿರಾಶೆಯಲ್ಲಿ ಹಿಂದಕ್ಕೆ ಓಡತೊಡಗಿತು. ನಾನು ನನ್ನ ಜೊತೆಗಾರರೆಲ್ಲರಿಗೂ

ಸದ್ದು ಮಾಡಲು ಹೇಳಿದೆ. ಅಲ್ಲೂ ದೇಶಭಕ್ತಿಯನ್ನು ಪ್ರದರ್ಶಿಸುತ್ತಾ, "ವಂದೇ ಮಾತರಂ!", "ಭಾರತ್‌ಮಾತಾ ಕೀ ಜೈ!" ಇತ್ಯಾದಿಗಳನ್ನು ಜೋರಾಗಿ ಕೂಗತೊಡಗಿದರು. ಹುಲಿಯು ಬಲು ದೂರ ಹೋಯಿತೆಂದು ಖಾತ್ರಿಯಾದ ಮೇಲೆ, ಎಲ್ಲರೂ ನಿಲ್ಲಿಸಿದರಾದರೂ, ಕಾಡಿನ ಆ ಮೌನದಲ್ಲಿ ಹಲವು ಕೂಗಾಟಗಳು, ಬಂದೂಕಿನ ಸದ್ದು ಇವುಗಳ ಮಾರ್ದನಿ ಹಾಗೆಯೇ ಇತ್ತು. ನೀರವತೆಯಲ್ಲಿ ನೂರು ನೆನಪುಗಳು ಹಾಗೇ ಉಳಿದವು. ಆ ದಿನ ಅಲ್ಲಿದ್ದವರೆಲ್ಲರ ಜೀವನದಲ್ಲಿ ಮರೆಯಲಾರದ ದಿನ. ಹಿಂದಿರುಗುವಾಗ ನಾನು ಮುಂದೆ ಇದ್ದೆ. ನನ್ನ ಹಿಂದೆ ಆರು ಸೈನಿಕರು. ನನ್ನ ಎರಡು ಕೈಗಳಲ್ಲೂ ಉರಿದು ಆರಿಹೋಗಿದ್ದ ಪಂಜುಗಳಿದ್ದವು. ನನ್ನ ಬಟ್ಟೆಯ ಮೇಲೆ, ಮುಖದ ಮೇಲೆ ಎಲ್ಲಾ ಪಂಜಿನ ಮಸಿಯ ಕಪ್ಪು ಕಲೆಗಳಿದ್ದವು. ಹುಲಿಯು ಪಂಜು ನನ್ನ ಮೈಗೆ ತಗುಲಿದಾಗ, ಅದೃಷ್ಟವಶಾತ್ ನನ್ನ ಬಟ್ಟೆಯಷ್ಟೇ ಹರಿದಿತ್ತು. ಆದರೆ ಅದು ಚಿಹ್ನೆಯಂತೆ ಅಲ್ಲಿ ಉಳಿದಿತ್ತು. ನನ್ನ ಹಿಂದೆ ಇದ್ದ ಸೈನಿಕರು ಬೆವರುತ್ತಿದ್ದರು. ಅವರ ಹಿಂದೆ ಇದ್ದ ಖೈದಿಗಳಿಗೆ ನನ್ನ ಮೇಲೆ ದ್ವೇಷ ಬೇಕಾದಷ್ಟು ಬೆಳೆದಿತ್ತು. ದ್ರೋಹಿ ಎಂಬ ಪಟ್ಟಿಯನ್ನು ಕಟ್ಟಿದ್ದರೇ. ಆದರೆ ಯಾರಿಗೂ ನನ್ನನ್ನು ಎದುರಿಸುವ ಧೈರ್ಯ ಇಲ್ಲ. ಹುಲಿಯನ್ನೇ ಎದುರಿಸಿದವನು ನಾನು ಎಂಬ ಭಯ ಅವರಿಗಿತ್ತು. ಆದರೆ ಸೈನಿಕರಿಗೆ ನನ್ನ ಮೇಲೆ ಪ್ರೀತಿ ಉಕ್ಕಿ ಹರಿಯುತ್ತಿತ್ತು. ಜೈಲಿಗೆ ಬಂದ ಮರುಕ್ಷಣವೇ ಅವರು ಬೇರೆ ಬೇರೆ ರೀತಿಯ ಔಷಧಗಳನ್ನು ತಂದು ನನಗಾಗಿದ್ದ ಗಾಯಗಳನ್ನು ಶುಶ್ರೂಷೆ ಮಾಡಿದರು. ಸೈನಿಕರಲ್ಲದೆ, ಒಬ್ಬ ಅಧಿಕಾರಿಯು ಬಂದು ನನ್ನನ್ನು ಚೆನ್ನಾಗಿ ಮಾತನಾಡಿಸಿ, ನನಗೆ ಒಳ್ಳೆ ಭವಿಷ್ಯವಿದೆ ಎಂದು ಹೇಳಿ ಹೊರಟ. ಶತ್ರು ವಿಶ್ವಾಸವನ್ನು ಬಹುಪಾಲು ಗೆದ್ದಂತೆಯೇ ಎಂದು ನಾನು ಹಿಗ್ಗಿದೆ. ನನ್ನನ್ನು ಜೈಲಿನಿಂದ ಹೊರಕ್ಕೆ ತಂದು, ನನಗೆ 'ಖೈದಿ' ಎಂದು ಹಾಕಿದ್ದ ಪಟ್ಟಿಯನ್ನು ತೆಗೆದುಹಾಕಿದರು. ನಂತರ ಅಲ್ಲೇ ವಾಸವಾಗಿದ್ದ ಅಧಿಕಾರಿಯ ಕೊಠಡಿಗೆ ಕರೆದುಕೊಂಡು ಹೋದರು. ಅಲ್ಲಿ ಹೊಸ ಬಟ್ಟೆಯನ್ನು ಇಟ್ಟಿದ್ದರು. ನಾನು ಈಗ ಧರಿಸಿರುವಂತಹದ್ದು" ಎನ್ನುತ್ತಾ ಕಾಂತಾ, ತನ್ನ ಚೀಲ-ಮಯವಾದ ಬಟ್ಟೆಯನ್ನು ತೋರಿಸಿದ. ಮೊದಲ ಬಾರಿ ನೋಡಿದಾಗ ಎಷ್ಟು ವಿಚಿತ್ರವೆನಿಸಿದ ಬಟ್ಟೆಯ ರಹಸ್ಯ ಈಗ ತಿಳಿಯಿತು.

"ಅಧಿಕಾರಿಯು ಎದ್ದು ಬಂದು, ನನ್ನ ಅಂಗೈಯನ್ನು ಹಿಡಿದು, ಅವರ ಭಾಷೆಯಲ್ಲಿ, 'ಧನ್ಯವಾದಗಳು' ಎಂದನು. ನಾನು, ಅವರನ್ನು ಇನ್ನಷ್ಟು ಹಿಗ್ಗಿಸಬೇಕೆಂದು, ಬ್ರಿಟೀಷ್ ರಾಣಿಗೆ ಜೈ! ಎಂದು ಕೂಗಿದೆ. ಅವರ ಮಂದಹಾಸ ಇನ್ನಷ್ಟು ಬೆಳಗಿತು. ಅವರು ನನ್ನನ್ನುದ್ದೇಶಿಸಿ, 'ನಿನಗೆ ಇಂದಿನಿಂದ ಬ್ರಿಟೀಷ್ ಕೈ ಕೆಳಗೆ ಕೆಲಸ. ಅರಣ್ಯದಿಂದ ಮರವನ್ನು ತರುವ ಕೆಲಸ. ನೀನು ಆ

ಗುಂಪಿನೊಂದಿಗೆ ಸೇರಿಕೊ. ನಂತರ ನಿನ್ನ ನಿಷ್ಠೆ, ಕೆಲಸಗಳನ್ನು ಗಮನಿಸಿ, ಖಂಡಿತ ಉನ್ನತ ಮಟ್ಟಕ್ಕೆ ಕಳುಹಿಸಲಾಗುತ್ತೆ' ಎಂದರು. ಇಷ್ಟಾದ ಮೇಲೆ ನಾನು ಜೈಲಿನಿಂದ ಹೊರ ಬಂದಾಯಿತು. ಈಗ ಕಾಡಿನಲ್ಲೇ ಕೆಲಸವಾದ್ದರಿಂದ ನನ್ನ ಕಾರ್ಯವನ್ನು ನಾನು ಮುಂದುವರೆಸಬಹುದು. ನಾನು ನಕ್ಕು, ನನ್ನ ಆತ್ಮಸಾಕ್ಷಿಯನ್ನು ಸುಮ್ಮನಾಗಿಸುತ್ತಾ, ಅವರಿಗೆ ಗೌರವ ತೋರಿಸಿ, ಬಟ್ಟೆಯನ್ನು ತೆಗೆದುಕೊಂಡು ಹೊರಕ್ಕೆ ಬಂದೆ. ಒಂದು ಕಡೆ ಹೋಗಿ ಆ ಬಟ್ಟೆಯನ್ನು ಧರಿಸಿದೆ. ಸೈನಿಕರು ಹೊರ ಬಂದು, 'ಚೆನ್ನಾಗಿ ಕಾಣುತ್ತಿದ್ದೀಯಾ' ಎಂದರು. ಒಬ್ಬನು ನನ್ನ ಹತ್ತಿರ ಬಂದು, 'ಅಷ್ಟು ಮೇಲಕ್ಕೆ ನೀನು ಎಗರಿದ್ದು ಹೇಗೆ?' ಎಂದು ಕೇಳಿದ. ನಾನು ನಾಚಿಕೆಯನ್ನು ನಟಿಸುತ್ತಾ ತಲೆಯನ್ನು ಬಗ್ಗಿಸಿದೆ. ನಂತರ, ಅವರವರ ಭಾಷೆಯಲ್ಲಿ ಮಾತನಾಡಿಕೊಳ್ಳುತ್ತಾ, 'ನಿನಗೆ ಹೊಸ ಹೆಸರು' ಎಂದರು. ಹುಲಿಯಿಂದ ನಾನು ರಕ್ಷಿಸಿದ್ದ ಸೈನಿಕನು ಬಂದು, 'ಹವಾ ಟೈಗರ್'ಎಂದನು. ನನಗೆ ಅದರ ಅರ್ಥವೇನೋ ತಿಳಿಯಲಿಲ್ಲ. ನಾನು ನನ್ನ ಗೊಂದಲವನ್ನು ಮುಖದಲ್ಲಿ ತೋರಿಸಿದೆ. ಆಗ ಅವರು, ನನ್ನ ಭಾಷೆಯಲ್ಲಿ, 'ಗಾಳಿಯಲ್ಲಿ ಹಾರುವ ಹುಲಿ' ಎಂದರು. ನನಗೆ ಇವರ ಸೃಜನಶೀಲತೆಯನ್ನು ಕಂಡು ಮೆಚ್ಚುಗೆಯಾಯಿತು. 'ನಾಳೆಯಿಂದ ಕೆಲಸ. ನೀನು ಈ ನಕ್ಷೆ ಹಿಡಿದು ಕೊಂಡು, ಅದರಲ್ಲಿ ತಿಳಿಸಿರುವ ಸ್ಥಳವನ್ನು ತಲುಪಬೇಕು' ಎಂದು ಕಾಡಿನ ನಕ್ಷೆಯಿದ್ದ ಒಂದು ಕಾಗದವನ್ನು ನನ್ನ ಕೈಗಿತ್ತರು. ಹಲವು ಬೆಟ್ಟಗಳ ನಡುವೆ ಇದ್ದ ಒಂದು ಸ್ಥಳವನ್ನು ನಾನು ತಲುಪಬೇಕಿತ್ತು. ನನ್ನ ಕಾಲಿಗೆ ಪಾದರಕ್ಷೆಯನ್ನೂ ನೀಡಿದರು. ಜೊತೆಗೆ ಒಂದು ಕೊಡಲಿ. ನಡೆಯುತ್ತಾ ಹೋಗುವಾಗ, ಒಂದು ಬಂಡೆಯ ಮೇಲೆ ನನ್ನ ಹೆಸರನ್ನು ಕೆತ್ತಿದೆ. ಹಾಗೆ ಕಾಡನ್ನು ತಲುಪಿದೆ."

ನಮಗೆ ಹವಾ ಟೈಗರ್‌ನ ರಹಸ್ಯ ತಿಳಿಯಿತು. ತಿಳಿದು ಆಶ್ಚರ್ಯವೂ, ಹೆಮ್ಮೆಯೂ ಆಯಿತು.

ಬೋಕನು, ತಕ್ಷಣ, "ಹಾಗಿದ್ದರೆ ಅರಣ್ಯನಿ?" ಎಂದನು.

ಕಾಂತಾ ನಗುತ್ತಾ, "ಈಗಲೇ ಹೇಳ್ಬೇಕಾ?" ಎಂದು ಎದ್ದು ನಿಂತ.

8

ಕಾಂತಾ ಮುಂದುವರೆಸಿದ

ಅರಣ್ಯಾನಿ ಅಂದರೆ ಏನು!? ನಮ್ಮ ಮನವನ್ನು ಹೊಕ್ಕಿ, ಬೇರೆ ಎಲ್ಲಾ ಯೋಚನೆಗಳನ್ನು ಸ್ಥಗಿತಗೊಳಿಸಿ, ಈ ಪ್ರಶ್ನೆಯೇ ಸುಳಿದಾಡುತ್ತಿತ್ತು. ಅರಣ್ಯ ಎಂದರೇನೋ ಕಾಡು. ಅರಣ್ಯಾನಿ ಎಂದರೆ? ಇರಲಿ ನಾಳೆಯವರೆಗೂ ಕಾಯಬೇಕು. ಆಚಾರ್ಯರನ್ನು ಕೇಳುವುದೂ ಬೇಡ. ಆದರೆ ಬೋಕನಿಗೆ ಬಂದ ಒಂದು ಸಂದೇಹ ನಮ್ಮನ್ನು ಮತ್ತೆ ಯೋಚನೆಗೆ ತಳ್ಳಿತು. ಅವನೆಂದ, "ಸಾಕ್ಷಿಯು ನಮಗೆ ಈ ಹವಾ ಟೈಗರ್, ವಿಚಿತ್ರ ಕತ್ತಿಯ ಕಥೆ ಹೇಳುವಾಗ, ಆ ಜನರೆಲ್ಲರೂ ಒಟ್ಟಿಗೆ ಹೇಳುವ ಒಂದು ಮಂತ್ರದ ಬಗ್ಗೆ ಹೇಳಿದನಲ್ಲ! ಅದೇನದು ಹೇಳು!" ಎಂದ. ನಮ್ಮ ಮೂವರಲ್ಲಿ ಜ್ಞಾಪಕ ಶಕ್ತಿ ಚೆನ್ನಾಗಿರುವುದು ನನಗೇ ಎಂದು ಕಾಣುತ್ತದೆ. ನಾನು ತಕ್ಷಣ ಒಂದೆರಡು ನಿಮಿಷ ಜ್ಞಾಪಿಸಿಕೊಂಡೆನಾದರೂ ಏನೂ ಹೊಳೆಯಲಿಲ್ಲ. ಎಲ್ಲೋ ಒಂದು ಮೂಲೆಯಲ್ಲಿ ಅದರ ಧಾಟಿ ಹೊಳೆಯುತ್ತಿತ್ತಾದರೂ ಹಾ! "ಪರೇವ ನಶ್ಯಸಿ" ಇದು ನಂತರ ಬರುವುದು. ಮೊದಲಿನದ್ದು? ಅರ...ರ... ಅದೇ! "ಅರಣ್ಯಾನ್ಯರಣ್ಯಾನ್ಯಸೌ!" ಆಚಾರ್ಯರು ನಮಗೆ ಹೇಳಿಕೊಟ್ಟಿದ್ದ ಕೊಂಚ ಕೊಂಚ ಮಂತ್ರಗಳನ್ನು ಬಿಡಿಸಿ ಬಿಡಿಸಿ ಓದುವ ಅಭ್ಯಾಸ ಆಗಿದ್ದರಿಂದ ಇದನ್ನೂ ಬಿಡಿಸತೊಡಗಿದೆವು. ಅರಣ್ಯಾನಿ, ಅರಣ್ಯಾನಿ ಅಸೌ! ಅಂದರೆ ಆ ಜನಗಳಿಗೂ ಅರಣ್ಯಾನಿಗೂ ಏನೋ ಸಂಬಂಧ ಇದೆ. ಅವರು ಹತ್ತಬೇಕಿದ್ದ ಆ ಬೆಟ್ಟದ ಮೇಲೆ ಏನೋ ಗುಟ್ಟು ಅಡಗಿದೆ. ಆ ವಿಚಿತ್ರ ಕತ್ತಿಯ ಗುಂಪಿನವರು ಆ ಗುಟ್ಟಿನ ಹುಡುಕಾಟದಲ್ಲಿಯೇ ಇರಬೇಕು. ಏನೂ ಗೊತ್ತಿಲ್ಲದ ನಮಗೆ ಒಂದು ಸುಳಿವಾದರೂ ಸಿಕ್ಕಿತಲ್ಲ ಎಂದು ಹರ್ಷಿಸಿ, ಮಲಗಿದೆವು. ಮೂವರ ಕನಸಲ್ಲೂ ಕಾಂತಾ ಹಾಗೂ ಅವನ ಎದೆಗಾರಿಕೆಯೇ ಕಾಡುವುದು

ನಿಶ್ಚಿತ. ಅದರಲ್ಲೂ ಅವನು ಹುಲಿಯಿಂದ ಎಲ್ಲರನ್ನೂ ಸಂರಕ್ಷಿಸಿ, ಮುಂದೆ ಕಾಂತಾ, ನಾಯಕನಂತೆ ನಡೆಯುತ್ತಾ, ಅವನ ಹಿಂದೆ ಈ ಬ್ರಿಟೀಷಿನ ಸೈನಿಕರು ಬಂದೂಕು ಹಿಡಿದು ಭಯಭೀತರಾಗಿ ಬರುತ್ತಿರುವುದು, ಅವರ ಹಿಂದೆ ಎಲ್ಲಾ ಖೈದಿಗಳು ಕೈ ಕಾಲುಗಳಲ್ಲಿ ಸರಪಳಿ ಇದ್ದರೂ ಅದನ್ನು ಎಳೆದುಕೊಂಡು, ದ್ವೇಷದಲ್ಲಿ ಹಲ್ಲು ಕಡಿಯುತ್ತಾ, ಕೆಲವರು ಹತಾಶೆಯ ಕಣ್ಣೀರು ಸುರಿಸುತ್ತಾ ಬರುತ್ತಿರುವುದನ್ನು ನಾನು ವಿಶೇಷವಾಗಿ ಕಲ್ಪಿಸಿಕೊಂಡೆ. ಅವನ ಕೈಯಲ್ಲಿದ್ದ ಆರಿದ ಕಪ್ಪು ಪಂಜುಗಳು. ಅವನ ಬಟ್ಟೆಯ ಮೇಲೆ ಹುಲಿಯ ಪಂಜಿನ ಗುರುತು. ಅವನ ತೋಳು, ಬಲಶಾಲಿ ಎದೆ, ಕೆತ್ತಿದಂತೆ ಇರುವ ಹೊಟ್ಟೆಯ ಭಾಗ. ಹನುಮಂತನ ಶಕ್ತಿಯೆಲ್ಲವೂ ಅವನಲ್ಲಿನ ಇದ್ದಂತೆ ಕಂಡಿತು. 'ಎಲ್ಲಾ ಆಚಾರ್ಯರ ದಯೆ' ಎನ್ನುತ್ತಾ ಅವನು ಕೈಮುಗಿದ ದೃಶ್ಯವಂತೂ ನನ್ನ ಕಣ್ಣಲ್ಲಿ ನೀರನ್ನೇ ತರಿಸಿತು. ಅವನಲ್ಲಿನ ವಿನಯವೇ ನನಗೆ ಆದರ್ಶವಾಯಿತು. ಇಷ್ಟೆಲ್ಲಾ ಆಲೋಚಿಸಿ ಇನ್ನೇನು ಮಲಗಬೇಕು ಎನ್ನುವಷ್ಟರಲ್ಲಿ, ಸಾಕ್ಷಿ ಸ್ನಾನಕ್ಕೆ ಎದ್ದು ಹೋಗಿದ್ದು ತಿಳಿಯಿತು. ಅವನು ಮಾಡುವುದು ಎರಡೇ ಕ್ಷಣದ ಸ್ನಾನ. ಇನ್ನೇನು ಬಂದುಬಿಡುತ್ತಾನೆ ಎಂದು ಅರೆ-ನಿದ್ರೆಯಲ್ಲಿ ಜಾರಿದೆ. ಆದರೆ ಇನ್ನೊಂದು ಕ್ಷಣದಲ್ಲೇ, ನಾಗ 'ಲೋ ಕಾಳಾ, ಎದ್ದೇಳೋ, ಕಾಂತಾ ಹತ್ತಿರ ಹೋಗೋಣ' ಎಂದು ಎಬ್ಬಿಸುತ್ತಿರುವುದು ಕೇಳಿಸಿತು. ಅರಣ್ಯಾನಿ ಯಾರು ಏನು ಎಂದು ತಿಳಿದುಕೊಳ್ಳುವ ಹಂಬಲದಲ್ಲಿ ನಿದ್ದೆಯೆಲ್ಲವೂ ಮಾಯವಾಯಿತು. ಬೇಗ ಬೇಗನೇ ಹೋಗಿ, ವ್ಯಾಯಮ, ಹನುಮಂತನಿಗೆ ನಮಸ್ಕಾರ, ಇತ್ಯಾದಿಗಳನ್ನು ಮುಗಿಸಿ ಕಾಡಿನ ಓಟಕ್ಕೆ ಸಜ್ಜಾದೆವು. ಸ್ಪರ್ಧೆಯಲ್ಲಿ ನಾವು ಸ್ಪರ್ಧಿಗಳೆಂಬಂತೆ ಜಿದ್ದಿನಿಂದ ಓಡತೊಡಗಿದೆವು. ಈ ಕಾಡಿನ ಓಟಗಳು ನಮಗೆ ಬಹಳವಾಗಿ ಉಪಯೋಗಕ್ಕೆ ಬಂದೆವು. ಓಡುತ್ತಾ ಓಡುತ್ತಾ ಕಾಡಿನ ಬೇರೆ ಬೇರೆ ದಾರಿಗಳು, ಎಲ್ಲಿ ಎಲ್ಲಿ ಕಲ್ಲುಗಳಿವೆ, ಎಲ್ಲಿ ಯಾವ ಮರ ಎಗರಲು ಪೂರಕವಾಗಿದೆ, ಇತ್ಯಾದಿ ಸೂಕ್ಷ್ಮಗಳು ನಮಗೆ ಅರಿವಾಗುತ್ತಿದ್ದವು. ಪ್ರತಿಯೊಂದು ಮರವೂ ಒಂದು ದೇವತೆ! ನಮಗೆ ಆಚಾರ್ಯರೂ, ತಂದೆ-ತಾಯಿಯರು ಹೇಳಿಕೊಟ್ಟಿದ್ದೂ ಅದೇ. ಅದನ್ನು ಕಡಿಯುವುದು ಕೊಲೆಗೆ ಸಮಾನ. ವಧೆಗೆ ಸಮಾನ. ದೇವತೆಯೇ ಕೈಚಾಚಿ ಕರೆದಾಗ ಆಗುವ ಅನುಭವ. ಅದರಂತೆಯೇ ಯಾವ ಮರವದ ಎತ್ತರ ಎಷ್ಟು, ಯಾವ ಮರದ ಮೇಲೆ ನಿಂತರೆ ಎಷ್ಟು ದೂರದವರೆಗೂ ಕಂಡೀತು, ಇತ್ಯಾದಿಗಳನ್ನು ನಾವೇ ಮಾಡಿ ಕಲಿತೆವು. ಹೀಗೆ ಕಾಂತಾ ಇದ್ದ ಸ್ಥಳವನ್ನು ಹುಡುಕಿ ಹೋಗಿ, ಸಿಂಗಳೀಕದ ಕೂಗು ಹಾಕಿ ಅವನನ್ನು ಕರೆದೆವು. ಕಾಂತಾ ಎಂದಿನಂತೆ ನಮ್ಮ ಬಳಿ ಬಂದು, ಬೇರೆಡೆಗೆ ಕೊಂಡೊಯ್ದು. ಆ ಸ್ಥಳವನ್ನು ಎಲ್ಲೋ ನೋಡಿದಂತೆಯೋ, ಯಾರೋ ಅದರ ಬಗ್ಗೆ ಹೇಳಿದಂತೆಯೋ ಅನ್ನಿಸಲು

ಶುರುವಾಯಿತು. ಜಲಪಾತ, ಹಿಂದೆ ಒಂದು ಬೆಟ್ಟ, ಜಾಲಿ ಮರಗಳ ಸಾಲು ...ಅಲ್ಲೇ...ಅಲ್ಲೇ ಕೆಳಗೆ ಮರಿ ಆನೆಯೊಂದರ ಮೂಳೆ! ಇದು ಸಾಕ್ಷಿಯು ಹೇಳಿದ್ದ ಹವಾ ಟೈಗರನ ಕಥೆಯ ಕೊನೆಯಲ್ಲಿ ಬರುವ ಸ್ಥಳ! ಹಾಗಿದ್ದರೆ ಊರಜನರ ದೇಹಗಳು, ಎಂದುಕೊಳ್ಳುತ್ತಾ ನಾನು ನಾಗ ಬೋಕರು ಅಲ್ಲೆಲ್ಲಾ ಅಡ್ಡಾಡತೊಡಗಿದೆವು. ಅಲ್ಲಲ್ಲಿ ಕೆಲವು ಮೂಳೆಗಳು ಕಂಡವು. ಒಂದು ತಲೆಬುರುಡೆಯು ಕಂಡಾಗ, ನಮಗೆ ಭಯ ಆಯಿತು. ದೂರ ದೂರ ಹೋಗುತ್ತಿದ್ದ ನಮ್ಮನ್ನು ಕಾಂತಾ ಹತ್ತಿರ ಕರೆದು, "ಕಥೆಯ ಮುಖ್ಯ ತಿರುಳು ಇದು. ದಯವಿಟ್ಟು ಕೇಳಿ" ಎಂದ. ಜಲಪಾತದ ಹತ್ತಿರ ಇದ್ದ ಒಂದು ಬಂಡೆಯ ಮೇಲೆ ಎಲ್ಲರೂ ಕುಳಿತೆವು. ಜಲಪಾತದ ಸದ್ದು, ಆ ನೀರಿನ ರಭಸಕ್ಕೆ ಆಗಾಗ ನಮ್ಮ ಮೇಲೆ ಸಿಂಪಡನೆಯಾಗುತ್ತಿತ್ತು. ನಾವು ಆನಂದಿಸುತ್ತಾ ಕಥೆಯನ್ನು ಕೇಳಲು ಸಿದ್ಧರಾದೆವು. ಕಾಂತಾ ಮುಂದುವರೆಸಿದ. "ನನ್ನನ್ನು ಕಾಡಿಗೆ ಕಳುಹಿಸಿದಾಗ, ನನಗೆ ಕಾಡಿನ ಬಗ್ಗೆ ಏನೂ ತಿಳಿದಿರಲಿಲ್ಲ. ಇನ್ನೂ ಹುಟ್ಟಿದ ಹಸುಳೆಯಂತೆ. ಹಲವು ಬಾರಿ ಮುಗ್ಗರಿಸಿ ಬಿದ್ದೆ. ಓಡುತ್ತಾ ಓಡುತ್ತಾ ನನ್ನ ಕಾಲುಗಳು ದಣಿದುಹೋದವು. ಒಮ್ಮೊಮ್ಮೆ ಆ ಕಾರ್ಗತ್ತಲಲ್ಲಿ ಎಲ್ಲಿ ಯಾವ ಪ್ರಾಣಿ ಬರುವುದೋ, ಎಷ್ಟು ಅಪಾಯಕಾರಿಯೋ ತಿಳಿಯದು. ಅಲ್ಲಲ್ಲಿ ಹಾವುಗಳು ಬುಸುಗುಟ್ಟುವ ಸದ್ದು ಕೇಳಿಸುತ್ತಿತ್ತು. ಘರ್ಜನೆ ಕೂಡ. ಆದರೆ ನನ್ನ ಕೊಡಲಿಯನ್ನು ನನ್ನ ಕೈಯಲ್ಲಿಟ್ಟುಕೊಂಡಾಗ ನನಗೆ ತಾನಾಗಿಯೇ ಧೈರ್ಯ ಬರುತ್ತಿತ್ತು. ಕಾರಣ, ಅದನ್ನು ಉಪಯೋಗಿಸುವ ಬಗೆ ನನಗೆ ತಿಳಿದಿತ್ತು. ಯಾವ ಪ್ರಾಣಿಯನ್ನು ಕೊಲ್ಲುವ ಉದ್ದೇಶ ನನಗಿರಲಿಲ್ಲ. ಇದು ಪ್ರಾಣಿಗಳ ನಿಜವಾದ ಮನೆ. ನಾವೇ ಆಕ್ರಮಣಕಾರರು. ಕೆಲುವೊಮ್ಮೆ ನಡೆಯುತ್ತಿರುವಾಗ, ತಳವೇ ಇಲ್ಲದ ಹೂಳುನೆಲದಲ್ಲಿ ಕಾಲಿಟ್ಟು ಜಾರಿಬಿಡುತ್ತಿದ್ದೆ. ಆ ಹೂಳುನೆಲದಲ್ಲಿ ಜಾರಿದರೆ ನೇರ ಪಾತಾಳಕ್ಕೆ. ಆದರೆ ಹೇಗೋ ಹೊರಗೆ ಬಂದು, ನದಿಯ ಜಾಡನ್ನು ಹಿಡಿದು, ಸ್ನಾನ ಇತ್ಯಾದಿಗಳನ್ನು ಮುಗಿಸಿ, ಮತ್ತೆ ನಕ್ಷೆ ತೆಗೆದು ಹುಡುಕುತ್ತಾ ಹೋಗುತ್ತಿದ್ದೆ. ಕಾಡಿನ ಈ ಜಟಿಲತೆಯೊಳಗೆ ಒಂದಷ್ಟು ದಿನ ಕಳೆದ ಮೇಲೆ ಬುದ್ಧಿಗೆ ಕಾಡಿನ ವಿವಿಧ ವಿಧಾನಗಳು ಗೋಚರವಾಗ ತೊಡಗಿತು. ಎಲ್ಲಿ ನಿಂತು ನೋಡಿದರೆ ದೂರದವರೆಗು ಕಾಣುವುದು, ಯಾವ ಗಿರಿಯನ್ನು ಹೇಗೆ ಏರಬಹುದು, ಇವೆಲ್ಲವನ್ನು ಆ ಸಮಯದಲ್ಲೇ ಕಲಿತೆ."

ಬೋಕನಿಗೆ ಒಂದು ಅತ್ಯಮೂಲ್ಯವಾದ ಸಂಶಯ ಹುಟ್ಟಿತು. "ಕಾಂತಾ, ಹಾಗಿದ್ದರೆ ಅಷ್ಟೂ ದಿನ ಏನು ತಿನ್ನುತ್ತಿದ್ದೆ? ನಿನಗೆ ಕಾಡಿನ ಬಗ್ಗೆ ತಿಳಿದಿರಲಿಲ್ಲ ಅಲ್ಲವೆ?" ಎಂದ.

ಕಾಂತಾ ಹೊಟ್ಟೆ ಹುಣ್ಣಾಗುವಷ್ಟು ನಕ್ಕು, ನಂತರ, "ಹ ಹ ಹೌದು

ಕಣೋ. ಎಷ್ಟು ಬಗೆಯ ಎಲೆಗಳನ್ನು ತಿಂದಿರುವೆನೋ ನನಗೆ ತಿಳಿಯದು. ಕೆಲುವೊಮ್ಮೆ ತಿಂದಾಗ ಮೈಯೆಲ್ಲಾ ಗುಳ್ಳೆ ಗುಳ್ಳೆಯಾಗಿ, ಇನ್ನು ಕೆಲವು ಬಾರಿ ತಿಂದಾಗ ನಿದ್ದೆ ಬಂದಂತೆಯೂ, ಶಕ್ತಿ ಬರುವಂತೆಯೂ, ಹೀಗೆ ಬೇರೆ ಬೇರೆ ಹಣ್ಣು-ಎಲೆ-ಗಡ್ಡೆಗಳನ್ನೆಲ್ಲಾ ಕಚ್ಚಿ ನೋಡಿ ತಿನ್ನುತ್ತಿದ್ದೆ. ನಾನು ಬಂದ ದಾರಿಯು ನನಗೆ ಸರಿಯಾಗಿ ನೆನಪಿತ್ತು. ದಾಟುತಿದ್ದ ದಾರಿಯೂ ತಲೆಯಲ್ಲಿ ಹಾಗೆಯೇ ಅಚ್ಚೊತ್ತಿದ್ದಂತೆ ಉಳಿಯುತ್ತಿತ್ತು. ಎಲ್ಲೆಲ್ಲಿ ಯಾವ ದೊಡ್ಡ ಮರ ಉರುಳಿದೆಯೋ ಅವೆಲ್ಲವೂ ಹೆಗ್ಗುರುತುಗಳಾಗಿ ಇಟ್ಟುಕೊಳ್ಳುತ್ತಿದ್ದೆ. ಯಾವ ಸಮಯದಲ್ಲಿ ಯಾವ ಸದ್ದು ಕಾಡಿನಲ್ಲಿ ಉಂಟಾಗುವುದೋ ಎಂದು ಏಕಾಗ್ರತೆಯಿಂದ ಕೇಳಿ ಕಲಿತೆ. ಹಾಗೆಯೇ, ಆಚಾರ್ಯರು ನಮಗೆ ಹೇಳಿಕೊಟ್ಟಿದ್ದ ಸಮರ ಕಲೆಗಳಲ್ಲಿ ವಿವಿಧ ಪ್ರಾಣಿಗಳ ಅನುಕರಣೆ ಇದ್ದಿದ್ದು ನೆನಪಿಗೆ ಬರತೊಡಗಿತು. ಅಪಾಯಕಾರಿಯಲ್ಲದ, ನಾಚಿಕೆ ಸ್ವಭಾವದ ಪ್ರಾಣಿಗಳು ಹಲವು. ಪಾಪ ಅವುಗಳಿಗೆ ಭಯ. ನಾನು ಮಯೂರವಡಿವು, ಗಜವಡಿವು, ವರಾಹವಡಿವು, ಇವುಗಳನ್ನು ಯತ್ನಿಸಿದ್ದೇನೆ. ಸಿಂಹವಡಿವು, ಸರ್ಪವಡಿವುಗಳನ್ನು ಪ್ರಯೋಗಿಸುವ ಸಂದರ್ಭವಾಗಲಿ, ಧೈರ್ಯವಾಗಲಿ ಇನ್ನೂ ಇಲ್ಲ ಎಂದುಕೊಳ್ಳುತ್ತೇನೆ. ನಾನು, ಇನ್ನೂ ಆ ಸೈನಿಕರು ಹೇಳಿದ ನಿಗದಿತ ಸ್ಥಳವನ್ನು ತಲುಪಿರಲಿಲ್ಲ. ಆದರೆ ಒಂದು ದಿನ ಬೆಟ್ಟವೊಂದರ ಮೇಲೆ ನಿಂತು ಸುತ್ತಲೂ ನೋಡುತ್ತಿದ್ದಾಗ ಒಂದು ಕಡೆಯಿಂದ "ಢಾಮ್!" ಎಂಬ ಸದ್ದು ಕೇಳಿಸಿತು.ಆ ಭಾಗದಿಂದ ಹಲವು ಪಕ್ಷಿಗಳು ಹಾರಿದವು. ಸಿಂಗಳೀಕಗಳ ಭಯಭ್ರಾಂತ ಕೂಗು ಕೇಳಿಸಿತು. ಅವೆಲ್ಲವೂ ಭೀತಿಯಲ್ಲಿರುವಂತೆ ಇತ್ತು. ನಾನು ತಕ್ಷಣ ಬೆಟ್ಟದಂತೆ ಆ ಕಡೆಗೆ ಇಳಿಯತೊಡಗಿದೆ. ನನ್ನ ಪಾದರಕ್ಷೆ ಹರಿದು ಹೋಗಿತ್ತು. ಬರಿಗಾಲು ಕಾಡಿನ ನೆಲಕ್ಕೆ ಹೊಂದಿಕೊಂಡಿತ್ತು. ನನ್ನ ಬಟ್ಟೆಯೂ ಹಲವು ಕಡೆ ಹರಿದಿತ್ತು. ಆದರೆ ದೇಹವೂ ಗಟ್ಟಿಯಾಗಿತ್ತು. ಯಾವುದೇ ಕ್ಷೌರವಿಲ್ಲದೆ ಕೂದಲು ಹೇರಳವಾಗಿ ಬೆಳೆದಿತ್ತು. ಹಲವು ಕಡೆ ಗಾಯದ ಕಲೆಗಳಿದ್ದವು. ನಾನು ನಿಶ್ಶಬ್ಧವಾಗಿ ಓಡುತ್ತಾ ಶಬ್ದ ಬಂದ ಭಾಗವನ್ನು ತಲುಪಿದೆ. ಎಲ್ಲರೂ ಬ್ರಿಟೀಷರೆ. ಎಲ್ಲರೂ ಬೆಳ್ಳಗಿದ್ದರು. ಕೂದಲಂತೂ ಬಂಗಾರದ ಬಣ್ಣ. ಆದರೆ ಒಬ್ಬರಲ್ಲೂ ಶಕ್ತಿಯಿದ್ದಂತೆ ಕಾಣಲಿಲ್ಲ. ಎಲ್ಲರೂ ಸುಸ್ತಾಗಿಬಿಟ್ಟಿದ್ದರು. ಒಂದು ಕಡೆ ಬೆಂಕಿಯನ್ನು ಒಬ್ಬ ಸಿದ್ಧ ಮಾಡುತ್ತಿದ್ದ. ಒಂದು ಪಕ್ಷಿಯು ಸತ್ತು ಬಿದ್ದಿದ್ದು ಕಂಡಿತು. ಅದರ ದೇಹದಲ್ಲಿ ಇವರಲ್ಲಿ ಯಾರೋ ಒಬ್ಬರು ಗುಂಡು ಹೊಡೆದಂತಿತ್ತು. ನನಗೆ ಕರುಳು ಕಿವುಚಿದಂತಾಯಿತು. ಅದನ್ನು ಇವರೆಲ್ಲ ತಿನ್ನುತ್ತಾರೆ. ನಾನು ನಿಧಾನವಾಗಿ ಅವರ ಮುಂದೆ ಹೋಗಿ ನಿಂತೆ. ಅವರೆಲ್ಲರೂ ಎಚ್ಚೆತ್ತುಕೊಂಡು, ಅವರವರ ಬಂದೂಕುಗಳನ್ನು ಹಿಡಿದು ನನ್ನ ಬಳಿ ಬಂದರು. ಅವರ ಭಾಷೆಯಲ್ಲಿ "ಯಾರು ನೀನು? ಕೊಂದುಬಿಡುತ್ತೇವೆ? ಯಾರು ನೀನು?" ಎಂದು ಕೇಳಿದರು. ನಾನು

ನೋಡುವುದಕ್ಕೂ ಹಾಗೇ ಇದ್ದೆ ಬಿಡಿ. ಆದರೆ ನನ್ನ ಬಟ್ಟೆಯನ್ನು ನೋಡಿ ಅವರಿಗೆ ಸಂದೇಹ ಬಂದಿರಬಹುದು. ನಾನು ಸುರಕ್ಷಿತವಾಗಿಟ್ಟಿದ್ದ ಆ ಒಂದು ಬರಹದ ಕಾಗದವನ್ನು ಅವರ ಕೈಗೆ ಕೊಟ್ಟೆ. ಒಬ್ಬ ಮುಖ್ಯಸ್ಥನು ಅದನ್ನು ತೆಗೆದುಕೊಂಡು. ಓದುತ್ತಾ ಓದುತ್ತಾ ಅವನು ಎಲ್ಲರಿಗೂ ಬಂದೂಕು ಇಳಿಸುವಂತೆ ಸೂಚಿಸಿದ. ಅವನ ಮುಖಭಾವನೆ ಬದಲಾಯಿತು. "ನಿನ್ನ ಹೆಸರೇನು?" ಎಂದು ಕೇಳಿದ. ನಾನು "ಹವಾ ಟೈಗರ್" ಎಂದೆ. ಅಲ್ಲಿದ್ದವರೆಲ್ಲಾ ನಗತೊಡಗಿದರು. ಈ ಮುಖ್ಯಸ್ಥನು ಅವರೆಲ್ಲರನ್ನೂ ಗದರಿ, ಆ ಕಾಗದವನ್ನು ಅವರಿಗೆ ಓದಿ ಹೇಳಿದ. ಎಲ್ಲರೂ ಭಯಭೀತರಾಗಿ ನನ್ನನ್ನು ನೋಡತೊಡಗಿದರು. ಬಾ! ಎನ್ನುತಾ ನನ್ನನ್ನು ಕೆಲಸಕ್ಕೆ ಹಾಕಿಕೊಂಡರು. ನನ್ನ ಪಂಚೇಂದ್ರಿಯಗಳೂ ಈಗ ಎಚ್ಚರವಾಗಿದ್ದವು. ಎಲ್ಲಿ ಅರಣ್ಯಾನಿಯ ಬಗ್ಗೆ ತಿಳಿವುದೋ, ಎಲ್ಲಿ ಆಚಾರ್ಯರು ಸಿಗುವರೋ ಎಂದು ಕಾಯುತ್ತಿದ್ದೆ. ಇದರ ನಡುವೆಯೇ, ನನ್ನನ್ನು ಅವರು ಕಾಡಿನ ಬೇರೇ ಬೇರೇ ಭಾಗಗಳಿಗೆ ಕೊಂಡೊಯ್ದು ಮರಗಳನ್ನು ಕಡಿಸುವುದು, ಆ ತುಂಡುಗಳನ್ನು ನದಿಯಲ್ಲಿ ತೇಲಿಬಿಟ್ಟು, ನಂತರ ಅದನ್ನು ಕೊನೆಯಲ್ಲಿ ಬರುತ್ತಿದ್ದ ದೊಡ್ಡದೊಂದು ಬಂಡಿಯಲ್ಲಿ ಹಾಕಿ, ಸಾಗಿಸುವುದು-ಇಷ್ಟು ಕೆಲಸಗಳನ್ನು ಮಾಡಿಸುತ್ತಿದ್ದರು. ಕೆಲುವೊಮ್ಮೆ ಅವರವರೇ ಗುಟ್ಟಾಗಿ ಮಾತನಾಡಿಕೊಳ್ಳುವುದನ್ನು ನಾನು ನೋಡುತ್ತಿದ್ದೆನಾದರೂ, ಗುಟ್ಟಾಗಿ ಆಲಿಸಿಕೊಂಡು ಅರ್ಥೈಸಿಕೊಳ್ಳುವ ಗೋಜಿಗೆ ಹೋಗಲಿಲ್ಲ. ಒಂದು ದಿನ, ನಾನು ಕಡಿದ ಮರದ ತುಂಡುಗಳನ್ನು ನದಿಯಲ್ಲಿ ತೇಲಿಬಿಟ್ಟು, ಅದು ಕೊನೆಯಲ್ಲಿ ನಿಲ್ಲುವ ಒಂದು ಸ್ಥಳದಲ್ಲಿ ನಿಂತು ಕಾಯುತ್ತಿದ್ದೆ. ಬಂಡಿಯವನೂ ಸಮಯಕ್ಕೆ ಸರಿಯಾಗಿ ಬಂದನು. ಆದರೆ ಅವನ ಬಂಡಿಯು ಎಂದಿನಂತೆ ಖಾಲಿಯಾಗಿರಲಿಲ್ಲ. ಅರ್ಧದಷ್ಟು ಬಂಡಿ ಒಣಹುಲ್ಲಿನಿಂದ ತುಂಬಿತ್ತು. ಬಹುಶಃ ಬಂಡಿಯನ್ನು ಎಳೆಯುವ ಆ ಎರಡು ಎತ್ತುಗಳಿಗೆ ಆಹಾರ ಆಗಿರಬಹುದು ಎಂದು ನಾನು ಭ್ರಮಿಸಿದೆ. ಆದರೆ ಯಾವ ಪ್ರಾಣಿ ಒಣಹುಲ್ಲನ್ನು ತಿನ್ನುವುದೋ? ಬಂಡಿಯ ಮೇಲೆ ಕುಳಿತು ಕಾಯುತ್ತಿದ್ದವನು ನನಗೆ ಪರಿಚಯದವನೇ. ನಾನು ಅವನ ಬಳಿ ಸರಿದು, "ಏನಪ್ಪಾ, ಹೇಗಿದ್ದೀಯ? ಹೇಗೆ ನಡೀತಿದೆ ಎಲ್ಲಾ?" ಎಂದು ಕುಶಲೋಪಚಾರ ವಿಚಾರಿಸಿದೆ. ಅವನೂ ಸುಸ್ತಾಗಿದ್ದ. ಮಾತನಾಡಲು ಒಬ್ಬನಾದರೂ ಸಿಕ್ಕಿದನೆಂದು, "ಎಲ್ಲಾ ಚೆನ್ನಾಗಿದೆ ಬುದ್ಧಿ. ಬರೀ ಈ ಮರ ಆಗಿದ್ರೂನು ನಡೀತಿತ್ತು. ಈಗ ಇವೆಲ್ಲಾ ಬೇರೆ ಏನೋ ಕೊಟ್ಟು, ಸಾಗಿಸು ಅಂತಾರೆ" ಎನ್ನುತ್ತಾ ಅವನು ಒಣಹುಲ್ಲನ್ನು ತೋರಿಸಿದ. ನಾನು, "ಅದೇನಪ್ಪ? ಆಚೆಗೆ ಒಣಹುಲ್ಲಿಗೆ ಬರವೇ? ಅಲ್ಲದೆ, ಒಣಹುಲ್ಲನ್ನು ಉಪಯೋಗಿಸುವವರು ಯಾರಿದಾರೆ?" ಎಂದು ನಕ್ಕಿದೆ. ಅವನು, "ಅಯ್ಯೋ ಬುದ್ಧಿ, ಒಣಹುಲ್ಲಿಗೆ ಬೆಲೆ ಯಾರು ಕೊಟ್ಟಾರು ಬುದ್ಧೀ? ಅದರಲ್ಲಿ



ಮುಚ್ಚಿಟ್ಟಿರುವುದಕ್ಕೆ ತಾನೆ ಬೆಲೆ?" ಎನ್ನುತ್ತಾ, ಒಣಹುಲ್ಲನ್ನು ಸರಿಸಿದ. ಸರಿಸುತ್ತಿದ್ದಂತೆ ಕಪ್ಪು ಬಣ್ಣದ ವಸ್ತುವು ಏನೋ ಅನಾವರಣಗೊಳ್ಳುತ್ತಾ ಹೋಯಿತು. ಪೂರ್ತಿ ಒಣಹುಲ್ಲನ್ನು ಸರಿಸಿದ ತಕ್ಷಣ, ಅಲ್ಲಿ ಕಂಡಿದ್ದು ಹನುಮಂತನ ವಿಗ್ರಹ! ಸುಂದರ ಕೆತ್ತನೆ, ಸಾಕ್ಷಾತ್ ಹನುಮಂತನೇ ಮಲಗಿರುವಂತೆ ಮಾಡಿದ್ದ ಕೆತ್ತನೆ. ಕೈಮುಗಿದು, ಭಕ್ತಿಯಲ್ಲಿ ಕಣ್ಣು ಮುಚ್ಚಿದ್ದ ಹನುಮಂತನ ವಿಗ್ರಹ ಅದು. ಹಣೆಯಲ್ಲಿ ಕುಂಕುಮ ಇತ್ಯಾದಿಗಳ ಕಲೆಯಿತ್ತು. ಮೈಯಲ್ಲಿ ಒಂದು ತುಳಸಿ ಮಾಲೆ. ಆದರೆ ಹನುಮಂತನ ಭಂಗಿ ಅತ್ಯಂತ ವಿಶೇಷವಾಗಿತ್ತು. ಒಂದು ಕಡೆ ಅವನು ಶಕ್ತಿಯನ್ನು ತೋರಿಸುತ್ತಿದ್ದರೆ, ಅವನ ಮುಖದಲ್ಲಿ ಮಾತ್ರ ಭಕ್ತಿ!

ಅವನು ಮಾಡಿದ್ದ ನಮಸ್ಕಾರ ಮುದ್ರೆಯಲ್ಲೇ ವಿನಯ-ಭಕ್ತಿಗಳು ಎದ್ದು ಕಾಣುತ್ತಿದ್ದವು. ಅವನ ಮೂರ್ತಿಯಂತು 'ರಾಮ, ರಾಮ' ಎನ್ನುವಂತೆಯೇ ಕಾಣುತ್ತಿತ್ತು! ಆದರೆ, ಈ ವಿಗ್ರಹ ಇಲ್ಲೇನು ಮಾಡುತ್ತಿದೆ? ದೇವಸ್ಥಾನದಲ್ಲಿ ಇರಬೇಕಾದ ಇದು, ಇಲ್ಲೇಕಿದೆ? ಇವನು ಇದನ್ನು ತೆಗೆದುಕೊಂಡು ಹೋಗುವುದೆಲ್ಲಿಗೆ? ಸಂಶಯ ಬರದವನಂತೆ ನಟಿಸುತ್ತಾ, ನಾನು, "ಈ ವಿಗ್ರಹವನ್ನ ಏನ್ಮಾಡ್ತಾರೆ, ನನ್ನಪ್ಪ?" ಎಂದೆ. ಅವನು ಯಾವ ಭಯ ನಾಚಿಕೆಗಳಿಲ್ಲದೆ, "ಅದೇ ಆ ಹೊರದೇಶದವರು ಬಂದಿದಾರಲ್ಲ, ಅವರು ಇದನ್ನ ಅವರ ದೇಶಕ್ಕೆ ಎತ್ತಿಕೊಂಡು ಹೋಗುತ್ತಾರಂತೆ. ಅಲ್ಲಿ ಅವರ ಜನ ಎಲ್ಲರೂ ಇದನ್ನ ನೋಡಕ್ಕೆ ವ್ಯವಸ್ಥೆ ಮಾಡ್ತಾರಂತೆ." ಎಂದ. ನಾನು, "ಹಾಗಿದ್ದರೆ ಇದಕ್ಕೆ ಪೂಜೆ?" ಎಂದೆ. ಅವನು, "ಏ! ಚೆನ್ನಾಗಿ ಹೇಳುದ್ರಿ ಬುದ್ಧಿ. ಅವರಿಗೆ ಒಂದೇ ದೇವರು. ಅದೇನೋ ಯೇಸು ಯೇಸು ಅಂತಾರಲ್ಲ. ಅದಕ್ಕೆ ಬಿಟ್ಟು ಇನ್ನೊಂದಕ್ಕೆ ಅವರು ಪೂಜೆ ಮಾಡಲ್ಲ. ಇದನ್ನ ಒಂದು ಪ್ರದರ್ಶನ ಅಂತ ಇಟ್ಕೋತಾರೆ ಅಷ್ಟೆ. ಹೆಚ್ಚಿನ ಬೆಲೆ ಕೋಡೋವ್ನು ಇದನ್ನ ಎತ್ತಿಕೊಂಡು ಹೋಗಿ, ಅವನ ದೊಡ್ಡ ಮನೆಯಲ್ಲಿ ಎಲ್ಲಾದರೂ ಒಂದು ಕಡೆ ಇಟ್ಟಿರ್ತಾನೆ. ಮನೆ ಚೆನ್ನಾಗಿ ಕಾಣ್ಲೆ ಅಂತ." ಎಂದ. ನನಗೆ ಸಂಕಟವಾಯಿತು. ಎಂತಹ ಶಕ್ತಿಶಾಲಿ ದೇವರಿಗೆ ಎಂತಹ ಗತಿ? ಇವನಿಗೆ ಬೆಲೆ ಕಟ್ಟಿ ಪ್ರದರ್ಶನಕ್ಕೆ ಇಡೋದೆಂದರೆ ಏನು? ನಾನು, ಸ್ವಲ್ಪ ಗದ್ಗದಿತನಾಗಿ, "ಇದನ್ನ ನಂಗೇ ಕೊಟ್ಬಿಡೋ" ಎಂದು ಕೇಳಿಕೊಂಡೆ. ಅವನು, "ಏ! ಆಗಕ್ಕಿಲ್ಲ ಬುದ್ಧಿ. ಸುಮ್ಕೆ ನಿಮ್ಕೆಲ್ಸ ನೀವ್ಮಾಡಿ. ಇದನ್ನ ಕಳ್ಕೊಂಡ್ರೆ ನನ್ನ ಪ್ರಾಣಾನೆ ತೆಗೀತಾರೆ. ಎಷ್ಟು ದುಡ್ಡು ಕೊಡ್ತಾರೆ ಗೊತ್ತಾ? ನಂಗೂ ಮಕ್ಳಾವೆ. ಅದನ್ನ ಸಾಕ್ಕೊತ್ತೀನಿ" ಎಂದ. ನನಗೆ ಕಪಾಳಕ್ಕೆ ಹೊಡೆಯಬೇಕೆನಿಸಿತು. ಇಂತಹವರಿಂದ ನಮ್ಮ ದೇಶವನ್ನೇ ಮಾರಿಬಿಡಬಹುದು ಎಂದುಕೊಂಡೆ. ಅಷ್ಟರಲ್ಲಿ ಮರದ ತುಂಡುಗಳು ಒಂದೊಂದಾಗಿ ತೇಲಿ ಬಂದವು. ನಾನು ಒಂದೊಂದನ್ನೂ ಎತ್ತಿ, ಬಂಡಿಯಲ್ಲಿ ಪೇರಿಸತೊಡಗಿದೆ. ಅವನೂ ಮಾತನಾಡದೆ ಎಲ್ಲವನ್ನು ಸರಿ ಮಾಡಿ, ಹಗ್ಗದಿಂದ ಕಟ್ಟಿ, "ಚ್ಚ ಚ್ಚ..ನಡಿ ನಡಿ" ಎಂದು ಎತ್ತುಗಳನ್ನು ಹೊರಡಿಸತೊಡಗಿದ. ನನಗೆ ತಕ್ಷಣಕ್ಕೆ ಏನೋ ಕೇಳಬೇಕೆನಿಸಿತು. "ಒನ್ನಿಮ್ಷ!" ಎಂದು ಕೂಗಿದೆ. ಅವನು ಸಪ್ಪೆ ಮುಖ ಮಾಡಿಕೊಂಡು ನಿಲ್ಲಿಸಿದ. ನಾನು ಅವನ ಬಳಿ ಓಡಿ ಹೋಗಿ, "ಇದನ್ನು ಎಲ್ಲಿಂದ ತಂದಿದ್ದು?" ಎಂದು ಏದುಸಿರು ಬಿಡುತ್ತಾ ಕೇಳಿದೆ. ಅವನು ಲೊಚಗುಟ್ಟುತ್ತಾ, ಹಿಂದೆ ತಿರುಗಿ, "ಅಗೋ ಆ ಬೆಟ್ಟ ಕಾಣ್ತಿದೆಯಲ್ಲ? ಅದು ಅರಣ್ಯಾನಿ ಬೆಟ್ಟ ಅಂತ. ಅದರಲ್ಲಿ ಈ ಥರ ಚಿಕ್ಕಾಪುಟ್ಟ ದೇವಸ್ಥಾನಗಳು ಎಷ್ಟೊಂದಿವೆ. ಯವುದೋ ಒಂದರಿಂದ ಆ ಸೈನಿಕರು ಇದನ್ನು ತಂದರು. ನಾನು ಬಂಡಿಯಲ್ಲಿ ಹಾಕ್ಕೊಂಡು ಬಂದೆ ಅಷ್ಟೆ. ಹಾ, ಬರ್ಲಾ!" ಎನ್ನುತ್ತಾ ಎತ್ತುಗಳಿಗೆ

ಫಟ್ ಎಂದು ಏಟು ಕೊಟ್ಟ. ಅವು ಕಷ್ಟ ಪಡುತ್ತಾ, ಹೂಂಕರಿಸಿ ಎಳೆದೊಯ್ಯು ವುದನ್ನು ನಾನು ಮೌನದಿಂದ ನೋಡತೊಡಗಿದೆ. ಆದರೆ ಒಂದಂತೂ ಉಪಯೋಗವಾಗಿತ್ತು" ಎಂದು ಕಾಂತಾ ಉಸಿರೆಳೆದುಕೊಳ್ಳುವಷ್ಟರಲ್ಲಿ, ಬೋಕನು ನಿಂತು, "ಅರಣ್ಯನಿ ಸಿಕ್ಕಾಯಿತಲ್ಲ!" ಎಂದ. ಕಾಂತಾ ಬೋಕನ ಕುರಿತಾಗಿ ತಲೆ ಕೆಡಿಸಿಕೊಳ್ಳದೆ, "ಅರಣ್ಯನಿಯ ಬಗ್ಗೆ ಎಲ್ಲಿ ತಿಳಿಯಿತು? ತಿಳಿದಿದ್ದು ಅರಣ್ಯನಿ ಬೆಟ್ಟದ ಬಗ್ಗೆ. ಅದನ್ನು ಹತ್ತಿದರೆ ಬಹುಶಃ ಏನಾದರೂ ಹೊಳೆಯಬಹುದು. ಆದರೆ ಬೆಟ್ಟವನ್ನು ಕಾಯುತ್ತಿರುವವರು ಯಾರು? ಬೆಟ್ಟವನ್ನು ಹತ್ತುವುದು ಹೇಗೆ? ಅಲ್ಲಿ ಕೇವಲ ಅರಣ್ಯನಿ ಸಿಗುವುದೋ, ಅಥವಾ ಈ ಹನುಮಂತನ ವಿಗ್ರಹದ ಹಾಗೆ ಇನ್ನೂ ಹಲವು ದೇವಾಲಯಗಳು ಸಿಗುವುದೋ? ಸಿಕ್ಕರೆ ಅದನ್ನು ಈ ಕ್ರೂರ ಬ್ರಿಟೀಷರು ಬಿಡುವುದುಂಟೆ? ಏನು ಮಾಡುತ್ತಾರೆ? ಎಷ್ಟು ವಿಗ್ರಹಗಳನ್ನು ಹೀಗೇ ಒಡೆದು ಕೊಂಡೊಯ್ದಿದ್ದಾರೆ? ಎಲ್ಲಕ್ಕೂ ಸಮಯ ಬರುವುದೆಂದು ನಾನು ಕಾಯತೊಡಗಿದೆ."

2

ಆಗಲೇ ತನ್ನ ಮಾತನ್ನು ಪ್ರಶಂಸಿಸಲಿಲ್ಲವೆಂದೂ, ಅದಕ್ಕೆ ಯಾವುದೇ ಪ್ರತಿಕ್ರಿಯೆ ದೊರಕಲಿಲ್ಲವೆಂದೂ ಮುನಿಸಿಕೊಂಡಿದ್ದ ಬೋಕನು ಎದ್ದು, "ಇನ್ನೆಷ್ಟೂ ಅಂತ ಕಾಯಿಸುತ್ತೀಯ ಕಾಂತಾ? ಬೇಗ ಹೇಳೂ!" ಎಂದ ಚಿಕ್ಕ ಮಗುವಿನಂತೆ.

ಕಾಂತಾ ಎದ್ದು ಬೇಕಾದಷ್ಟು ನಕ್ಕಿದ. ಅವನ ಕಣ್ಣಲ್ಲಿ ನೀರು ಬರುತ್ತಿತ್ತು. "ಸರಿ ಸರಿ. ಹೇಳ್ತೀನಿರಪ್ಪ!" ಎಂದು ಬೋಕನನ್ನು ಎಂದು ಸಮಾಧಾನಪಡಿಸಿ ಕಾಂತಾ ಮತ್ತೆ ಕತೆಯನ್ನು ಮುಂದುವರೆಸಿದ. "ಈ ಸಮಯಕ್ಕೆ ಸರಿಯಾಗಿ ನನ್ನೊಂದಿಗೆ ಕೆಲಸ ಮಾಡುತ್ತಿದ್ದವರು ಗುಟ್ಟು ಗುಟ್ಟಾಗಿ ಮಾತನಾಡುತ್ತಿದ್ದುದನ್ನು ನಾನು ಗಮನಿಸಿದೆ. ಅವರಿಗಿನ್ನೂ ನನ್ನ ಮೇಲೆ ಪೂರ್ಣ ಭರವಸೆ ಇದ್ದಂತಿರಲಿಲ್ಲ. ಆದರೂ ನಾನು ಹೇಗಾದರೂ ಮಾಡಿ ಅವರು ಮಾತನಾಡುತ್ತಿದ್ದುದನ್ನು ತಿಳಿದುಕೊಳ್ಳಬೇಕಿತ್ತು. ಬೇಕೆಂದಲೇ ಅವರ ಬಳಿ ಹೋದೆ. ಅವರು ಮಾತನ್ನು ಬದಲಿಸಿದ್ದು ನನಗೇ ತಿಳಿಯಿತು. ನಾನು ಬಹಳ ದಿನಗಳ ಹಿಂದೆಯೇ ನನ್ನ ಬಳಿ ಇದ್ದ ಒಂದು ದಪ್ಪ ಮರದ ತುಂಡನ್ನು ಟೊಳ್ಳು ಮಾಡಿಟ್ಟಿದ್ದೆ. ಅದನ್ನು ಮುಂದೆ ಇಟ್ಟುಕೊಂಡು ಕುಳಿತೆ. ಮಾತನಾಡುತ್ತಿದ್ದವರು, ಇವನೇನೋ ವಿಚಿತ್ರ ಮಾಡುವಂತಿದೆಯಲ್ಲಾ ಎಂದು ನನ್ನ ಕಡೆ ನೋಡತೊಡಗಿದರು. ನಾನು, ಕಾಡಿನಲ್ಲಿ ಬರುವಾಗ ಕೇಳಿದ್ದ ಕೆಲವು ಹಕ್ಕಿಯ ಕೂಗುಗಳನ್ನೇ ಅನುಕರಿಸಿದೆ. "ಕೂಹೂ ಕೂಹೂ". ಎರಡು ಕ್ಷಣಗಳಲ್ಲಿ ನನಗೆ ಪ್ರತಿಕ್ರಿಯೆ ದೊರಕತೊಡಗಿತು. ಒಮ್ಮೆ ಕಣ್ಣು ಮುಚ್ಚಿ ತೆರೆದೆ. ಆ ಟೊಳ್ಳು ಮರದ ಮೇಲೆ ನನ್ನ ಕೈಗಳಿಂದ

ಹೊಡೆಯತೊಡಗಿದೆ.

ಡುಂ ಟಕ ಟಕ ಡುಂ
ಟಕ ಟಕ ಡುಂ

ದೂರ ಇದ್ದವರೆಲ್ಲರೂ ನನ್ನ ಹತ್ತಿರ ಬಂದರು. ನಾನು ಚಿಕ್ಕಂದಿನಲ್ಲಿ ಕಲಿತಿದ್ದ ಕೆಲವು ಹಾಡುಗಳು ತಲೆಯಲ್ಲೇ ಇದ್ದವು. ಆದರೆ ಅವರಿಗೆ ಅದು ಅರ್ಥವಾಗುವ ಸಂಭವವಾಗಲಿ, ಅವಶ್ಯಕತೆಯಾಗಲಿ ಇರಲಿಲ್ಲ. ಹಾಗಾಗಿ ನಾನು ಅದಕ್ಕೇ ಕೆಲವು ಬದಲಾವಣೆಗಳನ್ನು ಮಾಡಿ,

ಓ! ನನ್ನಾ ನಿನ್ನಾ ಪೊರೆವಾ
(ಟಕ) ತಾಯಿಯು ಕಣೊ ಕಾಡಿವಳು!
ಅನ್ನಾ ನೀರೂ ಕೊಡುವಾ
(ಟಕ) ದೇವಿಯು ಕಣೊ ಕಾಡಿವಳು!

ಅವರಿಗೆ ಅದರ ರಾಗ ಇಷ್ಟವಾಗಿತ್ತು. ಎಲ್ಲರೂ ಒಟ್ಟಿಗೆ ಸೇರಿದರು. ಒಬ್ಬನು ನನ್ನ ಬಳಿ ಬಂದು "ಜೋರಾಗಿ ಹಾಡು! ಚೆನ್ನಾಗಿದೆ!" ಎಂದನು. ಎಲ್ಲರೂ ಕುಣಿಯತೊಡಗಿದರು.

ಓ! ಹುಲಿರಾಯ, ಗಜಗಡಣ
ಹಿಡಿದಿಹುದೋ ತಾಯಿಯ ಚರಣ
ಮತಿಹೀನಾ ಮಾನವನೇ!
ಅವಳಿಲ್ಲದೆ ನಿನಗೂ ಮರಣ!
ಓಹೋ! ಗೆರೆಯ ಹಾಕಿ, ಆಳುವೆನೆನ್ನುವೆ-
ತೆರೆಯೊ ಮೊದಲು ಕಣ್ಣ!
ಮುಳ್ಳು ಬಳ್ಳಿಗಳ ಜಟಿಲ ಹಾದಿಯಲು
ಬೆಳ್ಳಿ ಕಿರಣಗಳ ಹುಲ್ಲ ಬಯಲಲ್ಲು
ಘೋರ ಮೃಗಗಳಿಗು ಮುದ್ದು ಖಗಗಳಿಗು
ಕಿಂಕಿಣಿ ಸದ್ದು ಕೇಳಿದೆ!
ಬಂದಳು ತಾಯಿ! ಅರಣ್ಯಾನಿ!
ನಿಂತಳು ತಾಯಿ! ಅರಣ್ಯಾನಿ!
ಓಹೋ ಕಾಡು ಕಡಿವವರ-
ಬೇರು ಕಿತ್ತೆಸೆವ-
ಕಾಳಿ! ಅರಣ್ಯಾನಿ!

ಅವರು ಬಿಡದೇ ಕುಣಿಯತೊಡಗಿದರು. ಅವರು ಕಾಡಿಗೆ ಬಂದಾಗಿನಿಂದಲೂ ಕೇವಲ ಕೆಲಸ ಕೆಲಸ ಎನ್ನುತ್ತಾ ದಣಿದಿದ್ದರು. ಅವರಿಗೆ ಈ ರೀತಿಯ

ಕುಣಿಯುವಿಕೆ, ಹಾಡುಗಳಿಗೆ ಆಡುವಿಕೆ ತುಂಬಾ ಇಷ್ಟವಂತೆ. ಇನ್ನು ನಾನು ಅವರಿಗೆ ಇಷ್ಟವಾದೆನು. ಇಷ್ಟವಾಗುವ ವಿಷಯ ಬೇರೆ. ಅವರು ಗುಟ್ಟಾಗಿ ಮಾತನಾಡಿಕೊಳ್ಳುತ್ತಿದ್ದ ವಿಷಯವನ್ನು ನನಗೆ ಹೇಳಬೇಕಲ್ಲವೆ? ಸದ್ಯಕ್ಕೆ ಅವರ್ಯಾರೂ ಮಾತನಾಡುವ ಮನಸ್ಸಿನಲ್ಲಿರಲಿಲ್ಲ. ನಾನು ನನ್ನ ಮರದ ತುಂಡನ್ನು ಎತ್ತಿಕೊಂಡು ಮಲಗಿಕೊಳ್ಳೋಣವೆಂದು ಹೊರಟೆ. ಅವರೆಲ್ಲರೂ ಸುಸ್ತಾಗಿ ಅಲ್ಲಲ್ಲೇ ಮಲಗಿಕೊಂಡರು. ಅವರೆಲ್ಲರೂ ಮಲಗಿಕೊಂಡದನ್ನು ಖಾತರಿ ಮಾಡಿಕೊಂಡ ನಾನು, ಅವರು ಎಲ್ಲಾ ಕಾಗದ, ಕೊಡಲಿ ಇತ್ಯಾದಿಗಳನ್ನಿಡುತ್ತಿದ್ದ ಸ್ಥಳಕ್ಕೆ ನಿಧಾನವಾಗಿ ಹೋದೆ. ಯಾರೂ ಎಚ್ಚರಗೊಳ್ಳದಂತೆ ನಿಶ್ಯಬ್ಧವಾಗಿ ಹೋಗಲು ಯತ್ನಿಸಿ ಕೊನೆಗೂ ತಲುಪಿದೆ. ಅಲ್ಲಿ ಒಂದಷ್ಟು ಕಾಗದಗಳಿದ್ದವು. ಒಂದು ಕಾಗದ ಬಿಟ್ಟು ಎಲ್ಲವೂ ಮಡಿಸಿಡಲಾಗಿದ್ದವು. ತೆರೆದಿಟ್ಟಿದ್ದ ಕಾಗದದ ಮೇಲೆ ಕೆಂಪು ಬಣ್ಣದಲ್ಲಿ ಅಕ್ಷರಗಳಿದ್ದವು. ಅದನ್ನು ಓದಲು ಸಾಕಷ್ಟು ಬೆಳಕಿಲ್ಲದಿದ್ದರೂ, ಬೆಳದಿಂಗಳಲ್ಲೇ ಕೆಲವು ಪದಗಳು ಕಂಡವು. ಅದು ಅವರ ಭಾಷೆಯಲ್ಲಿತ್ತಾದರೂ, ನನಗೆ ಕೊಂಚ ಕೊಂಚ ಅರ್ಥವಾಯಿತು. ಅದರ ಮೇಲೆ ಅವರ ಭಾಷೆಯಲ್ಲಿ, "ಮಂಕೀ ಗಾಡ್, ಎಲಿಫಾಂಟ್ ಹೆಡೆಡ್ ಗಾಡ್, ಬೋರ್ ಹೆಡೆಡ್ ಸ್ಪಿರಿಟ್, ದಿ ಟ್ವಿನ್‌ವಾರಿಯರ್ಸ್" ಎಂದು ಒಂದು ಕಡೆ. ಇನ್ನೊಂದು ಕಡೆ ದೊಡ್ಡ ಅಕ್ಷರಗಳಲ್ಲಿ "ಅರಣ್ಯನಿ–ದ ಗಾಡೆಸ್ ಆಫ್ ದಿ ಫಾರೆಸ್ಟ್" ಎಂದು ಬರೆಯಲಾಗಿತ್ತು. ಇವೆಲ್ಲವೂ ನನಗೆ ವಿಚಿತ್ರವೆನಿಸಿದರೂ, ನಿಧಾನವಾಗಿ ಕುಳಿತು ಯೋಚಿಸತೊಡಗಿದೆ.

ಮಂಕೀ ಗಾಡ್

ಗಾಡ್ ಎಂದರೆ ದೇವರು ಎಂದು ಚೆನ್ನಾಗಿ ತಿಳಿದಿತ್ತು. "ಮಂಕೀ" ಈ ಶಬ್ದ ತಲೆ ಕೆಡಿಸಿತು. ಆಗ ನನಗೆ ಒಂದು ಘಟನೆ ನೆನಪಾಯಿತು. ಒಮ್ಮೆ ಕಾಡಿನಲ್ಲಿ ಕೆಲಸ ನಡೆಯುತ್ತಿರುವಾಗ ಒಂದಷ್ಟು ಸಿಂಗಳೀಕಗಳು ಅಪಾಯದ ಅರಿವಿಲ್ಲದೆ, ನಾವು ಮರಗಳನ್ನು ಕಡಿಯುತ್ತಿದ್ದ ಸ್ಥಳಕ್ಕೆ ಬಂದು ಬಿಟ್ಟಿದ್ದವು. ಅವು ತಮ್ಮ ಉಗ್ರದಂತಪಂಕ್ತಿಯನ್ನು ಪ್ರದರ್ಶಿಸುತ್ತಿರಲು, ಈ ಬ್ರಿಟೀಷ ಸೈನಿಕರಿಗೆ ಭಯ ಕಿತ್ತುಕೊಂಡಿತು. ಅವುಗಳನ್ನು ನೋಡಿ, "ಮಂಕೀ ಮಂಕೀ" ಎಂದು ಕೂಗುತ್ತಾ ನನ್ನ ಬಳಿ ಬಂದರು. ಅಲ್ಲಿಗೆ, ಮಂಕೀ ಎಂದರೆ ಸಿಂಗಳೀಕ. ಸಿಂಗಳೀಕ ದೇವರು? ಹನುಮ! ಹೌದು! ಅಲ್ಲಿಗೆ ಇವೆಲ್ಲವೂ ಯಾವುದೋ ಒಂದು ದೇವರ ಹೆಸರಾಗಿರಬೇಕು. ಅವುಗಳ ವಿಗ್ರಹಗಳು! ಹೌದು. ಇವೆಲ್ಲವೂ ವಿಗ್ರಹಗಳ ಪಟ್ಟಿ. ಕದ್ದುಕೊಂಡು ಹೋಗಬೇಕಾದಂತವು. ನನಗೆ ಮೈ ಎಲ್ಲಾ ಉರಿಯತೊಡಗಿತು. ಈಗಾಗಲೇ ನನ್ನ ಕಣ್ಣ ಮುಂದೆಯೇ ಅಂಜಲಿ ಮುದ್ರೆಯ ಹನುಮಂತನನ್ನು

ಎತ್ತಿಕೊಂಡು ಸುಲಭವಾಗಿ ಹೊರಟುಹೋದರು. ಈಗ ಆ ಅರಣ್ಯಾನಿ ಬೆಟ್ಟದಲ್ಲಿ ಇನ್ನು ಏನೇನಿದೆಯೋ! ಅರಣ್ಯಾನಿ ಎಂದರೆ ಅರಣ್ಯ ದೇವತೆ ಎಂದು ನಾನು ಅರ್ಥೈಸಿಕೊಂಡು ಹಿಂದೆ ಹಾಡನ್ನು ಹಾಡಿದ್ದೆ. ಈಗ ಈ ಕಾಗದದಲ್ಲಿ ಬರೆದಿರುವುದೂ ಅದೇ. ಅರಣ್ಯಾನಿ ಎಂದರೆ ಕಾಡಿನ ದೇವತೆ ಎಂದು. ಅಲ್ಲಿಗೆ ಆ ಬೆಟ್ಟದ ಮೇಲೆ ಎಷ್ಟು ದೇವಾಲಯಗಳಿರಬಹುದು! ಕೇವಲ ದೇವಾಲಯ ಗಳಲ್ಲ, ಅವುಗಳ ಕಥೆಗಳೆಷ್ಟಿರಬಹುದು? ಮತ್ತೆ ಆ ಪಟ್ಟಿಯನ್ನು ನೋಡ ತೊಡಗಿದೆ. ಮತ್ತೆ ಗಾಡ್, ಎಲಿಫೆಂಟ್, ಬೋರ್, ವಾರಿಯರ್ಸ್, ಮುಂತಾದ ಪದಗಳಿವೆ. ಕರ್ಮ! ಇವುಗಳ ಅರ್ಥ ಯಾರನ್ನು ತಾನೇ ಕೇಳುವುದು? ಇವೆಲ್ಲವೂ ಪ್ರಾಣಿಗಳ ಹೆಸರೇ ಆಗಿದ್ದರೆ ಸರಿ. ಬೇರೆ ಏನಾದರೂ ಅಗಿದ್ದರೆ? ಹೀಗೆ ನಾನು ಆ ಕಾರ್ಗತ್ತಲಲ್ಲಿ ಚಿಂತಿಸುತ್ತಾ ಮಲಗಲು ಹೋದೆ. ಆದರೆ ಎಲ್ಲಿಯ ನಿದ್ದೆ?" ಎಂದು ಕಾಂತಾ ಎದ್ದು ನಿಂತು ಒಮ್ಮೆ ಮೈಮುರಿದು, ಮತ್ತೆ, "ಕೆಲವೊಮ್ಮೆ ನಮಗೆ ಬೇಕಿರುವುದನ್ನು ನಾವು ಯಾರಿಗೂ ಹೇಳದಿದ್ದರೂ, ತಾವಾಗಿಯೇ ಅದನ್ನು ನೀಡುತ್ತಾರೆ. ನನ್ನ ಕಥೆ ಆಗಿದ್ದೂ ಹಾಗೆ. ನನಗೆ ಆಗ ತಾನೆ ನಿದ್ದೆ ಹತ್ತಿತ್ತು. ಕನಸಿನಲ್ಲೂ ದೇವಾಲಯಗಳು, ದೈವ, ಭೂತ, ಇತ್ಯಾದಿಗಳು, ಚಿಕ್ಕಂದಿನಲ್ಲಿ ನಾನು ನೋಡಿದ್ದ ಭೂತ ಕೋಲಗಳು ಎಲ್ಲವೂ ಬರುತ್ತಿದ್ದವು." ಎನ್ನುವಷ್ಟರಲ್ಲಿ, ನಾನು, "ಭೂತ ಅಂದರೆ ಏನು? ಭೂತ ಕೋಲ ಅಂದರೆ ಏನು?" ಎಂದು ಗೊತ್ತಾಗದ ಹೊಸ ವಿಷಯದ ಕುರಿತಾಗಿ ಕೇಳಿದೆ. ಕಾಂತಾ, "ಇರಪ್ಪ ಇರು ಇರು. ಇದರ ಕುರಿತಾಗಿ ನಾನು ನಿನಗೆ ಸಮಯೋಚಿತವಾಗಿ ಹೇಳಬೇಕಾಗುತ್ತೆ. ಸದ್ಯಕ್ಕೆ ಇದನ್ನು ಕೇಳು." ಎನ್ನುತ್ತಾ, ಆ ರಾತ್ರಿ ನಡೆದುದ್ದರ ಬಗ್ಗೆ ಹೇಳಲು ಮುಂದುವರೆಸಿದನು. "ಇನ್ನೇನು ಕಣ್ಣು ಮುಚ್ಚಿ, ನಿದ್ರೆ ಆವರಿಸಬೇಕು ಎನ್ನುವಷ್ಟರಲ್ಲಿ ಸೈನಿಕನೊಬ್ಬನು ಬಂದು 'ಎದ್ದೇಳು! ಎದ್ದೇಳು!' ಎಂದು ತನ್ನ ಭಾಷೆಯಲ್ಲಿ ಕಿರುಚಿದ. ನಾನು ಕಣ್ಣುಜ್ಜಿಕೊಂಡು ಎದ್ದು 'ಏನು?' ಎಂದು ಕೇಳಿದೆ. ಅವನು, 'ಎಲಿಫೆಂಟ್! ಎಲಿಫೆಂಟ್!' ಎಂದು ಭಯದಲ್ಲಿ ಕಿರುಚಿದ. ನನಗೆ ಆಶ್ಚರ್ಯ ವಾಯಿತು. ಎಲ್ಲಿ ಎಂದು ಕೇಳಿದೆ. ಧಾವಿಸಿ ಬರುತ್ತಿದ್ದ ಆನೆಯನ್ನು ನಾನು ಕಂಡೆ. ತಕ್ಷಣ ನನಗೆ ಹೊಳೆಯಿತು– ಎಲಿಫೆಂಟ್ ಗಾಡ್ ಎಂದರೆ ನಮ್ಮ ಗಣೇಶನೆ. ಅದನ್ನು ತಲೆಯಲ್ಲಿಟ್ಟುಕೊಂಡು ನಾನು ಅಲ್ಲೇ ಉರಿಸುತ್ತಿದ್ದ ಬೆಂಕಿಯನ್ನು ಒಂದು ಕಡ್ಡಿಯನ್ನೆತ್ತಿಕೊಂಡು ಅದರೆಡೆಗೆ ಓಡಿದೆ. ಮೊದಲು ಅದರ ಮುಂದೆ ನಮಸ್ಕರಿಸುವಂತೆ ಗಜವಡಿವು ಮಾಡಿ, ನಂತರ ಬೆಂಕಿಯನ್ನು ಅದಕ್ಕೆ ತೋರಿಸಿ, 'ಹೋಗು! ಹೋಗು! ಇಲ್ಲಿ ಬರಬೇಡ!' ಎಂದು ಚೀರಿದೆ. ಅದು ನಿಧಾನವಾಗಿ ಹಿಂದಕ್ಕೆ ಹೆಜ್ಜೆ ಹಾಕುತ್ತಾ ಹಿಂತಿರುಗಿ ಗಾಂಭೀರ್ಯದಿಂದ ನಡೆದುಕೊಂಡು ಹೋಯಿತು. ಸೈನಿಕರೆಲ್ಲರೂ ನಾನು ಏನು ಮಾಡಿದೆ ಎಂದು ಆಶ್ಚರ್ಯದಿಂದ

ನೋಡುತ್ತಿದ್ದರು. ಭಯಭೀತರಾಗಿದ್ದ ಅವರು ಮತ್ತೆ ಹೋಗಿ ಮಲಗಿಕೊಂಡರು. ಬೆಳಗ್ಗೆ ನಾನು ಸ್ವಲ್ಪ ತಡವಾಗಿಯೇ ಎದ್ದೆ. ಎದ್ದು ನೋಡಿದಾಗ, ಸೈನಿಕರೆಲ್ಲರೂ ಕುಳಿತು ಏನೋ ಮಾತನಾಡುತ್ತಿರುವುದು ಕಂಡಿತು. ನಾನು ಎದ್ದು ನದಿಯ ತೀರದ ಕಡೆಗೆ ಹೋಗಿ ಸ್ನಾನ ಮಾಡಿ ಬರುವಷ್ಟರಲ್ಲಿ ಅವರಲ್ಲಿ ಒಬ್ಬ ಒಂದಷ್ಟು ಕಾಗದಗಳನ್ನು ಹಿಡಿದು ನನ್ನ ಬಳಿ ಬಂದನು. ನಮ್ಮ ಭಾಷೆ, ಅವನ ಭಾಷೆಯನ್ನು ಬೆರೆಸಿ, 'ನಿನ್ನೆ ನೀನು ಮಾಡಿದ ಕೆಲಸ ನಮಗೆ ಸಂತಸ ತಂದಿದೆ. ಇನ್ನೊಂದು ಮುಖ್ಯ ಕೆಲಸಕ್ಕೆ ನೀನು ಹೋಗಬೇಕು.' ಎಂದು ನನ್ನ ಕೈಗೆ ನಾನು ನಿನ್ನೆಯೇ ನೋಡಿದ ಕಾಗದ, ಒಂದು ನಕ್ಷೆ ಹಾಗೂ ಒಂದು ಚಿತ್ರವಿದ್ದ ಕಾಗದವನ್ನು ಕೊಟ್ಟ. ಪಟ್ಟಿಯನ್ನು ತೋರಿಸಿ, 'ಇವಿಷ್ಟೂ ಮೂರ್ತಿ ಗಳನ್ನು ನೀನು ತರಬೇಕು. ನಿನಗೆ ಒಳ್ಳೆ ಸಂಭಾವನೆ ಕೊಡುತ್ತಾರೆ' ಎನ್ನುತ್ತಾ, 'ಈ ನಕ್ಷೆಯು ಒಂದು ಹಳ್ಳಿಯದ್ದು. ಅದರ ಬಳಿಯೇ ಈ ಮೂರ್ತಿಗಳಿರುವ ಬೆಟ್ಟವಿದೆ. ಅಲ್ಲಿ ಹೋಗುವುದು ಬಹಳ ಕಷ್ಟ. ನಾವು ಹೇಗೋ ಆ ಮಂಕೀ ಗಾಡ್ ಮೂರ್ತಿಯನ್ನು ತಂದೆವು. ಆದರೆ ಇನ್ನೂ ಮೇಲಿರುವ ಆ ಮೂರ್ತಿಗಳಿಗೆ ದಾರಿ ಗೊತ್ತಿರುವುದು ಕೆಲವು ಹಳ್ಳಿ ಜನಗಳಿಗೆ ಮಾತ್ರ.' ಎಂದು ಹೇಳಿದ. ನಾನು ತಲೆ ಅಲ್ಲಾಡಿಸಿದೆ. ನಂತರ ಚಿತ್ರವಿದ್ದ ಕಾಗದವನ್ನು ಮುಂದಿಟ್ಟು, 'ಇದೇನು' ಎಂದು ಕೇಳಿದೆ. 'ಇದು ವಿಚಿತ್ರ ಕತ್ತಿ. ಅದೊಂದು ಗುಂಪು. ಅದಕ್ಕೆ ನಾಯಕ ಸುರೇಂದರ್ ಎನ್ನುವವನು. ಆ ಬೆಟ್ಟಕ್ಕೆ ದಾರಿ ಗೊತ್ತಿರುವ ಜನ ಇರುವ ಹಳ್ಳಿ ಇರುವುದು ಇವರ ನಿಯಂತ್ರಣದಲ್ಲೇ. ಹಾಗಾಗಿ ನೀನು ಮೊದಲು ಅವರನ್ನು ಒಲಿಸಿಕೊಂಡು ನಂತರ ಹಳ್ಳಿಯ ಜನರನ್ನು ದಾರಿ ತೋರಿಸಲು ಹೇಳಬೇಕು.' ಎಂದನು. ನಾನು ಮತ್ತೆ ಅದಕ್ಕೆ ಒಪ್ಪಿ, ನನ್ನ ಬಟ್ಟೆ, ಇತ್ಯಾದಿಗಳನ್ನು ಚೀಲದಲ್ಲಿ ಹಾಕಿಕೊಂಡು, ನಕ್ಷೆಯನ್ನೆತ್ತಿಕೊಂಡು ಹಳ್ಳಿಯ ಕಡೆಗೆ ನಡೆಯ ತೊಡಗಿದೆ." ಎಂದು ಕಾಂತಾ ನಿಲ್ಲಿಸಲು, ಸಾಕ್ಷಿ ಎದ್ದು ನಿಂತ, "ಆಮೇಲೆ ನಡೆದಿದ್ದೆ ನಾನು ಹೇಳಿದ ಕಥೆ– ಅದೇ ಅಲ್ಲಿ ಕಾಣುತ್ತಿದೆಯಲ್ಲಾ ಜಲಪಾತ, ಬೆಟ್ಟ, ಆನೆ ಮರಿಯ ಸಾವು, ಜನಗಳ ಕೊಲೆ, ಇವೆಲ್ಲಾ." ಎಂದ. ಕಾಂತಾ, "ಸಾಕ್ಷಿ, ಒಮ್ಮೆ ಸುಮ್ಮನಿರು. ಅದು ನಿನಗೆ ಹೊರಗಿನಿಂದ ತಿಳಿದ ಮಟ್ಟಿಗೆ ನೀನು ಹೇಳಿದೆ. ಆದರೆ ಕೆಲವು ಸೂಕ್ಷ್ಮ ಸಂಗತಿಗಳಿವೆ. ಅವುಗಳನ್ನು ನಾನು ಹೇಳುತ್ತೇನೆ." ಎಂದನು.

***

ಕಾಂತಾ ನಮ್ಮನ್ನು ಎದ್ದು ಬರುವಂತೆ ಹೇಳಿ, ಓಡತೊಡಗಿದ. ನಮಗೆ ವಿಚಿತ್ರ ಎನಿಸಿತು. ಇದ್ದಕ್ಕಿದ್ದ ಹಾಗೆ ಓಡಿದನೆಂದರೆ ಅರ್ಥವೇನು? ಏನಾದರೂ ಅಪಾಯವೇ? ಅಥವಾ ಸುಮ್ಮನೆ ಕಾಡಿನ ಓಟವೇ? ನಾವು ಏನೂ ಮಾಡಲು ಹಿಂಜರಿದಾಗ, ಸಾಕ್ಷಿ ಮುಂದೆ ಬಂದು, ಬನ್ನಿ ಎನ್ನುವಂತೆ ಸನ್ನೆ ಮಾಡಿ ಅವನೂ

ಓಡತೊಡಗಿದ. ನಾವು ಅವನ ಹಿಂದೆ ಓಡತೊಡಗಿದೆವು. ಓಡುತ್ತಾ ಓಡುತ್ತಾ ಕಾಡಿನ ಯಾವುದೋ ಭಾಗಕ್ಕೆ ಬಂದಿದ್ದೆವು. ಕಾಂತಾ "ಶ್..." ಎಂದನು. ನಾವು ನಮ್ಮ ಹೆಜ್ಜೆಗಳನ್ನು ಎಚ್ಚರದಿಂದ ಇಡತೊಡಗಿದೆವು. ಕಾಂತಾ ನಮ್ಮ ಮುಂದೆ ನಡೆಯುತ್ತಾ, ಕೆಲವು ಬಳ್ಳಿಗಳನ್ನು ಸರಿಸಿದನು. ಕಾಲುದಾರಿಯೊಂದು ಕಂಡಿತು. ಅಕ್ಕ ಪಕ್ಕ ನೋಡುತ್ತಾ ಕಾಂತಾ ಮುನ್ನಡೆದರೆ ನಾವು ಅವನನ್ನು ಹಿಂಬಾಲಿಸಿದೆವು. ಕಾಂತಾ ಬೆವರುತ್ತಿದ್ದನು. ಹುಲಿಯೊಂದಿಗೆ ಕಾದಾಡಿದವನು ಇದೇತಕ್ಕೆ ಭಯ ಪಡುತ್ತಿದ್ದಾನೆ? ಅಲ್ಲಿಗೆ ಈಗ ಹೋಗುತ್ತಿರುವ ಸ್ಥಳ ಎಷ್ಟು ಅಪಾಯಕಾರಿಯಾಗಿರ ಬಹುದು? ಕಾಲುದಾರಿ ಇನ್ನೂ ಅಗಲವಾಗತೊಡಗಿತು. ಕೊನೆಗೆ ಒಂದು ವಿಚಿತ್ರವಾದ ಪ್ರಪಂಚವೇ ಗೋಚರವಾಯಿತು. ನಾವು ಎಂದಿಗೂ ನೋಡದ ಒಂದು ಪ್ರಪಂಚ. ಮರಗಳೇ ಇಲ್ಲದ, ಕೇವಲ ಮಣ್ಣು ಮಣ್ಣಾಗಿರುವ ಸ್ಥಳ. ಅಲ್ಲಲ್ಲಿ ಗುಡಿಸಲುಗಳು. ವಿಚಿತ್ರವಾದ ಬಂಡಿಗಳು. ಎಲ್ಲಕ್ಕಿಂತ ಭಯಾನಕವಾಗಿ ಎರಡು ಮೃತದೇಹಗಳು! ಅವರ ಮೈ ಬಣ್ಣ ತುಂಬಾ ಬಿಳಿಯಾಗಿತ್ತು. ಅವರು ಬ್ರಿಟೀಷಿನ ಸೈನಿಕರಿರಬಹುದೆಂದು ನಾವು ಅಂದಾಜಿಸಿದೆವು. ಒಂದೇ ಒಂದು ಗುಡಿಸಲಲ್ಲಿ ಒಂದು ದೀಪ ಬೆಳಗುತ್ತಿತ್ತು. ಅದರ ದ್ವಾರದ ಬಳಿ ಒಬ್ಬ ಮುದುಕನು ಕುಳಿತಿದ್ದನು. ಅವನ ತಲೆಗೆ ಒಂದು ಬಟ್ಟೆ ಕಟ್ಟಿಕೊಂಡಿದ್ದನು. ಅದು ಅವನ ಎಡಗಣ್ಣನ್ನೂ ಮುಚ್ಚಿತ್ತು. ಕೈಯಲ್ಲಿ ರಕ್ತಸಿಕ್ತವಾದ ವಿಚಿತ್ರ ಕತ್ತಿ ಇತ್ತು.

ಓಮ್ ಜಾತವೇದಸೇ ಸುನವಾಮ ಸೋಮ
ಮರಾತೀಯತೋ ನಿದಹಾತಿ ವೇದಃ ।
ಸ ನಃ ಪರ್‌–ಷದತಿ ದುರ್ಗಾಣಿ ವಿಶ್ವಾ ನಾವೇವ
ಸಿಂಧುಂ ದುರಿತಾऽತ್ಯಗ್ನಿಃ ॥
ತಾಮಗ್ನಿವರ್ಣಾಂ ತಪಸಾ ಜ್ವಲಂತೀಂ–ವೈರೋಚನೀಂ
ಕರ್ಮಫಲೇಷು ಜುಷ್ಟಾಮ್ ।
ದುರ್ಗಾಂ ದೇವೀಗ್ಂ ಶರಣಮಹಂ ಪ್ರಪದ್ಯೇ
ಸುತರಸಿ ತರಸೇ ನಮಃ ॥

ಎಂದು ಅಳುತ್ತಾ ಅಳುತ್ತಾ ಆ ಮುದುಕ ಹೇಳತೊಡಗಿದ. ನಮಃ ಎನ್ನುವಷ್ಟರಲ್ಲಿ ಅವನ ದನಿ ಕುಗ್ಗಿಹೋಗಿತ್ತು. ತನ್ನ ಎಡಗಣ್ಣಿನ ಮೇಲಿದ್ದ ಬಟ್ಟೆಯನ್ನು ತೆಗೆದು ಎರಡೂ ಕೈಗಳನ್ನೆತ್ತಿ ಆಕಾಶದ ಕಡೆಗೆ ಮುಖ ಮಾಡಿ "ಅಮ್ಮಾ!!" ಎಂದು ಕಿರುಚಿ ಜೋರಾಗಿ ಅಳತೊಡಗಿದನು. ಮತ್ತೆ ಸುಧಾರಿಸಿ ಕೊಂಡು, "ನ ವಾ ಅರಣ್ಯಾನಿರ್ಹನ್ತ್ಯನ್ಯಶ್ಚೇನ ನಾಭಿಗಛತಿ । ಸವಾದೋಃಫಲಸ್ಯ ಜಗ್ಧ್ವಾಯ ಯಥಾಕಾಮಂ ನಿ ಪದ್ಯತೇ॥" ಶತ್ರು ಬರುವವರೆಗೂ ಸುಮ್ಮನಿರುತ್ತೀ ಯಂತೆ! ನಿನಗೆ ಹಾನಿ ಮಾಡದವನಿಗೆ ನಿನ್ನ ಮಡಿಲಿನ ಫಲವನ್ನು ತಿನ್ನುವ

ಭಾಗ್ಯವಂತೆ? ಶತ್ರುಗಳು ಬಂದು ನಿನ್ನ ಮಕ್ಕಳನ್ನೇ ಕೊಲ್ಲುತ್ತಿದ್ದಾರೆ! ತಾಯೆ! ಅರಣ್ಯನಿ! ಏನಮ್ಮ! ಎಲ್ಲಿ ಹೋದೆ?" ಎಂದು ಬಿಕ್ಕಿಸಿ ಬಿಕ್ಕಿಸಿ ಅಳತೊಡಗಿದ. ತಲೆ ಬಗ್ಗಿಸಿ ವಿಚಿತ್ರ ಕತ್ತಿಯನ್ನು ಕೈಗೆತ್ತಿಕೊಂಡ. ಅದನ್ನು ತೀಕ್ಷ್ಣವಾಗಿ ನೋಡಿ, ದೂರಕ್ಕೆ ಎಸೆದ. ನಂತರ ನಿಧಾನವಾಗಿ ಎದ್ದು, ಗುಡಿಸಲ ದ್ವಾರವನ್ನು ಹಿಡಿದು ಒಳಗೆ ಹೋದ.

ಕಾಂತಾ, ಆ ಮುದುಕನನ್ನು ತೋರಿಸುತ್ತಾ, "ಆ ಅರಣ್ಯನಿ ಬೆಟ್ಟದ ದಾರಿ ತಿಳಿದಿರುವುದು ಇವನಿಗೆ ಮಾತ್ರ. ಇವನು ಜೊತೆಯಲ್ಲಿದ್ದರೆ ಮಾತ್ರ ನಾವು ಅಲ್ಲಿಗೆ ಹೋಗುವುದೂ ಸಾಧ್ಯ. ಇವನು ಆಗಾಗ ರಹಸ್ಯವಾಗಿ ಒಬ್ಬನೇ ಹೋಗಿ ಅಲ್ಲಿ ಪೂಜೆ ಮಾಡಿ ಬರುತ್ತಾನೆ ಎಂಬುದು ನನ್ನ ಸಂದೇಹ. ನನ್ನೊಂದಿಗೆ ಇಲ್ಲಿರುವ ಕೆಲವು ಸೈನಿಕರು ಮುಸ್ಸಂಜೆ, ರಾತ್ರಿ ಸಮಯದಲ್ಲಿ ಪಂಜಿನ ಬೆಳಕು ಆ ಬೆಟ್ಟದಲ್ಲಿ ಕಾಣುತ್ತದೆಂದು ಹೇಳುತ್ತಾರೆ" ಎಂದ.

ಸಾಕ್ಷಿಯು, "ಅಲ್ಲಾ, ಇಂತಹ ದುರ್ಗಮ ಕಾಡಿನ ಒಳಗಿರುವ ಜನ, ಅವರ ದೇವರುಗಳ ಸುಳಿವು ಆ ಬ್ರಿಟೀಷರಿಗೆ ಹೇಗೆ ಸಿಕ್ಕಿತು? ಇವರಲ್ಲೇ ಯಾರೋ ಒಬ್ಬ ಹೇಳಿದ್ದಲ್ಲದೇ ಅವರಿಗೆ ಹೇಗೆ ತಿಳಿದೀತು? ಇಲ್ಲಿಯ ವಿಗ್ರಹಗಳನ್ನೇ ದೋಚಿ ತಮ್ಮ ದೇಶಕ್ಕೆ ತೆಗೆದುಕೊಂಡು ಹೋಗಬೇಕೆಂದಿರುವವರು ಇಡೀ ದೇಶದಲ್ಲಿ ಇನ್ನೆಷ್ಟು ವಿಗ್ರಹಗಳನ್ನು ದೋಚಿರುತ್ತಾರೋ?" ಎಂದು ಹತಾಶೆಯ ದನಿಯಲ್ಲಿ ಹೇಳಿದ. ಕಾಂತಾ ತಲೆ ಅಲ್ಲಾಡಿಸಿ ತನ್ನ ಒಪ್ಪಿಗೆ ಸೂಚಿಸಿದ. ನನಗೆ ಏನೋ ಹೊಳೆದಂತಾಯಿತು. ಬೋಕ–ನಾಗರಿಗೆ ಕಿವಿಯಲ್ಲಿ, "ಲೋ, ನಾವು ಆವತ್ತು ಅಪ್ಪಯ್ಯ–ಅಮ್ಮ ಅವರೊಂದಿಗೆ ಹೋಗಿದ್ದ ಕಾಡಿನ ಭಾಗದ ಜನಕ್ಕೂ ಇದಕ್ಕೂ ಏನಾದರೂ ಸಂಬಂಧವಿರಬಹುದಾ?" ಎಂದು ಪಿಸುಗುಟ್ಟಿದೆ. ಅವರ ಕಣ್ಣು ಅರಳಿತು. ಕಾಂತಾ ಹಾಗೂ ಸಾಕ್ಷಿ ನಮ್ಮನ್ನೇ ನೋಡುತ್ತಿದ್ದರು. ಸಾಕ್ಷಿ 'ಏನು' ಎನ್ನುವಂತೆ ಹುಬ್ಬನ್ನು ಮೇಲಕ್ಕೆತ್ತಿದನು. ಬೋಕನು ಪಟಪಟನೇ ನಮ್ಮ ಸಂದೇಹವನ್ನು ಒದರಿಬಿಟ್ಟನು. ಕಾಂತಾ ಸ್ವಲ್ಪ ಯೋಚಿಸಿ, "ಅಲ್ಲಿಂದಲೇ ಬಹಳಷ್ಟು ಜನ ಇಲ್ಲಿ ಕೆಲಸಕ್ಕೆ ಬರುತ್ತಾರೆ. ಹೌದು ನೀವೆಂದುಕೊಂಡಂತೆ, ಅಲ್ಲೂ ಏನಾದರೂ ಉತ್ತರ ಸಿಗಬಹುದು ಆದರೆ ಸದ್ಯಕ್ಕೆ ಅದರ ವಿಷಯ ಬೇಡ." ಎಂದ. ನಾನು ಮತ್ತೆ ಯೋಚಿಸಿ, "ಕಾಂತಾ, ಈ ಮುದುಕನು ಇದ್ದರೆ ತಾನೆ ಆ ಬೆಟ್ಟಕ್ಕೆ ದಾರಿ? ಇವರನ್ನು ಎಲ್ಲಿಗಾದರೂ ಕಳುಹಿಸಿಬಿಡಿ. ಆಗ ಆ ಬೆಟ್ಟದ ದಾರಿಯೂ ತಿಳಿಯುವುದಿಲ್ಲ, ಅವರಿಗೆ ಮೂರ್ತಿಗಳನ್ನೂ ತೆಗೆದುಕೊಂಡು ಹೋಗಲಾಗುವುದಿಲ್ಲ" ಎಂದೆ. ಕಾಂತಾ, "ಬುದ್ಧಿವಂತ. ಹೌದು ನೀನು ಹೇಳಿದ್ದೂ ಸರಿ. ಆದರೆ ಅಲ್ಲಿಯ ಪೂಜೆ ನಡೆಯಬೇಕು! ಅದನ್ನು ಕಾಯಲು ಯಾರೋ ವೀರರಿದ್ದಾರೆ. ಅವರದ್ದೂ ಸುದ್ದಿ ಇಲ್ಲ. ಇವೆಲ್ಲವೂ ಸಿಕ್ಕು–ಸಿಕ್ಕಾಗಿರುವ ಒಂದು

ಜಾಲದಂತೆ ಇದೆ. ಇವೆಲ್ಲವನ್ನೂ ಬಿಡಿಸಬೇಕೆಂದರೆ ಆ ಬೆಟ್ಟದ ದಾರಿಯೇ ತಿಳಿಯಬೇಕು. ಈ ಮೂರ್ತಿಗಳ ಕಥೆ ಒಂದು ಕಡೆ ಆದರೆ, ಇನ್ನೊಂದು ಈ ಮರಗಳ ಕಥೆ. ಕೇವಲ ಕಟ್ಟಡ, ಅವು-ಇವುಗಳಿಗೆ ಇಲ್ಲಿನ ಮರಗಳನ್ನು ತೆಗೆದು ಕೊಂಡು ಹೋಗುತ್ತಿಲ್ಲ. ಮರಗಳನ್ನು ಕಡಿಸುವುದಕ್ಕೂ ಒಂದು ಕಾರಣ ಇದೆ. ಯಾವುದೋ ದುರುದ್ದೇಶ ಈ ಬ್ರಿಟೀಷರಿಗೆ." ಎಂದು ಉತ್ತರಿಸಿದನು. ನಾಗನು, "ಹಾಗಿದ್ದರೆ ನೀನು ಮರಗಳ ಕಡಿಯುವಿಕೆಗೆ ಆಸ್ಪದ ಕೊಡುತ್ತಿರುವುದು ಯಾಕೆ? ಮೊದಲು ತಡೆಯಬಹುದಿತ್ತು ತಾನೆ?" ಎಂದು ಖಾರವಾಗಿ ಕೇಳಿದನು. ಕಾಂತಾ ತನ್ನ ಮಂಡಿಯ ಮೇಲೆ ಕುಳಿತು, ನಾಗನ ಹೆಗಲನ್ನು ಹಿಡಿದು, "ದೊಡ್ಡ ಒಳಿತಿಗಾಗಿ ಕೆಲವು ತ್ಯಾಗಗಳಷ್ಟೆ ಇವೆಲ್ಲಾ. ನಿನಗೇ ಅರ್ಥವಾಗುತ್ತೇ!" ಎಂದು, ಮತ್ತೆ ಹಿಂತಿರುಗತೊಡಗಿದನು. ಹಿಂದೆ ತಿರುಗಿಯೂ ನೋಡದೆ, "ಕತ್ತಲಾಗುತ್ತಿದೆ. ನಾಳೆ ಬನ್ನಿ!" ಎನ್ನುತ್ತಾ ಕಾಂತಾ ನಡೆಯತೊಡಗಿದನು. ನಾವು ಸಾಕ್ಷಿಯ ಕಡೆ ನೋಡಿದೆವು. ಸಾಕ್ಷಿ "ನನಗೇನೂ ಗೊತ್ತಿಲ್ಲ" ಎನ್ನುವಂತಹ ಸಂಜ್ಞೆ ಮಾಡಿ ಕಾಲುದಾರಿಯಲ್ಲಿ ನಡೆಯತೊಡಗಿದನು.

***

ನಾವು ಎಂದಿನಂತೆ ಕಾಂತಾನ ಕಥೆ ಕೇಳಲು ಕಾತರರಾಗಿರಲಿಲ್ಲ. ಈಗಲೇ ಕಾರ್ಯರೂಪದ ಮಹತ್ವ ಅಲ್ಲವೇ. ನಮ್ಮ ಕೆಲಸ ಬಹಳವೇ ಇದೆ. ಈಗ ಆಚಾರ್ಯರು ಹೇಳಿಕೊಟ್ಟ ಎಲ್ಲಾ ವಿಷಯಗಳನ್ನು ಕೃತಿಗೆ ತರುವ ಸಮಯ. ಕಾಂತಾನ ಕಥೆ ಅವನ ಗತಕಾಲದ್ದು. ಈಗ ಬಹುಮುಖ್ಯ. ಭವಿಷ್ಯ. ಕಾಡಿನ ಭವಿಷ್ಯ, ದೇವಾಲಯದ ಭವಿಷ್ಯ, ಧರ್ಮದ ಭವಿಷ್ಯ, ದೇಶದ ಭವಿಷ್ಯ. ನಾವು ಆಚಾರ್ಯರ ಕಡೆ ಗಮನವೇ ಕೊಡುತ್ತಿಲ್ಲ. ಅವರು ಇತ್ತೀಚಿಗೆ ಏನು ಮಾಡುತ್ತಿದ್ದಾರೆ, ಎಲ್ಲಿಗೆ ಹೋಗುತ್ತಿದ್ದಾರೆ ಇತ್ಯಾದಿಗಳು ನಮಗೆ ತಿಳಿಯುತ್ತಲೇ ಇರಲಿಲ್ಲ. ಮರುದಿನ ನಾನು, ನಾಗ, ಬೋಕ ಮಾತನಾಡಿಕೊಂಡು ಆ ಜಲಪಾತ ಹಾಗೂ ಅರಣ್ಯಾನಿ ಬೆಟ್ಟದ ಬಳಿ ಹೋಗೋಣ ಎಂದು ನಿಶ್ಚಯಿಸಿದೆವು. ಹೋಗಿರುವುದು ಒಂದೇ ಬಾರಿ. ದಾರಿ ನೆನಪಾಗಬಹುದು ಎಂದುಕೊಂಡು ಇನ್ನೂ ಬೆಳಕು ಹರಿಯುವ ಮುನ್ನವೇ ಓಡತೊಡಗಿದೆವು. ಕೈಯಲ್ಲಿ ಪಂಜೂ ಇಲ್ಲ. ನೆನಪಿನಲ್ಲಿದ್ದಂತೆ ಓಡತೊಡಗಿದೆವು. ಓಡುತ್ತಾ ಓಡುತ್ತಾ ಒಂದು ಕಡೆ ನಿಂತೆವು. ಎಲ್ಲಿ ಬಂದೆವು ಎಂದೂ ತಿಳಿಯಲಿಲ್ಲ. ಇನ್ನೂ ಬೆಳಕಿಲ್ಲ. ಪ್ರಾಣಿ-ಪಕ್ಷಿಗಳ ಕೂಗೂ ಇಲ್ಲ. ನಾವಾಗಿಯೇ ಬಂದು ಎಲ್ಲೋ ಸಿಕ್ಕಿಹಾಕಿಕೊಂಡೆವೆಂದು ಅರಿವಾಯಿತು. ಈಗ ಹಿಂತಿರುಗಬೇಕೋ, ಬೆಟ್ಟವನ್ನು ಹುಡುಕಬೇಕೋ, ಆ ಮುದುಕನಿದ್ದ ಸ್ಥಳಕ್ಕೆ ಹೋಗಬೇಕೋ ಎಂದು ಗೊಂದಲ ಉಂಟಾಯಿತು. ತಂಗಾಳಿ ಬೀಸಿದಾಗ, ಹತ್ತಿರದಲ್ಲೆ ನದಿ ಇದೆ ಎಂದು ತಿಳಿದು, ನದಿಯ ಬಳಿ

ಹೋದೆವು. ಎಲ್ಲೋ ಇದ್ದ ನಮ್ಮ ಗಮನವನ್ನು ಸೆಳೆದಿದ್ದು ಇಬ್ಬರು ಮನುಷ್ಯರು. ಬಟ್ಟೆಯೆಲ್ಲವೂ ಆಚಾರ್ಯರು ಹಾಕಿಕೊಳ್ಳುವಂಥದ್ದು. ಇಬ್ಬರ ಕೈಯಲ್ಲೂ ದೊಡ್ಡ ದೊಡ್ಡ ಬಿಲ್ಲುಗಳು! ಬತ್ತಳಿಕೆಯಲ್ಲಿ ಕಬ್ಬಿಣದ ಬಾಣಗಳು. ನಾವು ದಡ್ಡರಂತೆ ಸದ್ದು ಮಾಡಿಕೊಂಡು ಹೋಗಿದ್ದೇ ದೊಡ್ಡ ತಪ್ಪಾಯಿತು. ನದಿಯ ನೀರು ಕುಡಿಯುತ್ತಿದ್ದ ಅವರು ವೇಗವಾಗಿ ಓಡತೊಡಗಿದರು. ನಾವು ಅವರನ್ನು ಹಿಂಬಾಲಿಸುವಷ್ಟು ಶಕ್ತರಾಗಿರಲಿಲ್ಲ. ಎರಡೇ ಎರಡು ಕ್ಷಣಗಳಲ್ಲಿ ಅವರು ಮಾಯವಾಗಿದ್ದರು. ಇವರು ಯಾರು? ನಾವು ಎಲ್ಲಿದ್ದೇವೆ? ಒಂದು ಜಟಿಲ ಜಾಲದೊಳಗೆ ಬಿದ್ದ ನಾವು ನದಿಯ ಬಳಿಯೇ ನಡೆದುಕೊಂಡು ಹೋಗಿ, ಮತ್ತೆ ಸಾಕ್ಷಿಯನ್ನು ಕೂಡಿಕೊಂಡೆವು. ನಾವು ಸ್ನಾನಕ್ಕಷ್ಟೆ ಹೋಗಿದ್ದೆವೆಂದು ಸಾಕ್ಷಿ ಭ್ರಮಿಸಿ ಸುಮ್ಮನಾದ. ಸಾಕ್ಷಿಯು ನಮ್ಮನ್ನು ಸುಲಭವಾಗಿ ಆ ಜಲಪಾತದ ಬಳಿ ಕರೆದುಕೊಂಡು ಹೋದ. "ನಿಶ್ಶಬ್ಧವಾಗಿರಿ" ಎಂದು ಸಾಕ್ಷಿ ಮುನ್ನೆಚ್ಚರಿಕೆ ನೀಡಿದ. ಎಷ್ಟಾದರೂ ಆಚಾರ್ಯರ ಆಯುಧ ಅವನು. ಜಲಪಾತದ ಬಳಿ ಇದ್ದ ಒಂದು ದೊಡ್ಡ ಬಂಡೆಯ ಹಿಂದೆ ನಾವು ಅಡಗಿಕೊಂಡೆವು. ಎಲ್ಲೋ ಸದ್ದು ಕೇಳತೊಡಗಿತು. ನಿಧಾನವಾಗಿ ಜೋರಾಗ ತೊಡಗಿತು. ನಮ್ಮನ್ನು ಉದ್ರೇಕಕ್ಕೆ ತಳ್ಳುವಂತಹ ಸದ್ದು ಅದು. ಅಂದು ಆಚಾರ್ಯರು ಬಾರಿಸುತ್ತಿದ್ದಂತೆಯೇ ಇಲ್ಲಿ ಇನ್ನೂ ಹತ್ತಾರು ಜನರು ಒಟ್ಟಿಗೆ ಒಂದು ಮರದ ವಸ್ತುವಿನ ಮೇಲೆ ಹೊಡೆಯುತ್ತಿದ್ದಂತೆ ಎನ್ನಿಸುತ್ತಿತ್ತು. ಅವರು ಅದ್ಭುತವಾಗಿ ಬಾರಿಸುತ್ತಿದ್ದ ತಾಳಕ್ಕೆ ನಮ್ಮ ಪಾದ ತಾನಾಗಿಯೇ ನೆಲವನ್ನು ತಟ್ಟತೊಡಗಿತು. ಬಂಡೆಯ ಮರೆಯಿಂದ ನೋಡುತ್ತಿದ್ದ ನಮಗೆ ನದಿಯ ಬಳಿ ಕಂಡ ಈರ್ವರೇ ಇಲ್ಲೂ ಕಂಡರು! ಅವರ ಹಿಂದೆ ಐದಾರು ಜನ. ಏನೋ ಪೂಜೆ ಮಾಡುತ್ತಿದ್ದಂತೆ ಕಂಡಿತು.

3

"ಅಯ್ಯಪ್ಪಗೌಡ, ಕೊರಗಜ್ಜ" ಮುಂತಾದ ಹೆಸರುಗಳು ಕೇಳತೊಡಗಿದವು. ಅವರು ಬಾರಿಸುವುದನ್ನು ನಿಲ್ಲಿಸಿದ್ದರು. ಒಂದು ಮರಕ್ಕೆ, ಅದರ ಕೆಳಗೆ ಏನೇನನ್ನೋ ಇಟ್ಟು ಪೂಜೆ ಮಾಡಿ, ಮತ್ತೆ ಬೆಟ್ಟದ ಕಡೆಗೆ ತಿರುಗಿದರು. ಮತ್ತೆ ಬಾರಿಸುತ್ತಾ, ಬೆಟ್ಟವನ್ನು ಹತ್ತಿದರು. ಆ ಇಬ್ಬರು ಕಾವಲಿನಂತೆ ಅತ್ತ ಇತ್ತ ನೋಡಿ, 'ಸತತ ಜಾಗೃತಿ'ಯನ್ನು ಪಾಲಿಸುತ್ತಿದ್ದರು. ಸಾಕ್ಷಿ "ಆ ಬೆಟ್ಟವನ್ನು ರಕ್ಷಿಸುತ್ತಿರುವರು ಇವರೇ ಇರಬೇಕು" ಎಂದು ಪಿಸುಗುಟ್ಟಿದನು. ಬಂಡೆಯ ಮರೆಯಲ್ಲಿದ್ದ ನಮ್ಮ ಮೇಲೆ ನೀರು ಬಿತ್ತು. ಒಮ್ಮೆ ಭಯವಾದರೂ, ಸತತ ಜಾಗೃತಿಯನ್ನು ಪಾಲಿಸದ ನಮಗೆ ನಾಚಿಕೆಯಾಯಿತು. ನೀರನ್ನು ನಮ್ಮ ಮೇಲೆ ಹಾಕಿದ್ದು ಕಾಂತಾ ಎಂದು ತಿಳಿದ ಮೇಲೆ ನಿರಾಳವಾಯಿತು. ಎಲ್ಲರೂ ಮರೆಯಿಂದ ಹೊರ ಬಂದು, ಮತ್ತೆ ಆ

ವಿಸ್ತಾರವಾದ ಬಂಡೆಯ ಮೇಲೆ ಕುಳಿತೆವು.

"ಅಂದು ನಮ್ಮನ್ನೆಲ್ಲಾ ಬಾಣಗಳ ಮೂಲಕ ದಿಗ್ಭ್ರಮೆಗೊಳಿಸಿ, ಬೆಟ್ಟವನ್ನು ಹತ್ತದಂತೆ ಮಾಡಿದ್ದು ಇವರೇ. ತೀಕ್ಷ್ಣವಾದ ಇವರ ಗಮನ, ಇವರ ದೈವಭಕ್ತಿ, ದೇಶಭಕ್ತಿ ಇವೆಲ್ಲವೂ ಅನುಕರಣೀಯ, ಪ್ರಶಂಸಾರ್ಹ. ಅಷ್ಟಕ್ಕೂ, ಅಂದು ಇವರು ಸುರೇಂದರನ್‌ನನ್ನೇ ಕೊಂದು ಬಿಟ್ಟರು. ನಮ್ಮೊಂದಿಗೆ ಬಂದಿದ್ದ ಬ್ರಿಟೀಷಿನ ಸೈನಿಕರನ್ನೂ ಸುಲಭವಾಗಿ ಕೊಂದುಬಿಟ್ಟರು. ಇನ್ನು ಬದುಕುಳಿದಿದ್ದು ನಾನು ಮತ್ತು ವೆಂಕ ಎಂಬ ಮುದುಕ. ವೆಂಕನು ಆ ವಿಚಿತ್ರ ಕತ್ತಿಯ ಗುಂಪಿನ ಹಿರಿಯವ. ನನ್ನನ್ನು ನೋಡಿದ ತಕ್ಷಣವೇ ಅವನಿಗೆ ಸಂದೇಹ ಬಂದಿತು. ನನ್ನ ವಯಸ್ಸಿನಷ್ಟು ಅವನಿಗೆ ಅನುಭವ ಅಲ್ಲವೇ? ಕೊನೆಗೂ ಅವನ ಸಂದೇಹ ನಿಜವೇ ಆಗಿ ಹೋಯಿತು. ನಾನು ಅವನನ್ನು ಕರೆದುಕೊಂಡು ಎಲ್ಲಾದರೂ ಹೋಗಬೇಕಿತ್ತು. ಬ್ರಿಟೀಷರಿಗೆ ತಿಳಿಸಿ ಹೆಚ್ಚಿನ ಜನರನ್ನು ಇತ್ತ ಸೆಳೆಯಬೇಕು." ಎಂದು ಕಾಂತಾ ಹೇಳಲು, ನಾಗನು, "ಅಲ್ಲ, ಇಲ್ಲಿಗೆ ಹೆಚ್ಚು ಸೈನಿಕರನ್ನು ಕರೆದುಕೊಂಡು ಬರದಿದ್ದರೆ ಏನಾಗುತ್ತಿತ್ತು? ಇನ್ನೂ ಬೆಟ್ಟಕ್ಕೆ ಹಾನಿ ಅಲ್ಲವೆ?" ಎಂದು ಕೇಳಿದ. ಸಾಕ್ಷಿ ಅದಕ್ಕೆ, "ಅಲ್ಲ ಕಣೋ, ಇಲ್ಲಿ ಹೆಚ್ಚು ಜನ ಬಂದರೂ, ಬೆಟ್ಟ, ಅವರಿಗೆ ಹತ್ತಿ ಅಭ್ಯಾಸವಿಲ್ಲದಂತಹ ಪ್ರದೇಶಗಳು. ಕೆಲಸ ಕಡಿಮೆ, ಹಾಗೂ ನಿಧಾನಗತಿಯಲ್ಲಿ ಸಾಗುತ್ತದೆ. ಆದರೆ ಅವರನ್ನು ಮರ ಕಡಿಯುವ ಕೆಲಸಕ್ಕೆ ಹಾಕಿಬಿಟ್ಟರೆ ಹೆಚ್ಚು ಹೆಚ್ಚು ಮರಗಳನ್ನು ಸುಲಭವಾಗಿ ಕಡಿದುಬಿಡುತ್ತಾರೆ. ಅದು ಕಾಡಿಗೇ ಹಾನಿ ಅಲ್ಲವೇ? ಹಾಗಾಗಿ ಜನರನ್ನು ಕಷ್ಟದ ಕೆಲಸಕ್ಕೆ ಹಾಕಿದರೆ, ಕೆಲಸ ತಡ ಆಗುವುದಲ್ಲದೆ, ನಮಗೂ ಯೋಚನೆ ಮಾಡುವುದಕ್ಕೆ ಸಮಯ ದೊರಕಿದಂತೆ ಆಗುತ್ತದೆ." ಈ ಉತ್ತರಕ್ಕೆ ನಾವು ಮೂವರೂ ತಲೆ ಅಲ್ಲಾಡಿಸಿದೆವು. ಕಾಂತಾ ಮತ್ತೆ ಮುಂದುವರೆಸಿದ "ವೆಂಕನು ಬಹಳವಾಗಿ ದಣಿದಿದ್ದನು. ನಡೆಯುತ್ತಾ ನಡೆಯುತ್ತಾ ಅವನು ನನಗೆ ಗುಟ್ಟೊಂದನ್ನು ತಿಳಿಸಿದ. ಅವನು ಭಾರತದ ಒಂದು ಸಂಘಟನೆಯ ಸದಸ್ಯ ಎಂದು ಹೇಳಿದ ತಕ್ಷಣ ನನಗೆ ಬಹಳ ಖುಷಿಯಾಯಿತು. ಭಾರತ ಸುಮ್ಮನೆ ಕುಳಿತಿಲ್ಲ ಎಂದು ಆನಂದವಾಯಿತು. ವೆಂಕನ ಸಾಮರ್ಥ್ಯವನ್ನು ಅಲ್ಲಗಳೆಯುವಂತಿಲ್ಲ. ಯಾವ ಸಂಘಟನೆ ಎಂದು ಕೇಳಿದಾಗ ಅವನು ಆಜಾದ್ ಹಿಂದ್ ಫೌಜ್ ಎಂದ. ಅದರ ಹೆಸರು ಕೇಳಿದ ತಕ್ಷಣ ನನಗೆ ಮೈಯೆಲ್ಲಾ ನಡುಗಿತು. ಸುಭಾಷ್‌ಚಂದ್ರ ಬೋಸ್ ಎನ್ನುವ ಮಹನೀಯನೊಬ್ಬನು, ಬೇರೆ ಬೇರೆ ದೇಶಗಳಿಗೆ ಹೋಗಿ, ಅದೆಷ್ಟೋ ವರ್ಣನಾತೀತವಾದ ಸಾಹಸಗಳನ್ನು ಮಾಡಿ ಕಟ್ಟಿದ ಸೇನೆ ಅದು. ಬ್ರಿಟೀಷರಿಗೆ ಅವರನ್ನು ನೋಡಿದರೆ ನಡುಕ ಹುಟ್ಟುತ್ತಿತ್ತು. ಹೇಗಾದರೂ ಮಾಡಿ ಅವರನ್ನು ಹಿಡಿಯಬೇಕು ಎಂದು ಅವರು ಮಾಡದಿರುವ ಕೆಲಸಗಳೇ ಇಲ್ಲ. ಆದರೆ ಅವರು ಸಿಕ್ಕಿಕೊಂಡ ಕಥೆ ಇಲ್ಲವೇ

ಇಲ್ಲ. ಅಲ್ಲಿಂದ ಬಂದ ಗೂಢಾಚಾರಿ ಎಂದ ಮೇಲೆ ವೆಂಕನ ಜ್ಞಾನ ಆಗಾಧವಾಗಿರಬೇಕು. ನಾನೂ ಅವನಿಂದ ಬಹಳಷ್ಟು ಕೇಳಿ ಕಲಿತೆ. ಈ ರೀತಿಯ ಮೂರ್ತಿ ದೋಚುವಿಕೆಗಳು ಹಲವನ್ನು ನೋಡಿರುವನೆಂದು ಅವನು ಹೇಳಿದ್ದಲ್ಲದೆ, ಬ್ರಿಟೀಷರು ಕೊನೆಗೆ ಅವರಿಗೆ 'ಸಹಾಯ' ಮಾಡಿದ ಗುಂಪಿಗೆ ದ್ರೋಹವನ್ನೇ ಬಗೆಯುತ್ತಾರೆಂದು ಹೇಳಿದ. ವಿಚಿತ್ರ ಕತ್ತಿಯ ಗುಂಪು ಸತ್ತಿದ್ದು ಒಳ್ಳೆಯದೇ ಆಯಿತು. ನನಗೆ ಒಂದೆರಡು ಸಲಹೆಗಳನ್ನೂ ಕೊಟ್ಟ. 'ಮೊದಲು ಹೋಗಿ ಹೇಗಾದರೂ ಮರಗಳು ಕಡಿಯುವುದನ್ನು ನಿಲ್ಲಿಸು. ನಮ್ಮ ಹುಚ್ಚು ಜನರು. ಆ ಬಿಳಿಯರು ಏನು ಹೇಳಿದರೆ ಅದನ್ನೇ ಸತ್ಯ ಎಂದು ನಂಬುತ್ತಾರೆ. ಈ ಪಶ್ಚಿಮ ಘಟ್ಟ ಕಾಡುಗಳು ನಮಗೆ ದೇವರು ಕೊಟ್ಟಿರುವ ವರ. ಅವರು ನಮ್ಮ ಜನರಿಗೆ ಏನು ನಂಬಿಸಿದ್ದಾರೆ ಗೊತ್ತೆ?' ಎಂದು ಕೇಳಿದ. ನನಗೆ ಅವೆಲ್ಲ ತಿಳಿದಿರಲಿಲ್ಲ. ವೆಂಕ ಹೇಳಿದ, 'ಇಲ್ಲಿರುವ ಮರಗಳೆಲ್ಲವೂ ಈ ಜಾಗಕ್ಕೆ ಸರಿಯಾಗಿ ಹೊಂದಿಕೊಂಡವುಗಳಲ್ಲ, ಅವೆಲ್ಲವನ್ನೂ ಕಡಿದು ಬೇರೆ ಸಸಿಗಳನ್ನು ನೆಡಬೇಕು ಎಂದು ಜನರನ್ನು ಒಪ್ಪಿಸಿಬಿಟ್ಟರು.[12] ನಮ್ಮ ಹುಚ್ಚು ಜನ. ಕೇಳಬೇಕೆ? ಒಂದು ಕಡೆ ಇಂದ ಇದ್ದ ಮರಗಳನ್ನೆಲ್ಲಾ ಕಡಿಸತೊಡಗಿದರು. ಕೇವಲ ಮರಗಳಿಲ್ಲದಿದ್ದರೆ ಸಮಸ್ಯೆ ಕಡಿಮೆಯೇ ಇರುತ್ತಿತ್ತು. ಆದರೆ ಇವರು ಮರಗಳನ್ನು ಕಡಿಸುವುದಲ್ಲದೆ, ಭೂಮಿಗೆ ಹಾನಿಯುಂಟು ಮಾಡುವ ಮರಗಳನ್ನು ನೆಡಿಸಿದರು. ಅವರಿಗೆ ಅನುಕೂಲವಾಗುವಂತಹ ಮರಗಳನ್ನು ನೆಡಿಸಿದರು. ಪ್ರಾಣಿ–ಪಕ್ಷಿಗಳಿಗೆ ಆಹಾರ ಆಶ್ರಯಗಳನ್ನು ನೀಡದ ಮರಗಳನ್ನು ನೆಡಿಸಿದರು. ಔಷಧ ಎಂದು ಸಿಂಚೋನಾ ಮರಗಳನ್ನು ನೆಡಿಸಿದರು. ಜಾಲಿ ಮರಗಳು! ಎಷ್ಟು ಕಡೆ! ಇದರಿಂದ ಪ್ರಾಣಿಗಳ ಸಂಖ್ಯೆ ಕಮ್ಮಿಯಾಗುತ್ತಿದೆ. ಒಂದಲ್ಲ ಒಂದು ದಿನ ಇವರು ಕಾಡನ್ನು ಮಾಯ ಮಾಡಿದರೂ ಆಶ್ಚರ್ಯಪಡಬೇಕಿಲ್ಲ.' ನನಗೆ ಆಶ್ಚರ್ಯವಾಯಿತು. ಆಗಲೇಬೇಕಿದ್ದ ಸಂದರ್ಭ ಅದು. ಆಗ ನಾನು ನಿಶ್ಚಯಿಸಿದೆ. ಒಂದು ಕಡೆಯಿಂದ ಬ್ರಿಟೀಷರು ನೆಡಿಸಿದ ಈ ಮರಗಳನ್ನು ಕಡಿಸಬಹುದು, ಅವರ ಕಣ್ಣಿಗೆ ಮಣ್ಣೆರಚಿ, ಮತ್ತೆ ಈ ಕಾಡನ್ನು, ತನ್ನ ಸ್ವಂತ ಮರಗಳನ್ನೇ ಬೆಳೆಯಲು ಬಿಡಬಹುದು. ಇನ್ನೊಂದು ಅವರ ಬಲವನ್ನೆಲ್ಲಾ ಈ ಅರಣ್ಯನಿ ಬೆಟ್ಟದ ಕಡೆಗೆ ತಿರುಗಿಸಿ, ಅಲ್ಲಿಯೇ ಒಂದಷ್ಟು ಜನರನ್ನು ಮುಗಿಸುವುದಲ್ಲದೆ ದೇವಾಲಯವನ್ನೂ ಕಾಪಾಡಬಹುದು."

ಈಗ ನಮಗೆ ಒಂದು ಸ್ಪಷ್ಟ ಚಿತ್ರ ದೊರಕಿದಂತಾಯಿತು. ನಾವು ಹೇಗಾದರೂ ಮಾಡಿ ಬೆಟ್ಟದ ಮೇಲೆ ಹೋಗುವುದಲ್ಲದೆ, ಆ ಮಹಾನುಭಾವ

---

12. https://theprint.in/science/study-traces-how-the-british-ruined-western-ghats-one-of-indias-most-unique-ecosystems/147041/ (ಜಾಲತಾಣ ಪರಿಶೀಲಿಸಿದ ದಿನಾಂಕ 25–10–2022)

ರೊಂದಿಗೆ ಬಂಧ ಬೆಳೆಸಬೇಕು. ಇದಕ್ಕೆ ಬೇಕಿರುವುದು ಆಚಾರ್ಯರ ಸಹಾಯ, ಹಾಗೂ ನಮ್ಮ ಸತತ ಜಾಗೃತಿ. ಕಾಂತಾ ಎದ್ದು ನಿಂತ. "ಬನ್ನಿ ಈ ಬೆಟ್ಟದ ಕುರಿತಾಗಿ ಸ್ವಲ್ಪ ತಿಳಿದುಕೊಳ್ಳೋಣ" ಎನ್ನುತ್ತಾ, ಜಲಪಾತವನ್ನು ಬಳಸಿ ಆಕಾಶದೆತ್ತರಕ್ಕೆ ಕಾಣುವ ಆ ದುರ್ಗಮ ಬೆಟ್ಟದ ಕಡೆ ನಡೆದನು. ನಾವೂ ಹಿಂಬಾಲಿಸಿದೆವು. ಅತ್ಯಂತ ನಿಶ್ಯಬ್ಧವಾಗಿ ನಾವು ನಡೆಯಬೇಕಿತ್ತು.

4

"ಸ್ವಲ್ಪ ಶಬ್ದವಾದರೂ ನಿಮ್ಮ ಕತೆ ಮುಗಿಯಿತೆಂದೇ ತಿಳಿಯಿರಿ" ಎಂದು ಕಾಂತಾ ಎಚ್ಚರಿಸಿದ. ಬಂಡೆಯನ್ನು ಮೆತ್ತಿಕೊಂಡೆ, ಜಲಪಾತದ ರಭಸದಲ್ಲಿ ನೆನೆಯುತ್ತಾ ನಾವು ಬೆಟ್ಟದ ಬಳಿಗೆ ಬಂದೆವು. ನೆಲದಿಂದ ಎತ್ತರಕ್ಕೆ ಹೋದಂತೆ ಕಂಡ ಭೂಪ್ರದೇಶವಿದ್ದಿತಾದರೂ, ಅದನ್ನು ಏರುವುದನ್ನು ಕಲ್ಪಿಸಿಕೊಳ್ಳುವುದು ಕೂಡ ಅಸಾಧ್ಯವಾಗಿತ್ತು. ಅಸಾಧ್ಯವಾದ ಈ ಕೆಲಸವನ್ನು ಮಾಡುವುದು ಹೇಗೆ ಎಂಬ ಯೋಚನೆಯಲ್ಲಿ ನಾವೆಲ್ಲಾ ಮಗ್ನರಾಗಿದ್ದರೆ, ಕಾಂತಾ ಮಾತ್ರ ಖುಷಿಯಲ್ಲಿ ತೇಲಾಡುತ್ತಿದ್ದ. ನಮಗೆ ಆಶ್ಚರ್ಯವಾಯಿತು. ನಾವೆಲ್ಲರೂ ಇದನ್ನು ಏರುವುದು ಹೇಗೆ ಎಂಬ ಚಿಂತೆಯಲ್ಲಿ ತೊಡಗಿದ್ದರೆ ಇವನು ಸಂತೋಷ ಪಡುತ್ತಿದ್ದಾನಲ್ಲ ಏಕೆ ಎಂಬುದು ನಮ್ಮನ್ನು ಕಾಡುತ್ತಿತ್ತು. ಕಾಂತಾ ನಮ್ಮ ಬಳಿ ಬಂದು ಉತ್ಸಾಹದಲ್ಲಿ, "ನಾವು ಹತ್ತುವುದೇ ಇಷ್ಟು ಕಷ್ಟ. ಯೋಚಿಸಿ, ಕಾಡಿನ ಓಟ, ಕಾಡಿನ ಪ್ರಾಣಿಗಳ ಪರಿಚಯ, ಆಚಾರ್ಯರ ಪಾಠ, ಸಿಂಗಳೀಕಗಳ ಅನುಕರಣೆ, ಗುಡಿಸಲಲ್ಲಿ ಮಲಗುವಿಕೆ ಇವೆಲ್ಲವನ್ನೂ ಮಾಡಿ ಗಟ್ಟಿಯಾಗಿರುವ ನಾವೇ ಇಷ್ಟು ಕಷ್ಟಪಡುವಾಗ, ಸೂಕ್ಷ್ಮ ಪ್ರದೇಶಗಳಲ್ಲಿ ಮೆತ್ತನೆಯ ಹಾಸಿಗೆ, ಮೃದು ಚರ್ಮ ಹೊಂದಿರುವ, ಸದಾ ಬೆಚ್ಚಗಿನ ಬಟ್ಟೆ ಹಾಕಿಕೊಂಡು ಕುದುರೆಗಳ ಮೇಲೆ ಓಡಾಡುವ ಬ್ರಿಟೀಷರ ಬಿಳಿ ಸೈನಿಕರಿಗೆ ಹತ್ತುವುದು ಎಷ್ಟು ಕಷ್ಟವಾಗಬಹುದು?" ನಮಗೆ ಈಗ ಅರ್ಥವಾಯಿತು. ಕಾಂತಾನ ದೂರದೃಷ್ಟಿ ನಮ್ಮನ್ನು ಚಕಿತಗೊಳಿಸಿತು. ನಾವು ಅವನೊಂದಿಗೆ ಇರುವುದೇ ನಮಗೆ ದೊಡ್ಡ ಶಿಕ್ಷಣ. ಸಾಕ್ಷಿ ಆಗ ಒಂದು ಪ್ರಶ್ನೆಯನ್ನು ಕೇಳಿದ. "ಅವರು ನಿನಗಿಂತ ಬುದ್ಧಿವಂತರಾಗಿರಬಹುದು. ಅವರೇನಾದರೂ ನಮ್ಮ ಜನರನ್ನೇ ಕಳುಹಿಸಿದರೆ?" ಕಾಂತಾನ ಬಳಿ ಇದಕ್ಕೂ ಉತ್ತರವಿತ್ತು. ನಾವು ಅದಕ್ಕಾಗಿ ಕಾಯುತ್ತಿದ್ದೆವು. ಕಾಂತಾ ಎಂದನು, "ನಮ್ಮವರಲ್ಲಿ ಅಷ್ಟಿಷ್ಟಾದರೂ ದೇಶಭಕ್ತಿ ಇದ್ದೀತು. ಅವರನ್ನು ಬದಲಾಯಿಸುವುದು ಸುಲಭವಾದ ಕೆಲಸವೇ. ಅವರನ್ನು ನಮ್ಮ ಕಡೆಯೇ ತಿರುಗಿಸಿಕೊಂಡರೆ ಆಯಿತು." ಆದರೆ ಹೇಳಿದಷ್ಟು ಸುಲಭವೇ ಅದು? ಸದ್ಯಕ್ಕೆ ಒಂದು ಉಪಾಯವಾದರೂ ಹೊಳೆಯಿತು. ಇಚ್ಛಾ ಶಕ್ತಿ ಹುಟ್ಟಿದೆ. ಕ್ರಿಯಾ ಶಕ್ತಿಯನ್ನು ನಾವೆಲ್ಲರೂ ಸೇರಿ

ಉತ್ಪಾದಿಸಬೇಕು. ನಂತರ ಜ್ಞಾನ ಶಕ್ತಿಯು ತಾನಾಗಿಯೇ ಬರುತ್ತದೆ. ಈ ದಟ್ಟ ಕಾಡಿನಿಂದ ಮೈಯನ್ನೆಲ್ಲಾ ಮುಚ್ಚಿಕೊಂಡು, ಅವುಗಳ ಪುಷ್ಪಗಳಿಂದ ಸಹಜಾಲಂಕೃತವಾಗಿರುವ ಈ ಅರಣ್ಯನಿ ಬೆಟ್ಟವನ್ನು ನಾವು ಏರುವುದಾದರೂ ಹೇಗೆ? ಇದು ಸೌಂದರ್ಯ ಒಂದು ಕಡೆ ಆದರೆ, ಅದರೊಳಗಿರುವ ಅಪಾಯಗಳು? ಭಕ್ತಿಯಿಂದ ಹೋಗುವುದು ಒಂದು ಕಡೆ. ಆದರೆ ಇದು ದುರಾಸೆಯ ಚಾರಣ. ಕಾಡನ್ನು ಕಾಯುವ ಅರಣ್ಯನಿಯೇ ದುರುದ್ದೇಶದಲ್ಲಿ ಬರುವವರನ್ನು ಸಂಹರಿಸುವವಳೆಂಬುದು ಪ್ರತೀತಿ! ಇದಲ್ಲದೇ ಇಲ್ಲಿ ಯಾವ ಯಾವ ಪ್ರಾಣಿಗಳಿರಬಹುದೋ! ಇನ್ನು ಅದನ್ನು ಕಾಯುವ ಯೋಧರು! ಇವಿಷ್ಟರ ಕಣ್ಣಿಗೂ ಮಣ್ಣೆರಚಿ, ಆ ದಿವ್ಯ ದೇಗುಲದೊಳಗಿರುವ ದಿವ್ಯ ಮೂರುತಿಯನ್ನು ತಂದು ಬೇರೆ ದೇಶಕ್ಕೆ ತೆಗೆದುಕೊಂಡು ಹೋಗುವುದಂತೆ! ಇಲ್ಲಿಂದ ಬೇರೆ ದೇಶಕ್ಕೆ ತೆಗೆದುಕೊಂಡು ಹೋಗುಬಹುದೇನೋ. ಆದರೆ ಈ ಗಿರಿಯನ್ನು ಹತ್ತುವುದೇ ಅದಕ್ಕಿಂತ ನೂರುಪಟ್ಟು ಕಷ್ಟ. ಬೋಕನು ಸುಮ್ಮನಿಲ್ಲದೆ, ಚಿಕ್ಕದೊಂದು ಕಲ್ಲನ್ನು ಕೈಗೆತ್ತಿಕೊಂಡು, ಇರುವ ಶಕ್ತಿಯನ್ನೆಲ್ಲಾ ಉಪಯೋಗಿಸಿ, ಬೆಟ್ಟದ ಕಡೆಗೆಸೆದ. ಅದನ್ನು ನಾವೆಲ್ಲಾ ಗಮನ ಕೊಟ್ಟು ನೋಡುತ್ತಿದ್ದೆವು. ಆಕಾಶದ ಕಡೆಯಿಂದ ಅದು ಮರಗಳ ಕಡೆ ಬಿದ್ದಿತು. ತಕ್ಷಣವೇ ಒಂದು ಬಾಣವು 'ಸುಂಯ್' ಎಂದು ಬಂದು ಬೋಕನ ತಲೆಯನ್ನು ದಾಟಿ ಹಿಂದೆ ಇದ್ದ ಮರಕ್ಕೆ ಸಿಕ್ಕಿಕೊಂಡಿತು. ನಾವೆಲ್ಲರೂ ನಿಶ್ಶಬ್ಧವಾಗಿ ಮತ್ತೆ ಬಂಡೆಯ ಬಳಿ ಹೋದೆವು. ಬೋಕನು ಇನ್ನೂ ಅದೇ ಆಘಾತದಲ್ಲೇ ಇದ್ದನು. ಕಾಂತಾ ಅವನ ಮುಖವನ್ನು ನೋಡಿ, "ಅದು ಎಚ್ಚರಿಕೆಯ ಬಾಣವಾಗಿತ್ತು. ಮುಂದಕ್ಕೆ ಹೆಜ್ಜೆ ಇಟ್ಟರೆ ಬಾಣ ನೇರ ಲಲಾಟವನ್ನೇ ಭೇದಿಸುತ್ತಿತ್ತು" ಎಂದ. ನಾನು, "ಒಂದು ಚಿಕ್ಕ ಕಲ್ಲನ್ನೇ ಅವರು ಕೆಳಗೆ ಬೀಳಲು ಬಿಡಲಿಲ್ಲ. ಇನ್ನು ಒಂದು ಸೇನೆಯನ್ನೇ ತರಬೇಕೆಂದಿರುವೆ. ಇದು ಹೇಗೆ ಸಾಧ್ಯ?" ಎಂದು ಕೇಳಿದೆ. ಕಾಂತಾ ಹಲವು ಪ್ರಾಣಿಗಳನ್ನು ಸೂಕ್ಷ್ಮ ವಾಗಿ ಗಮನಿಸಿದ್ದನು. "ಅವರು ಎಷ್ಟು ಮಂದಿ ಇದ್ದಾರೋ ತಿಳಿಯದು." ಎಂದ. ಹುಲಿಯ ರೀತಿಯಲ್ಲಿ ಬೇಟೆಗೆ ಹೊಂಚುಹಾಕುತ್ತಿದ್ದನೆ? "ನಾವು ನೋಡಿದಂತೆ ಧನುರ್ಧಾರಿಗಳು ಇಬ್ಬರೇ ಇದ್ದರು" ಎಂದು ನಾನು ಹೇಳಿದೆ. ಸಾಕ್ಷಿಯು ಕಾಂತಾನ ಹೆಗಲ ಮೇಲೆ ಕೈ ಹಾಕಿ, "ಹವಾ ಟೈಗರ್. ಹವಾ ಟೈಗರ್‌ನ ತರಹ ಯೋಚಿಸು" ಎಂದನು.

ಕಾಂತಾ ಎದ್ದು, ಕೈ ಕಟ್ಟಿಕೊಂಡು, ಕಣ್ಣು ಮುಚ್ಚಿಕೊಂಡು ಹೆಬ್ಬಂಡೆಯ ಮೇಲೆ ಓಡಾಡತೊಡಗಿದ. ಅವನ ಓಡಾಟದ ವೇಗವೂ ಹೆಚ್ಚಾಯಿತು. ಅವನ ತಲೆಯಲ್ಲಿನ ಭಾವನೆಗಳೂ ಹೀಗೆ ಓಡುತ್ತಿರಬಹುದೇ? ಅವನು ಸ್ವಗತದಲ್ಲಿ ಹಲವು ಮಾತನಾಡಿಕೊಂಡ. ನಾವೂ ಯೋಚಿಸತೊಡಗಿದೆವು. ಕಾಂತಾ ಕಣ್ಣು

ತೆರೆದ. ನಮ್ಮ ಬಳಿ ಬಂದು. "ಒಟ್ಟಿಗೆ ಯೋಚಿಸಿ" ಎಂದ. ನಾವೆಲ್ಲರೂ ಇನ್ನೂ ಹತ್ತಿರ ಬಂದು ವೃತ್ತದ ಮಾದರಿಯಲ್ಲಿ ಕುಳಿತೆವು. ನನಗೆ ಕತ್ತೆಕಿರುಬಗಳ ನೆನಪಾಯಿತು. ಒಂದು ಬಡಪಾಯಿ ಪ್ರಾಣಿಯನ್ನು ಅವುಗಳು ಎಲ್ಲಾ ಕಡೆಯಿಂದ ಬೇಟೆ ಆಡುತ್ತವೆ. "ಕಾಂತಾ.." ನಾನು ಆರಂಭಿಸಿದೆ. "ಈ ಕತ್ತೆಕಿರುಬಗಳು ಬೇಟೆಯಾಡುವುದನ್ನ ನೋಡಿದ್ದೀಯಾ ಅಲ್ವಾ? ಹಾಗೆಯೇ ಮಾಡಿದರೆ?" ಕೆಲವು ಬಾರಿ ಕೆಲವು ಯೋಜನೆಗಳು ಎಲ್ಲರಿಗೂ ಅರ್ಥವಾಗಿದ್ದರೂ, ಅದನ್ನು ಜೋರಾಗಿ ಮಾತಿನಲ್ಲಿ ಹೇಳಿದರೆ ಎಲ್ಲರ ಹೃದಯವೂ ನಿಶ್ಶಂಕವಾಗಿ ಒಂದು ಖುಷಿ ಸಿಗುತ್ತದೆ. ಇದರ ಅನುಭವ ನನಗಾಗಿತ್ತು. ಆದ್ದರಿಂದ ನಾನು ಹೇಳ ತೊಡಗಿದೆ. "ಒಂದೇ ಕಡೆಯಿಂದ ದಾಳಿ ಮಾಡಿದರೆ ಅವರೂ ಅಲ್ಲೇ ಗಮನ ಹರಿಸುತ್ತಾರೆ. ಸುತ್ತಲೂ ನಿಂತು ಬಂದೂಕುಗಳಿಂದ ಕಾಡಿಗೆ ಹಾನಿಯಾಗದಂತೆ" ಎಂದು ನಾನು ಮುಗಿಸುವಷ್ಟರಲ್ಲಿ, ಎಲ್ಲರೂ, "ದಾಳಿ ಮಾಡಿದರೆ, ಅವರೂ ಸೋಲಲೇ ಬೇಕಾಗುತ್ತದೆ." ಒಂದು ಕಡೆ ಅವರನ್ನು ಸೋಲಿಸಲೇ ಬೇಕಾದ ಅನಿವಾರ್ಯತೆ. ಇನ್ನೊಂದು ಕಡೆ ಅವರನ್ನು ಸೋಲಿಸಬೇಕೆಂಬ ದುಃಖ. ನಮ್ಮ ಮೇಲೆ ನಮಗೇ ಅಸಹ್ಯ. ಆದರೆ ದೇಶಕ್ಕಾಗಿ, ಬೆಟ್ಟದ ಮೇಲಿರುವ ದೈವಕ್ಕಾಗಿ ನಾವು ಇದನ್ನು ಮಾಡಲೇಬೇಕಿತ್ತು. ಕೆಲವು ತ್ಯಾಗಗಳು ನೋವುಂಟು ಮಾಡುವುದು ಸಹಜ. ಯುದ್ಧ ಎಂದ ಮೇಲೆ ಇಷ್ಟೆ.


"ಕ್ರಿಯಾಶಕ್ತಿ ಉತ್ಪಾದನಾ ಆರಂಭಿಸೋಣವೆ?" ಎಂದನು ಸಾಕ್ಷಿ. ಎಲ್ಲರೂ ಎದ್ದು ನಿಂತು ಗಜವಡಿವು ಮಾಡಿದೆವು. ನಾವೆಲ್ಲರೂ ಈಗ ಒಂದು ರಹಸ್ಯ ಸಂಘಟನೆಯನ್ನು ಆರಂಭಿಸಬೇಕು. ಅಭಿನವ ಭಾರತದ ಹಾಗೆ. ನಮ್ಮದೇ ಗುಟ್ಟುಗಳು, ಮಾತನಾಡಿಕೊಳ್ಳಲು ತಂತ್ರಗಳು, ಜೊತೆಗೆ ಶಬ್ದ ಸಂಕೇತಗಳು ಇವೆಲ್ಲವನ್ನೂ ತಯಾರು ಮಾಡಬೇಕಿತ್ತು. ಕೊನೆಯದಾಗಿ, ಒಂದು ಹೆಸರು. ಒಂದು ಲಾಂಛನ. ತಂತ್ರ-ಸಂಕೇತ ಇತ್ಯಾದಿಗಳನ್ನು ನಾವು ಸಾಕ್ಷಿ-ಕಾಂತಾರಿಗೆ ಬಿಟ್ಟೆವು. ಲಾಂಛನ ಹಾಗೂ ಹೆಸರನ್ನು ನಾವೇ ನಿಶ್ಚಯಿಸುತ್ತೇವೆ ಎಂದು ದೊಡ್ಡ ಮನುಷ್ಯರ ರೀತಿಯಲ್ಲಿ ಹೇಳಿದೆವು. ಸಾಕ್ಷಿ-ಕಾಂತಾ ಇದಕ್ಕೆ ಒಪ್ಪಿಗೆ ಸೂಚಿಸಿ ನಕ್ಕರು. ನಾವು ತಕ್ಷಣ ಒದ್ದೆಯಾಗಿದ್ದ ಮಣ್ಣ ಬಳಿ ಹೋಗಿ ಕುಳಿತೆವು. ಮೂವರೂ ಯೋಚಿಸಿದೆವು. ಮೊದಲು ನಾಗ ಹೇಳಿದ: "ನಮ್ಮ ಆಯುಧಗಳು ಇದರಲ್ಲಿ ಬರಬೇಕು. ಉರುಮಿ, ಬಿಲ್ಲು-ಬಾಣ, ಕತ್ತಿ, ಹಾಗೂ ಗುರಾಣಿ." ಬೋಕ ಓಡಿ ಹೋಗಿ ಕಾಂತಾನ ಬಳಿ ಒಂದು ಕಾಗದವನ್ನು ಪಡೆದುಕೊಂಡು ಬಂದ. ನಾವು ಅವನ ಉಪಾಯಕ್ಕೆ ಮೆಚ್ಚಿದೆವು. ಮೊದಲು ಒದ್ದೆ ಮಣ್ಣಿನ ಮೇಲೆ ನಾವು ಕಷ್ಟ ಪಟ್ಟು ನಮ್ಮ ಎಲ್ಲಾ ಆಯುಧಗಳಿರುವಂತಹ ಚಿತ್ರವನ್ನು ಬಿಡಿಸಿದೆವು. ಬೋಕ ಅಷ್ಟರಲ್ಲಿ ಬೆಂಕಿ ಹಚ್ಚಿ, ಒಂದು ಕಡ್ಡಿಯನ್ನು ಅದರಲ್ಲಿ ಸುಡುತ್ತಿದ್ದ. ಚಿಕ್ಕಂದಿನಿಂದಲೂ

ಈ ಕಡ್ಡಿ-ಬೆಂಕಿಗಳೊಂದಿಗೆ ಕಿತಾಪತಿ ಮಾಡುತ್ತಿದ್ದ ಅವನಿಗೆ ಇದೇನು ಹೊಸತೆನಿಸಲಿಲ್ಲ. ಆ ಕಡ್ಡಿಯನ್ನು ಹಿಡಿದು ಕಾಗದದ ಮೇಲೆ ಬರೆಯುವುದದಷ್ಟೇ ಅವನಿಗೆ ಹೊಸ ಕೆಲಸ. ಮೊದಲು ಕಾಗದವನ್ನು ಎರಡು ಭಾಗವನ್ನಾಗಿ ಮಾಡಿದೆವು. ಮೊದಲನೇ ಭಾಗದಲ್ಲಿ ಬರೆಯಲು ಯತ್ನಿಸಿ ಏನೇನೋ ಚಿತ್ರ ಮೂಡಿತು. ನಾವು ಅದನ್ನು ನೋಡಿ ನಕ್ಕೆವು. ನಂತರ ಮೊಂಡಾಗಿದ್ದ ಆ ಕಡ್ಡಿಯನ್ನು ಮತ್ತೆ ಸುಟ್ಟು ಕೊಂಚ ಚೂಪಾಗಿಸಿದೆವು. ಆ ಗೀಚುವ ಕಾಗದದ ಮೇಲೆ ಮತ್ತೆ ಮೂವರೂ ಯತ್ನಿಸಿದಾಗ ಒಂದು ರೂಪ ಬಂದಿತು. ಆಗ ಇನ್ನೊಂದು ಕಾಗದದ ಚೂರಿನ ಮೇಲೆ ಅದನ್ನು ಅತ್ಯಂತ ಶ್ರದ್ಧೆಯಿಂದ ಬರೆದೆವು. ಅದನ್ನು ಬೆಳಕಿನಲ್ಲಿಟ್ಟು ನೋಡಿದೆವು. ನಮ್ಮ ಮೇಲೆ ನಮಗೇ ಅಬಿಮಾನ! "ಓಹೋ! ಎಂತಹ ಅದ್ಭುತ ಲಾಂಚನ" ಎಂದು. ನಮಗೆ ಈ ರೀತಿಯಲ್ಲಿ ಅಹಂಕಾರ ಉಂಟಾದಾಗೆಲ್ಲ ಆಚಾರ್ಯರು ಹೇಳಿದೊಂದು ಕಥೆ ನೆನಪಿಗೆ ಬರುತ್ತಿತ್ತು.

ಇದೇ ಕಾಡಿನಲ್ಲಿ ಒಬ್ಬ ಸುಂದರ ಯುವಕನಿದ್ದನಂತೆ. ಅವನಷ್ಟು ಸುಂದರರು ಯಾರೂ ಇರುವುದಕ್ಕೆ ಸಾಧ್ಯವೇ ಇಲ್ಲ ಎನ್ನುವಷ್ಟು. ಅವನನ್ನು ಎಲ್ಲರೂ "ಸುಂದರ, ಸುಂದರ" ಎಂದು ಕರೆಯುತ್ತಿರಲು ಅವನಿಗೆ ಅತ್ಯಂತ ಸಂತಸವಾಗುತ್ತಿತ್ತಂತೆ. ದಿನವೂ ನದಿಯ ಬಳಿ ಹೋಗಿ, ತಟದಲ್ಲಿ ಕುಳಿತು ನೀರಿನಲ್ಲಿ ಅವನ ಬಿಂಬವನ್ನು ನೋಡಿ ನೋಡಿ ಬೀಗುತ್ತಿದ್ದನಂತೆ. ಒಂದು ದಿನ ಹೀಗೆ ನೀರಿನಲ್ಲಿ ನೋಡುತ್ತಾ, "ನಾನೆಷ್ಟು ಸುಂದರ! ನನ್ನನ್ನು ಬಿಟ್ಟರೆ ಇಲ್ಲ" ಎನ್ನುತ್ತಾ ಬೀಗುತ್ತಿರುವಾಗ ನದಿಯೊಳಕ್ಕೆ ಬಿದ್ದು ಮೊಸಳೆಯ ದಾಳಿಗೆ ಬಲಿಯಾದನಂತೆ. ಅಂದರೆ ನಮ್ಮ ಅಹಂಕಾರ ನಮ್ಮನ್ನೇ ಮುಳುಗಿಸೀತು ಎಂದು. ನಮಗೆ ನೆನಪಾಗಿ, "ಈ ಲಾಂಚನವನ್ನು ಇನ್ನೂ ಚೆನ್ನ ಮಾಡಬೇಕೆಂದರೆ ಏನು ಮಾಡಬೇಕು" ಎಂದು ಯೋಚಿಸಿದೆವು. ಮೊದಲು ಇದನ್ನು ಕಾಂತಾ-ಸಾಕ್ಷಿ ವೀರದ್ವಯರಿಗೆ ತೋರಬೇಕೆಂದು ಎತ್ತಿಕೊಂಡು ಹೋದೆವು. ಗಹನವಾದ ಚರ್ಚೆಯಲ್ಲಿ ಅವರು ಮುಳುಗಿದ್ದರು. ನಮ್ಮದು ಏನೋ ಮಕ್ಕಳಾಟ ಇರಬಹುದು ಎಂದು ಅಂದಾಜಿಸಿದ್ದ ಅವರು ಆ ಕಾಗದದ ಚೂರನ್ನು ನೋಡಿದ ತಕ್ಷಣ ಮೂಕವಿಸ್ಮಿತರಾದರು. ಅವರಿಗೆ ಖುಷಿಯಾಗುತ್ತಿತ್ತೆಂಬುದು ಅವರ ಮುಖ ಭಾವನೆಯಿಂದ ತಿಳಿಯುತ್ತಿತ್ತು. "ಅದ್ಭುತ! ಅದ್ಭುತ!" ಎಂದು ನಮ್ಮನ್ನು ಅಪ್ಪಿಕೊಂಡರು. ಕಾಂತಾ ಮತ್ತೆ ಆ ಲಾಂಛನವನ್ನು ನೋಡಿ, "ಏನೋ ಮರೆಯಾಗಿದೆ ಇದರಲ್ಲಿ" ಎಂದ. ನಂತರ ತನ್ನ ಬಟ್ಟೆಯಲ್ಲಿದ್ದ ಒಂದು ಪುಟ್ಟ ಚೀಲದಿಂದ ನಾಲ್ಕು ವಸ್ತುಗಳನ್ನು ತೆಗೆದ. ಅವು ಫಳ ಫಳ ಹೊಳೆಯುತ್ತಿದ್ದವು. ಹಳದಿ ಮಿಶ್ರಿತ ಬಣ್ಣ. ನಾಗನ ಕತ್ತಿಯ ಹಿಡಿತದ ಬಣ್ಣ. ವರ್ತುಲಾಕಾರದಲ್ಲಿದ್ದ

ಅದನ್ನು ಕಾಂತಾ ನಮ್ಮ ಹಾಗೂ ಸಾಕ್ಷಿಯ ಕೈಗೆ ಕೊಟ್ಟನು. ನಾವು ಅದನ್ನು ಬಲಗೈಗೆ ಹಾಕಿಕೊಂಡೆವು. ಸ್ವಲ್ಪ ಭಾರವಿತ್ತಾದರೂ ನಮಗೆ ತುಂಬಾ ಇಷ್ಟವಾಯಿತು. ನಾವು "ಏನಿದು?" ಎನ್ನುವಂತೆ ಅವನನ್ನೇ ನೋಡತೊಡಗಿದೆವು. ಅವನು, "ಇದು ನಮ್ಮ ಸಂಘಟನೆಯ ಹೊಸ ಸಂಕೇತ ಎಂದೇ ತಿಳಿಯಿರಿ. ನಮ್ಮ ಕಡೆಯವರು ಎಂದು ಗುರುತಿಸಲು ಇದು ಚಿಹ್ನೆ. ಇದಕ್ಕೆ ಹೆಸರು ಖಡ್ಗ ಎಂದು. ಯಾವ ಆಯುಧವಿಲ್ಲದಿದ್ದರೆ ಇದೇ ನಿಮ್ಮ ರಕ್ಷೆ. ಇದು ಹಿತ್ತಾಳೆಯ ಖಡ್ಗ. ನಾಗನ ಕತ್ತಿಯ ಹಿಡಿತ ಇದೆಯಲ್ಲ, ಅದೂ ಇದೇ ಲೋಹದಿಂದ ಮಾಡಿರುವುದು. ಈಗ ಲಾಂಛನಕ್ಕೊಂದು ಬದಲಾವಣೆ ಮಾಡೋಣ" ಎನ್ನುತ್ತಾ ಕಾಂತಾ ನಾವು ಬರೆದಿದ್ದ ಕಾಗದದ ಚೂರಿನ ಮೇಲೆ ಅದೇ ಮಸಿಯ ಕಡ್ಡಿಯಲ್ಲಿ ಏನೋ ಬರೆದು ನಮ್ಮ ಮುಂದಿಟ್ಟ. ನಮಗೆ ಅದನ್ನು ನೋಡಿ ಯೋಧರಾಗ ಬೇಕೆಂಬ ಸ್ಫೂರ್ತಿ ಉಂಟಾಯಿತು. ಅಷ್ಟಕ್ಕೂ ನಮ್ಮ ಲಾಂಛನದಲ್ಲೇನಿತ್ತು? ಗುರಾಣಿ ಮಧ್ಯದಲ್ಲಿ. ರಕ್ಷಣೆಯನ್ನು ಸೂಚಿಸುವಂಥದ್ದು. ಮೊದಲು ರಕ್ಷಣೆಗೆ ಆದ್ಯತೆ ಎಂಬುದನ್ನೂ ಸೂಚಿಸುವಂಥದ್ದು. ಅದರ ಹಿಂದೆ ಎಡದಿಂದ ಬಲಕ್ಕೆ, ಹಾಗೂ ಬಲದಿಂದ ಎಡಕ್ಕೆ ಕ್ರಮವಾಗಿ ಕತ್ತಿ ಹಾಗೂ ಉರುಮಿ. ಇದು ಶಕ್ತಿ ಹಾಗೂ ದಾಳಿಯ ಸಂಕೇತ. ಅವು ಒಂದಕ್ಕಿಂತ ಒಂದು ಅಪಾಯಕಾರಿ ಆಯುಧಗಳು. ಅದನ್ನು ಹೊಂದಿದವನೂ ಅಷ್ಟೇ ಶಕ್ತಿಶಾಲಿ. ನಡುವೆ ಬಿಲ್ಲು. ಹತ್ತಿರವಿಲ್ಲದೆಯೇ ದಾಳಿ ಮಾಡಬಲ್ಲ, ಪ್ರಾಣವನ್ನೇ ತೆಗೆಯಬಲ್ಲ ಮಹಾ ಧನು! ಕೆಳಗಿನಿಂದ ಮೇಲಕ್ಕೆ ಒಂದು ಬಾಣ. ಊರ್ಧ್ವಗಾಮಿ, ಆತ್ಮಜ್ಞಾನ ಜಿಜ್ಞಾಸುಗಳು ನಾವು ಎಂದು ತೋರುವುದದು. ಗುರಾಣಿಯ ಮೇಲ್ಭಾಗದಲ್ಲಿ ಎರಡು ಮರಗಳು. ನಮ್ಮ ತಾಯಿಯಾದ ಕಾಡನ್ನು ತೋರುವಂತೆ. ಅದರ ನಡುವೆ ಇರುವ ಬಾಣದ ಮುಖ, ಕಾಡಿನ ರಕ್ಷಣೆಯನ್ನು ಸೂಚಿಸಿದರೆ, ಮರಗಳು ಸಮ್ಮಿಲನವಾಗಿ, ತಾಯಿ ಅರಣ್ಯಾನಿಯ ಮುಖ ಹೊರಹೊಮ್ಮುವಂತಿತ್ತು! ಇಷ್ಟು ನಾವು ಮಾಡಿದರೆ, ಕಾಂತಾ ಗುರಾಣಿಯ ಮುಖದ ಮೇಲೆ, ಗಟ್ಟಿ ಮುಷ್ಟಿಯೊಂದು ಖಡ್ಗವನ್ನು ಹಿಡದಿರುವ ಚಿತ್ರವನ್ನು ಬರೆದಿದ್ದ. ಅದು ನಮ್ಮ ಸಮೂಹಬಲವನ್ನೂ, ಶಕ್ತಿಯನ್ನೂ, ಶೌರ್ಯವನ್ನೂ, ಸಂಘಟನೆಯನ್ನೂ, ಕೊನೆಗೆ ನಮ್ಮ ಕಲಾತ್ಮಕತೆಯನ್ನೂ ಸೂಚಿಸುತ್ತಿತ್ತು.

ಈ ಲಾಂಛನವು ನಮ್ಮ ಮೆದುಳು ಮನಗಳಲ್ಲಿ ಅಚ್ಚೊತ್ತಿತ್ತು. ಮನದ ಭಾವನೆಗಳ ಸ್ಫೂರ್ತಿಯಿಂದ, ಬುದ್ಧಿಯು ಯೋಚಿಸಿ ಚಿತ್ತದಲ್ಲಿ ಅರಳಿಸಿದ ಈ ಲಾಂಛನವು ನಮ್ಮ ಆತ್ಮದ ಒಂದು ಭಾಗವಾಯಿತು. ಇದನ್ನು ನಾವು ಆಚಾರ್ಯರಿಗೆ ಎಂದು ತೋರಿಸುವೆವೋ ಎಂದು ನಾವು ಪರಿತಪಿಸುತ್ತಿದ್ದೆವು. ಲಾಂಛನವೇನೋ ಮುಗಿದಿತ್ತು. ಈಗ ಸಂಘಟನೆಗೆ ಏನೆಂದು ಹೆಸರಿಡಬೇಕು




ಎಂದು ಯೋಚಿಸುವಾಗ, ಸಾಕ್ಷಿ, "ವೀರ" ಎಂದ. ನಾಗ, "ಭಾರತಿ" ಎಂದ. ನಾನು, "ರಕ್ಷಾ" ಎಂದೆ. ಬೋಕ, "ದೇವಿ" ಎಂದ. ಕಾಂತಾ ಯೋಚಿಸುತ್ತಿದ್ದ. "ವೀರ-ಭಾರತಿ-ರಕ್ಷಾ-ದೇವಿ, ಅಲ್ಲವೇ?" ಎಂದು ಕೇಳಿದ. ಸ್ವಲ್ಪ ಯೋಚಿಸಿ ಮುಖದಲ್ಲಿ ನಗುವನ್ನು ಅರಳಿಸಿದ. "ವೀರಳಾಗಿರುವ, ದಟ್ಟ ಕಾಡಿನ ಕಾರ್ಗತ್ತಲಲ್ಲಿ ಮೂಲೆ ಮೂಲೆಯಲ್ಲೂ ಓಡಾಡುವ, ಮಡಿಲಲ್ಲಿರುವವರನ್ನು ಪೊರೆದು, ಯಾರೂ ಬೆಳೆಯದೇ ತನ್ನ ಮಡಿಲಲ್ಲಿರುವ ಹಣ್ಣುಗಳನ್ನು ಕೊಟ್ಟು ರಕ್ಷಿಸುವ, ಗೆಜ್ಜೆ ಕಟ್ಟಿಕೊಂಡು ಕುಣಿದಾಡುವ, ನಾಶಮಾಡಲು ಬರುವವರಿಗೆ ಸಿಂಹಸ್ವಪ್ನವಾಗಿರುವ ಆ ಭಾರತಿಯ ಪ್ರತಿರೂಪ-ಅರಣ್ಯಾನಿ! ಇದೇ ನಮ್ಮ ಸಂಘಟನೆಯ ಹೆಸರಾಗಬಹುದಲ್ಲವೆ?" ಎಂದು ಉದ್ಘೋಷಿಸಿದ! ನಾವು ನಾಲ್ವರೂ ಹೇಳಿದ ನಾಲ್ಕು ಪದಗಳ ಅರ್ಥವನ್ನು ಸಮೀಕರಿಸಿ, ಅವೆಲ್ಲವೂ ಸೇರಿರುವ, ಒಂದು ಅದ್ಭುತ ಹೆಸರನ್ನಷ್ಟೇ ಕಾಂತಾ ನೀಡಿರಲಿಲ್ಲ. ನಮ್ಮ ಗುರಿಯೂ ಅರಣ್ಯಾನಿಯ ರಕ್ಷಣೆಯೇ! ಹೇಗಿದೆ ನೋಡಿ! ನಾವು ಅರಣ್ಯಾನಿಯ ದೇವಾಲಯದ ರಕ್ಷಣೆ ಮಾಡಲು ಪಣತೊಟ್ಟಿರುವವರು. ಅವಳೇ ಈ ಕಾರ್ಯಕ್ಕೆ ನಮಗೆ ಶಕ್ತಿ-ಧೈರ್ಯ-ಯುಕ್ತಿಗಳನ್ನು ಕೊಡಬೇಕು. ನಮ್ಮ ಸಂಘಟನೆಯ ಹೆಸರೂ ಅದೇ! ನಮ್ಮ ಗುರಿ, ದಾರಿ, ಕಾರ್ಯ, ಶಕ್ತಿ ಎಲ್ಲಕ್ಕೂ ಒಂದೇ ಹೆಸರು- ಅರಣ್ಯಾನಿ! ಅರಣ್ಯಾನಿ! ಅರಣ್ಯಾನಿ! ಕಾಂತಾ ಒಂದು ಸೂಕ್ತವನ್ನು ಪಠಿಸಲಾರಂಭಿಸಿದ:

ಅರಣ್ಯಾನ್ಯರಣ್ಯಾನ್ಯಸೌ ಯಾ ಪರೇವ ನಶ್ಯಸಿ ।
ಕಥಾಗ್ರಾಮಂ ನ ಪೃಚ್ಛಸಿ ನ ತ್ವಾ ಭೀರಿವ ವಿನ್ದತೀಂ ॥
ವೃಷಾರವಾಯ ವದತೇ ಯದುಪಾವತಿ ಚಿಚ್ಚಿಕಃ ।
ಆಘಾಟಿಭಿರಿವಧಾವಯನ್ನರಣ್ಯಾನಿರ್ಮಹೀಯತೇ ॥
ಉತ ಘಾವ ಇವಾದನ್ತ್ಯುತ ವೇಶ್ಮೇವ ದೃಶ್ಯತೇ ।
ಉತೋ ಅರಣ್ಯಾನಿಃಸಾಯಂ ಶಕಟೀರಿವ ಸರ್ಜತಿ ॥
ಘಾಮಙ್ಗೈಷ ಆಹ್ವಯತಿ ದಾರ್ವಙ್ಗೈಷೊ ಅಪಾವಧೀತ್ ।
ವಸನ್ನರಣ್ಯಾನ್ಯಾಂ ಸಾಯಮಕ್ರುಕ್ಷದಿತಿ ಮನ್ಯತೇ ॥
ನ ವಾ ಅರಣ್ಯಾನಿರ್ಹನ್ತ್ಯನ್ಯಶ್ಚೇನ ನಾಭಿಗಛತಿ ।
ಸವಾದೋಃಫಲಸ್ಯ ಜಗ್ಧ್ವಾಯ ಯಥಾಕಾಮಂ ನಿ ಪದ್ಯತೇ ॥
ಆಙ್ಜನಗನ್ಧಿಂ ಸುರಭಿಂ ಬಹ್ವನ್ನಾಮಕೃಷೀವಲಾಮ್ ।
ಪ್ರಾಹಮ್ಮೃಗ್ರಣಾಂ ಮಾತರಮರಣ್ಯಾನಿಮಶಂಸಿಷಮ್ ॥

ಅವನು ಅದನ್ನು ಮತ್ತೆ ಮತ್ತೆ ಹೇಳಿದ. ನಾವೂ ಅವನೊಂದಿಗೆ ಕೂಡಿಕೊಂಡೆವು. ಒಂದೇ ದನಿಯಲ್ಲಿ ನಾವು ಅರಣ್ಯಾನಿ ಸೂಕ್ತವನ್ನು ಗಂಭೀರವಾಗಿ ಪಠಿಸ ತೊಡಗಿದೆವು. ಈ ಅರಣ್ಯ ಎನ್ನುವುದೇ ಒಂದು ಜೀವಂತ ಪ್ರಜ್ಞೆ, ಅದರ ಮಡಿಲಲ್ಲಿರುವ ಎಲ್ಲರಿಗೂ ಜ್ಞಾನವನ್ನು ಕರುಣಿಸುವ ಪ್ರಜ್ಞಾ–ಆ ತಾಯಿ ಅರಣ್ಯಾನಿ!

ಅರಣ್ಯಾನಿ, ಓ ಅರಣ್ಯಾನಿ, ಯಾರ ಕಣ್ಣಿಗೂ
ಕಾಣದಂತೆ ಅಲೆದಾಡುವವಳೆ!
ನಾವೆಲ್ಲರೂ ವಾಸವಾಗಿರುವ ಊರನ್ನು ಬಿಟ್ಟು
ದಟ್ಟ ಕಾಡಿನಲ್ಲಿರುವೆ, ಆ ಕತ್ತಲ ಭಯ ನಿನಗಿಲ್ಲವೆ?
ವೃಷಾರವದ ಘರ್ಜನೆಯು ಕೇಳಿದಂತೆ ಚಿಚ್ಚಿಕ
ಪಕ್ಷಿಯು ಚಿಲಿಪಿಲಿಗುಟ್ಟುವಾಗ
ಘಲ ಘಲ ಸದ್ದು ಮಾಡುವ ಗೆಜ್ಜೆ ಕಟ್ಟಿದ ಅರಣ್ಯದ
ದೇವತೆಯು ಓಡಾಡುತ್ತಾಳೆ!
ಆಶ್ರಯದಂತೆ ಕಾಣುವ ಮರಗಳಡಿಯಲ್ಲಿ
ಹುಲ್ಲು ಮೇಯುತ್ತಿರುವ ಗೋವಿನಂತಹ ಪ್ರಾಣಿಗಳು;
ಸಂಧ್ಯಾಕಾಲದಲ್ಲಿ, ಓಡುತ್ತಿರುವ ಬಂಡಿಯ ಶಬ್ದವನ್ನು
ಹೋಲುವಂತಹ ಶಬ್ದಗಳು ಕಾಡಿನಲ್ಲಿ!
ಇಲ್ಲಿ ಒಬ್ಬನು ತನ್ನ ಹಸುಗಳನ್ನು ಕರೆಯುತ್ತಿದ್ದಾನೆ,
ಇನ್ನೊಬ್ಬನು ಒಂದು ಮರವನ್ನು ಕಡಿದಿಟ್ಟಿದ್ದಾನೆ;
ಕಾಡಿನಂಚಿನಲ್ಲಿ ವಾಸಿಸುವವನಿಗೆ ಅರಣ್ಯಾನಿಯ ಕೂಗು ಕೇಳಿತಂತೆ!

ಹಗೆಯುಳ್ಳ ಶತ್ರುವಲ್ಲದವರನ್ನು ಅರಣ್ಯನಿ ಏನೂ ಮಾಡಳು!
ಕಾಡಿನ ಆ ಮಕ್ಕಳು ಅವಳ ಮಡಿಲ ಹಣ್ಣ ಸವಿಯುತ್ತಾರೆ!
ಸುಗಂಧಭರಿತಳಾದ, ವಿವಿಧ ಫಲಗಳನ್ನು ನೀಡುವ,
ಮೃಗಗಳ ಮಾತೆಯಾದ ಅರಣ್ಯನಿಗೆ ನಾನು ನಮಿಸುವೆ!



"ಜೀವಸತ್ವವೇ ಅರಣ್ಯಾನಿ, ಅವಳ ಮಕ್ಕಳಾಗಬೇಕೆಂದರೆ ತುಂಬಾ ಶೌರ್ಯ ಬೇಕು! ಧೈರ್ಯ ಬೇಕು! ಎಲ್ಲಕ್ಕಿಂತಲೂ ಅವಳೇ ನಮ್ಮನ್ನು ಒಪ್ಪಿಕೊಳ್ಳಬೇಕು!" ಎನ್ನುತ್ತಾ ಕಾಂತಾ ಅರಣ್ಯಾನಿ ಬೆಟ್ಟದ ಕಡೆಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿದ. ಅವನ ಕಣ್ಣು ಒದ್ದೆಯಾಗಿತ್ತು. ಅವನ ಮೈಮನಸ್ಸುಗಳು ಕಷ್ಟಗಳು, ಗೊಂದಲಗಳು, ಸಮಸ್ಯೆಗಳಿಗೆ ಒಳಗಾಗಿ ಒಗ್ಗಿಹೋಗಿ ಒರಟಾಗಿಬಿಟ್ಟಿತ್ತು. ಆದರೆ ಅದು ಅವನಲ್ಲಿನ ಜ್ಞಾನವನ್ನೂ ಬೆಳೆಸಿತ್ತು. ಅನುಭವ ಸಾರವೇ ಅವನನ್ನು ಪಕ್ವವಾಗಿಸಿತ್ತು. ಒರಟು ಮುಖ, ಮೃದು ಮನ. ಆದರೆ ಬೇಗ ಕರಗದು. ಮತ್ತೆ ನಮ್ಮ ವೀರ ಕಾಂತಾ ನಮ್ಮ ಕಡೆ ನೋಡಿ, "ಮೂರು ದಿನಗಳ ಕಾಲ ನೀವು ನನ್ನನ್ನು ಭೇಟಿ ಆಗುವುದು ಬೇಡ. ಅಷ್ಟರಲ್ಲಿ ಆದಷ್ಟು ಪ್ರಾಣಿಗಳನ್ನು ಗಮನಿಸಿ. ಯಾವುದು ನಮ್ಮ ರಹಸ್ಯ ಸಂವಹನಕ್ಕೆ ಅನುಕೂಲಕರ ಎಂದು ಗಮನಿಸಿ. ಕಾಡಿನ ಯಾವ ಯಾವ ಭಾಗವು ನಮಗೆ ಪ್ರತಿಕೂಲಕರವಾಗಿದೆಯೋ ಅದನ್ನೂ ಗಮನಿಸಿ. ಎಲ್ಲಕ್ಕಿಂತ ಮುಖ್ಯವಾಗಿ, ಆಚಾರ್ಯರಿಗೆ ನನ್ನ ನಮಸ್ಕಾರ ತಿಳಿಸಿ, ನಮ್ಮ ಅರಣ್ಯಾನಿ ಸಂಘಟನೆಯ ಕುರಿತು ಸಮಾಲೋಚಿಸಿ. ಅವರೂ ನಮ್ಮೊಂದಿಗಿರುತ್ತಾರೆ. ನಮ್ಮ ಗುರಿ, ದಾರಿ, ಕಾರ್ಯ, ಶಕ್ತಿ, ಎಲ್ಲವೂ ಅವಳೇ! ತಾಯಿ ಅರಣ್ಯಾನಿ! ಸ್ವಾತಂತ್ರ್ಯ ಲಕ್ಷ್ಮಿಗೆ!" ಎಂದನು. ನಾವು "ಜೈ!" ಎಂದೆವು. ಕಾಳನನ್ನು ಬೀಳ್ಕೊಟ್ಟು ನಾವು ನಮ್ಮ ಗುಡಿಸಲ ಕಡೆ ನಡೆಯತೊಡಗಿದೆವು. ನಡೆಯುವಾಗ ನಾವೆಲ್ಲರೂ ಮೌನದಲ್ಲೇ ಮುಳುಗಿದ್ದೆವು. ಕೇವಲ ಕಾಡಿನ ಹಕ್ಕಿಗಳ ಚಲಿಪಿಲಿ, ಅಲ್ಲಿ ಇಲ್ಲಿ ಅಡಗಿದ್ದ ಹುಳುಗಳು ಮಾಡುತ್ತಿದ್ದ ಸದ್ದು, ಇವೇ ಕೇಳಿಸುತ್ತಿತ್ತು. ಅಷ್ಟಕ್ಕೂ ನಮಗೆ ಬೇಕಾದದ್ದೂ ಅದೆ. ಆದರೆ ಸಾಕ್ಷಿ ಆಗಾಗ್ಗೆ "ಸತತ ಜಾಗೃತಿ" ಎಂದು ನೆನಪಿಸುತ್ತಲೇ ಇದ್ದ. ನಮ್ಮ ಕೈಯಲ್ಲಿ ಖಡ್ಗ ಸೂರ್ಯನ ಬೆಳಕಿಗೆ ಹೊಳೆಯುತ್ತಿತ್ತು.

9

ಅರಣ್ಯಾನಿ

ಮೂವರೂ ಅರಣ್ಯವನ್ನು ಹಾಯುವುದಕ್ಕಿಂತಲೂ ಅರಣ್ಯವನ್ನು ಕಾಪಾಡುವ ಬಗ್ಗೆ ಗಮನವನ್ನಿಟ್ಟಿದ್ದೆವು. ಎಲ್ಲೆಲ್ಲಿ ಏನೇನಿದೆ ಎಂದು ನಮ್ಮ ಕಣ್ಣುಗಳು ಹುಡುಕುತ್ತಿದ್ದರೆ, ಕಿವಿಗಳು ವಿವಿಧ ಶಬ್ದಗಳನ್ನು ಕೇಳಿಸಿಕೊಳ್ಳುತ್ತಿತ್ತು.

ಆಚಾರ್ಯರಿಗೆ ನಾವು ನಮ್ಮ ಲಾಂಛನ ಸಂಘಟನೆ ಇತ್ಯಾದಿಗಳನ್ನು ತೋರುವುದೆಂದಿಗೋ ಎಂದು ನಾವು ಕಾತರದಿಂದ ಓಡತೊಡಗಿದೆವು. ಬೆಟ್ಟವನ್ನು ಸಮೀಪಿಸುತ್ತಿದ್ದಂತೆ, ನಮಗೆ ಅರಣ್ಯಾನಿ ಬೆಟ್ಟದ ಬಳಿ ಕೇಳಿಸಿದ್ದ ಲಯಭರಿತ ನಾದ ಕೇಳತೊಡಗಿತು. ಅಂದೇ ಈ ರೀತಿಯಲ್ಲಿ ಆಚಾರ್ಯರು ಒಂದು ಮರದ ತುಂಡಿನ ಮೇಲೆ ಅಭ್ಯಸಿಸುತ್ತಿದ್ದುದನ್ನು ನಾವು ನೋಡಿದ್ದೆವು. ಆದರೆ ಈ ಬಾರಿ ಆ ನಾದವು ಅರಣ್ಯಾನಿ ಬೆಟ್ಟದ ಬಳಿ ಅವರು ಬಾರಿಸುತ್ತಿದ್ದಂತೆಯೇ ಇತ್ತು ಈ ನಾದ. ಕುತೂಹಲದಲ್ಲಿ ಬೆಟ್ಟವನ್ನು ಹತ್ತಿ, ಅಲ್ಲೇ ನಿಂತಿದ್ದ ಆಂಜನೇಯನಿಗೆ ನಮಿಸಿ, ನಾವು ಗುಡಿಸಲನ್ನು ಹೊಕ್ಕಿದೆವು. ಆಚಾರ್ಯರು ಟೊಳ್ಳಾಗಿದ್ದ ಒಂದು ವಸ್ತುವನ್ನು ತಮ್ಮ ಸೊಂಟಕ್ಕೆ ಕಟ್ಟಿಕೊಂಡಿದ್ದರು. ಅದರ ಮೇಲೆ ಬಟ್ಟೆ ಅಥವಾ ಚರ್ಮವನ್ನು ಎಳೆದು ಕಟ್ಟಿದಂತೆ ಕಂಡಿತು. ಆಚಾರ್ಯರು ಅದರ ಮೇಲೆ ಎರಡು ದಪ್ಪಗಿದ್ದ ಕೋಲುಗಳಿಂದ ಹೊಡೆಯುತ್ತಿದ್ದರು. ಅವರ ಕಣ್ಣು ಮುಚ್ಚಿತ್ತು. ಆ ನಾದದ ವಿನ್ಯಾಸವನ್ನು ನೆನಪಿಟ್ಟುಕೊಳ್ಳುವುದೇ ಒಂದು ದೊಡ್ಡ ಕೆಲಸ. ಆಚಾರ್ಯರು ಸರಾಗವಾಗಿ ಅದನ್ನು ಬಾರಿಸುತ್ತಿರುವಾಗ ನಮಗೆ ಎಲ್ಲೋ ದೂರದಲ್ಲಿ ಮತ್ತೆ ಇದರದ್ದೇ ಸದ್ದು ಕೇಳಿದಂತಾಯಿತು. ಇದು ಆಚಾರ್ಯರು ಬಾರಿಸುತ್ತಿರುವುದರ ಪ್ರತಿಧ್ವನಿ ಇರಬೇಕು ಎಂದು ನಾವು ಭ್ರಮಿಸಿದ್ದೆವು. ಆದರೆ

ಅದು ಕೇಳಿದ ತಕ್ಷಣವೇ ಆಚಾರ್ಯರು ಬಾರಿಸುವುದನ್ನು ನಿಲ್ಲಿಸಿದರು. ಅವರು ಮುಖ ಅರಳಿತು. ವಿನ್ಯಾಸವನ್ನು ಬದಲಿಸಿ ಇನ್ನೂ ಜೋರಾಗಿ ಬಾರಿಸಿದರು. ಆ ಇನ್ನೊಂದು ದನಿಯೂ ಬೇರೊಂದು ವಿನ್ಯಾಸದಲ್ಲಿ ಮೊಳಗಿತು. ನಂತರ ಆಚಾರ್ಯರು ಅದೇ ಮಂದಹಾಸದಲ್ಲಿ ಆ ವಸ್ತುವಿನ ಮೇಲೆ ಮೂರು ಬಾರಿ ಬಾರಿಸಿ ಸುಮ್ಮನಾದರು. ಇನ್ನೊಂದು ದನಿಯೂ ನಿಂತಿತು. ಏನೂ ಅರ್ಥವಾಗದೆ ನಾವು ನಿಂತು ನೋಡುತ್ತಿದ್ದೆವು. ಆಚಾರ್ಯರು ಮೊದಲು "ನಮೋ ಭಾರತೀ" ಎಂದು ಕೈ ಮುಗಿದು, ಹನುಮಂತನ ಮೂರ್ತಿಯ ಕಡೆಗೆ ಹೋದರು. ಅದಕ್ಕೆ ನಮಸ್ಕರಿಸಿ, ನಮ್ಮ ಕಡೆಗೆ ಬಂದರು. "ನನ್ನ ಪ್ರೀತಿಯ ವೀರರೇ!" ಎನ್ನುತ್ತಾ ಸಾಕ್ಷಿಯನ್ನೂ ಸೇರಿಸಿ ಎಲ್ಲರನ್ನೂ ಅಪ್ಪಿಕೊಂಡರು. ನಾವು, "ನೀವು ಇಷ್ಟು ಹೊತ್ತು ಏನು ಮಾಡಿದ್ದು ಆಚಾರ್ಯರೇ?" ಎಂದು ಕೇಳಲು, ಅವರು, "ಸಂವಹನ" ಎಂದರು. ನಮಗೆ ಆಶ್ಚರ್ಯಕ್ಕಿಂತಲೂ ನಗು ಉಕ್ಕಿತು. ಇದೆಂತಹ ಸಂವಹನ? ಪದಗಳು, ಭಾಷೆಯಿಲ್ಲದ ಸಂವಹನ? ಕೇವಲ ಶಬ್ದಗಳಲ್ಲಿ? ಹೀಗೆ ಯೋಚಿಸಿ ದಾಗ ನಮಗೆ ಇದರ ಒಳ ಅರ್ಥದ ಅರಿವಾಯಿತು. ಶಬ್ದಗಳೇ ಸರಿ. ಆದರೆ ಒಂದು ಮಾದರಿ ಇದೆ. ಒಂದೊಂದು ಮಾದರಿ ಒಂದೊಂದು ಸಂದೇಶವನ್ನು ನೀಡುವಂತೆ ಇರಬಹುದಲ್ಲವೇ! ಒಂದೊಂದೇ ವಿನ್ಯಾಸ ಇಬ್ಬರಿಗೂ ಕೇಳಿಸಿದಾಗ ಅವರಿಗೆ ಅದರಲ್ಲಿ ಅಡಗಿರುವ ಎಚ್ಚರಿಕೆ, ಅಥವಾ ವಿಜಯದ ಸಂದೇಶ ಅರ್ಥವಾಗುತ್ತದೆ. ಆಚಾರ್ಯರು ಏನೂ ಉತ್ತರಿಸದೆ ಕೈಕಟ್ಟಿ ನಿಂತು ನಮ್ಮನ್ನು ನೋಡುತ್ತಿದ್ದರು. ನಮಗೆ ಅರ್ಥವಾಯಿತೆಂದು ಅವರಿಗೂ ಅರ್ಥವಾಯಿತು. ಆದರೆ ಒಂದು ಅತ್ಯವಶ್ಯಕ ಪ್ರಶ್ನೆ ಹಾಗೆಯೇ ಉಳಿದಿತ್ತು. "ಅತ್ತ ಕಡೆಯಿಂದ ಉಂಟಾಗುತ್ತಿದ್ದ ನಾದ ಯಾರು ಮಾಡಿದ್ದು ಆಚಾರ್ಯರೇ?" ಎಂದು ನಾಗನು ಕೇಳಿದ. ಆಚಾರ್ಯರು ಕೆಳಗೆ ಹಾಸಿದ್ದ ಬಟ್ಟೆಯ ಮೇಲೆ ಕುಳಿತು, "ಅರಣ್ಯಾನಿ ಬೆಟ್ಟ" ಎಂದು ಉಸುರಿದರು. ನಮಗೆ ಒಂದು ಕಡೆ ಆಚಾರ್ಯರ ಬುದ್ಧಿಶಕ್ತಿಯನ್ನು ನೋಡಿ ವಿಸ್ಮಯವಾದರೆ, ಇನ್ನೊಂದು ಕಡೆ ನಮ್ಮ ಕಾರ್ಯಕ್ಕೆ ಬೆನ್ನುಲುಬೇ ಸಿಕ್ಕಿದಂತಾಯಿತು. ಎಷ್ಟಾದರೂ ಈ ಕ್ರಾಂತಿಕಾಯದ ಹೃದಯವೇ ಆಚಾರ್ಯರು ಅಲ್ಲವೇ? ಇದೇ ಸರಿಯಾದ ಸಮಯವೆಂದರಿತು ಸಾಕ್ಷಿ, ಮಡಚಿಟ್ಟಿದ್ದ ಕಾಗದವನ್ನು ತೆಗೆದು, ಮಸಿಯಿಂದ ಉದುರಿದ್ದ ಧೂಳನ್ನು "ಉಫ್" ಎಂದು ಊದಿ, ಆಚಾರ್ಯರಿಗೆ ಅದನ್ನು ಕೊಟ್ಟ. ಆಚಾರ್ಯರು ಅದನ್ನು ಕೈಯಲ್ಲಿಟ್ಟು ಕೊಂಡು, ನೋಡತೊಡಗಿದರು. ಅವರು ಮೆಚ್ಚುಗೆಯನ್ನು ಸೂಚಿಸುತ್ತಿದ್ದರು. ಅವರ ಕಣ್ಣಲ್ಲಿ ಸಣ್ಣದೊಂದು ಹನಿ ಜಾರಿತು. "ಬ್ರಿಟೀಷರು ಕಲರಿಯನ್ನು ಮಾಡಬಾರದೆಂದು ನಿಷೇಧ ಹೇರಿದ್ದಾರೆ. ಆದರೆ ನಿಮ್ಮಂತಹ ಹುಡುಗರಿಗೆ ನಾನು ಅದನ್ನು ರಹಸ್ಯವಾಗಿ ಕಾಡುಗಳಲ್ಲಿ ಹೇಳಿಕೊಟ್ಟು ತಿರುಗಾಡುತ್ತಿದ್ದೇನೆ.

ದೇಶದ ಮೇಲೆ ನೀವಿಟ್ಟಿರುವ ಅಭಿಮಾನ, ಕಲರಿಪಯಟ್ಟಿನ ಮೇಲಿನ ಶ್ರದ್ಧೆಯೇ ನಮಗೆ ಸ್ವಾತಂತ್ರ್ಯ ನೀಡಿ, ಆತ್ಮಜ್ಞಾನವನ್ನು ನೀಡುತ್ತದೆ! ಎಂತಹ ಸೃಜನಶೀಲತೆ ಇದು! ಎಲ್ಲಕ್ಕಿಂತ ಮೇಲೆ ಅರಣ್ಯಾನಿ ಹಾಗೂ ಕಾಡು ಎಂದು ಸೂಚಿಸುವ ಈ ಚಿತ್ರ! ಅದ್ಭುತ! ಅದ್ಭುತ!" ಎಂದು ಆಚಾರ್ಯರು ಉದ್ಗರಿಸಿದರು. ನಮಗೆ ಖುಷಿಯಾಯಿತು. ಅವರ ಚರಣಗಳಿಗೆ ನಾವು ಸಾಷ್ಟಾಂಗ ನಮಸ್ಕಾರಗಳನ್ನು ಮಾಡಿ ಎದ್ದೆವು. "ಅರಣ್ಯಾನಿ", ಮೂವರೂ ಒಟ್ಟಿಗೆ ಹೇಳಿದೆವು. ಆಚಾರ್ಯರು ತಮ್ಮ ಕಣ್ಣೀರನ್ನು ಒರೆಸಿಕೊಂಡು ಎದ್ದು ನಿಂತರು. "ಸರಿಯಾದ ಸಮಯ. ಸೂಕ್ತವಾದ ಹೆಸರು. ನೀವು ಕಾಡಿನ ಸುಪುತ್ರರಾಗಲು ಹೊರಟಿದ್ದೀರಿ. ಈಗ ಒಂದು ಕಾರ್ಯತಂತ್ರ ರೂಪಿಸಿಕೊಳ್ಳಿ" ಎಂದು ಕೆಳಗೆ ಕುಳಿತರು. ನಾವು ಅವರ ಪಕ್ಕದಲ್ಲಿ ಕುಳಿತೆವು. ಮೊದಲು ಆಚಾರ್ಯರು ಸಾಕ್ಷಿಯ ಕಡೆಗೆ ತಿರುಗಿ, "ಸಾಕ್ಷಿ ಸಿದ್ಧನಾಗು. ಮೊದಲು ನೀನು ಶತ್ರು ಪಾಳೆಯಕ್ಕೆ ಹೋಗಿ ಅಲ್ಲಿ ಆಶ್ರಯ ಪಡಿ. ಎಲ್ಲಿಂದ ಯಾವ ಸಮಯದಲ್ಲಿ ಬಲವರ್ಧನೆಗೆಂದು ಬ್ರಿಟೀಷಿನ ಸೈನಿಕರು ಎಲ್ಲಿಂದ ಹೆಚ್ಚು ಜನರನ್ನು ಕರೆತರುತ್ತಾರೆ, ಎಲ್ಲೆಲ್ಲಿ ಅವರಿಗೆ ವಸತಿ, ಅವರ ಬಳಿ ಇರುವ ಆಯುಧಗಳು, ಅವರು ಮಾಡುತ್ತಿರುವ ಯೋಜನೆಯ ರೂಪುರೇಷೆ ಇತ್ಯಾದಿಗಳನ್ನು ನೀನು ಹೆಕ್ಕಿಕೊಂಡು ಬಾ. ನಿನಗೆ ಸಿಕ್ಕದ ಇನ್ನೂ ಗುಪ್ತವಾದ ಮಾಹಿತಿಯನ್ನು ಕಾಂತಾ ನೀಡುತ್ತಾನೆ. ಅವನೊಂದಿಗೆ ಸಂಪರ್ಕ ಇಟ್ಟುಕೋ. ಮೊದಲು ನೀನು ವೇಷ ಬದಲಾಯಿಸು. ನಿನ್ನ ಕೂದಲು, ಮೀಸೆ ಗಡ್ಡಗಳನ್ನು ಬೇರೆ ರೀತಿಯಲ್ಲಿ ಕತ್ತರಿಸಿಕೋ" ಎಂದು ಸಾಕ್ಷಿಗೆ ಆಜ್ಞೆಯನ್ನು ನೀಡಿದರು. ಸಾಕ್ಷಿ ಹೌದು ಎಂದು ತಲೆ ಅಲ್ಲಾಡಿಸಿದ. ನಂತರ ಆಚಾರ್ಯರು ನಮ್ಮ ಕಡೆಗೆ ತಿರುಗಿದರು. "ಈಗ. ನಿಮ್ಮ ಯೋಜನೆ ಏನು? ಏನು ನಿಶ್ಚಯಿಸಿದ್ದೀರಿ?" ಎಂದು ಕೇಳಿದರು. ನಮ್ಮನ್ನು ಶಿಷ್ಯರಂತೆ ನೋಡದೆ, ಹೋರಾಟದ ಒಡನಾಡಿಗಳಂತೆ ಮಾತನಾಡಿಸ ತೊಡಗಿದರು. ಹಾಗೆ ಮಾತನಾಡಿಸಿದಾಗ, ನಮಗೆ ಆತ್ಮವಿಶ್ವಾಸ ಉಕ್ಕಿ ಹರಿಯಿತು. ನಾನು, "ಆಚಾರ್ಯರೆ, ಮೊದಲು ಶತ್ರುವಿನ ಕಡೆ ಯಾರು ಈ ದಾಳಿಯ ಮುಂದಾಳತ್ವವನ್ನು ವಹಿಸಿದ್ದಾರೆ ಎಂದು ನೋಡಬೇಕು. ಅದಕ್ಕೆ ತಕ್ಕಂತೆ ನಮ್ಮ ಪ್ರತಿದಾಳಿಯನ್ನೂ, ಅಲ್ಲಿ ಮೇಲಿರುವ ದೇವಾಲಯಗಳನ್ನು ಕಾಪಾಡುವ ಬಗೆಯನ್ನು ರೂಪಿಸಬಹುದು." ಎಂದೆ. ಆಚಾರ್ಯರು ಯೋಚಿಸುತ್ತಿದ್ದರು. "ಸದ್ಯಕ್ಕೆ ಭಾರತದಲ್ಲಿಯೂ ಹೋರಾಟಗಳು ತೀವ್ರವಾಗಿ ನಡೆಯುತ್ತಿವೆಯಂತೆ. ಗಾಂಧಿ ಎನ್ನುವ ಒಬ್ಬ ಮಹಾತ್ಮ ಹೊಸ ಬಗೆಯಲ್ಲಿ ಆಂದೋಲನವನ್ನು ಮಾಡುತ್ತಿದ್ದಾರಂತೆ. ಹಾಗಾಗಿ ಅಲ್ಲಿಯೂ ಬ್ರಿಟೀಷ್ ಸೈನಿಕರನ್ನು ಅನಿವಾರ್ಯ ವಾಗಿ ನೇಮಿಸಬೇಕು." ಎಂದು ಹೇಳಿದರು. ನಾಗನು, "ಆಚಾರ್ಯರೇ, ಇದೂ ಬಹಳ ದಿನಗಳಿಂದ ಅವರು ಹೂಡುತ್ತಿರುವ ಸಂಚು

ಅಲ್ಲವೇ? ಹಾಗಾಗಿ ಇಲ್ಲಿಗೆಂದೇ ಒಂದಷ್ಟು ಜನರನ್ನು ಇಟ್ಟಿರಬಹುದು. ಅದೇ ಅಲ್ಲದೆ, ಅವರು ಈಗಾಗಲೇ ತಮ್ಮ ದೇಶಕ್ಕೆ ಹಿಂತಿರುಗುವ ಯೋಜನೆಯನ್ನು ಮಾಡಿ ಆಗಿದೆ ಎನ್ನಿಸುತ್ತೆ. ಇಲ್ಲವಾದರೇ, ಅಲ್ಲಿ ಇಟ್ಟುಕೊಳ್ಳಲು ಮೂರ್ತಿಗಳನ್ನು ಇಷ್ಟು ತುರ್ತಾಗಿ ಕಳ್ಳತನ ಮಾಡುವ, ದೋಚಿಕೊಂಡು ಹೋಗುವ ಅವಶ್ಯಕತೆ ಏನಿತ್ತು?" ಎಂದನು. ಬಹು ತಾರ್ಕಿಕವಾಗಿದ್ದ ಅವನ ಉತ್ತರವನ್ನು ಎಲ್ಲರೂ ಮೆಚ್ಚಿದೆವು. ಈಗ ಬೋಕನ ಸರದಿ. "ಆಚಾರ್ಯರೆ, ಮೂರ್ತಿಗಳನ್ನು ಕೊಂಡೊಯ್ಯಲು ಬರಿಯ ಸೈನಿಕರು ಬರುವುದಿಲ್ಲ ಎಂದು ಅನಿಸಿಕೆ. ಅದರ ಬಗ್ಗೆ ತಿಳಿದಿರುವ ಒಬ್ಬನನ್ನು ಅವರು ಖಂಡಿತ ಕರೆದುಕೊಂಡು ಬಂದಿರುತ್ತಾರೆ. ಅಷ್ಟೇ ಅಲ್ಲದೆ, ಮೂರ್ತಿಗಳನ್ನು ಅಲ್ಲಿಂದ ತೆಗೆಯಲು, ಅದರ ಅಂದ ಹಾಳಾಗದಂತೆ ನೋಡಿಕೊಳ್ಳಲು ಅದೇ ಕೆಲಸದಲ್ಲಿರುವ ಇಬ್ಬರನ್ನಾದರೂ ಕರೆದುಕೊಂಡು ಬರುತ್ತಾರೆ. ಹಾಗೂ ಮೂರ್ತಿಗಳೇನು ಕೊಂಚ ಭಾರ ಇರುವುದಿಲ್ಲ ಅಲ್ಲವೇ? ಮೂರ್ತಿ ಚಿಕ್ಕದೇ ಆದರೂ, ಅದರ ಭಾರ ತುಂಬಾ ಜಾಸ್ತಿ. ಹಾಗಾಗಿ ಈ ಕಾಡಿನ ಜಟಿಲ ದಾರಿಗಳಲ್ಲಿ ಅದನ್ನು ಸಾಗಿಸಲು ಎತ್ತುಗಳನ್ನು ಕಟ್ಟಿದ ಬಂಡಿ, ಅಥವಾ ಆನೆಗಳನ್ನೋ ಅವರು ತಂದೇ ತರುತ್ತಾರೆ." ಎಂದು ಬೋಕ ಇನ್ನೂ ತಾರ್ಕಿಕವಾಗಿ ಹೇಳಿದನು. ಅವನನ್ನು ಮೆಚ್ಚಲೇಬೇಕಿತ್ತು. ಆದರೆ ಸಮಾಲೋಚನೆಯ ಸಮಯ ಅಲ್ಲವೆ, ಸಾಕ್ಷಿ ಒಂದು ಸಂಭವವನ್ನು ಮುಂದಿಟ್ಟ. "ಅಕಸ್ಮಾತಾಗಿ ನಾವು ಅವರನ್ನು ಮೂರ್ತಿ ಕಳ್ಳತನದಲ್ಲಿ ತಡೆಯಲು ವಿಫಲರಾದ ಪಕ್ಷದಲ್ಲಿ ನಾವು ಅವರು ಮೂರ್ತಿಗಳನ್ನು ಸಾಗಿಸುವ ದಾರಿಯನ್ನು ನಾವು ಕಂಡು ಹಿಡಿದುಕೊಳ್ಳಬೇಕು. ಅವರು ಸಾಗುವಾಗ, ಅವರ ಮೇಲೆ ಗೆರಿಲ್ಲಾ ದಾಳಿ ಮಾಡಿ ಮೂರ್ತಿಗಳನ್ನು ಹಿಂಪಡೆದು ಪುನಃ ಪ್ರತಿಷ್ಠಾಪಿಸಬೇಕು." ಆಚಾರ್ಯರು ತಲೆ ಅಲ್ಲಾಡಿಸುತ್ತಿದ್ದರು. "ಹೌದು. ವಿಜಯ, ಪರಾಜಯ ಎರಡರ ಸಂದರ್ಭಕ್ಕೂ ನಾವು ಅಣಿಯಾಗಿರಬೇಕು. ಯಾವುದು ಬಂದರು ಎದರಿಸುವುದೇನೋ ಸರಿ. ಆದರೆ ಅಂತಿಮವಾಗಿ ನಾವು ಮಾಡಬೇಕಾದ್ದೇನು? ಯಾವುದೇ ಕಾರಣಕ್ಕೂ, ನಮ್ಮ ದೇವರ ಮೂರ್ತಿಗಳನ್ನು ನಾವು ಈ ಕಾಡನ್ನು ದಾಟಲು ಬಿಡಬಾರದು. ಅಷ್ಟೇ ಅಲ್ಲ. ಅದನ್ನು ತಂದು ಪ್ರತಿಷ್ಠಾಪಿಸಬೇಕು. ಇವೆಲ್ಲವೂ ದ್ವಿತೀಯ ಆದ್ಯತೆ. ಮೊದಲನೆ ಆದ್ಯತೆ ಮೂರ್ತಿಗಳನ್ನು ದೇವಾಲಯದ ದಿವ್ಯ ಗರ್ಭಗೃಹದಲ್ಲೇ ಇರಿಸುವುದು. ಇದಕ್ಕೆ ಅರಣ್ಯಾನಿ ಬೆಟ್ಟದ ಆ ವೀರರೂ ನಮ್ಮೊಂದಿಗೆ ಕೈ ಜೋಡಿಸಬೇಕು. ನಾವು ವಿಶ್ವಾಸಕ್ಕೆ ಅರ್ಹರೆಂದು ಅವರಿಗೆ ತಿಳಿಯಬೇಕು." ಎಂದು ಆಚಾರ್ಯರು ಹೇಳಿದ ತಕ್ಷಣ ನನಗೆ ಆ ಮುದುಕನ ನೆನಪಾಯಿತು. "ಆಚಾರ್ಯರೇ, ಆ ಬೆಟ್ಟದ ದಾರಿ ತಿಳಿದಿರುವ ಆ ಮುದುಕ" ಎಂದು ನೆನಪಿಸಿದೆ. ಆಚಾರ್ಯರು, "ಹೌದು. ಅವರೂ ನಮಗೆ ಸಹಾಯ

ಹಸ್ತವನ್ನು ಚಾಚಬಹುದು. ಆದರೆ ಅವರು ಯಾರನ್ನೂ ನಂಬುವ ಸ್ಥಿತಿಯಲ್ಲಿಲ್ಲ. ಅವರನ್ನು ನಂಬಿಸುವುದು ಹೇಗೆ. ನಮ್ಮ ಗುರಿಯ ವಿಶ್ವಾಸಾರ್ಹತೆಯನ್ನು ಅವರಿಗೆ ನಿರೂಪಿಸುವುದು ಹೇಗೆ?" ಎಂದು ಆಚಾರ್ಯರು ದುಃಖಿಸಿದರು. ನನಗೆ ಏನೋ ಹೊಳೆದಂತೆ, "ಆಚಾರ್ಯರೆ, ಅರಣ್ಯಾನಿ ಸೂಕ್ತ!" ಎಂದು ಉದ್ಗರಿಸಿದೆ. ನಾಗ ಬೋಕರು ನನ್ನ ಕಡೆ ತಿರುಗಿ, "ಹೌದು! ಇದು ಸರಿ. ಅವರನ್ನು ಮಾತನಾಡುವ ಕೆಲಸ ಮೊದಲು ಮಾಡೋಣ. ಆಚಾರ್ಯರೆ, ಕಾಂತಾ ನಮಗೆ ಅರಣ್ಯಾನಿ ಸೂಕ್ತವನ್ನು ನಮಗೆ ಕಾಂತಾ ಹೇಳಿಕೊಟ್ಟಿದ್ದಾನೆ. ನಮ್ಮ ಪ್ರಯತ್ನವನ್ನು ನಾವು ಮಾಡುತ್ತೇವೆ. ನೀವೂ ನಮ್ಮೊಂದಿಗೆ ಬನ್ನಿ" ಎಂದರು. ಆಚಾರ್ಯರು, "ಅದಕ್ಕೆ ಮೊದಲು ಇನ್ನೊಂದು ಕೆಲಸವಿದೆ. ಆ ಅರಣ್ಯಾನಿ ಬೆಟ್ಟದ ಮೇಲಿರುವ ಜನರ ಬಗ್ಗೆ ತಿಳಿದುಕೊಳ್ಳಬೇಕು. ಆಗ ನಮಗೆ ಕೆಲಸ ಇನ್ನೂ ಸುಲಭವಾಗುತ್ತದೆ. ಗುರಿಗೆ ಇನ್ನೂ ಹತ್ತಿರವಾಗುತ್ತೇವೆ" ಎಂದರು. ನಂತರ, ಸಾಕ್ಷಿಯ ಕಡೆ ತಿರುಗಿ, "ಸಾಕ್ಷಿ, ಹೊರಡು. ಸಿದ್ಧನಾಗು" ಎಂದರು.

2

ಸೈನಿಕರ ಜಮಾವಣೆ ಆಗಿದ್ದ ಸ್ಥಳ ಅದು. ನದಿಯ ಒಂದು ತೀರ. ಒಂದು ಕಡೆ ಎರಡು ಕೋಲುಗಳನ್ನು ಕಟ್ಟಿ ಮಧ್ಯದಲ್ಲಿ ಹಗ್ಗವನ್ನು ಕಟ್ಟಿದ್ದಾರೆ. ಇನ್ನೊಂದು ಕಡೆ ಬೆಂಕಿಯನ್ನು ಹಚ್ಚಿ ಅಡಿಗೆಗೆ ಸಿದ್ಧ ಮಾಡುತ್ತಿದಾರೆ. ಮಧ್ಯದಲ್ಲಿ ಹಲವು ಸೈನಿಕರು ತಮ್ಮ ಮೇಲಿನ ಅಂಗಿಯನ್ನು ಬಿಚ್ಚಿ, ಬರಿ ಮೈಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ. ಕೆಲವರು ನದಿಯ ಬಳಿ ಹೋಗಿ, ಸ್ನಾನ ಮಾಡುತ್ತಿದ್ದಾರೆ. ಒಂದು ಕಡೆ ಅಗಲವಾದ ಒಂದು ಬಟ್ಟೆಯನ್ನು ನಾಲ್ಕೈದು ಕಡಿದ ಮರಗಳಿಗೆ ಸಿಕ್ಕಿಸಿ ಒಂದು ತಾತ್ಕಾಲಿಕ ಗುಡಿಸಲನ್ನು ಏರ್ಪಡಿಸಿದ್ದಾರೆ. ಬಹಳಷ್ಟು ಮಂದಿ ಅದರ ಕೆಳಗೆ ಏನೋ ಕೆಲಸ ಮಾಡುತ್ತಿದ್ದಂತಿತ್ತು. ಐದಾರು ಜನರು ಒಂದು ದೊಡ್ಡ ಕಾಗದವನ್ನು ಹಿಡಿದು ಏನೋ ಮಾತನಾಡುತ್ತಿದ್ದರು. ಇನ್ನು ಇಬ್ಬರು ಎರಡು ಕೊಡಲಿಗಳನ್ನು ಚೂಪುಗೊಳಿಸುತ್ತಿದ್ದರು. ಇನ್ನು ಐವತ್ತು ಮಂದಿ ಮರಗಳಿಲ್ಲದ ಒಂದು ಜಾಗದಲ್ಲಿ ನಿಂತು ತಾಲೀಮು ಮಾಡುತ್ತಿದ್ದರು. ಎಲ್ಲರ ಕೈಯಲ್ಲೂ ಉದ್ದದ ಒಂದು ಬಂದೂಕಿತ್ತು. ಎಲ್ಲರೂ ಒಂದು ಸಾಲಿನಲ್ಲಿ ನಿಂತು, ಕೆಳಗೆ ಬಿದ್ದು ನುಗ್ಗುವುದು, ಬಂದೂಕಿನಿಂದ ಗುರಿ ಇಟ್ಟು ಗುಂಡು ಹೊಡೆಯುವುದು, ಇತ್ಯಾದಿ ಅಭ್ಯಾಸಗಳನ್ನು ಮಾಡುತ್ತಿದ್ದರು. ಇನ್ನು ಕೆಲವರು ಕತ್ತಿಗಳನ್ನು ಹಿಡಿದು, ಸುತ್ತಲೂ ಬೆಳೆದುಕೊಂಡಿದ್ದ ಬಳ್ಳಿಗಳನ್ನು ಕಡಿಯುತ್ತಿದ್ದರು. ಕೆಲವರು ಮರಗಳನ್ನು ಕಡಿದು, ಆ ಪ್ರದೇಶ ಸಮತಟ್ಟಾಗಿರುವಂತೆ ಮಾಡುತ್ತಿದ್ದರು. ಇನ್ನೊಂದು ಕಡೆ ನಾಲ್ವರು ಕುಳಿತು ಏನನ್ನೋ ತೊಳೆಯುತ್ತಿದ್ದಂತೆ ಕಾಣುತ್ತಿತ್ತು.

ತೊಳೆದ ನೀರು ಕೆಂಪು ಬಣ್ಣದ್ದಾಗಿತ್ತು. ಅವರು ಉದ್ದವಾದ ಆನೆಯ ದಂತಗಳನ್ನು ತೊಳೆಯುತ್ತಿದ್ದರು. ಅದಕ್ಕೆ ಮೆತ್ತಿಕೊಂಡಿದ್ದ ಆನೆಯ ರಕ್ತ ನೀರಿನೊಂದಿಗೆ ಸೇರಿ ಹೋಗುತ್ತಿತ್ತು. ಇನ್ನೊಂದು ಕಡೆ, ಹುಲ್ಲನ್ನು ಮೇಯುತ್ತಾ ಹತ್ತು ಎತ್ತುಗಳು ನಿಂತಿದ್ದವು. ಅವುಗಳ ಹಿಂದೆಯೇ ಒಂದಷ್ಟು ಬಂಡಿಗಳು ನಿಂತಿದ್ದವು. ಅದರ ಒಳಗೆ ಒಣ ಹುಲ್ಲಿನ ರಾಶಿ. ಇನ್ನೊಂದು ಕಡೆ ಸುತ್ತಿಗೆ, ಮುಂತಾದ ಆಯುಧಗಳು. ಮಧ್ಯದಲ್ಲಿ ಒಂದು ಗುಡಿಸಲು. ಅದರ ಒಳಗೆ ಬೆಳಕಿಗಾಗಿ ಒಂದು ದೀಪ ಉರಿಯುತ್ತಿದ್ದಂತೆ ಕಾಣುತ್ತದೆ. ಅದರ ಬೆಳಕಲ್ಲಿ ಅಲ್ಲಿರುವ ಐದು ಜನರ ಛಾಯೆ ಕಾಣುತ್ತಿದೆ.

ಇಷ್ಟರ ನಡುವೆ ಕಾಂತಾ ನಿಂತು ಎಲ್ಲವನ್ನೂ ನೋಡುತ್ತಿದ್ದರು. ನಕ್ಷೆ ನೋಡುತ್ತಿದ್ದ ಜನ ಅವನಿಗೆ ಕೆಲವು ಆಜ್ಞೆಗಳನ್ನು ನೀಡುತ್ತಿದ್ದರು. ಅತ್ತ ಇತ್ತ ಓಡಾಡುತ್ತಾ ಅವನು ಅವರು ಹೇಳಿದ್ದನ್ನು ಮಾಡುತ್ತಿದ್ದನು. ಅಷ್ಟೇ ಅಲ್ಲದೆ ಕೊಡಲಿಯನ್ನು ಸರಿ ಮಾಡುತ್ತಿದ್ದವರಿಗೆ, ದಂತವನ್ನು ತೊಳೆಯುತ್ತಿದ್ದವರಿಗೆ ಆಗಾಗ ಸಹಾಯ ಮಾಡುತ್ತಾ, ಮಧ್ಯದಲ್ಲಿದ್ದ ಗುಡಿಸಲ ಬಳಿಯೇ ಓಡಾಡಲು ಯತ್ನಿಸುತ್ತಿದ್ದ. ನಕ್ಷೆಯ ಕುರಿತಾಗಿ ಮಾತನಾಡುತ್ತಿದ್ದವರ ಬಳಿ ಹೋಗಿ ಅವನು ಆಗಾಗ, "ಹೀಗಲ್ಲ ಸರ್. ಬೇರೆ ದಾರಿಯಲ್ಲಿ ಹೋಗಬೇಕು. ಹೀಗೆ ಹೋದರೆ ನೀವು ತಲುಪುವ ಸ್ಥಳ ತುಂಬಾ ಅಪಾಯಕಾರಿಯಾದದ್ದು" ಎಂದು ಸಲಹೆಗಳನ್ನು ಕೊಡುತ್ತಿದ್ದ. ಅವರಿಗೆ ಕಾಡಿನ ಕುರಿತಾಗಿ ತಿಳಿಯ ಹೇಳುವ ಜನರು ಯಾರೂ ಇರಲಿಲ್ಲ. ಇದ್ದ "ಸಂಪನ್ಮೂಲ ವ್ಯಕ್ತಿ" ಇವನೊಬ್ಬನೆ. ಆದ್ದರಿಂದ ಇವನನ್ನು ಹಲವಾರು ಪ್ರಶ್ನೆಗಳನ್ನು ಕೇಳುತ್ತಿದ್ದರು. ಕಾಂತಾ ಅನುಕೂಲಕ್ಕೆ ತಕ್ಕಂತಹ ಉತ್ತರಗಳನ್ನು ನೀಡತೊಡಗಿದ. ಇಷ್ಟರಲ್ಲೇ ಎತ್ತಿನ ಕತ್ತಿಗೆ ಕಟ್ಟುವ ಗಂಟೆಯ ಸದ್ದು ಕೇಳಿಸತೊಡಗಿತು. ಅಲ್ಲಿದ್ದ ಯಾವುದೇ ಎತ್ತಿಗೆ ಗಂಟೆಯನ್ನು ಕಟ್ಟಿರಲಿಲ್ಲ. ಕಾಂತಾಗೆ ಸಂಶಯ ಬಂದು, ಓಡಿಹೋಗಿ ಅದೇನೆಂದು ನೋಡಿದ. ಒಬ್ಬನು, ತಲೆಗೆ ಬಟ್ಟೆಯೊಂದನ್ನು ಕಟ್ಟಿಕೊಂಡು, ಕೆಂಪು ಬಣ್ಣದ ಅಂಗಿಯನ್ನು ಹಾಕಿಕೊಂಡು, ಎರಡು ದಷ್ಟ ಪುಷ್ಟವಾದ ಎತ್ತುಗಳು ಎಳೆಯುತ್ತಿದ್ದ ಬಂಡಿಯನ್ನು ಹೊರಡಿಸಿಕೊಂಡು ಬರುತ್ತಿದ್ದನು. ಅವನ ಬಂಡಿಯ ತುಂಬಾ ಒಣ ಹುಲ್ಲಿತ್ತು. ಮೀಸೆಯೇ ಇಲ್ಲದ ಅವನ ಮುಗ್ಧ ಮುಖದ ತುಂಬಾ ಖುಷಿಯೇ ತುಂಬಿತ್ತು. ಅವನು ಬಂಡಿಯನ್ನು ತಂದು ಎಲ್ಲಾ ಬಂಡಿಗಳ ನಡುವೆಯೇ ನಿಲ್ಲಿಸಿದನು. ನಂತರ ಬಂಡಿಯ ಮೇಲಿಂದ ಎಗರಿ ಕಾಂತಾನ ಕಡೆಗೆ ನಡೆದನು. ಕಾಂತಾನ ಬಳಿ ಬಂದು, ಮಂಡಿಯ ಮೇಲೆ ಕುಳಿತು, "ಸ್ವಾಮಿ, ಕರೆದಿರಂತೆ. ಅಲ್ಲಿ ಒಳಗಿದ್ದವರು ಹೇಳಿ ಕಳುಹಿಸಿದರು" ಎಂದನು. ಕಾಂತಾ, ಅರೆ ಕ್ಷಣ ಯೋಚಿಸಿದನು. "ಹಾ, ಹೌದು. ಇಲ್ಲೇ ಇರು. ಅಲ್ಲಿ ಕುಳಿತುಕೋ ಹೋಗು.

ಏನು ಮಾಡ್ಬೇಕು ಅಂತ ನಾನೇ ಹೇಳ್ತೀನಿ" ಎಂದು ಕಾಂತಾ ಅವನನ್ನು ಕಳುಹಿಸಿದನು. ಅವನು ಎದ್ದು ಹಿಂದಕ್ಕೆ ತಿರುಗುವಾಗ, ಕಾಂತಾ, "ಏಯ್, ನಿನ್ನ ಹೆಸರೇನೋ?" ಎಂದು ಕೇಳಿದನು. ಅವನು, "ಕಿಟ್ಟಾಚಾರಿ ಸ್ವಾಮಿ, ಕಿಟ್ಟಾಚಾರಿ" ಎಂದನು.

***

ಸಾಕ್ಷಿ ಹೊರಟಾಗಿತ್ತು. ಈಗ ಮಿಕ್ಕಿದ ಕೆಲಸ ನಮ್ಮದು. ಆಚಾರ್ಯರು ನಮ್ಮನ್ನು ಕರೆದು, "ಕಾಂತಾ ಹಾಗೂ ಸಾಕ್ಷಿ ಇಬ್ಬರೂ ನಮ್ಮ ಸಹಾಯಕ್ಕಿರುತ್ತಾರೆ. ಆದರೆ ನಾವು ನಾಲ್ವರೇ ಏನೂ ಮಾಡಲಾಗುವುದಿಲ್ಲ. ನೀವು ಕಾಡಿನ ಇನ್ನೊಂದು ಭಾಗದ ಕುರಿತಾಗಿ ಹೇಳುತ್ತಿದ್ದಿರಿ ಅಲ್ಲವೇ? ನಡೆಯಿರಿ ಅಲ್ಲಿಗೆ ಹೋಗೋಣ" ಎಂದರು. ಆದರೆ ನಾವು ಬಲು ಎಚ್ಚರದಿಂದ ನಡೆಯಬೇಕಿತ್ತು. ಎಲ್ಲೆಲ್ಲಿ ಸೈನ್ಯವನ್ನು ಇಟ್ಟಿದ್ದಾರೋ ನಮಗೆ ತಿಳಿಯದು. ನೋಡಿಕೊಂಡು ನಡೆಯಬೇಕಿತ್ತು. ಸಾಕ್ಷಿ ಹಿಂದಿರುಗಲು ಸಾಧ್ಯವಾಗುತ್ತೋ ಇಲ್ಲವೋ ಕೂಡ ತಿಳಿಯದು. ಸಂದಿಗ್ಧ ಪರಿಸ್ಥಿತಿಯಲ್ಲಿ ನಾವಿದ್ದೆವು. ಈಗ ನಮಗೊಂದು ನಿರ್ದಿಷ್ಟ ಗುರಿಯಿತ್ತು. ಅದನ್ನು ಸಾಧಿಸಲು ದಾರಿ ತಿಳಿದಿತ್ತು. ಅದಕ್ಕಾಗಿ ಜನರನ್ನು ಹುಡುಕಬೇಕಿತ್ತು. ನಾನು ಆಚಾರ್ಯರನ್ನು ಕೇಳಿದೆ: "ಆಚಾರ್ಯರೆ, ಸಾಕ್ಷಿ ಯಾವ ಹೆಸರಿನಲ್ಲಿ ಅವರ ಬಳಿ ಇದಾನೆ?" ಆಚಾರ್ಯರು, "ಕಿಟ್ಟಾಚಾರಿ" ಎಂದರು. ಬೋಕ, "ನಿಮ್ಮ ಹೆಸರೇ ಅಲ್ಲವೇ?" ಎಂದು ನಕ್ಕಿದನು. ನಾವು ಮುಖ ಮುಖ ನೋಡಿಕೊಂಡು ನಕ್ಕಿದೆವು. ಆಚಾರ್ಯರು ಪಂಜು ತಯಾರಿಸಲು ಬೇಕಾಗಿದ್ದ ಎಲ್ಲಾ ಸಾಮಗ್ರಿಗಳನ್ನು ತಂದಿದ್ದರು. ಇನ್ನೂ ಕತ್ತಲಾಗಿರಲಿಲ್ಲ. ಆಚಾರ್ಯರು ಓಡತೊಡಗಿದರು. ನಾವು ದಾರಿ ಹೇಳಿದ್ದು ಒಂದೇ ಬಾರಿ. ಆಚಾರ್ಯರು ಕಾಡನ್ನು ಎಷ್ಟು ಚೆನ್ನಾಗಿ ಅರಿತಿದ್ದರೆಂದರೇ, ದಾರಿ ಹೇಳಿದ ತಕ್ಷಣವೇ ಅವರ ತಲೆಯಲ್ಲಿ ಒಂದು ಸ್ಪಷ್ಟ ಚಿತ್ರ ಮೂಡಿತು. ಕಾಡಿನ ಆ ಭಾಗವನ್ನು ತಲುಪುತ್ತಿರುವ ಲಕ್ಷಣಗಳು ಕಂಡು ಬಂದವು. ನಾವು ಹಿಂದೆ ಬಂದಿದುದಕ್ಕಿಂತಲೂ ಈ ಬಾರಿ ಈ ಭಾಗ ಬದಲಾಗಿತ್ತು. ಹೆಚ್ಚು ಮರಗಳನ್ನು ಕಡಿಯಲಾಗಿತ್ತು. ಅಲ್ಲಲ್ಲಿ ನಾವು ಅಂದು ದೊಡ್ಡ ಗುಡಿಸಲ ಮೇಲೆ ನೋಡಿದ್ದ ಚಿಹ್ನೆಯನ್ನು ಬಹಳಷ್ಟು ಕಡೆ ನೆಟ್ಟಿದ್ದರು. ಆಚಾರ್ಯರು ಅದನ್ನು ನೋಡಿ, "ಶಿಲುಬೆ" ಎಂದು ಉಸುರಿದರು. ನಮಗೆ ಅದೇನೆಂದು ತಿಳಿಯದು. ಆಚಾರ್ಯರು ನಮ್ಮ ಮುಖವನ್ನು ನೋಡಿ, "ಇದು ಯೇಸು ಎನ್ನುವ ದೇವರನ್ನು ಆರಾಧಿಸುವ ಜನಗಳು ಬಳಸುವ ಚಿಹ್ನೆ. ಇದಕ್ಕೆ ಹೆಸರು ಶಿಲುಬೆ ಎಂದು. ಯೇಸು ಎನ್ನುವರು ಮನುಷ್ಯರಾಗಿದ್ದಾಗ ಅವರಿಗೆ ಮೊಳೆಗಳಿಂದ ಸಿಕ್ಕಿಸಿ, ಹಿಂಸಿಸಿ ಕೊಂದಿದ್ದರೆಂದು ಪ್ರತೀತಿ. ಆ ಬ್ರೀಟಿಷಿನವರೆಲ್ಲಾ



ಆರಾಧಿಸುವುದು ಇದೇ ದೇವರನ್ನು" ಎಂದು ಅದರ ಹಿನ್ನೆಲೆಯನ್ನು ತಿಳಿಸಿದರು. "ಹಾಗಿದ್ದರೆ ನಾವು ಅಂದು ಒಂದು ದೊಡ್ಡ ಗುಡಿಸಲನ್ನು ನೋಡಿದೆವು. ಅಲ್ಲಿ ಒಳಗೆ ಒಂದು ದೊಡ್ಡ ಶಿಲುಬೆಯಿತ್ತು. ಅದಕ್ಕೆ ಎಲ್ಲರೂ ನಮಸ್ಕಾರ ಮಾಡುತ್ತಿದ್ದರು" ಎಂದೆ ನಾನು. ಆಚಾರ್ಯರು, "ಅದನ್ನು ಚರ್ಚು ಎನ್ನುತ್ತಾರೆ. ನಮಗೆ ದೇವಾಲಯ ಇರುವ ಹಾಗೆ, ಅವರಿಗೆ ಚರ್ಚು" ಎಂದರು. ನಾವು, "ಅವರೆಲ್ಲ ನಮ್ಮ ಹಾಗೆಯೇ ಇದ್ದರು ಆಚಾರ್ಯರೇ! ಅಲ್ಲಿ ಚರ್ಚಿನ ಒಳಗೆ ಮಾತ್ರ ಒಬ್ಬನೇ ಒಬ್ಬ ಬಿಳಿಯ ಮನುಷ್ಯ ಇದ್ದ. ಅವನೇ ನಮಗೂ ನಮ್ಮ ಅಪ್ಪಯ್ಯ ಅವರಿಗೂ ಬಟ್ಟೆ ಕೊಟ್ಟಿದ್ದು. ಅದು ಹೇಗೆ ಅವರು ಯೇಸುವನ್ನು ಆರಾಧಿಸುತ್ತಾರೆ?" ಎಂದು ಕೇಳಲು, ಆಚಾರ್ಯರು, "ಎಲ್ಲವೂ ಅವರವರ ಇಷ್ಟ ಕಣ್ರೋ. ಅವರು ಮುಂಚೆ ನಮ್ಮ ತರಹವೇ ಇದ್ದರೂ, ನಂತರ ಬಿಳಿಯರನ್ನು ನೋಡಿ, ಶಿಲುಬೆಯನ್ನು ಧರಿಸಿರಬಹುದು. ಈಗ ಆ ಕಥೆ ಬಿಡಿ. ಆ ಭಾಗದ ಜನ ನಿಮಗೆ ಗೊತ್ತಿರಬೇಕಲ್ಲವೇ? ನೀವೆ ನಡೆಯಿರಿ, ಮಾತನಾಡಿಸಿ. ಎಲ್ಲವೂ ಸರಿ ಇದ್ದರೆ ನಾನು ಬರುತ್ತೇನೆ" ಎಂದು ನಮ್ಮನ್ನು ಕಳುಹಿಸಿದರು. ನಾವು ಆ ಭಾಗದ ಜನ ನಮ್ಮನ್ನು ನೆನಪಿನಲ್ಲೇ ಇಟ್ಟುಕೊಂಡಿರಬಹುದೆಂದು ಭಾವಿಸಿ ಒಳಹೊಕ್ಕೆವು. ಹಿಂದಿನಂತೆ ಅಲ್ಲೇ ಗುಡಿಸಲುಗಳು ಸಿಗಲಿಲ್ಲ. ಕಲ್ಲುಗಳಲ್ಲಿ ಕಟ್ಟಲಾದ "ಮನೆ" ಗಳು ಕಂಡವು. ಹೊರಗಡೆ ದನಗಳನ್ನು ಕಟ್ಟಲಾಗಿತ್ತು. ಅದರ ಮೇಲೆ ಅದಕ್ಕಾಗಿ ಅಟ್ಟ. ಅವು ನಮ್ಮನ್ನು ನೋಡಿದ ತಕ್ಷಣ ಅಂಬಾ ಅಂಬಾ ಎಂದು ಕೂಗತೊಡಗಿದವು. ಮನೆಯ ಒಳಗಿನಿಂದ "ಏ ಯಾಕೇ! ಏನಾಯ್ತು!" ಎಂದು ಹೆಂಗಸೊಬ್ಬರ ಧ್ವನಿ ಕೇಳಿಸಿತು. ನಂತರ ಅವರು ಹೊರಗೆ ಬಂದು, ನಮ್ಮನ್ನು ನೋಡಿ, "ಏ ಯಾರ್ರೋ ನೀವು?" ಎಂದು ಕೇಳಿದರು. ನಾವು ತಡಬಡಿಸುತ್ತಾ, "ಅದು, ಆವತ್ತು ಬಂದಿದ್ದೆವು, ಕಾಡಿನ ಬೇರೆ ಭಾಗದಿಂದ..." ಎಂದಾಗ, ಅವರಿಗೆ ಜ್ಞಾಪಕವಾಯಿತೆನ್ನಿಸಿತು. ಅವರು, "ಓಹ್! ಹೌದು ಹೌದು! ಬನ್ನಿ. ನಾವು ಆ ಕಡೆಗೆ ಬರುವುದೇ ಅಪರೂಪ. ಈಗೀಗಂತೂ ಎಲ್ಲಾ ಇಲ್ಲೇ ಬರುತ್ತೆ. ದನಗಳಿಗೆ ಮೇವು ಕೂಡ ಯೇಸು ದೇವರೇ ಕೊಡುತ್ತಾರೆ" ಎಂದರು. ನಾವು, "ನಿಮ್ಮ ಮನೆಯಲ್ಲಿ ಯಾರ್ಯಾರಿದ್ದಾರೆ? ಅವರನ್ನು ನಾವು ಮಾತನಾಡಿಸಬಹುದೇ?" ಎಂದು ಕೇಳಿದೆವು. ಅವರು ಒಳಗೆ ಹೋದಾಗ, ಬೋಕ, "ಲೋ, ಏನೂ ಅಂತ ಮಾತಾಡ್ತೀಯ?" ಎಂದು ಕೇಳಿದ. ನಮಗೆ ತಕ್ಷಣ ಒಂದು ಉಪಾಯ ಬಂದಿತು. ನಾಗ ಹೋಗಿ ಆಚಾರ್ಯರನ್ನು ಕರೆತಂದ. ಆಚಾರ್ಯರು ಶಾಂತರಾಗಿ ಕೈಯನ್ನು ಬೆನ್ನ ಹಿಂದೆ ಕಟ್ಟಿಕೊಂಡು ಕಾದು ನಿಂತರು. ಹೆಣ್ಣು ಧ್ವನಿಯೊಂದಿಗೆ ಈಗ ಗಂಡಸಿನ ಧ್ವನಿಯೊಂದು ಕೇಳಿಸಿತು. "ಬಾರಯ್ಯಾ, ಪಾಪ ಕಾಡನ್ನು ದಾಟ್ಕೊಂಡು ಬಂದಿದ್ದಾರೆ" ಎಂದು ಹೆಣ್ಣು ಧ್ವನಿ ಹೇಳಿದರೆ, ಗಂಡು ಧ್ವನಿ, "ಏಯ್,

ನೀನೊಬ್ಬ್ಳು, ಅತ್ಲಾಗೆ ಮಾತಾಡಿ ಕಳ್ಸು!" ಎಂದಿತು. ಮತ್ತೆ ಹೆಣ್ಣು ಧ್ವನಿ, "ಬಾರಯ್ಯಾ ಪರ್ವಾಗಿಲ್ಲ" ಎಂದಿದ್ದು ನಮಗೆ ಕೇಳಿಸಿತು. ಆ ಮನೆಯ ದ್ವಾರದಿಂದ ಮೊದಲು ಅದೇ ಹೆಂಗಸು, ಜೊತೆಗೆ ಗಂಡಸು ಹೊರ ಬಂದರು. ಗಂಡಸಿನ ಒಂದೊಂದು ತೋಳು ನಮ್ಮ ತೊಡೆಗಳಷ್ಟಿತ್ತು. ಅವನ ಎದೆ ಹಾಗೂ ಹೊಟ್ಟೆಯ ಭಾಗ ವಿಶಾಲವಾಗಿ ರೋಮಗಳಿಂದ ತುಂಬಿತ್ತಾದರೂ ಬಲಶಾಲಿ ಎಂದು ನೋಟದಲ್ಲೇ ತಿಳಿಯುತ್ತಿತ್ತು. ಅವನು ಬಟ್ಟೆಯನ್ನು ಸಾಕ್ಷಿಯಂತೆಯೇ ತೊಟ್ಟಿದ್ದ. ಅವನ ಮೀಸೆಯಂತೂ ಹಾವಿನಂತೆ ತುಟಿಯಿಂದ ಆರಂಭವಾಗಿ ಕಿವಿಯವರೆಗೂ ಬೆಳೆದಿತ್ತು. ಅವನು ಗಡ್ಡವನ್ನು ಇರಿಸಿಕೊಂಡಿರಲಿಲ್ಲ. ಒಂದು ಕೆಂಪು ಬಣ್ಣದ ಬಟ್ಟೆಯನ್ನು ಅವನ ಅಂಗೈಗೆ ಸುತ್ತಿಕೊಂಡಿದ್ದನು. ಅವನ ಗುಂಗುರು ಕೂದಲು ಅವನಿಗೆ ಸೂಕ್ತವಾಗಿತ್ತು. ಅವನ ಹಣೆಯ ಮೇಲೆ ಬೆವರ ಹನಿ ಜಾರುತ್ತಿತ್ತು. ಅವನು ಕಣ್ಣೆತ್ತಿ ಆಚಾರ್ಯರನ್ನು ನೋಡಿದನು. ಒಮ್ಮೆ ನೋಡಿದ ಅವನು, ಕೈಯನ್ನು ಮುಷ್ಠಿ ಮಾಡಿ ಹಣೆಯ ಮೇಲೆ ಗುದ್ದಿಕೊಂಡು, ಏನನ್ನೋ ತೀವ್ರವಾಗಿ ನೆನಪಿಸಿಕೊಳ್ಳತೊಡಗಿದ. ಮತ್ತೆ ಕಣ್ಣು ತೆರೆದು ಆಚಾರ್ಯರನ್ನು ತೀಕ್ಷ್ಣವಾಗಿ ನೋಡಿದ. ಅವನ ತುಟಿಗಳು ಅದರತೊಡಗಿದವು. ಹಣೆಯ ಮೇಲೆ ಇನ್ನಷ್ಟು ಬೆವರ ಹನಿಗಳು ಮೂಡತೊಡಗಿದವು. ಅವನು ತನ್ನ ನಾಲಗೆಯಿಂದ ತುಟಿಗಳನ್ನು ಒದ್ದೆಮಾಡಿಕೊಂಡ. ನಂತರ, ಅಂಗೈಗೆ ಸುತ್ತಿಕೊಂಡಿದ್ದ ಕೆಂಪು ಬಣ್ಣದ ಬಟ್ಟೆಯನ್ನು ತೆಗೆದು ತನ್ನ ಹಣೆಯನ್ನು ಒರೆಸಿಕೊಂಡ. ಅವನ ಮೈ ನಡುಗತೊಡಗತು. "ದೇಶಪೂಜೆ ಮಾಡುವ ಪೂಜಾರಿಯನ್ನು ನಾನು ಸಂಧಿಸಬಹುದೇ?" ಎಂದು ಅವನು ಗಂಭೀರ ಧ್ವನಿಯಲ್ಲಿ ಕೇಳಿದ. ಆಚಾರ್ಯರ ಉಸಿರಾಟದ ವೇಗ ಹೆಚ್ಚಾದದ್ದು ನಮಗೆ ಕೇಳಿಸುತ್ತಿತ್ತು. ಒಂದು ಹೆಜ್ಜೆ ಮುಂದೆ ಇಟ್ಟು, "ವಿಶ್ವನಾಥ!" ಎಂದು ಅವನನ್ನು ಅಪ್ಪಿಕೊಂಡ ಆಚಾರ್ಯರು ಅವನ ಗುಂಗುರು ಕೂದಲನ್ನು ಮುಟ್ಟಿ, ಅವನ ತೋಳುಗಳನ್ನು ಹಿಡಿದರು. ಅವನು, "ಈ ಕ್ಷಣದಿಂದ ತಾಯ ಸ್ವರಾಜ್ಯ ಕಮಲ ಕಿರೀಟವನ್ನು ಪುನಃ ಸ್ಥಾಪಿಸಲು, ಸ್ವಾತಂತ್ರ್ಯಕ್ಕಾಗಿ ಹೋರಾಡಲು ನನ್ನ ಸಂಪೂರ್ಣ ಸಾಮರ್ಥ್ಯ, ಶಕ್ತಿಗಳನ್ನು ವಿನಿಯೋಗಿಸುತ್ತೇನೆಂದೂ, ಈ ದಿವ್ಯೋದ್ದೇಶದೊಂದಿಗೆ, ನಾನು ಅಖಿಲ ಹಿಂದೂಸ್ಥಾನದ ಕ್ರಾಂತಿಕಾರಿ ಸಮಾಜವಾದ ಅಭಿನವ ಭಾರತಕ್ಕೆ ಸೇರುತ್ತೇನೆ" ಎಂದು ತನ್ನ ಎದೆಯ ಮೇಲೆ ಕೈಯನ್ನಿಟ್ಟು ಹೇಳಿದ. ಆಚಾರ್ಯರು ಹೆಮ್ಮೆಯಿಂದ ಅವನ ಬೆನ್ನು ತಟ್ಟಿದರು. ವಿಶ್ವನಾಥ ಎಂದು ಕರೆಯಲ್ಪಟ್ಟ ಆ ಗಂಡಸಿನ ಪಕ್ಕದಲ್ಲಿದ್ದ ಹೆಂಗಸು, "ಆಚಾರ್ಯ!" ಎಂದು ಉದ್ಗಾರ ಮಾಡುತ್ತಾ ಆಚಾರ್ಯರ ಪಾದಸ್ಪರ್ಶ ಮಾಡಿದಳು. ಆಚಾರ್ಯರು ಅವಳ ತಲೆಯ ಮೇಲೆ ಹಸ್ತವನ್ನಿಟ್ಟು, "ನಮೋ ಭಾರತಿ" ಎಂದರು. ನಮಗೆ ಆಶ್ಚರ್ಯವೇನೆನ್ನಿಸಲಿಲ್ಲ. ಈ ರೀತಿಯ

ಘಟನೆಗಳು ಮೊದಲಿಗೆ ಅನಿರೀಕ್ಷಿತ ಎನಿಸುತ್ತಿದ್ದವು. ಈಗ ನಾವು, ಇದು ಆಚಾರ್ಯರಿಗೆ ಮೊದಲೇ ತಿಳಿದಿರಬೇಕು ಎಂದುಕೊಂಡು ಸುಮ್ಮನಾದೆವು. ಆಶ್ಚರ್ಯವೇನೂ ಆಗಲಿಲ್ಲ. ವಿಶ್ವನಾಥರು ಹೇಳಿದ ವಾಕ್ಯವನ್ನು ಕೇಳಿ, ಇವರೂ ಅಭಿನವ ಭಾರತದ ಸದಸ್ಯರೇ ಆಗಿರಬೇಕೆಂದು ನಿಶ್ಚಯಿಸಿದೆವು. ಆಚಾರ್ಯರು, "ವಿಶ್ವನಾಥ, ಇಲ್ಲಿ ನಮ್ಮವರಲ್ಲಿ ಇರುವುದು ನೀನೊಬ್ಬನೇನಾ?" ಎಂದು ಕೇಳಿದರು. ವಿಶ್ವನಾಥ, "ಆಚಾರ್ಯ, ಇಲ್ಲಿ ಬೇಕಾದಷ್ಟು ಜನ ನಮ್ಮವರಿದ್ದಾರೆ. ಎಲ್ಲರನ್ನ ಕಾಡಿನ ಬಳಿ ಇದ್ದ ಆ ಜೈಲಿನಿಂದ ಬಿಡುಗಡೆ ಮಾಡಿದಾಗ ಒಟ್ಟಿಗೆ ಬಂದು ಇಲ್ಲಿ ನೆಲೆಸಿದೆವು. ನಮ್ಮೆಲ್ಲರಿಗೂ ಬಟ್ಟೆ, ಊಟ ಕೊಟ್ಟು, ಬ್ರಿಟೀಷರು ಸಾಕುತ್ತಿದ್ದಾರೆ. ಆದರೆ ನಾವೆಲ್ಲರೂ ನೀವು ಒಂದು ದಿನ ಬಂದೇ ಬರುತ್ತೀರಿ ಎಂದುಕೊಂಡು ಕಾಯುತ್ತಲೇ ಇದ್ದೆವು. ಇಲ್ಲಿ ಕೇವಲ ಅಭಿನವ ಭಾರತದವರಿಲ್ಲ. ನೇತಾಜಿ ಅವರ ಆಜಾದ್ ಹಿಂದ್ ಫೌಜ್‌ನ ಬೇಹುಗಾರರೂ ಇಲ್ಲೇ ಇದ್ದಾರೆ. ಆದರೆ ಎಲ್ಲರೂ ಶಿಲುಬೆ ಧರಿಸಿ ವೇಷ ಮರೆಸಿಕೊಂಡಿದ್ದಾರೆ. ನೀವು ಒಂದು ಮಾತು ಹೇಳಿ ಸಾಕು, ನಿಮ್ಮೊಂದಿಗೆ ನಾವು ಬರಲು ಸಿದ್ಧ" ಎಂದು ಹುಮ್ಮಸ್ಸಿನಿಂದ ಹೇಳಿದ. ಆಚಾರ್ಯರು, "ಈಗ ನಿಮಗೆ ಊಟ ಕೊಡುತ್ತಿರುವ ಆ ಬ್ರಿಟೀಷರನ್ನು ಹೇಗೆ ಒಪ್ಪಿಸುತ್ತೀರಿ?" ಎಂದು ಕೇಳಿದರು. ವಿಶ್ವನಾಥ ಒಮ್ಮೆ ಯೋಚಿಸಿ, "ಆಚಾರ್ಯರೇ, ನೀವು ಹೇಳುತ್ತಿರುವುದು ಕಾಡಿನ ಇನ್ನೊಂದು ಭಾಗದಲ್ಲಿ ನಡೆಯುತ್ತಿರುವ ಯಾವುದೋ ದೊಡ್ಡ ಕಾರ್ಯಾಚರಣೆಯ ಬಗ್ಗೆಯೇ? ಯಾವುದೋ ಬೆಟ್ಟದಲ್ಲಿ?" ಎಂದು ಕೇಳಿದ್ದ. ಆಚಾರ್ಯರ ಮುಖದಲ್ಲಿ ದೊಡ್ಡ ನಗುವೊಂದು ಹುಟ್ಟಿತು. ಅವರು "ಹೌದು. ಹೌದು. ಅದೇ. ಈಗ ನನಗೆ ಬಹಳಷ್ಟು ಸಮಯವಿಲ್ಲ. ನೀವು ಬ್ರಿಟೀಷರು ಹೇಳಿದಂತೆಯೇ ಮಾಡಿ. ಅವರು ಕೊಡುವ ಆಯುಧಗಳನ್ನೇ ಎತ್ತಿಕೊಂಡು ಅವರೊಂದಿಗೆ ಬನ್ನಿ. ಆದರೆ ನಮ್ಮ ಕಡೆ ಹೋರಾಡಿ. ಅರಣ್ಯಾನಿ ಬೆಟ್ಟವನ್ನು ನಾವು ಕಾಪಾಡಬೇಕು" ಎಂದು ಹೇಳಿದರು. ಎಲ್ಲಿಂದಲೊ ವಿಶ್ವನಾಥನಿಗೊಂದು ಸಂಶಯ ಹುಟ್ಟಿತು. "ಆಚಾರ್ಯರೇ ನೀವು ಆ ಬೃಹತ್ ಬೆಂಕಿಯಲ್ಲಿ ಸುಟ್ಟುಹೋದಿರೆಂದು ಹೇಳಿದ್ದು ಸುಳ್ಳು ಅಲ್ಲವೇ? ಹಾಗಿದ್ದರೆ ಆ ಕಾಂತಾ ಏನಾದ? ಆ ಬಿಳಿಯರ ಕಾಲನ್ನು ನೆಕ್ಕಲು ಹೋದ ಅವನು!" ಎಂದು ಕೋಪದಲ್ಲಿ ಕೇಳಿದ. ಆಚಾರ್ಯರು, "ವಿಶ್ವ ಆ ಬೆಂಕಿಯನ್ನು ಎಬ್ಬಿಸಿದ್ದೇ ನಾನು ತಪ್ಪಿಸಿಕೊಳ್ಳಬೇಕೆಂಬ ಉದ್ದೇಶದಿಂದ. ಕಾಂತಾ ಈಗ ಬ್ರಿಟೀಷರಿಗಾಗಿ ಕೆಲಸ ಮಾಡುತ್ತಾನೆ. ಆದರೆ ಅವರ ರಹಸ್ಯಗಳೆಲ್ಲವನೂ ನಮಗೆ ತಿಳಿಸಿ, ನಮ್ಮ ಒಂದು ದೊಡ್ಡ ಸಂಪನ್ಮೂಲ ವಾಗಿದ್ದಾನೆ. ಶತ್ರುವಿಶ್ವಾಸವನ್ನು ಗೆದ್ದುಕೊಳ್ಳುವ ಉದ್ದೇಶದಿಂದ ಅಷ್ಟೆ ಅವನು ನಿಮ್ಮ ಮುಂದೆ ಹಾಗೆ ನಾಟಕ ಮಾಡಿದ್ದು. ಈ ವಿಷಯಗಳನ್ನು ನೀನು

ನಿಮ್ಮೊಂದಿಗೆ ಬರುವವರಿಗೆ ತಿಳಿಸಿಬಿಡು" ಎಂದು ವಿವರಗಳನ್ನು ಹೇಳಿದರು. ವಿಶ್ವನಾಥ ಆಚಾರ್ಯರ ಗರಡಿಯಲ್ಲಿ ಪಳಗಿದ್ದವನು. ಅವನು, "ಆಚಾರ್ಯರೇ, ಸಂವಹನದ ವಿಧ?" ಎಂದು ಕೇಳಿದ. ಆಚಾರ್ಯರು, ನಮ್ಮ ಕಡೆ ನೋಡಿ, ಮತ್ತೆ ವಿಶ್ವನಾಥನನ್ನು ಸಂಬೋಧಿಸುತ್ತಾ, "ಸಿಂಗಳೀಕದ ಸದ್ದು. ಸಹಜವಾದುದಲ್ಲ. ನಿರಂತರವಾಗಿ ಕೇಳುವ ಸದ್ದು. ಅದರ ಜೊತೆ ಚಂಡೆಯ ನಾದ" ಎಂದು ಸ್ಪಷ್ಟಪಡಿಸಿದರು. ನಮಗೆ ಆಗ, ಅಂದು ಆಚಾರ್ಯರು ನುಡಿಸುತ್ತಿದ್ದ ಆ ಟೊಳ್ಳು ವಸ್ತುವಿನ ಹೆಸರು ಚಂಡೆ ಎಂದು ತಿಳಿಯಿತು. ವಿಶ್ವನಾಥನು, "ಅಪ್ಪಣೆ ಆಚಾರ್ಯರೆ, ಸ್ವಾತಂತ್ರ್ಯ ಲಕ್ಷ್ಮಿಗೆ ಜೈ!" ಎನ್ನುತ್ತಾ, ಆಚಾರ್ಯರ ಪಾದವನ್ನು ಮುಟ್ಟಿ, ನಮಸ್ಕರಿಸಿದನು. "ನಾವು ಈ ಬಿಳಿಯರೊಂದಿಗೇ ಬರುತ್ತೇವೆ. ಜೊತೆಗೆ ಒಂದು ಉಡುಗೊರೆ ಇದೆ. ಅದನ್ನು ವಿಜಯದ ಕಾಣಿಕೆಯಾಗಿ ನಿಮಗೆ ನೀಡುತ್ತೇವೆ" ಎಂದು ನಕ್ಕಿದನು. ಆಚಾರ್ಯರು ಅವನನ್ನು ಆಲಂಗಿಸಿ, "ಈ ಮೂವರೂ ನನ್ನ ಶಿಷ್ಯರೇ. ಪ್ರತಿದಾಳಿಯ ಮುಂದಾಳತ್ವ ಇವರದ್ದೇ!" ಎಂದು ನಮ್ಮನ್ನು ತೋರಿದರು. ವಿಶ್ವನಾಥನು, "ನೀವು ಕರ್ಮ ಯೋಗಿ ಆಚಾರ್ಯರೆ! ನಿಮ್ಮ ಕೆಲಸವನ್ನು ನೀವು ಬಿಡುವುದೇ ಇಲ್ಲ!" ಎಂದನು. ನಾಗನು ಮುಂದೆ ಬಂದು, "ವಿಶ್ವನಾಥರೆ, ಈ ರೀತಿ ಹಿತ್ತಾಳೆಯ ಕಡಗ ಧರಿಸಿರುವವರೆಲ್ಲಾ ನಮ್ಮ ಕಡೆಯವರೇ!" ಎಂದು ತನ್ನ ಕಡಗವನ್ನು ತೋರಿಸಿದ. ವಿಶ್ವನಾಥ, "ಜೈ ಭಾರತೀ! ಎಲ್ಲರಿಗೂ ತಿಳಿಸುತ್ತೇನೆ!" ಎನ್ನುತ್ತಾ, ಮನೆಯೊಳಕ್ಕೆ ಓಡಿ ಹೋಗಿ, ಬಿದಿರಿನ ಒಂದು ತುಂಡನ್ನು ಆಚಾರ್ಯರ ಕೈಗಿತ್ತ. ಇದರೊಳಗೆ ಹಾಲಿದೆ. ನೀವೂ, ಮಕ್ಕಳೂ ಕುಡಿಯಿರಿ ಎಂದ. ನಾವು ಅವರಿಗೆ ನಮ್ಮ ಗೌರವವನ್ನು ತೋರಿ ಬೀಳ್ಕೊಟ್ಟೆವು. ನಮ್ಮ ರಹಸ್ಯ ಸೇನಾ ಜಮಾವಣೆಯ ಪ್ರಥಮ ಹಂತ ಮುಗಿದಿತ್ತು. ಇನ್ನು ನೇರ ಯುದ್ಧದಲ್ಲೇ ಇವರ ಭೇಟಿ.

ನಾವು ಕಾಡಲ್ಲಿ ಬಂದ ದಾರಿಯಲ್ಲೇ ಓಡಿಕೊಂಡು, ಅರ್ಧ ದಾರಿ ನಡೆಯುತ್ತಾ ಹಿಂತಿರುಗುತ್ತಿರುವಾಗ ಒಂದು ಅಚ್ಚರಿಯ ಸಂಗತಿ ನಡೆಯಿತು. ಇನ್ನೇನು ಕತ್ತಲಾಗತೊಡಗಿತು. ಆಚಾರ್ಯರು ಪಂಜನ್ನು ಹೊತ್ತಿಸಿ ಮುಂದೆ ನಡೆಯತೊಡಗಿದರು. ಹೀಗೆ ನಡೆಯುವಾಗ ಒಂದು ಕಡೆಯಿಂದ ಬಾವುಲಿಗಳ ಚೀರಾಟ ಕೇಳಿಸಿತು. ಅತ್ತ ಕಡೆಯೇ ನಾವು ನಿಧಾನವಾಗಿ ಚಲಿಸತೊಡಗಿದೆವು. ನೂರು ಮನುಷ್ಯರು ಒಟ್ಟಿಗೆ ಕೂಗುವಂತಹ ಯಾವುದೋ ಸದ್ದು ಕೇಳಿಸಿತು. ವಿಚಿತ್ರವಾದ, ಎಂದೂ, ಎಲ್ಲೂ ಕೇಳಿರದ ಸದ್ದು. ಇದು ಯಾವುದಾದರೂ ಹೊಸ ಪ್ರಾಣಿ ಇರಬಹುದೇ ಎಂದು ನಾವು ಭಯ ಪಟ್ಟೆವು. ನದಿಯ ನೀರಿನ ಸದ್ದು ಅಸಾಮಾನ್ಯವಾಗಿತ್ತು. ನೀರು ದಡಕ್ಕೆ ಬಂದು ಹೊಡೆಯುತ್ತಿತ್ತು. ಅಲ್ಲಿ ಮರೆಯಲ್ಲಿ ನಿಂತು ನೋಡಿದ ದೃಶ್ಯ ನಮ್ಮ ಎದೆಯನ್ನು ಝಲ್ಲೆನಿಸಿತು!

3

ನದಿಯ ನೀರನ್ನು ದಡಕ್ಕೆ ತಳ್ಳುತ್ತಿದದ್ದು ಏನು? ಹತ್ತಾರು ಮಂದಿ ಅದರ ಮೇಲೆ ಪಂಜುಗಳನ್ನು ಹಿಡಿದಿದ್ದರು. ದೊಡ್ಡ ಬಟ್ಟೆಯೊಂದು ಅದರ ಮೇಲಿನೊಂದು ಕಂಬಕ್ಕೆ ಕಟ್ಟಲಾಗಿತ್ತು. ಅದರಿಂದಲೇ "ಊ!" ಎಂಬ ಸದ್ದು ಉಂಟಾಗುತ್ತಿದ್ದದ್ದು. ಅದು ನಿಧಾನವಾಗಿ ದಡದತ್ತ ಸಾಗುತ್ತಿತ್ತು. ಆಚಾರ್ಯರು ಕಣ್ಣು ಮಿಟುಕಿಸದೇ ಅದನ್ನೇ ನೋಡುತ್ತಿದ್ದರು. ನಾನು ಪಿಸುಗುಟ್ಟುತ್ತಾ, "ಆಚಾರ್ಯರೇ, ಅದೇನು?" ಎಂದು ಕೇಳಿದೆ. ಅವರು, "ಹಡಗು! ಅದು ದೊಡ್ಡ ಬ್ರಿಟೀಷರ ಹಡಗು. ನಾವು ಭೂಮಿಯ ಮೇಲೆ ಚಲಿಸಲು ಬಂಡಿಯನ್ನು ಉಪಯೋಗಿಸುವಂತೆ, ನೀರಿನಲ್ಲಿ ಚಲಿಸಲು ಹಡಗನ್ನು ಬಳಸುತ್ತಾರೆ" ಎಂದರು. ನಾವು ಮತ್ತೆ ಆ ಹಡಗನ್ನು ನೋಡಿದೆವು. ಅಷ್ಟು ದೊಡ್ಡದಾಗಿದ್ದ ಅದರಲ್ಲಿ ಹಲವರು ಇದ್ದಂತೆಯೂ ಕಾಣುತ್ತಿತ್ತು. ನಾಗ ಅದನ್ನು ಗಮನಿಸಿ, "ಜಮಾವಣೆ" ಎಂದು ಹೇಳಿದನು. ಬೋಕನು, "ಈ ನದಿ ಅಂತಿಮವಾಗಿ ತಲುಪುವುದೆಲ್ಲಿಗೆ ಆಚಾರ್ಯರೆ?" ಎಂದು ಸೂಕ್ತ ಪ್ರಶ್ನೆಯನ್ನು ಕೇಳಿದ. ಆಚಾರ್ಯರು ಅವನ ಪ್ರಶ್ನೆಯನ್ನು ಮೆಚ್ಚಿ, "ಇದು ಅಂತಿಮವಾಗಿ ಸೇರುವುದು ಸಾಗರವನ್ನು. ಇವರು ಅಲ್ಲಿಂದ ಭಾರತದ್ದೇ ಊರುಗಳಿಗೆ ಹೋಗಬಹುದು, ಇಲ್ಲವೇ ನೇರವಾಗಿ ತಮ್ಮ ದೇಶವನ್ನೇ ಸೇರಬಹುದು! ಹೌದು! ನಾನಿದನ್ನು ಯೋಚಿಸಲೇ ಇಲ್ಲ. ಈಗಾಗಲೇ ಅವರು ದೇಶ ಬಿಡುತ್ತಾರೆಂದು ಸುದ್ದಿ ಹರಡುತ್ತಿದೆ. ಹಾಗಾಗಿ ಈಗ ಇವರು ಬಹುಶಃ ಈ ಮೂರ್ತಿಗಳನ್ನು ದೋಚಿ, ನೇರವಾಗಿ ತಮ್ಮ ದೇಶಕ್ಕೇ ಈ ಹಡಗಿನಲ್ಲಿ ಕೊಂಡೊಯ್ಯಬಹುದು! ನಾವು ಈಗಲೇ ಇವರನ್ನು ತಡೆಯದಿದ್ದರೆ, ಮೂರ್ತಿಗಳು ನಮ್ಮ ಕೈ ತಪ್ಪಿಹೋದಾವು! ಜಾಗೃತಿ! ಸತತ ಜಾಗೃತಿ! ಇಲ್ಲಿ ಎಷ್ಟು ಜನರಿದ್ದಾರೆಂದು ನೋಡಿಕೊಳ್ಳಬೇಕು! ಅಷ್ಟೇ ಇಲ್ಲ ಇವರನ್ನೆಲ್ಲಾ ಎಲ್ಲಿ ಇರಿಸುತ್ತಾರೆ, ಯಾವ ದಿನ ಅವರು ದೇವಾಲಯಕ್ಕೆ ಮುತ್ತಿಗೆ ಹಾಕಲು ಯೋಚಿಸಿದ್ದಾರೆ ಎಂಬುದನ್ನು ಕಂಡು ಹಿಡಿದುಕೊಳ್ಳಬೇಕು" ಎಂದು ಆಚಾರ್ಯರು ಸಿದ್ಧರಾಗಿ ನಿಂತರು. ಹಡಗು ಹತ್ತಿರ ಹತ್ತಿರ ಬರುತ್ತಿತ್ತು. ಇತ್ತ ಕಡೆಯಿಂದಲೂ ನಮಗೆ ಹಲವು ಜನರು ಬರುತ್ತಿರುವ ಸೂಚನೆಗಳು ದೊರೆತವು. ನಾವು ಒಂದು ಮರದ ಹಿಂದೆ ಮರೆಯಾಗಿದ್ದೆವು. ಏನಾಗುತ್ತಿದೆ ಎಂದು ಏಕಾಗ್ರತೆಯಿಂದ ಗಮನಿಸುತ್ತಿದ್ದೆವು. ಹಡಗು ದಡದ ಹತ್ತಿರ ಬರುತ್ತಿದ್ದಾಗ, ಹಡಗಿನಲ್ಲಿದ್ದ ಒಬ್ಬನು, ಯಾವುದೋ ಭಾರವಾದ ವಸ್ತುವನ್ನು ಎತ್ತಿ ನದಿಯೊಳಕ್ಕೆ ಹಾಕಿದ. ಹಡಗಿನ ವೇಗ ಕಡಿಮೆಯಾಗಿ, ನಿಂತಿತು. ದಡಕ್ಕಿಂತ ಸ್ವಲ್ಪ ಹಿಂದೆಯೇ ನಿಂತ ಹಡಗಿನಿಂದ, ಒಬ್ಬೊಬ್ಬರಾಗಿ ಇಳಿದು, ಮೊಣಕಾಲುದ್ದ ಇದ್ದ ನೀರಿನಲ್ಲಿ ನಡೆದು ಬರತೊಡಗಿದರು. ಕೆಲವರ ಕೈಯಲ್ಲಿ ಬಂದೂಕುಗಳಿದ್ದವು. ಕೆಲವರ ಕೈಗಳಲ್ಲಿ ಪಂಜುಗಳಿದ್ದವು. ಸುಮಾರು ಐವತ್ತು-ಅರವತ್ತು

ಜನರು ಹಡಗಿನಿಂದ ಇಳಿದ ಮೇಲೆ ಐದು ಜನ ಬಿಳಿಯರೊಂದಿಗೆ ಒಬ್ಬ ಬ್ರಿಟೀಷಿನ ಅಧಿಕಾರಿಯಂತೆ ಕಾಣುತ್ತಿದ್ದವನು ಇಳಿದು ಬಂದ. ಇತ್ತ, ಕಾಡಿನ ಒಳಗಿನಿಂದ ನಡೆದು ಬಂದಿದ್ದ ಜನ ಆ ಅಧಿಕಾರಿಯಂತೆ ಕಾಣುತ್ತಿದ್ದವನನ್ನು ಬರಮಾಡಿಕೊಂಡು ಮತ್ತೆ ನಡೆಸಿಕೊಂಡು ಹೊರಟರು. ಅವರ ಬಿಡಾರವು ಅರಣ್ಯಾನಿ ಬೆಟ್ಟದ ಬಳಿಯೇ ಎಲ್ಲೋ ಇರಬೇಕೆಂದು ನಾವು ಊಹಿಸಿದೆವು. ಊಹೆ ಏನು? ಅವರು ಹೋಗುತ್ತಿದ್ದದ್ದೇ ಅಲ್ಲಿ. ದುರುಳಕಾರ್ಯಕ್ಷೇತ್ರವೇ ಅದು ಅಲ್ಲವೆ? ನಾವು ಅವರನ್ನು ಹಿಂಬಾಲಿಸಬೇಕೋ ಇಲ್ಲವೋ ಎಂಬ ಸಂಧಿಗ್ಧದಲ್ಲಿದ್ದೆವು. ಆಚಾರ್ಯರು, "ಈಗ ನಾವು ಅವರನ್ನು ಹಿಂಬಾಲಿಸುವುದು ಬೇಡ. ಅದಕ್ಕಾಗಿಯೇ ಸಾಕ್ಷಿಯನ್ನು ಕಳುಹಿಸಿರುವುದು. ಈಗ ಬನ್ನಿ!" ಎನ್ನುತ್ತಾ ಮುಂದೆ ನಡೆದರು. ಆ ಕತ್ತಲಲ್ಲಿ ಆಚಾರ್ಯರ ಹೆಜ್ಜೆಯ ಸಪ್ಪಳವನ್ನು ಕೇಳಿಕೊಂಡೆ ಹಿಂಬಾಲಿಸಿದೆವು. ನಾವು ಹನುಮಂತ ಬೆಟ್ಟವನ್ನು ಸೇರುವ ಹೊತ್ತಿಗೆ ಮಧ್ಯರಾತ್ರಿ ಆಗಿತ್ತು. ನಮ್ಮ ತಲೆಯಲ್ಲಿ ಈ ಜಾಲದ ಚಿತ್ರ ಮೂಡುತ್ತಿತ್ತು. ಮುನ್ನವೇ ಇಲ್ಲಿ ಬ್ರಿಟೀಷಿನ ಅಧಿಕಾರಿಗಳಿದ್ದಾಗ, ಇವರು ಬಂದಿದ್ದು ಏತಕ್ಕೆ? ಇವರ ಉದ್ದೇಶ ಕೇವಲ ಅರಣ್ಯಾನಿ ಬೆಟ್ಟವೋ, ಅಥವಾ ಇನ್ನೂ ಏನಾದರೂ ಇರಬಹುದೇ ಎಂಬ ಸಂಶಯ ಹುಟ್ಟಿತು. ಬರಿಯ ಮೂರ್ತಿಗಳಿಗಾಗಿ ಒಂದು ಹಡಗು, ಇಷ್ಟು ಮಂದಿ ಸೈನಿಕರು!? ಇಲ್ಲ. ದೊಡ್ಡದೇನೋ ಇದೆ. ಅಥವಾ ಅವರು ಕಡಿದ ಮರಗಳನ್ನು ಏನಾದರೂ...? ಇಲ್ಲ. ಅದೂ ಸಾಧ್ಯವಿಲ್ಲ. ಎಷ್ಟು ಸಿದ್ಧಾಂತಗಳನ್ನು ನಾವು ರಚಿಸಬೇಕು, ಊಹಿಸಬೇಕು. ಎಲ್ಲಕ್ಕೂ ಒಂದು ತಾರ್ಕಿಕ ಮೂಲವಿರಬೇಕು. ಕೇವಲ ಸೃಜನಶೀಲತೆಯ ಫಲ ಅದಾಗಬಾರದು. ಎಷ್ಟೇ ತರ್ಕವಿದ್ದರೂ, ಅಂತಿಮವಾಗಿ ನಾವು ಕ್ರಿಯೆಯಲ್ಲಿ ತೊಡಗಿದಾಗಲೇ ಅದರ ಒಳ ಹೊರಗುಗಳು, ಅದರ ಸತ್ಯಾಸತ್ಯತೆಗಳು ನಮಗೆ ತಳಿಯುವುದು. ವಿಶ್ವನಾಥನಿಗೆ ಏನಾದರೂ ತಿಳಿದಿರಬಹುದೇ? ಅಥವಾ ಅಲ್ಲಿದ್ದ ಬ್ರಿಟೀಷರಿಗೂ ಇದಕ್ಕೂ ಸಂಬಂಧ ಇರಬಹುದೇ? ವಿಶ್ವನಾಥನು ಏನೋ ಉಡುಗೊರೆ ನೀಡುತ್ತಾನೆಂದು ಹೇಳಿದ್ದ. ಆ ಉಡುಗೊರೆಯು ಪ್ರೀತಿಯಿಂದ ನೀಡುತ್ತಿರುವಂಥದ್ದೋ, ಅಥವಾ ಯಾವುದಾದರೂ ಮಹತ್ವಪೂರ್ಣ ವಸ್ತುವೋ? ಸಂಶಯಗಳು. ಅವು ಇರುವವರೆಗೂ ಚೈತನ್ಯ ತಾನಾಗಿಯೇ ಹರಿಯುತ್ತದೆ. ಅಲ್ಲಿಗೂ ಎಲ್ಲರಲ್ಲೂ ಸ್ಥೂಲ ಶರೀರ, ಸೂಕ್ಷ್ಮ ಶರೀರ, ಹಾಗೂ ಕಾರಣ ಶರೀರಗಳಿರುವುದಲ್ಲವೇ? ಆತ್ಮದಿಂದ ಪಡೆದ ಪ್ರಜ್ಞೆಯಿಂದ ಸಾಗುತ್ತಿರುವ ಈ ಶರೀರತ್ರಯಗಳು ಸದಾ ಜಾಗೃತವಾಗಿರುತ್ತವೆ. ಇಂತಹ ಸಮಯದಲ್ಲಿ ಇನ್ನೂ ಹೆಚ್ಚಾಗಿ. "ಜಯಜಯ ಕರುಣಾಬ್ಧೇ ಶ್ರೀ ಮಹಾದೇವ ಶಂಭೋ!" ಎನ್ನುತ್ತಿದ್ದ ಆಚಾರ್ಯರ ಧ್ವನಿ ಕೇಳಿಸಿತು.

ಕಾಡು, ಅರಣ್ಯಾನಿಯ ಮಡಿಲಲ್ಲಿ ಶತ್ರುಗಳು ಬಂದಿಳಿದಿದ್ದರು. ತಾಯನ್ನು ಹಿಂಸಿಸುವ ಕ್ರೂರಿಗಳವರು. ಅವರೂ ಇಷ್ಟು ಹೊತ್ತಿಗೆ ಮಲಗಿರಬಹುದು. ನಾವು ಅವಳನ್ನು ರಕ್ಷಿಸುವ ಪ್ರಯತ್ನಗಳನ್ನು ಮಾಡುತ್ತಿರುವವರು. ನಾವು ಮಲಗುತ್ತಿದ್ದೇವೆ. ಸಮಾನ ಆಶ್ರಯ ನೀಡುವ ತಾಯಿ ಇವಳೊಬ್ಬಳೇ ಅಲ್ಲವೇ?

4

ಬೆಳಗ್ಗೆಯೇ ಆಚಾರ್ಯರು ಹನುಮಂತನ ಮೂರ್ತಿಯ ಮುಂದೆ ಕುಳಿತು ಮಾಡುತ್ತಿದ್ದ ಜಪ ಕೇಳಿಸುತ್ತಿತ್ತು. ನಮ್ಮನ್ನು ಎಬ್ಬಿಸಬೇಕೆಂದು ಅವರು ಜಪವನ್ನು ಜೋರಾಗಿ ಮಾಡುತ್ತಿದ್ದರೋ, ಅಥವಾ "ಎಚ್ಚರ" ಆಗಲಿ ಎಂದೋ? ಅಥವಾ ನಾವು ಜಾಗೃತರಾಗಬೇಕೆಂದೋ? ಮೂರೂ ಕಾರಣಗಳಿರಬಹುದು. ಅದು ನೆರವೇರಿತು. ನಾವು ಎದ್ದು ಮೊದಲು ನದಿಯ ಕಡೆಗೆ ನಡೆದೆವು. ಸ್ನಾನ ಇತ್ಯಾದಿ ನಿತ್ಯಕರ್ಮಗಳನ್ನು ಮಾಡುವಾಗ, ಹಿಂದಿನ ದಿನ ನದಿಯಲ್ಲಿ ನೋಡಿದ್ದ ಆ "ಹಡಗು" ನೆನಪಾಯಿತು. ತಣ್ಣಗಿನ ನೀರಲ್ಲಿ ಮೈ ಬೆವರಿತು. ಆ ಸೈನ್ಯದ ಉದ್ದೇಶವೇನೋ? ಖಂಡಿತ ಅದು ದುರುದ್ದೇಶವೇ ಆಗಿರುತ್ತೆ. ಅವರನ್ನು ಸೋಲಿಸುವುದು ನಾವೇ. ಆದರೆ ಹೇಗೆ? ಇಷ್ಟೆಲ್ಲಾ ನೆನಸಿಕೊಂಡ ನಮ್ಮಲ್ಲಿ ನಕಾರಾತ್ಮಕತೆ ಉದ್ಭವವಾಗುತ್ತಿದೆ ಎನ್ನಿಸಿದಾಗ, ನದಿಯಲ್ಲಿ ಮುಳುಗಿ, ಆಚಾರ್ಯರು ಹೇಳಿಕೊಟ್ಟಿದ್ದಂತೆ ಗಾಯತ್ರೀ ಮಂತ್ರವನ್ನು ಜಪಿಸಲಾರಂಭಿಸಿದೆವು. ಸೂರ್ಯನು ಮೇಲೆರುತ್ತಲೇ ನೀರು ಇನ್ನೂ ತಣ್ಣಗಾಗತೊಡಗಿತು. ನಾವು ನಡುಗುತ್ತಲೇ ಮುಂದೇನು ಎಂದು ಯೋಚಿಸತೊಡಗಿದೆವು. ವಿಶ್ವನಾಥ ಕೊಡಬೇಕಿದ್ದ ಉಡುಗೊರೆಗೂ, ಇಷ್ಟು ಮಂದಿ ಸೈನಿಕರ ಜಮಾವಣೆಗೂ ಸಂಬಂಧ ಇರಬಹುದೇ? ಮೊದಲು ಅರಣ್ಯಾನಿ ಬೆಟ್ಟಕ್ಕೆ ಆಚಾರ್ಯರೊಂದಿಗೆ ಹೋಗಬೇಕು. ಆಗ ಎಲ್ಲಕ್ಕೂ ಒಂದು ಮಹತ್ವ ಇರುವುದೋ ಇಲ್ಲವೋ ಎಂದು ತಿಳಿಯುತ್ತದೆ. ನಾವು ಮೈ ಒಣಗಿಸಿಕೊಂಡು, ಕೆಲವು ಆಕಾಶಮಲ್ಲಿಗೆ ಹೂಗಳನ್ನು ಬಿಡಿಸಿಕೊಂಡು, ಒದ್ದೆ ಬಟ್ಟೆಯನ್ನು ಸುತ್ತಿಟ್ಟುಕೊಂಡು ಆಚಾರ್ಯರ ಕಡೆಗೆ ಓಡತೊಡಗಿದೆವು. ಆಕಾಶಮಲ್ಲಿಗೆ ಹೂಗಳನ್ನ ಒದ್ದೆ ಬಟ್ಟೆಯಲ್ಲಿ ಸುತ್ತಿಕೊಂಡು ಹೋಗುವುದರಿಂದ ಎರಡು ಲಾಭಗಳು: ಒಂದು, ಹೂಗಳು ಒಣಗುವುದಿಲ್ಲ. ಇನ್ನೊಂದು ಬಟ್ಟೆಯೂ ಘಮ ಘಮ ಎನ್ನುತ್ತಿರುತ್ತದೆ. ಇದರಿಂದ ನಾವು ಓಡುವಾಗ ಉಂಟಾಗುತ್ತಿದ್ದ ಬೆವರ ದುರ್ವಾಸನೆಯನ್ನು ದೂರ ಮಾಡುತ್ತಿದ್ದೆವು. ನಾವು ಹನುಮಂತನ ಬೆಟ್ಟವನ್ನು ಏರುತ್ತಾ ಹೋಗಿ ಗುಡಿಸಲ ಬಾಗಿಲು ತೆರೆದಿರುವುದನ್ನು ಕಂಡೆವು. ಇದೇನು? ಆಚಾರ್ಯರು ಇಷ್ಟೊಂದು ಆರಾಮಾಗಿ ಬಾಗಿಲನ್ನು ತೆರೆದು ಹೋಗಿದ್ದಾರಲ್ಲ ಎಂದುಕೊಂಡು ನಾವು ಗುಡಿಸಲ ಒಳಗೆ

ಹೋಗಿ ನೋಡಿದರೆ, ಅಲ್ಲಿ ಆಚಾರ್ಯರ ಪೆಟ್ಟಿಗೆ ಎಲ್ಲವೂ ತೆರೆದಿತ್ತು. ಆಚಾರ್ಯರ ಚಾಪೆಯೂ ಚೆಲ್ಲಾಪಿಲ್ಲಿಯಾಗಿತ್ತು. ನಮಗೆ ಭಯವಾಯಿತು. ಅಲ್ಲಿ ನೇತು ಹಾಕಿದ್ದ ನಮ್ಮ ಆಯುಧಗಳನ್ನು ಏರಿಸಿಕೊಂಡು ಹೊರಕ್ಕೆ ಹೊರಟೆವು. ಕಣ್ಣು ಮುಚ್ಚಿಕೊಂಡು ಎಲ್ಲಿಂದ ಮನುಜರ ಸಹಜ ಸದ್ದುಗಳುಂಟಾಗುತ್ತಿದೆ ಎಂದು ಹುಡುಕಿದೆವು. ಸತತ ಜಾಗೃತಿ. ಬೆಟ್ಟದಲ್ಲಿದ್ದ ಒಂದು ಬಂಡೆಯ ಮೇಲೆ ಯಾರೋ ನಿಂತಂತಿತ್ತು. ಆ ಬಂಡೆಯಿಂದ ಅರಣ್ಯವಷ್ಟೂ ಕಾಣುತ್ತದೆ. ಅಲ್ಲಿ ಯಾವುದೋ ಅಗಲವಾದ ವಸ್ತುವನ್ನು ಹಿಡಿದು ಸೂರ್ಯನಿಗೆ ಮುಖ ಮಾಡಿ ಒಬ್ಬನು ನಿಂತಿದ್ದನು. ಸೂರ್ಯನ ಬೆಳಕು ಕಣ್ಣಿಗೆ ಹೊಡೆಯುತ್ತಿದ್ದರಿಂದ ಅದು ಯಾರೆಂದೂ ತಿಳಿಯಲಿಲ್ಲ. ಆಗ ನಿಧಾನವಾಗಿ ಹತ್ತಿರ ಹತ್ತಿರ ಹೋದೆವು. ಆ ಬಟ್ಟೆ, ಕೂದಲನ್ನು ನೋಡಿದ ತಕ್ಷಣ, ನಮಗೆ ನಿರಾಳ ಆಯಿತು. ಅಲ್ಲಿ ನಿಂತಿದ್ದವರು ಆಚಾರ್ಯರೇ! ಕೈಯಲ್ಲಿ ಕಾಗದ ಒಂದನ್ನು ಹಿಡಿದಿದ್ದರು. ನಾವು ಅವರನ್ನು ಕರೆಯುವ ಮುನ್ನವೇ, ಅವರು, "ಬಂದ್ರಾಪ್ಪ? ಆಹಾ! ಆಕಾಶ ಮಲ್ಲಿಗೆ ಘಮಘಮ" ಎಂದು ಹಿಂದೆ ತಿರುಗಿದರು. ನಮ್ಮ ಆಯುಧ ಸಹಿತ ವೇಷವನ್ನು ನೋಡಿ ಅವರು ನಕ್ಕಿದರು. ಆದರೆ ಮೆಚ್ಚುಗೆಯನ್ನೂ ವ್ಯಕ್ತಪಡಿಸಿದರು. ಅವರ ಕೈಯಲ್ಲಿ ಹಿಡಿದಿದ್ದ ಕಾಗದವನ್ನು ಬೋಕ ಪಡೆದು ಪರಿಶೀಲಿಸತೊಡಗಿದ. ಅವನ ಹೆಗಲ ಮೇಲೆ ಭಾರ ಬಿಟ್ಟು ನಾನೂ ನಾಗ ಇಬ್ಬರೂ ಆ ಕಾಗದವನ್ನು ಗಮನಿಸತೊಡಗಿದೆವು. ಆ ಕಾಗದದಲ್ಲಿ ಆ ಬಂಡೆಯಿಂದ ಕಾಣುವಂತೆಯೇ ಅರಣ್ಯವನ್ನು ಚಿತ್ರಿಸಲಾಗಿತ್ತು. ನಾವು ಅದನ್ನು ಮುಟ್ಟಿದಾಗ ಹಸಿರು ಬಣ್ಣ ಕೈಗೆ ಮೆತ್ತಿಕೊಂಡಿತು. ಆಗ ತಕ್ಷಣ ಆಚಾರ್ಯರ ಕೈಯನ್ನೂ ಗಮನಿಸಿದೆವು. ಈ ಚಿತ್ರವನ್ನು ಮಾಡಿದ್ದು ಅವರೇ ಎಂದು ತಿಳಿಯಿತು. ಆದರೆ ಅದು ಚಿತ್ರವಷ್ಟೇ ಅಗಿರಲಿಲ್ಲ. ಮಧ್ಯದಲ್ಲಿ ಕೆಂಪು ಬಣ್ಣದಲ್ಲಿ ಯಾವುದೋ ದಾರಿಯನ್ನೂ ಬಿಂಬಿಸಲಾಗಿತ್ತು. ಆ ದಾರಿಯನ್ನು ನಾವು ಕಷ್ಟಪಟ್ಟು ನೆನೆಸಿಕೊಂಡಾಗ, ಮೊನ್ನೆ ಹೋಗಿದ್ದ ಕಾಡಿನ ಇನ್ನೊಂದು ಭಾಗದ ದಾರಿ ಅದು ಎಂದು ಅರಿವಾಯಿತು. ಆದರೆ ಆ ದಾರಿ ಏಕೆ? "ಆಚಾರ್ಯರೇ, ಇದರ ಉದ್ದೇಶ ಏನು?" ಎಂದು ನಾಗ ಕೇಳಿದ. ಆಚಾರ್ಯರು ಎಂದಿನಂತೆ ತಕ್ಷಣ ಉತ್ತರ ಹೇಳಲಿಲ್ಲ. ಸ್ವಲ್ಪ ಮುಂದೆ ನಡೆದು, ನಮ್ಮ ಬಳಿ ಇದ್ದ ಆಕಾಶ ಮಲ್ಲಿಗೆ ಹೂಗಳನ್ನು ಹನುಮಂತನಿಗೆ ಹಾಕಿ, ಗುಡಿಸಲ ಒಳಕ್ಕೆ ನಡೆದರು. ಗುಡಿಸಲ ಒಳಗೆ ಚೆಲ್ಲಾಪಿಲ್ಲಿ ಆಗಿದ್ದ ಅವರ ಪೆಟ್ಟಿಗೆಯಿಂದ ಇನ್ನೊಂದು ಹಳೇಯ ಕಾಗದವನ್ನು ಹೊರತೆಗೆದರು. ಆ ಕಾಗದದ ಮೇಲೆ ಯಾವುದೇ ಬಣ್ಣ ಇರಲಿಲ್ಲ. ಆದರೆ ಕಾಡಿನ ಆಕಾರವೆಂದು ಸ್ಪಷ್ಟವಾಗಿ ತಿಳಿಯುತ್ತಿತ್ತು. ಒಂದು ಕಪ್ಪು ಚುಕ್ಕೆಯೂ ಕಂಡಿತು. ಅದರ ಕೆಳಗೆ ಬರೆದಿರಬಹುದಾದ ಏನೋ ಒಂದು ಪದವು ಅಳಿಸಿಹೋಗಿತ್ತು. ಸ್ಪಷ್ಟವಾಗಿ

ಕಾಣುತ್ತಿರಲಿಲ್ಲ. ಆದರೆ ಆ ಕಾಗದದ ಮೇಲೆ ಮಾತ್ರ ದೊಡ್ಡ ಅಕ್ಷರಗಳಿದ್ದವು. ಅದನ್ನು ಆಚಾರ್ಯರು ಓದಿದರು: "ದೇವಾಲಯಗಳು". ಅಂದರೆ, ಕೇವಲ ಅರಣ್ಯನಿ ಬೆಟ್ಟವಲ್ಲದೆ, ಇಲ್ಲಿ ಇನ್ನೂ ಹೆಚ್ಚಿನ ದೇವಾಲಯಗಳಿದ್ದವು. ಇದ್ದವೋ ಅಥವಾ ಇರುವವೋ? ಅದು ತಿಳಿಯದು. ಅದನ್ನು ಗಮನಿಸಲೆಂದೇ ಆಚಾರ್ಯರು ಆ ಬಂಡೆಯ ಮೇಲೆ ನಿಂತಿದ್ದರೋ ಏನೋ? ಹಾಗಾದರೆ ಇನ್ನಷ್ಟು ಮೂರ್ತಿಗಳು ಎಂದಾಯಿತಲ್ಲ! ಆದರೆ ಈ ಮೂರ್ತಿಗಳು ಅವರಿಗೆ ಸೌಂದರ್ಯ ರಸಾನುಭೂತಿಯನ್ನು ಕೊಡಬಲ್ಲುದಷ್ಟೇ ಅಲ್ಲದೆ ಇನ್ನೇನು ಕೊಟ್ಟೀತು? ಆಚಾರ್ಯರು ಆಗ ಮೌನ ಮುರಿದರು–"ಬಂಗಾರ". ನಾವು ಸಾಕ್ಷಿ ಹಾಗೂ ಕಾಂತಾ ಅವರಿಂದ ಹಣದ ಬಗ್ಗೆ ಕೇಳಿ ತಿಳಿದುಕೊಂಡಿದ್ದೆವು. ಈ ಬಂಗಾರವು ಅಂಥದ್ದೇ ಎಂದು ಅವರು ಒಮ್ಮೆ ಹೇಳಿದ ನೆನಪು. ಆದರೆ ದೇವಲಾಯಕ್ಕೂ ಬಂಗಾರಕ್ಕೂ ಸಂಬಂಧವೇನು?

ನಮ್ಮ ಆಚಾರ್ಯರ ಬಳಿ ಎಲ್ಲಕ್ಕೂ ಉತ್ತರವೂ, ಖಚಿತತೆಯೂ ಇರುತ್ತದೆ. ಆದರೆ ಈ ಬಾರಿ, ಉತ್ತರವಿತ್ತು, ಇದೇ ಎಂಬ ಖಚಿತತೆ ಅವರಿಗೇ ಇರಲಿಲ್ಲ. ಇನ್ನೂ ನಮಗೆಲ್ಲಿಂದ? ಉತ್ತರವೇನು?

ದೇವಾಲಯಕ್ಕೂ, ಬಂಗಾರಕ್ಕೂ ಸಂಬಂಧವೇನು? ಆಚಾರ್ಯರು ಹೇಳಿದರು, "ಹಿಂದೆ ರಾಜರು ಲೋಕ ಕಲ್ಯಾಣ, ಜನಹಿತಕ್ಕಾಗಿ ಅಲ್ಲಲ್ಲಿ ದೇವಾಲಯಗಳನ್ನು ಸ್ಥಾಪಿಸುತ್ತಿದ್ದರು. ಅದು ಹೆಸರಿಗೆ, ಅಥವಾ ಯಾವುದೋ ಅತಿಮಾನುಷ ಶಕ್ತಿಯ ಆಹ್ವಾನದ ಪರಿಣಾಮ ಅಲ್ಲ. ಅಲ್ಲಿ ಮಾಡುತ್ತಿದ್ದ ಪೂಜೆ, ವೇದಮಂತ್ರೋಚ್ಚಾರಣೆ ಇಂದ ಉಂಟಾಗುತ್ತಿದ್ದ ಕಂಪನಗಳು ಜನರ ಆರೋಗ್ಯವನ್ನು ಕಾಪಾಡುತ್ತಿದ್ದವು. ಜನರು ಚೆನ್ನಾಗಿದ್ದಾಗಲೇ ಅವರು ಮಾಡುತ್ತಿದ್ದ ಕೆಲಸವೂ ಪೂರ್ಣವಾಗುತ್ತಿತ್ತು. ಅದು ಪೂರ್ಣವಾದಾಗ, ರಾಜ್ಯ ಸುಭಿಕ್ಷವಾಗುತ್ತಿತ್ತು. ರಾಜರ ಬೊಕ್ಕಸ ದೊಡ್ಡದಾಗುತ್ತಿತ್ತು. ಇಷ್ಟೆ ಅಲ್ಲದೆ, ದೇವಾಲಯಗಳಲ್ಲಿ ಸಜ್ಜನರೆಲ್ಲರೂ ಸೇರುತ್ತಿದ್ದರು, ಸರ್ವರ ಹಿತಾಸಕ್ತಿಯ ಕುರಿತಾಗಿ ಚರ್ಚೆಗಳು ನಡೆಯುತ್ತಿದ್ದವು. ಕಳ್ಳತನ ಇತ್ಯಾದಿಗಳು ಕಡಿಮೆ ಆಗುತ್ತಿದ್ದವು. ರಾಜ್ಯದ ಬೊಕ್ಕಸ ತುಂಬುವಂತೆಯೇ, ದೇವಾಲಯಗಳು ಜನರ ಸುರಕ್ಷಣೆಯನ್ನು ಮಾಡುವುದಲ್ಲದೇ, ದೇವಾಲಯದ ಸುರಕ್ಷಣೆಯೂ ಜನರೇ ಮಾಡುತ್ತಾರೆ ಎಂದು, ರಾಜರು ಸಂಪತ್ತನ್ನು ದೇವಾಲಯಗಳಲ್ಲಿ ರಹಸ್ಯವಾಗಿಡುತ್ತಿದ್ದರು. ರಾಜ ಏನಿದ್ದರೂ ದೈವಾಧೀನ. ಇಡೀ ಬ್ರಹ್ಮಾಂಡವೇ ದೈವಾಧೀನ. ಅಂಥದ್ದರಲ್ಲಿ, ಅವನ ಬಂಗಾರವನ್ನು ಅವನ ಸುಪರ್ದಿಯಲ್ಲಿಯೇ ಇಡುವುದರಲ್ಲಿ ಯಾವುದೇ ತಪ್ಪಿರುತ್ತಿರಲಿಲ್ಲ. ಈ ಭಾವಕ್ಕೆ ಸರಿಯಾಗಿ, ಆ ಬಂಗಾರವು ರಹಸ್ಯವಾಗಿಯೇ ಉಳಿದು, ಪ್ರಾಕೃತಿಕ ವಿಕೋಪಗಳ ಸಮಯದಲ್ಲಿ ಉಪಯೋಗಕ್ಕೆ ಬರುತ್ತಿದ್ದವು.

ಪರಿಸರವೇ ಮಾನವನ ಮೇಲೆ ಮುನಿದು, ಬರ-ಕ್ಷಾಮ ಇತ್ಯಾದಿಗಳು ಉಂಟಾದಾಗ, ದೇವಾಲಯಗಳಲ್ಲಿ ಶೇಖರಿಸಿ ಇಡುತ್ತಿದ್ದ ಸಂಪತ್ತು- ಅರ್ಥಾತ್ ಕೇವಲ ಬಂಗಾರವಲ್ಲ, ಬಹಳ ದಿನಗಳ ಕಾಲ ಉಳಿವಂತಹ ಧಾನ್ಯಗಳು, ಇತ್ಯಾದಿಗಳನ್ನು ಹೊರತೆಗೆದು ಪ್ರಜೆಗಳೆಲ್ಲರಿಗೂ ಹಂಚಲಾಗುತ್ತಿತ್ತು. ಅದೇ ರೀತಿಯಲ್ಲಿ ಭಾರತದಲ್ಲಿ ಲಕ್ಷಾಂತರ ದೇವಾಲಯಗಳಿವೆ. ಬೇರೇ ಬೇರೇ ದೇಶಗಳಿಂದ ಬಂದ ರಾಜರು ಅದನ್ನು ಹೊಡೆದು ಹಾಕಿದ್ದಲ್ಲದೆ, ಅದರಲ್ಲಿದ್ದ ಬಂಗಾರ ಇತ್ಯಾದಿಗಳನ್ನು ದೋಚಿಕೊಂಡು ಹೋಗಿದ್ದಾರೆ. ಆದರೆ ಇಂತಹ ದಟ್ಟ ಅರಣ್ಯದ ನಡುವಲ್ಲಿ ಕಟ್ಟಿರುವ ದೇವಾಲಯಗಳು ಗಮನಕ್ಕೆ ತಂದುಕೊಂಡಿರುವ ಈ ದುರುಳ ಬ್ರಿಟೀಷರ ಸರ್ಕಾರವು ಅದನ್ನು ದೋಚುವ ಸಂಚು ಹೂಡಿರಬಹುದೇ ಎನ್ನುವುದೇ ನನ್ನ ಸಂಶಯ!" ಆಚಾರ್ಯರು ಹೇಳಿದ್ದರಲ್ಲಿ ನಮಗೆ ತರ್ಕ ಕಂಡಿತು, ಹೌದು ಅದಕ್ಕೇ ಇರಬಹುದು ಎಂದೂ ಅನ್ನಿಸಿತು. ಆದರೆ ಸೈನ್ಯದ ಜಮಾವಣೆ ಏಕೆ? ಎಲ್ಲರೂ ಗಟ್ಟಿ ಮುಟ್ಟಾಗಿರುವವರೆ. ಇಲ್ಲಿ ಅರಣ್ಯಾನಿ ಬೆಟ್ಟವನ್ನು ಬಿಟ್ಟು ಬೇರೆ ದೇವಾಲಯಗಳಿದ್ದವು ಎಂಬುದು ಈ ನಕ್ಷೆಯ ವಾದ. ಇದು ಬ್ರಿಟೀಷರ ಬಳಿಯೂ ಇರಬಹುದೆ? ಮೊನ್ನೆ ಹಡಗಿನಲ್ಲಿ ಬಂದ ಆ ಅಧಿಕಾರಿ ಯಾರು? ನಾವು ಇಷ್ಟು ಯೋಚನೆ ಮಾಡುತ್ತಿರಲು, ಆಚಾರ್ಯರು ನಕ್ಕಿ ಹೇಳಿದರು, "ಎಲ್ಲವನ್ನೂ ಸಾಕ್ಷಿಯೇ ತಿಳಿದುಕೊಂಡು ಹೇಳಬೇಕು. ಅವನ ಹೆಸರಿನ ಅರ್ಥವೇ ಅದು ಅಲ್ಲವೆ, ಎಲ್ಲವನ್ನೂ ನೋಡುವವನು."

ನಾವು ಆ ಕಾಗದವನ್ನೇ ಗಮನಿಸುತ್ತಿದ್ದೆವು. ಅಲ್ಲಿದ್ದ ದೇವಾಲಯಗಳ ಸ್ಥಳಗಳನ್ನೇ ನೋಡುತ್ತಿದ್ದೆವು. ಎಲ್ಲೋ ಮನದ ಮೂಲೆಯಲ್ಲಿ ಆ ಹೆಸರಿಲ್ಲದ ಚುಕ್ಕೆಯು ಚಿರಪರಿಚಿತದಂತೆ ಅನ್ನಿಸುತ್ತಿತ್ತು. ನಾಗ ಬೋಕರು ನನ್ನ ಮೂಕ ಮುಖವನ್ನು ನೋಡಿದರು. ಬೋಕ, "ಲೋ ಆ ದಾರಿ ನೋಡು ಮೊದಲು" ಎಂದ. ನಾವು ಆಚಾರ್ಯರು ಬಿಡಿಸಿದ್ದ ನಕ್ಷೆ ಹಾಗೂ ಆ ದೇವಾಲಯಗಳ ನಕ್ಷೆಯನ್ನು ಪಕ್ಕ ಪಕ್ಕದಲ್ಲಿ ಇಟ್ಟುಕೊಂಡೆವು. ಆದರೂ ಏನೋ ಒಂದು ಸಂಶಯ, ಅಡ್ಡ ಅಡ್ಡ. ಆಗ ನಾಗನು ಎರಡನ್ನೂ ಒಂದರ ಮೇಲೊಂದನ್ನು ಇಟ್ಟು, ಹೊರಗೆ ಹೊರಟ. ನಾವೂ ಅವನನ್ನೇ ಹಿಂಬಾಲಿಸಿದೆವು. ಅವನು ಅದನ್ನು ಸೂರ್ಯನ ಬೆಳಕಿನ ಕಡೆಗೆ ಇಟ್ಟುಕೊಂಡು ಗಮನಿಸುತ್ತಿದ್ದ. ಈಗ ಎರಡೂ ನಕ್ಷೆಗಳನ್ನೂ ಒಂದರಲ್ಲೇ ಬರೆದಂತೆ ಕಾಣುತ್ತಿತ್ತು. ದೇವಾಲಯಗಳ ಚುಕ್ಕೆಗಳೆಲ್ಲ ಆಚಾರ್ಯರು ಬಿಡಿಸಿದ್ದ ನಕ್ಷೆಯ ಮೇಲೆ ಕಾಣುತ್ತಿತ್ತು. ಬೋಕ ತನ್ನ ಕಿರು ಬೆರಳನ್ನು ಕೆಂಪು ಗೆರೆಯ ಮೇಲಿಟ್ಟು ಮುಂದಕ್ಕೆ ನೋಡತೊಡಗಿದ. ನಾವು ಕಾಡಿನ ಇನ್ನೊಂದು ಭಾಗಕ್ಕೆ ಹೋದ ದಾರಿಯೇ ಅದು. ಸರಿ. ಆ ದಾರಿಯ ಕೊನೆಯಲ್ಲಿ ಅವರ

ಮನೆಗಳು ಇರಬೇಕು. ಆದರೆ ಇಲ್ಲಿ ಒಂದು ಆಶ್ಚರ್ಯ ಕಾದಿತ್ತು. ಆ ಕೆಂಪು ಗೆರೆಯ ದಾರಿಯ ಕೊನೆಯಲ್ಲಿ ಅಳಿಸಿಹೋದ ಹೆಸರಿದ್ದ ದೇವಾಲಯದ ಚುಕ್ಕೆ! ನಾವು ಬೆವರತೊಡಗಿದೆವು. ಬೋಕನು, "ಅಲ್ಲ ಕಣ್ರೋ, ಹಾಗಿದ್ರೆ ಆ ವಿಶ್ವನಾಥ ರಿದ್ದ ಕಡೆ ಒಂದು ದೇವಾಲಯ ಇರಬೇಕಲ್ಲವೆ? ನಡೀರಿ ಮೊದ್ಲು ಇದನ್ನ ಆಚಾರ್ಯರಿಗೆ ಹೇಳೋಣಂತೆ!" ಎಂದು ನಕ್ಷೆಗಳನ್ನು ಎತ್ತಿಕೊಂಡು ಗುಡಿಸಲ ಒಳಕ್ಕೆ ಓಡಿದ. ಆಚಾರ್ಯರು ಎರಡು ಮೂರು ಪುಸ್ತಕಗಳನ್ನು ತೆರೆದಿಟ್ಟುಕೊಂಡು ಏನನ್ನೋ ಗಂಭೀರವಾಗಿ ಓದುತ್ತಿದ್ದರು. ಮೂವರೂ ಒಟ್ಟಿಗೆ, "ಆಚಾರ್ಯರೆ!" ಎಂದು ಕೂಗಿದೆವು. ಅವರು ತಲೆಯೆತ್ತಿ ನಮ್ಮ ಮುಖಗಳನ್ನು ಕಂಡೊಡನೆ ಏನೋ ಹೊಳೆದಿರಬೇಕು ಎಂದು ಮನಗಂಡರು. ಎದ್ದು ಬಂದು ನಕ್ಷೆಯ ಮೇಲೆ ನಕ್ಷೆಯನ್ನಿಟ್ಟಿದ್ದನ್ನು ನೋಡಿದರು. "ಈ ಸಂಶಯ ನನಗೆ ಮೊದಲಿನಿಂದ ಇತ್ತು. ಆ ದೇವಾಲಯವನ್ನು ಇಲ್ಲ ಮರೆಮಾಚಿರಬೇಕು, ಇಲ್ಲವೇ ಅದನ್ನು ಒಡೆದು ಹಾಕಿರಬೇಕು, ಇಲ್ಲವೇ ಅದರ ಮೇಲೆ ..." ಎಂದು ನಮ್ಮತ್ತ ಕಳವಳದಿಂದ ನೋಡಿದರು. "ಆವತ್ತು ನೀವು ಒಂದು ದೊಡ್ಡ ಗುಡಿಸಲು ಅಂತ ಹೇಳಿದ್ದಿರಲ್ಲ? ಅದರೊಳಗೆ ಶಿಲುಬೆ ಇತ್ತೆಂದು, ಒಬ್ಬ ಬಿಳಿಯ ಮನುಷ್ಯ ಇದ್ದನೆಂದು, ನಿಮಗೆ ಬಟ್ಟೆ ಕೊಟ್ಟನೆಂದು ಹೇಳಿದಿರಲ್ಲ? ಅದನ್ನು ಸಾಮಾನ್ಯ ಮಣ್ಣಿನಿಂದ ಕಟ್ಟಲಾಗಿತ್ತಾ? ನೆನಪಿಸಿಕೊಳ್ಳಿ ಸರಿಯಾಗಿ! ಏನು ನೆನಪಾಗುತ್ತೋ ಹೇಳಿ!" ಎಂದು ನನ್ನ ಹೆಗಲ ಮೇಲೆ ಕೈಯನ್ನಿಟ್ಟರು. ನಮಗೆ ನೆನಪಿದ್ದಿದ್ದು ಅಲ್ಲಿದ್ದ ಶಿಲುಬೆ ಅಷ್ಟೆ. ಆ ದೊಡ್ಡ ಗುಡಿಸಲು, ಅದರ ರಚನೆ ಎಲ್ಲವನ್ನೂ ನಾವು ಸರಿಯಾಗಿ ಗಮನಿಸೇ ಇರಲಿಲ್ಲ. ಆದರೆ ಬಿಳಿಯ ರೀತಿಯ ಕಲ್ಲುಗಳಿಂದ ಮಾಡಿದ್ದು ನೆನಪಿಗೆ ಬಂತು! "ಆಚಾರ್ಯರೆ, ಅದು ಕಲ್ಲಿನಿಂದಲೇ ಮಾಡಿದ್ದು! ಜೊತೆಗೆ ಪಕ್ಕದಲ್ಲಿ ಒಂದು ಆಟಿಕೆ ಇತ್ತು. ಕೊಳವೆ ಆಕಾರದ್ದು. ಜೋರಾಗಿ ಢಣ ಢಣ ಸದ್ದು ಮಾಡುವಂಥದ್ದು!" ಎಂದೆ ನಾನು. ಆಚಾರ್ಯರು, "ಹೌದು. ಚರ್ಚು. ಅಲ್ಲೇ ಇರಬಹುದು ದೇವಾಲಯದ ಅವಶೇಷಗಳು. ಅಲ್ಲೇ ಏನಾದರೂ ಪ್ರಮುಖವಾದ ಕಾರ್ಯಾಚರಣೆ ನಡೆಯಬಹುದು. ಇದನ್ನು ತಿಳಿದುಕೊಳ್ಳಲು ಸಾಕ್ಷಿ ಹೋಗುವವನು." ಎಂದು ಹೇಳುವಷ್ಟರಲ್ಲಿ ಯಾರೋ ನಿಟ್ಟುಸಿರು ಬಿಡುತ್ತಾ ಓಡಿ ಬರುವ ಸದ್ದು ಕೇಳಿಸಿತು. ನಮಗೆ ಅದು ಸಾಕ್ಷಿ ಎಂಬ ಭರವಸೆ ಇತ್ತಾದರೂ ಒಮ್ಮೆ ಮೌನವಾಗಿ ಬಚ್ಚಿಟ್ಟುಕೊಂಡು ಆಯುಧಗಳೊಂದಿಗೆ ಸಿದ್ಧರಾದೆವು. ಓಡಿ ಬಂದದ್ದು ಸಾಕ್ಷಿಯೆ. ಮೊದಲು ಓಡಿ ಹೋಗಿ ಆಂಜನೇಯನಿಗೆ ಅಡ್ಡ ಬಿದ್ದು ನಮಸ್ಕರಿಸಿದ. ನಂತರ ಗುಡಿಸಲ ಒಳಗೆ ಬಂದು ಬಾಗಿಲು ಮುಚ್ಚಿದ. "ನೀರು ಕೊಡ್ರೋ" ಎಂದು ನಮ್ಮನ್ನು ಕೇಳಿದ. ಅವನ ಮೈಯೆಲ್ಲಾ ಬೆವರಿತ್ತು. ಅವನ ರೂಪವೇ ಬದಲಾಗಿಬಿಟ್ಟಿತ್ತು! ಅವನ ಕೂದಲೆಲ್ಲಾ ಕೆದರಿತ್ತು. ಅವನ ಮೈವಾಸನೆ

ಅಂತೂ ಬೆವರು-ದನದ ಸೆಗಣಿಯ ವಾಸನೆ! ಅವನ ಪಕ್ಕದಲ್ಲಿ ಹೆಚ್ಚು ಹೊತ್ತು ನಿಲ್ಲಲಾಗದಷ್ಟು! ಅವನಿಗೆ ಮಣ್ಣಿನ ಪಾತ್ರೆಯಲ್ಲಿ ನೀರು ಕೊಟ್ಟ ನಂತರ ಅವನು ಅದನ್ನು ಕುಡಿದು ಕೆಳಗೆ ಕುಳಿತ. ಅವನ ಹಣೆಯ ಮೇಲಿದ್ದ ಕೂದಲಿಂದ ಬೆವರು ಸೋರುತ್ತಲೇ ಇತ್ತು. ಆಚಾರ್ಯರು ಒಂದು ಬಟ್ಟೆಯನ್ನು ತೆಗೆದು ಅವನ ಕಡೆಗೆ ಎಸೆದರು. ಅವನು ಅದನ್ನು ಹಿಡಿದು ಹಣೆಯನ್ನು ಒರೆಸಿಕೊಳ್ಳುತ್ತಾ, "ಆಚಾರ್ಯ, ದೊಡ್ಡ ಬೇಟೆಯೇ ಇದೆ! ದೊಡ್ಡ ಬೇಟೆ!" ಎಂದು ಉಸುರಿದ. ಆಚಾರ್ಯರು, ನಿರ್ಲಿಪ್ತರಾಗಿ, "ಅದು ಗೊತ್ತು. ಯಾವ ಬೇಟೆ? ಎಲ್ಲಿ? ಯಾರು? ಏನು ಸಂಚು? ಅದನ್ನ ಹೇಳು!" ಎಂದು ಅವನ ಮುಂದೆ ಕುಳಿತು, ಅವನ ಹೆಗಲ ಮೇಲೆ ಕೈಯನ್ನಿಟ್ಟರು. ಸಾಕ್ಷಿಯು ತಾನು ವೇಷ ಬದಲಿಸಿ ಕಿಟ್ಟಾಚಾರಿಯಾಗಿ ಹೋಗಿದ್ದು, ಅಲ್ಲಿ ಅವರಿಗೆ ತಿಳಿಯದೇ ಎಲ್ಲರ ಮಧ್ಯೆ ನಡೆಯುತ್ತಾ ಹೋಗುವುದು, ಮಾತನಾಡಿಸುವುದನ್ನು ಹೇಗೆ ಮಾಡಿದ ಎನ್ನುವುದನ್ನು ವಿವರಿಸಿದ. ನಂತರ ವಿಷಯಕ್ಕೆ ಬಂದ. "ಆಚಾರ್ಯರೇ ಆ ಸೈನಿಕರು ಬಂದಿರುವುದು ಕೇವಲ ಮೂರ್ತಿಗಳಿಗಾಗಿ ಅಲ್ಲ. ಅದಂತೂ ನಿಶ್ಚಿತ." ಅಚಾರ್ಯರು, "ಬಂದಿರುವುದು ಏತಕ್ಕೆ! ಆ ಒಂದು ವಿಷಯ ಬಿಟ್ಟು ಇನ್ನೆಲ್ಲಾ ತಿಳಿಯುತ್ತಿದೆ!" ಎಂದರು. ಸಾಕ್ಷಿ ಗಂಟಲನ್ನು ಸರಿ ಮಾಡಿಕೊಳ್ಳುತ್ತಾ, "ಅವರು ಯಾವುದೋ ಚರ್ಚಿನ ಬಗ್ಗೆ ಮಾತನಾಡಿಕೊಳ್ಳುತ್ತಿದ್ದರು. ಇನ್ನೂ ಒಂದು ಹಡಗು ಬರುವುದೆಂದು ಹೇಳಿದರು. ಅಲ್ಲಿಂದ ಹತ್ತು ಪೆಟ್ಟಿಗೆ ಬರಬೇಕೆಂದು ಲೆಕ್ಕ ಹಾಕುತ್ತಿದ್ದರು. ಆದರೆ ಆ ಪೆಟ್ಟಿಗೆ ಏನು, ಅದರ ವಿವರ ಯಾರಿಂದಲೂ ಹೊರಬರಲಿಲ್ಲ. ಬಹುಶಃ ಕಾಂತಾ ಸಿಕ್ಕಿದರೆ ತಿಳಿಯಬಹುದು." ಎಂದನು. ಆಚಾರ್ಯರು, "ಇನ್ನೇನು ಖಚಿತವಾಯಿತಲ್ಲ. ಆ ಚರ್ಚು ಕಟ್ಟುವಾಗ ಅವರಿಗೆ ಯಾವುದೋ ದೇವಾಲಯ ಸಿಕ್ಕಿದೆ. ದುರಾದೃಷ್ಟವಶಾತ್ ನನ್ನ ಬಳಿ ಇರುವ ನಕ್ಷೆಯಲ್ಲಿ ಅದರ ಹೆಸರು ಅಳಿಸಿ ಹೋಗಿದೆ. ಅವರ ಬಳಿ ಈ ನಕ್ಷೆ ಇರದೆ ಇರುವುದಿಲ್ಲ. ಆ ದೇವಾಲಯದ ಸಂಪತ್ತೂ ಅವರಿಗೆ ದೊರಕಿದೆ. ಅಷ್ಟು ಮಂದಿಗೆ ಮನೆ ಕಟ್ಟಿಸಿ, ಗೋವುಗಳನ್ನು ಕೊಟ್ಟು, ಊಟವನ್ನೂ ಕೊಟ್ಟು, ಮೇವನ್ನೂ ಕೊಟ್ಟು, ಅವರಿಗೆ ಮರ ಕಡಿಯುವ ಕೆಲಸವನ್ನೂ ಕೊಡುತ್ತಿದ್ದಾರೆಂದರೆ ಅದು ಆ ಪೆಟ್ಟಿಗೆಗಳ ಮಹತ್ವವೇ!" ಎಂದ. ಆಚಾರ್ಯರು ಕುಳಿತು ತಲೆಯ ಮೇಲೆ ಕೈಯನ್ನಿಟ್ಟು ಯೋಚಿಸತೊಡಗಿದರು. "ವಿಶ್ವನಾಥ ಕೊಡುವೆ ಎಂದು ಹೇಳಿದ್ದ ಉಡುಗೊರೆ ಏನು!? ಯಾವುದೋ ಕಾಡಿನ ಒಳಗಿರುವ ದೇವಾಲಯದಲ್ಲೇ ಇಷ್ಟು ಸಂಪತ್ತಿರಬಹುದಾದರೆ ದೇಶದೆಲ್ಲೆಡೆ ಎಷ್ಟು ಸಂಪತ್ತಿರಬಹುದು! ಎಷ್ಟು ಸಂಪತ್ತನ್ನು ಅವರು ಈಗಾಗಲೇ ಸಾಗಿಸಿರಬಹುದು!? ಇದಲ್ಲದೇ ಆ ದೇವಾಲಯದಲ್ಲಿ ಎಷ್ಟು ಸುಂದರ ಮೂರ್ತಿಗಳಿದ್ದವೋ ಯಾರಿಗೆ ಗೊತ್ತು? ಈ ಕಳ್ಳತನವನ್ನು ತಡೆಯುವುದು

ಹೇಗೆ?" ಎಂದು ಕೇಳಿದರು. ಸಾಕ್ಷಿ, "ಎತ್ತಿನ ಬಂಡಿಯವರೆಲ್ಲರೂ ನಮ್ಮವರೇ. ನಾನು ಅವರೊಡನೆ ಮಾತನಾಡಿರುವೆ ಆಚಾರ್ಯರೆ. ಅವರು ಖಂಡಿತ ಸಹಾಯ ಮಾಡುತ್ತಾರೆ. ಆದರೆ ಪ್ರಸ್ತುತಕ್ಕೆ ಅವರ ಬಳಿ ಇರುವ ಬಿಳಿಯ ಸೈನಿಕರೆ ಆ ಪೆಟ್ಟಿಗೆಗಳನ್ನು ತಂದಿಡುವ, ಇತ್ಯಾದಿ ಮೇಲುಸ್ತುವಾರಿಯನ್ನು ನೋಡಿಕೊಳ್ಳುತ್ತಾರೆ ಎನ್ನಿಸುತ್ತೆ" ಎಂದು ತನ್ನ ಅನಿಸಿಕೆಯನ್ನು ಹೇಳಿದ. ಆಚಾರ್ಯರು ವಿಶ್ವನಾಥ ನೊಂದಿಗೆ ಮಾತನಾಡಿದ್ದನ್ನು ನೆನೆಸಿಕೊಳ್ಳುತ್ತಾ, "ಅವನು ಹೇಳಿದಂತೆ ಅವರನ್ನೆಲ್ಲಾ ಬೆಟ್ಟದ ಕಾರ್ಯಾಚರಣೆಗೆ ಬರಬೇಕೆಂದು ಆಜ್ಞೆ ಮಾಡಿದ್ದಾರೆ. ಅಂದರೆ ಈ ಪೆಟ್ಟಿಗೆಗಳ ಕಳ್ಳತನಕ್ಕೆ ಬರುವವರೆಲ್ಲರೂ ಬ್ರಿಟೀಷಿನವರೇ. ಇದನ್ನು ಎದುರಿಸುವುದು ಹೇಗೆ. ಕಾಳ, ನಾಗ, ಬೋಕ, ಯೋಚಿಸಿ, ಸಿದ್ಧರಾಗಿ. ಸಾಕ್ಷಿ, ನಾವು ಅರಣ್ಯಾನಿ ಬೆಟ್ಟವನ್ನು ನೋಡಿಕೊಳ್ಳಬಹುದು. ಏಕೆಂದರೆ ಬರುವವರೆಲ್ಲಾ ನಮ್ಮವರೇ. ಅವರನ್ನು ನಮ್ಮ ಸಹಾಯಕ್ಕೆ ಕರೆಯಬಹುದು. ಆದರೆ ಈ ಪೆಟ್ಟಿಗೆಗಳನ್ನು ಹೇಗಾದರೂ ಮಾಡಿ ಕಾಡು ದಾಟಲು ಬಿಡಬಾರದು!" ಎಂದು ತಮ್ಮ ನಿಲುವನ್ನೂ, ನಿಶ್ಚಯವನ್ನೂ ತಿಳಿಸಿದರು. ಆದರೆ ಒಂದು ಪ್ರಶ್ನೆಯನ್ನು ಕೇಳಲು ಮರೆತಿದ್ದರು. ಬೋಕ ಮುಂದೆ ಬಂದು, "ಸಾಕ್ಷಿ, ಈ ಪೆಟ್ಟಿಗೆ ಕಳ್ಳತನಕ್ಕೆ ನಿಶ್ಚಯ ಆಗಿರುವ ದಿನ ಯಾವುದು?" ಎಂದು ಕೇಳಿದ. ಸಾಕ್ಷಿ ಟಕ್ಕನೆ ತಲೆ ಎತ್ತಿ, "ಈ ಅಮಾವಾಸ್ಯೆ!" ಎಂದ. ಆಚಾರ್ಯರು ತಮ್ಮ ಬೆರಳುಗಳಲ್ಲೇ ಏನೋ ಎಣಿಸಿ, "ಇನ್ನೂ ಎರಡು ದಿನಗಳಲ್ಲೇ!" ಎಂದರು. ಸಾಕ್ಷಿ ಎದ್ದು, ಆಚಾರ್ಯರಿಗೆ ನಮಿಸಿ, ನಾಳೆ ಬರುತ್ತೇನೆ ಎಂದ. ಹೊರಗೆ ಹೋಗಿ, ಒಣಗಿ ಬಿದ್ದಿದ್ದ ಒಂದು ಮರದ ಹೊರಭಾಗವನ್ನು ಕಿತ್ತಿ, ಕೆಳಗೆ ಹಾಕಿದ, ನಮ್ಮನ್ನು ನೋಡಿ, ಭರವಸೆಯಲ್ಲಿ ನಕ್ಕು, ಅದರ ಮೇಲೆ ಕುಳಿತು ಜಾರತೊಡಗಿದ. ಅವನ ವೇಗ ನಿಧಾನವಾಗಿ ಹೆಚ್ಚು ಹೆಚ್ಚು ಬೆಳೆಯತೊಡಗಿತು. ಎಲ್ಲೋ ದೂರದಲ್ಲಿ ಅದರಿಂದ ಉಂಟಾದ ಧೂಳು ಕಂಡಿತು.

ಈಗ ಚಿಂತಿಸಬೇಕಾದ ವಿಷಯ ಬಹಳ ಇತ್ತು. ಒಂದು, ಇನ್ನು ಎರಡೇ ದಿನಗಳಲ್ಲಿ ಪೆಟ್ಟಿಗೆಗಳನ್ನು ಸಾಗಿಸುವ ಯೋಜನೆ ಅವರದ್ದಾಗಿತ್ತು. ಅದಕ್ಕಾಗಿ ಇನ್ನೊಂದು ಹಡಗನ್ನೇ ತರುವ ಸಂಭವ ಬೇರೆ. ಅದನ್ನು ನಾವು ತಡೆಯುವುದು ಹೇಗೆ? ಇಷ್ಟೆಲ್ಲಾ ಯೋಚಿಸುವಾಗ, ಆಗಲೇ ಹೊಳೆಯಬೇಕಿದ್ದ ಅತಿ ಮಹತ್ವದ ಪ್ರಶ್ನೆ ಹೊಳೆಯಿತು. "ಅರಣ್ಯಾನಿ ಬೆಟ್ಟದ ಕಾರ್ಯಾಚರಣೆ ಯಾವಾಗ?" ಈ ಪ್ರಶ್ನೆಯ ಉತ್ತರವೇ ಬಹಳ ಮುಖ್ಯವಾಗಿತ್ತು. ಎರಡೂ ಒಂದೇ ದಿನ ಆಗಿಬಿಟ್ಟರೆ ಗತಿ ಏನು? ಯಾರು ಎಲ್ಲಿ ಹೋಗಬೇಕು? ಇನ್ನು ಎರಡು ದಿನಗಳಷ್ಟೆ ಬಾಕಿ ಇದ್ದವು. ನಾಳೆ ಸಾಕ್ಷಿ ಬರುತ್ತಾನೆಂದು ಗೊತ್ತಿತ್ತು. ಒಂದೇ ದಿನ. ನಿರ್ಣಾಯಕ ದಿನ. ಈಗ ಮಾಡುವುದೇನು? ನಾವೆಲ್ಲರೂ ತಲೆಯ ಮೇಲೆ ಕೈ ಇಟ್ಟುಕೊಂಡು

ಕುಳಿತೆವು. ಆಚಾರ್ಯರು ಗುಡಿಸಲ ಹೊರಗೆ ವೇಗವಾಗಿ ನಡೆಯುತ್ತಿದ್ದರು. ಅವರು ದೀರ್ಘಾಲೋಚನೆಯಲ್ಲಿದ್ದಾಗ ಈ ರೀತಿಯಲ್ಲಿ ವರ್ತಿಸುತ್ತಿದ್ದರು. ಅವರು ಬೆಟ್ಟದ ಎಲ್ಲಾ ದಿಕ್ಕುಗಳಲ್ಲು ಗಮನಿಸುತ್ತಿದ್ದರು. ಆದರೆ ಅವರ ತಲೆಯಲ್ಲಿ ಮಾತ್ರ ಮುಂದಿನ ದಿನ ನಡೆಯುವ ಕಳ್ಳತನವನ್ನು ತಡೆವುದು ಹೇಗೆ ಎಂಬುದರ ಬಗ್ಗೆಯೇ ಭಾವನೆಗಳು ಉಕ್ಕುತ್ತಿದ್ದವು ಎಂದು ನಮಗೆ ಗೊತ್ತಾಗುತ್ತಿತ್ತು. ಎಷ್ಟು ಮಂದಿ ಬೇಕಾಗಬಹುದು, ನಾವು ಇರುವ ನಾಲ್ವರು ಏನೇನೆಲ್ಲಾ ಮಾಡಬಲ್ಲೆವು ಎಂದು ಅವರು ಯೋಚಿಸುತ್ತಿರಬಹುದು. ನಾವೂ ಅವರೊಂದಿಗೆ ಯೋಚಿಸ ತೊಡಗಿದೆವು. ಅಕಸ್ಮಾತ್ತಾಗಿ ಎರಡೂ ಕಳ್ಳತನಗಳು ಒಂದೇ ದಿನವಾದರೆ ನಮಗೆ ಇರುವ ಏಕೈಕ ಗತಿ ಎಂದರೆ ಕಾಂತಾ ಒಬ್ಬನೆ. ಆದರೆ ಅವನಿಗೆ ನಮ್ಮ ಕಾರ್ಯರೂಪವೇನೋ ತಿಳಿಯುವುದು ಹೇಗೆ? ಅವನನ್ನು ನಾವು ಮಾತನಾಡಿಸುವುದಾದರೂ ಹೇಗೆ? ಎಲ್ಲಾ ಪ್ರಶ್ನೆಗಳೂ ಒಂದು ಕಗ್ಗಂಟಾಗಿ ಸಿಕ್ಕಿಕೊಂಡಿದೆ. ಅದನ್ನು ಬಿಡಿಸುವುದು ಹೇಗೆ?

ಆಚಾರ್ಯರು ಬಂಡೆಯ ಮೇಲಿಂದ ಇಳಿದು ಬಂದರು. "ಇಷ್ಟು ಹೊತ್ತು ಬೌದ್ಧಿಕ ಶ್ರಮವೇ ಆಯ್ತು. ಈಗ ನಡೆಯಿರಿ. ಭೌತಿಕ ಶ್ರಮವಾಗಲಿ. ಆಗ ಬುದ್ಧಿಯೂ ಓಡುತ್ತದೆ" ಎಂದು ನಮ್ಮ ಆಯುಧಗಳನ್ನು ಗುಡಿಸಲಿನಿಂದ ತಂದರು. ಬಿಲ್ಲು ಬಾಣ, ಕತ್ತಿ ಹಾಗೂ ಉರುಮಿಗಳನ್ನು ನಾವು ಎತ್ತಿಕೊಂಡು ಬೆಟ್ಟವನ್ನು ವೇಗವಾಗಿ ಇಳಿಯ ತೊಡಗಿದೆವು. ಆಚಾರ್ಯರೂ ನಮಗಿಂತಲೂ ವೇಗವಾಗಿ ಇಳಿಯತೊಡಗಿದರು. ನಾವು ಅವರನ್ನು ಮೀರಿಸಬೇಕೆಂಬ ಹಂಬಲದಲ್ಲಿ ಓಡತೊಡಗಿದೆವು. ಆಚಾರ್ಯರನ್ನು ಯಾರು ತಾನೆ ಮೀರಿಸ ಬಲ್ಲರು? ಆದರೆ ಓಡುತ್ತಾ ಓಡುತ್ತಾ ಆಚಾರ್ಯರು ಎಲ್ಲಿಗೆ ಹೋದರೆಂಬುದೇ ಕಾಣದಾಯಿತು. ನಾವು ಅವರನ್ನು ಹುಡುಕುತ್ತಾ ಹೋದೆವು. ಇನ್ನೂ ಹಗಲೇ ಆಗಿದ್ದರು, ದಟ್ಟ ಮರಗಳ ಕಾರಣ ಬೆಳಕಿನ ಕಿರಣಗಳು ಬರುತ್ತಿರಲಿಲ್ಲ. ಆ ಕತ್ತಲಲ್ಲಿ ಯಾವ ಪ್ರಾಣಿ ಬರಬಹುದೋ ತಿಳಿಯದು. ಇದ್ದಕ್ಕಿದ್ದ ಹಾಗೆ ಏನೋ ಬಂದು ಬೋಕನ ಬೆನ್ನ ಮೇಲೆ ಬಿತ್ತು. ಅವನು ಕಿರುಚಲಿಲ್ಲ. ಆಚಾರ್ಯರ ತರಬೇತಿಯಿಂದ ಅವನು ಕಾಡಿನಲ್ಲಿ ಹೋರಾಡುವ ವಿಧಿಯನ್ನು, ಪೆಟ್ಟು ತಿಂದರೆ ನೋವು ತಡೆದುಕೊಳ್ಳುವ ವಿಧಾನವನ್ನು, ಭಯ ಆದರೆ ನುಂಗಿಕೊಳ್ಳುವ ವಿಧವನ್ನೂ ಕಲಿತಿದ್ದ. ತಣ್ಣಗಿನ ಅನುಭವ ಅವನಿಗಾದಂತಿತ್ತು. ನಿಧಾನವಾಗಿ ಅವನ ಬೆನ್ನನ್ನು ಅವನು ಮುಟ್ಟಿಕೊಂಡ. ಅವನಿಗೆ ಸಿಕ್ಕಿದ ರಸದ ವಾಸನೆಯನ್ನು ಅವನು ನೋಡಿದಾಗ, "ನೇರಳೆ ಹಣ್ಣು" ಎಂದು ಪಿಸುಗುಟ್ಟಿದ. ಇದು ಯಾರದ್ದೋ ಆಟ ಇರಬೇಕೆಂದು ನಾವು ಯೋಚಿಸಿ ಸತತ ಜಾಗೃತಿಯಲ್ಲಿ ತೊಡಗಿದೆವು. ಯಾವ ದಿಕ್ಕಿನಿಂದ ಬರುತ್ತಿದೆ ಎಂದು ಶಬ್ದಗಳನ್ನು ತೀಕ್ಷ್ಣವಾಗಿ ಗಮನಿಸ

ತೊಡಗಿದೆವು. ಒಂದು ಮರದಲ್ಲಿ ಸದ್ದಾದಂತೆ ಭಾಸವಾಯಿತು. ನಾನು ಅತ್ತ ಕಡೆ ಬಾಣವೊಂದನ್ನು ಬಿಟ್ಟೆ. ಅಲ್ಲಿಂದ ಯಾವುದೋ ಗೋಳಾಕಾರದ ವಸ್ತು ಹಾರಿ ಬಂತು. ಬೋಕ ತನ್ನ ಉರುಮಿಯಲ್ಲಿ ಅದನ್ನು ಹೊಡೆದ. ಅದು ಹೋಳು ಹೋಳಾಗಿ ಕೆಳಗೆ ಬಿತ್ತು. ನಾಗನು ಕೆಳಗೆ ಬಿದ್ದದ್ದನ್ನು ಕೈಗೆತ್ತಿಕೊಂಡು ನೋಡಿದ. "ಮಾವು!" ಎಂದು ಪಿಸುಗುಟ್ಟಿದ. ನಮ್ಮನ್ನು ಹಿಂಸಿಸುವ ಉದ್ದೇಶವಿಲ್ಲದ ಯಾರೋ ಆಡುತ್ತಿರುವ ಆಟವಿದು ಎಂದು ತಿಳಿಯಿತು. ಯಾರೋ ಅಲ್ಲ, ಆಚಾರ್ಯರೇ ಇರಬೇಕು ಎಂದು ನಾವು ಮನಗಂಡೆವು. ಆದರೂ ನಮಗೆ ಇದೊಂದು ಅಭ್ಯಾಸವೆಂದು ನಾವೂ ಮುಗ್ಧರಂತೆ ಆಟವಾಡತೊಡಗಿದೆವು. ಒಂದಷ್ಟು ಹಣ್ಣುಗಳನ್ನು ನಮ್ಮತ್ತ ಎಸೆದ ಮೇಲೆ ಆಚಾರ್ಯರು ತಾವಾಗಿಯೇ ಬಂದು, "ಪರ್ವಾಗಿಲ್ಲ ಕಣ್ರೋ. ನೀವು ಸತತ ಜಾಗೃತರಾಗಿದ್ದೀರಿ!" ಎಂದು ಹೊಗಳಿದರು. ಆದರೆ ಅದು ಬೇಕಿರುವುದು ಅಮಾವಾಸ್ಯೆಯ ದಿನ.

ನಾವು ಆಚಾರ್ಯರೊಂದಿಗೆ ಸೈನಿಕರ ಜಮಾವಣೆ ಆಗಿದ್ದ ಸ್ಥಳಕ್ಕೆ ನಿಧಾನ ವಾಗಿ ಹೋದೆವು. ಅಲ್ಲಿ ಕೆಲಸ ಕಾರ್ಯಗಳು ಜೋರಾಗಿಯೇ ನಡೆಯುತ್ತಿತ್ತು. ನಾವು ಮೌನದಿಂದ ಎಲ್ಲವನ್ನು ಗಮನಿಸತೊಡಗಿದೆವು. ಅಲ್ಲೇ ನಾಲ್ಕು ಅಧಿಕಾರಿಗಳ ಮಧ್ಯದಲ್ಲಿ ಕಾಂತಾ ನಿಂತಿದ್ದ. ಅವನ ಗಮನವನ್ನು ಸೆಳೆಯುವುದು ಹೇಗೆ ಎಂದು ನಾವು ಯೋಚಿಸುತ್ತಿರುವಾಗ, ಆಚಾರ್ಯರು ಕೊಂಚ ದೂರಕ್ಕೆ ಹೋಗಿ ಸಿಂಗಳೀಕದಂತೆ ಕೂಗಿದರು. ಅಲ್ಲಿದ್ದ ಎಲ್ಲ ಬಿಳೀ ಜನರೂ ನಮ್ಮ ಕಡೆ ನೋಡಿದರು. ನಾವು ಮರದ ಹಿಂದೆ ಬಚ್ಚಿಟ್ಟುಕೊಂಡಿದ್ದೆವು. ಈಗೇನಾಗುತ್ತದೋ ಎಂದು ಭಯ ಪಡತೊಡಗಿದೆವು. ಬ್ರಿಟೀಷರಿದ್ದ ಕಡೆಯಿಂದ ಕಾಂತಾ ಬರುತ್ತಿರುವುದು ಕಂಡಿತು. ಅವನು ನಮ್ಮ ಕಡೆ ಬಂದು ನಾವು ಅವನಿಗೆ ಕಂಡರೂ ಕಾಣದಂತೆ ಅವನು ಕೆಳಗೆ ಬಿದ್ದಿದ್ದ ಕಲ್ಲೊಂದನ್ನು ಎತ್ತಿಕೊಂಡು ಮರದ ಕಡೆಗೆ ಎಸೆದ. ಬಿಳಿಯರಿಗೆ ಅವನು ಸಿಂಗಳೀಕಗಳನ್ನು ಓಡಿಸುತ್ತಿರುವ ಹಾಗೆ ಕಾಣಿಬೇಕು. ಆದರೆ ಆಚಾರ್ಯ ಹಾಗೂ ನಮಗೆ ಮಾತ್ರ ಕಾಂತಾ ಬಂದಿದ್ದು ನಮ್ಮ ಕೆಲಸಕ್ಕೆ ಎಂದು ತಿಳಿಯಬೇಕು. ಅದ್ಭುತ ಬೇಹುಗಾರ ಕಾಂತಾ. ಕಾಂತಾ ಕೆಳಗೆ ಬಿದ್ದಂತೆಯೂ ನಟಿಸಿದ. ಆಚಾರ್ಯರು ಪಿಸುಗುಟ್ಟಿದರು–"ಅರಣ್ಯಾನಿ ಬೆಟ್ಟದ ಕಾರ್ಯಾಚರಣೆ ಯಾವತ್ತು?" ಅಷ್ಟರಲ್ಲಿ ಅಧಿಕಾರಿ ಒಬ್ಬನು "ಟೈಗರ್!!" ಎಂದು ಕೂಗಿದಂತಾಯಿತು. ಕಾಂತಾ, "ಅಯ್ಯೋ ಬಂದೆ ಸಾರ್..ಅಮಾವಾಸ್ಯೆ, ಅಮಾವಾಸ್ಯೆ ಹತ್ತಿರದಲ್ಲೇ ಇದೆ ಅಲ್ಲವೆ, ಕಣ್ಣು ಕಾಣಲ್ಲ!" ಎಂದು ಕಾಂತಾ ಹೇಳಿದ ತಕ್ಷಣ ಆಚಾರ್ಯರು ಸರಿ ಎನ್ನುವಂತೆ ತಲೆಯಾಡಿಸಿದರು. ಸಿಂಗಳೀಕವು ಭಯದಲ್ಲಿ ಕೂಗುವಂತೆ ಕೂಗಿ, ಕ್ರಮೇಣ ದೂರ ಹೋದಂತೆ ನಟಿಸಿದರು. ಕಾಂತಾ ಹಿಂದಿರುಗಿದ. ಆಚಾರ್ಯರು ಏನೂ ಮಾತನಾಡದೆ ಬೆಟ್ಟದ ಕಡೆಗೆ

ಹೋಗತೊಡಗಿದರು. ನಾವೂ ನಿಶ್ಶಬ್ಧವಾಗಿ ಹನುಮಂತ ಬೆಟ್ಟದ ಕಡೆ ಓಡತೊಡಗಿದೆವು. ನಾವು ತಲುಪುವ ಮುನ್ನವೇ ಆಚಾರ್ಯರು ಗುಡಿಸಲೊಳಗೆ ಕುಳಿತು ಬೆವರುತ್ತಿದ್ದರು. ಅವರ ಕೈಕಾಲುಗಳು ನಡಗುತ್ತಿದ್ದವು. ಅವರು ಶಾಂತರಾಗಿದ್ದರೂ ಅವರ ದೀರ್ಘ ಗಂಭೀರಾಲೋಚನೆ ಅವರಲ್ಲಿನ ಕೆಲವು ಕಾಣುವ ಬದಲಾವಣೆಗಳನ್ನು ತಂದಿದ್ದವು. ನಮಗೆ ಓಡಿ ಬರುವಷ್ಟರಲ್ಲಿ ಸಾಕಾಗಿತ್ತು. ಆದರೆ ಕಾಂತಾ ಎರಡು ಕ್ಷಣಗಳಲ್ಲಿ ಯಾರಿಗೂ ತಿಳಿಯದಂತೆ ಆಚಾರ್ಯರಿಗೆ ಮಹತ್ವದ ಮಾಹಿತಿಯನ್ನು ಕೊಟ್ಟಿದ್ದನು.

ಮಾಹಿತಿ ಕೊಟ್ಟಿದ್ದಿರಲಿ. ಈಗ ಎರಡೂ ಘಟನೆಗಳು ನಡೆಯುವುದು ಒಂದೇ ದಿನ! ಇರುವವರು ಕೆಲವೇ ಜನ. ನಾವು ಎರಡನ್ನೂ ತಡೆಯುವುದು ಹೇಗೆ? ಸಾಕ್ಷಿ ಎಲ್ಲಿರುತ್ತಾನೆ? ಕಾಂತಾ ಎಲ್ಲಿರುತ್ತಾನೆ? ನಾವು ಎಲ್ಲಿರಬೇಕು? ಆಚಾರ್ಯರು ಎಲ್ಲಿರುತ್ತಾರೆ?

ಆಚಾರ್ಯರು ಎದ್ದು ಹೋಗಿ ತಮ್ಮ 'ಚಂಡೆ'ಯನ್ನು ಕೈಗೆತ್ತಿಕೊಂಡರು. ಹನುಮಂತನ ಮೂರ್ತಿಯ ಮುಂದೆ ಚಾಪೆಯನ್ನು ಹಾಸಿಕೊಂಡು ಕುಳಿತರು. ಧ್ಯಾನದಲ್ಲಿ ತೊಡಗಲು ಒದ್ದಾಡುತ್ತಿದ್ದರು. ಆಗ ಸರಿಯಾಗಿ ದೂರದಿಂದ ಚಂಡೆಯ ಸದ್ದು ಕೇಳಿಸಿತು. ಆಚಾರ್ಯರು ಅದನ್ನು ಕೇಳುತ್ತಾ, ಅದರದ್ದೇ ವಿನ್ಯಾಸದಲ್ಲಿ ಚಪ್ಪಾಳೆಯನ್ನು ಹೊಡೆಯತೊಡಗಿದರು. ನಂತರ ಚಂಡೆಯನ್ನು ತೆಗೆದುಕೊಂಡು ಇನ್ನೊಂದು ವಿನ್ಯಾಸದಲ್ಲಿ ಬಾರಿಸತೊಡಗಿದರು. ಎರಡೂ ಕಡೆ ಸದ್ದು ನಿಂತ ಮೇಲೆ, ನಾವು ಹೋಗಿ ಆಚಾರ್ಯರ ಪಕ್ಕದಲ್ಲಿ ಕುಳಿತೆವು. "ಆಚಾರ್ಯರೇ, ಅರಣ್ಯಾನಿ ಬೆಟ್ಟದಿಂದ ಬಂದ ಸಂದೇಶ ಏನು?" ಎಂದು ನಾಗ ಕೇಳಿದ. ಆಚಾರ್ಯರು, "ಸಂಗ್ರಾಮಕ್ಕೆ ಸಿದ್ಧವಾಗಿದ್ದೇವೆ ಎನ್ನುವುದು ಅವರ ಸಂದೇಶ. ಆದರೆ ಎರಡೆರಡು ಕಡೆ ಹೀಗಾಗುತ್ತಿರುವಾಗ ಏನೂ ಮಾಡಲು ತೋಚುತ್ತಿಲ್ಲ" ಎಂದು ಮರುಗಿದರು.

ಸ್ವಲ್ಪ ಹೊತ್ತು ಎಲ್ಲರೂ ಮೌನವಾಗಿದ್ದೆವು. ಆಚಾರ್ಯರು ಎದ್ದು ನಿಂತರು. "ಇಲ್ಲ. ಇದನ್ನು ಹೀಗೆ ದುಃಖದಿಂದ ಮಾಡಿದರೆ ಆಗದು. ರೋಷದಿಂದ ಮುನ್ನುಗ್ಗಬೇಕು. ಹೊರಗೆ ಬನ್ನಿ" ಎನ್ನುತ್ತಾ ಆಚಾರ್ಯರು ಹೊರಗೆ ಹೋಗಿ ಒಂದು ಬಂಡಿಯ ಮೇಲೆ ಕುಳಿತರು. ಅವರ ಕೈಯಲ್ಲಿ ಮಸಿ ಇತ್ತು. ನಾವೂ ಅಲ್ಲೇ ಕುಳಿತೆವು. ಆಚಾರ್ಯರು ಸುಲಭವಾಗಿ ಅರಣ್ಯದ ನಕ್ಷೆಯನ್ನು ಬಿಡಿಸತೊಡಗಿದರು. ಒಂದು ಕಡೆ ದೊಡ್ಡದೊಂದು ಚುಕ್ಕೆಯನ್ನು ಇಟ್ಟು, ಅರಣ್ಯಾನಿ ಬೆಟ್ಟ ಎಂದು ಬರೆದರು. ನಂತರ ನದಿಯು ಹೋಗುವ ಮಾರ್ಗವನ್ನು ಗುರುತಿಸಿ ಅದನ್ನು ಎಳೆಯುತ್ತಾ ಹೋದರು. ಅದನ್ನು ಕಾಡಿನ ಇನ್ನೊಂದು ಭಾಗದ ಸಮೀಪಕ್ಕೆ ನಿಲ್ಲಿಸಿದರು. ಅದರಿಂದ ಸ್ವಲ್ಪ ದೂರದಲ್ಲಿ ಇನ್ನೊಂದು ಚುಕ್ಕೆ ಹಾಕಿ

ಚರ್ಚು ಎಂದು ಬರೆದರು. ನಂತರ ಆರು ಪುಟ್ಟ ಕಲ್ಲುಗಳನ್ನು ಆರಿಸಿ ತರುವಂತೆ ಹೇಳಿದರು. ನಾನು ಅಲ್ಲೇ ಬಿದ್ದಿದ್ದ ಕಲ್ಲುಗಳನ್ನು ಅವರ ಕೈಗಿತ್ತೆ. ಅವರು ಮೂರು ಕಲ್ಲುಗಳನ್ನು ಅರಣ್ಯಾನಿ ಬೆಟ್ಟದ ಚುಕ್ಕೆಯ ಮೇಲೆ ಇಟ್ಟರು. ನಂತರ ಒಂದು ಕಲ್ಲನ್ನು ನದಿಯಿಂದ ಚರ್ಚಿನ ಬಳಿ ಹೋಗುವ ದಾರಿಯ ಮೇಲಿಟ್ಟರು. ಇನ್ನೆರಡು ಕಲ್ಲುಗಳನ್ನು ಚರ್ಚು ಎಂದು ಬರೆದಿದ್ದ ಚುಕ್ಕೆಯ ಮೇಲೆ ಇಟ್ಟರು. ನಾವು, 'ಈ ಆರು ಕಲ್ಲುಗಳು ಯಾವುದರ ಸೂಚಕ' ಎಂದು ಯೋಚಿಸುತ್ತಿದ್ದೆವು. ಬೋಕ ನನ್ನ ಹೆಗಲ ಮೇಲೆ ಕೈ ಇಟ್ಟು, "ಆಚಾರ್ಯರೇ ಈ ಆರು ಕಲ್ಲುಗಳು ಯಾರು ಯಾರು?" ಎಂದು ಕೇಳಿದ. ಆಚಾರ್ಯರು, "ಮೂರು ಕಲ್ಲುಗಳು ನೀವು ಮೂವರು. ವೀರತ್ರಯರು. ಇನ್ನು ಎರಡು ಕಲ್ಲುಗಳು ಕಾಂತಾ ಹಾಗೂ ಸಾಕ್ಷಿ, ವೀರದ್ವಯರು. ಇನ್ನು ಒಂದು ಕಲ್ಲು ನಾನು. ಕೃಷ್ಣಾಚಾರ್ಯ." ಎಂದರು. ಆಗ ನಾವು ಒಟ್ಟಿಗೆ, "ಜಗದೇಕವೀರ!" ಎಂದೆವು. ಇಂತಹ ಸಂದಿಗ್ಧ ಸಮಯದಲ್ಲಿ ನಗುವಿನ ಕ್ಷಣಗಳು. ವಿಪರ್ಯಾಸ. ಆಚಾರ್ಯರು ಅರಣ್ಯಾನಿ ಬೆಟ್ಟದ ಕಡೆ ನೋಡಿ, ಕೈ ಮುಗಿದು, "ಅರಣ್ಯಾನಿ" ಎಂದರು. ನಾಗನು, "ನಾವು ಏನು ಮಾಡಬೇಕು ಆಚಾರ್ಯರೆ? ಎಲ್ಲಿರಬೇಕು?" ಎಂದು ಕೇಳಿದ. ಆಚಾರ್ಯರು ಅರಣ್ಯಾನಿ ಬೆಟ್ಟದ ಕಡೆ ಇದ್ದ ಮೂರು ಕಲ್ಲುಗಳನ್ನು ತೋರಿ, "ಇದು ನೀವು. ನೀವು ಒಂದು ಮುಖ್ಯ ಕೆಲಸ ಮಾಡಬೇಕು. ಮೊದಲು ಹಳ್ಳಿಗೆ ಹೋಗಿ, ಆ ಮುದುಕನನ್ನು ಹೇಗಾದರೂ ಮನವೊಲಿಸಿ, ನಿಮ್ಮ ಉದ್ದೇಶವನ್ನು ಹೇಳಿ ಕರೆದುಕೊಂಡು ಬರಬೇಕು. ಅವರು ನಿಮ್ಮೊಟ್ಟಿಗೆ ಇದ್ದರೆ ಅರಣ್ಯಾನಿ ಬೆಟ್ಟವನ್ನು ಸುಲಭವಾಗಿ ಏರಬಹುದು. ಈ ಚಂಡೆಯನ್ನು ಎತ್ತಿಕೊಂಡು ಹೋಗಿ. ಅದನ್ನು ಅವರಿಗೆ ಕೊಡಿ. ಮೊದಲು ಹೋಗಿ ಅವರನ್ನು ಮಾತನಾಡಿಸಿ!" ಎಂದು ನಾವು ಮಾಡಬೇಕಾದುದರ ಬಗ್ಗೆ ಹೇಳಿದರು. ನಂತರ ಮುಂದಿನ ಯೋಜನೆ ಏನು ಎನ್ನುವುದರ ಬಗ್ಗೆಯೂ ಹೇಳತೊಡಗಿದರು. "ನೀವು ಯಾವುದೇ ಕಾರಣಕ್ಕೆ ಭಯ ಪಡಬೇಕಾಗಿಲ್ಲ. ಬೆಟ್ಟದ ಕಾರ್ಯಾಚರಣೆಗೆ ಬರುವವರು ಎಲ್ಲ ನಮ್ಮವರೇ ಎಂದು ತಿಳಿದಾಗಿದೆ. ಆದ್ದರಿಂದ ನೀವು ವಿಶ್ವನಾಥನನ್ನು ಹೇಗಾದರೂ ಸಂಧಿಸಬೇಕು. ಅವನನ್ನು ಸಂಧಿಸಿ, ನೀವು ಎಲ್ಲರನ್ನೂ ಹೇಗಾದರೂ ದೇವಾಲಯವನ್ನು ಕಾಪಾಡುವ ಕಡೆಗೆ ತಿರುಗಿಸಬೇಕು. ಅಷ್ಟೇ ಅಲ್ಲ. ಅರಣ್ಯಾನಿ ಬೆಟ್ಟದ ಮೇಲೂ ಜನ ಇರಬಹುದು. ಅವರನ್ನು ರಕ್ಷಿಸುವ ಜವಾಬ್ದಾರಿ ನಿಮ್ಮದು. ಅವರು ಆಯುಧ ಪ್ರಯೋಗದಲ್ಲಿ ಪರಿಣಿತರು. ಆ ಪ್ರಯೋಗವನ್ನು ಯಾವುದಾದರೂ ಪ್ರತಿಕೂಲ ಪರಿಸ್ಥಿತಿಯಲ್ಲಿ ಉಪಯೋಗಿಸಲು ಹಿಂಜರಿಯ ಬೇಡಿ. ನಿಮ್ಮ ಆಯುಧಗಳೂ ನಿಮ್ಮ ಬಳಿ ಇರಲಿ. ಇನ್ನು ಕೆಲವು ಹೊತ್ತಲ್ಲಿ ಸಾಕ್ಷಿ ಇಲ್ಲಿಗೆ ಬರಬಹುದು. ಅವನು ಬಂದಾಗ ಬಂಡಿಗಳನ್ನು ಹೇಗೆ ವ್ಯವಸ್ಥೆ

ಮಾಡಿರುತ್ತಾನೆ, ತುರ್ತು ಪರಿಸ್ಥಿತಿಯಲ್ಲಿ ನೀವು ಮಾಡಬೇಕಾದುದೇನು? ಯಾರನ್ನು ಹೇಗೆ ಕರೆಯಬೇಕು? ಯಾವ ಸದ್ದು ಯಾವ ಸಂದೇಶ ಇವೆಲ್ಲವನ್ನೂ ಅವನು ಬಂದಮೇಲೆ ತೀರ್ಮಾನ ಮಾಡೋಣ. ಇನ್ನು ಬಂದೂಕು ಇತ್ಯಾದಿಗಳನ್ನು ನೋಡಿ ಗಾಬರಿಯಾಗಬೇಡಿ. ಯಾವುದಕ್ಕೂ ಬಚ್ಚಿಟ್ಟುಕೊಂಡು ಮರೆಯಿಂದ ಯುದ್ಧ ಮಾಡಿ. ಆದರೆ ನಮ್ಮೊಂದಿಗೆ ಅಭಿನವ ಭಾರತದವರೇ ಇರುವುದರಿಂದ ಬಹುಶಃ ಯಾವುದೇ ಭಯ ತೊಂದರೆಗಳಿಲ್ಲ. ನಿಮ್ಮ ಹುಷಾರಿನಲ್ಲಿ ನೀವು ಇರಬೇಕು" ಎಂದು ಬಹಳಷ್ಟು ಸೂಚನೆಗಳನ್ನು ಕೊಟ್ಟರು. ನಂತರ, ಆಚಾರ್ಯರು ಅಲ್ಲಿದ್ದ ನನ್ನ ಬಿಲ್ಲನ್ನು ಕೈಗೆತ್ತಿಕೊಂಡು, ಯತ್ರ ಚೈವೋಥತೇ ಶಬ್ದಸ್ತಂ ಸಮ್ಯಕ್ತತ್ರ ಚಿನ್ತಯೇತ್। ಕರ್ಣೇಂದ್ರಿಯ ಮನೋ ಯೋಗಾಲ್ಲಕ್ಷ್ಯಂ ನಿಶ್ಚಯತಾಂ ನಯೇತ್॥ ಎಂದು ಹೇಳಿದರು. "ಶಬ್ದದ ಮೂಲವನ್ನು ಕಂಡುಹಿಡಿದು, ಏಕಾಗ್ರತೆಯಿಂದ ಅದನ್ನು ನೋಡದೆಯೇ ಲಕ್ಷ್ಯವನ್ನು ಭೇದಿಸಬೇಕು." ಇದು ನೀನು ಮರೆಯಲ್ಲಿದ್ದಾಗ ತುಂಬಾ ಉಪಯೋಗಕ್ಕೆ ಬರುವ ವಿಧಾನ ಕಾಳ. ನೆನಪಿರಲಿ. ಬೋಕ, ನಿನ್ನ ಉರುಮಿ ಸದಾ ನಿನ್ನ ಕೈಯಲ್ಲೇ ಇರಲಿ, ಗುಂಪಾಗಿ ಶತ್ರುಗಳು ಬಂದಾಗ, ಚಿಂತಿಸದೇ ಹಿಂದೆಯಿಂದ ಒಬ್ಬೊಬ್ಬನನ್ನೇ ತೊಡೆದುಹಾಕು. ನಾಗ, ನಿನಗೂ ಅದೇ ಕೆಲಸ. ಶತ್ರು ಕಡೆಯಿಂದ ಬರುವ ಬಾಣಗಳನ್ನು ಭೇದಿಸಿ, ನಿಮ್ಮವರನ್ನು ಕಾಪಾಡು. ದೇವಾಲಯವನ್ನು ಸೇರಿದ ಮೇಲೆ, ಅದಕ್ಕೆ ಕಾವಲಾಗಿ ನಿಲ್ಲು. ಕಾಳ, ನೀನು ಮರದ ಮೇಲೆ ಕುಳಿತು ಚಲನವಲನಗಳನ್ನು ಸೂಕ್ಷ್ಮವಾಗಿ ಗಮನಿಸಬೇಕು. ನಿನ್ನ ಸ್ನೇಹಿತರಿಗೆ ಇಲ್ಲವೇ ಬಾಣಗಳ ಮೂಲಕ, ಅಥವಾ ಕೂಗು ಹಾಕುವ ಮೂಲಕ ಎಚ್ಚರಿಕೆಗಳನ್ನು ಕೊಡುತ್ತಿರು. ಇಂದು ರಾತ್ರಿ ಚೆನ್ನಾಗಿ ವಿಶ್ರಾಂತಿ ಪಡೆಯಿರಿ. ನಾಳೆ ನಿಮ್ಮ ಬದುಕುಗಳೇ ಸಾರ್ಥಕವಾಗುವ ದಿನ ಆಗಬಹುದು" ಎಂದು ಆಚಾರ್ಯರು ಮಾತನ್ನು ನಿಲ್ಲಿಸಿದರು. ನಾವು ನೇರವಾಗಿ ಕುಳಿತು ಅವರ ಮಾತನ್ನೇ ಕೇಳುತ್ತಿದ್ದೆವು. ಆಚಾರ್ಯರು ಇದ್ದಕ್ಕಿದ್ದ ಹಾಗೆ, "ಓಡಿ, ಓಡಿ ಮೊದಲು ಹಳ್ಳಿಯಲ್ಲಿನ ಮುದುಕನನ್ನು ಕರೆದುಕೊಂಡು ಬನ್ನಿ!" ಎಂದು ಕಳುಹಿಸಿದರು. ನಾವು ಎದ್ದು ನಮ್ಮ ಆಯುಧಗಳನ್ನೆತ್ತಿಕೊಂಡೆವು. ಆಚಾರ್ಯರು ಮೂವರನ್ನು ಹತ್ತಿರ ಕರೆದು, ಹನುಮಂತನ ಬಳಿ ಇದ್ದ ಕುಂಕುಮವನ್ನು ಮೂವರ ಹಣೆಗೂ ಇಟ್ಟರು. ನಾವು ಒಮ್ಮೆ ಸಾಕ್ಷಿ ಮಾಡಿದ್ದಂತೆ ಒಣಗಿದ್ದ ಮರದ ತೊಗಟೆಯನ್ನು ಕಿತ್ತಿ, ಅದರ ಮೇಲೆ ಕುಳಿತು ಬೆಟ್ಟದ ತಪ್ಪಲಿಗೆ ಜಾರಿದೆವು. ನಮಗೆ ನೀರಿನಲ್ಲಿ ಜಾರಿ ಅಭ್ಯಾಸವಿತ್ತು. ಆದರೆ ಈ ಕಲ್ಲುಗಳ ಮೇಲೆ ತೊಗಟೆಯಲ್ಲಿ ಜಾರಿ ಅಭ್ಯಾಸವಿರಲಿಲ್ಲ. ತಪ್ಪಲಲ್ಲಿ ಮುಗ್ಗರಿಸಿ ಪಲ್ಟಿ ಹೊಡೆದೂ ಬಿದ್ದೆವು. ಆದರೆ ಎಲ್ಲೂ ಏಟಾಗಲಿಲ್ಲ. ಇನ್ನು ಹೆಚ್ಚು ಸಮಯವಿರಲಿಲ್ಲ. ಎರಡೇ ದಿನ. ನಾವು

ಓಡತೊಡಗಿದೆವು. ಇನ್ನೇನು ನದಿ ಸಮೀಪಿಸುತ್ತಿದೆ ಎಂದಾಗ ಬೋಕನು, "ಅಲ್ಲ ಕಣ್ರೋ ದಾರೀನೆ ಗೊತ್ತಿಲ್ವಲ್ರೋ!" ಎಂದ. ನಾವೂ ಗಾಬರಿಯಾದೆವು. ಆಗ ಆಚಾರ್ಯರು ಹೇಳಿದ ಮಾತು ನೆನಪಾಯಿತು. "ಉದ್ದ ಮರಗಳು! ಸತತ ಜಾಗೃತಿ" ನಾನು, "ಇರಿ ಒಂದೇ ನಿಮಿಷ" ಎನ್ನುತ್ತಾ ಒಂದು ಉದ್ದ ತೇಗದ ಮರವನ್ನು ಗುರುತಿಸಿ ಹತ್ತತೊಡಗಿದೆ. ಒಂದು ರೆಂಬೆ ಹತ್ತಲು ಅನುಕೂಲಕರ ಎನಿಸಿದಾಗ ಅದರ ಮೇಲೆ ನಿಧಾನವಾಗಿ ಕಾಲಿಟ್ಟು ಮುಂದೆ ಸಾಗಿದೆ. ಅಲ್ಲಿಂದ ಅಮೋಘ ದೃಶ್ಯ ಕಂಡಿತು. ಹವಾ ಟೈಗರ್‌ಬರಹ ಇದ್ದ ಜಲಪಾತದ ದಾರಿಯಿಂದ ಮುಂದೆ ಸಾಗಿದರೆ ಹಳ್ಳಿ. ನಾನು ನಿಧಾನವಾಗಿ ಕೆಳಗಿಳಿದು, ಕಂಡಿದ್ದನ್ನು ಹೇಳಿ, ಮತ್ತೆ ಓಡತೊಡಗಿದೆವು. ಜಲಪಾತದ ಸದ್ದು ಕೇಳತೊಡಗಿತು. ಅದನ್ನು ದಾಟಿಕೊಂಡು ನಾವು ಕಾಲುದಾರಿಯನ್ನು ತಲುಪಿದೆವು. ಸದ್ದು ಮಾಡದೆ, ಹುಲುಸಾಗಿ ಬೆಳೆದಿದ್ದ ಮುಳ್ಳಿನ ಬಳ್ಳಿಗಳನ್ನು ನಾಗ ಕಡಿದು ಪಕ್ಕಕ್ಕೆ ಹಾಕತೊಡಗಿದ. ಅಲ್ಲಿ ಯಾರೂ ಬಂದೇ ಇಲ್ಲವೆಂದು ತಿಳಿಯಿತು. ಆಗಾಗ್ಗೆ ಯಾರಾದರೂ ಬರುತ್ತಿದ್ದರೆ ಕಾಲುದಾರಿಯು ಯಾವುದೇ ಗಿಡಗಳಿಲ್ಲದೇ ಇರುತ್ತಿತ್ತು. ಮುದುಕನು ಇನ್ನೂ ಬದುಕಿಯೇ ಇದ್ದಾನೆಯೇ ಎಂಬ ಸಂಶಯ ಉಂಟಾದರೂ, ಬದುಕಿರುತ್ತಾನೆ ಎಂಬ ಭರವಸೆಯಲ್ಲಿ ನಾವು ಹಳ್ಳಿಯನ್ನು ಪ್ರವೇಶಿಸಿದೆವು. ರಣಹದ್ದುಗಳು ಅಲ್ಲಿ ಬಿದ್ದಿದ್ದ ಒಂದು ದೇಹವನ್ನು ಹೆಕ್ಕಿ ಹೆಕ್ಕಿ ತಿನ್ನುತ್ತಿದ್ದವು. ಇನ್ನೊಂದು ಮೃತ ದೇಹದ ಮಾಂಸವೆಲ್ಲವೂ ಮಾಯವಾಗಿ ಕೇವಲ ಮೂಳೆಗಳು ಉಳಿದಿದ್ದವು. ಅಲ್ಲಲ್ಲಿ ಮೆತ್ತಿಕೊಂಡಿದ್ದ ಮಾಂಸವನ್ನು ಈ ರಣಹದ್ದುಗಳೇ ತಿನ್ನುತ್ತಿದ್ದವು. ನಾನು ಒಂದು ಬಾಣವನ್ನೆತ್ತಿಕೊಂಡು ಆ ದೇಹದ ಪಕ್ಕಕ್ಕೆ ಗುರಿಯಿಟ್ಟು ಬಿಟ್ಟೆ. ರಣಹದ್ದುಗಳೆಲ್ಲ ಹೆದರಿ ಹಾರಿಹೋದವು. ನಾವು ಓಡಿ ಓಡಿ, ಮುದುಕನು ಅಂದು ಹೊಕ್ಕಿದ್ದ ಮನೆಯ ಬಳಿ ನಿಂತೆವು. ಒಳಗಿನಿಂದ ಕೆಮ್ಮುವ ಸದ್ದು ಕೇಳಿಸಿತು. ಮುದುಕನು ಬದುಕೇ ಇದ್ದಾನೆ ಎಂದು ಖಚಿತ ವಾಯಿತು. ನಿರಾಳವೂ ಆಯಿತು. ನಾವು ಬಾಗಿಲನ್ನು ತಟ್ಟಿದೆವು. ಕೆಮ್ಮು ನಿಂತಿತು. ಮತ್ತೆ ನಾವು ತಟ್ಟದಿದ್ದಾಗ ಕೆಮ್ಮು ಶುರುವಾಯಿತು. ನಾವು ಮತ್ತೆ ಬಾಗಿಲನ್ನು ತಟ್ಟಿದೆವು. "ಅಯ್ಯೋ, ಈ ಪಕ್ಷಿಗಳು! ಹೋಯ್! ಹೋಗಿ ಹೋಯ್!" ಎಂದು ಮುದುಕನು ಚೀರಿದನು. ಚೀರಿದರಿಂದ ಅವನಿಗೆ ಇನ್ನಷ್ಟು ನೋವಾಗಿ ಕೆಮ್ಮತೊಡಗಿದನು. ನಾವು ಮತ್ತೆ ಬಾಗಿಲು ತಟ್ಟಿದೆವು. ಆಗ, ಯಾವುದೋ ಲೋಹದ ವಸ್ತುವನ್ನು ಕೈಗೆತ್ತಿಕೊಂಡಾಗ ಉಂಟಾಗುವ ಸದ್ದು ನಮಗೆ ಕೇಳಿಸಿತು. "ಯಾರು? ನಿಮ್ಮ ಕತ್ತಿಯಲ್ಲೇ ನಿಮ್ಮ ಪ್ರಾಣ ತೆಗೀತೀನಿ? ಯಾರು?" ಎಂದು ಕೋಪದಲ್ಲಿ ಮುದುಕ ಕೇಳಿದ. ಆಗ ನಾನು, "ನಾವು ವಿಚಿತ್ರ ಕತ್ತಿಯವರಲ್ಲ!" ಎಂದೆ. ಮುದುಕ ಇನ್ನಷ್ಟು ಕೋಪಗೊಂಡು "ಹಾಗಿದ್ದರೆ ಯಾರು?" ಎಂದ. ಬೋಕನು, ಇರು ಎನ್ನುವಂತೆ

ಸನ್ನೆ ಮಾಡಿ, "ಅರಣ್ಯಾನರಣ್ಯಾನ್ಯಸೌ ಯಾ ಪರೇವ ನಶ್ಯಸಿ" ಎಂದು ಹೇಳತೊಡಗಿದ. ಬಾಗಿಲು ನಿಧಾನವಾಗಿ ತೆರೆದುಕೊಂಡಿತು. ಮುದುಕ ತನ್ನ ತಲೆಗೆ ಬಟ್ಟೆ ಕಟ್ಟಿಕೊಂಡೇ ಇದ್ದ. ಅವನ ಕೈಯಲ್ಲಿ ವಿಚಿತ್ರ ಕತ್ತಿಯಿತ್ತು. ನಮ್ಮನ್ನು ನೋಡಿದ ತಕ್ಷಣ, "ಯಾರಪ್ಪ ನೀವು?" ಎಂದು ಮಮತೆಯಿಂದ ಕೇಳತೊಡಗಿದ. ನಾಗ ಮುಂದೆ ಹೋಗಿ, ಮುದುಕನನ್ನು ಪ್ರೀತಿಯಿಂದ ಹಿಡಿದುಕೊಂಡು ಅಲ್ಲೇ ಕೂರಿಸಿದ. "ತಾತ, ನಾವು ಕೃಷ್ಣಾಚಾರ್ಯರ ಶಿಷ್ಯರು. ಅರಣ್ಯಾನಿಯ ಸೈನಿಕರು!" ಎಂದು ಹೆಮ್ಮೆಯಿಂದ ಹೇಳಿದ. ಮುದುಕನಿಗೆ ಅರ್ಥವಾಗಲಿಲ್ಲ. ನಾವು ವಿವರವಾಗಿ ಎಲ್ಲವನ್ನೂ ಹೇಳ ಹೋಗಲಿಲ್ಲ. ಕೇವಲ ಬ್ರಿಟೀಷರು ಬಂದಿರುವುದರ ಬಗ್ಗೆ, ಕಾಂತಾನ ನಿಜವಾದ ಉದ್ದೇಶ ಏನು ಎನ್ನುವುದರ ಬಗ್ಗೆ ಹೇಳಿದೆವು. ಮುದುಕನ ಕಣ್ಣಲ್ಲಿ ನೀರು ತುಂಬಿತ್ತು, "ಅನ್ಯಾಯವಾಗಿ ಕೊಂದು ಹಾಕಿದರಪ್ಪ! ಅಷ್ಟೂ ಜನರನ್ನೂ! ಈಗ ದೈವವನ್ನೂ ಬಿಡುವುದಿಲ್ಲ ಎನ್ನುತ್ತಾರೆಯೇ!?" ಎಂದು ಅಳತೊಡಗಿದರು. ನಾವು ಅವರ ಎದೆಯನ್ನು ಸವರಿ, "ಸಮಾಧಾನ ಮಾಡಿಕೊಳ್ಳಿ! ಧರ್ಮೋ ರಕ್ಷತಿ ರಕ್ಷಿತಃ! ಈಗ ಸಮಯ ಬಂದಿದೆ. ಕಾಲ ನಮ್ಮನ್ನು ಪರೀಕ್ಷಿಸುತ್ತಿದೆ ಅಷ್ಟೆ! ಈಗ ನೀವು ನಮ್ಮೊಂದಿಗೆ ಬನ್ನಿ. ನಿಮ್ಮ ಮಾರ್ಗದರ್ಶನ ನಮಗೆ ಅತ್ಯವಶ್ಯಕ. ಬನ್ನಿ ನಮ್ಮ ಗುಡಿಸಲಿಗೆ ಹೋಗೋಣ!" ಎಂದು ಅವರನ್ನು ಎಬ್ಬಿಸಿದೆವು. ಅವರು ಎದೆ ಉಬ್ಬಿಸಿ ಎದ್ದು ನಿಂತರು. ಪಕ್ಕದಲ್ಲಿ ಬಿದ್ದಿದ್ದ ವಿಚಿತ್ರ ಕತ್ತಿಯನ್ನು ಕೈಗೆತ್ತಿಕೊಂಡರು. ತಲೆಗೆ ಕಟ್ಟಿಕೊಂಡಿದ್ದ ಬಟ್ಟೆಯನ್ನು ತೆಗೆದರು. ಅವರ ಎಡಗಣ್ಣು ಕೆಂಪಗಾಗಿತ್ತು. ಅವರು ಮನೆಯ ಬಾಗಿಲನ್ನು ಹಾಕಿ, ನಮ್ಮ ಕೈ ಹಿಡಿದು ಕಾಡಿನೊಳಕ್ಕೆ ನಡೆಯತೊಡಗಿದರು. ಇಷ್ಟು ಸುಲಭವಾಗಿ ಅವರು ನಮ್ಮ ಜೊತೆ ಬರುತ್ತಾರೆಂದು ನಾವು ಎಣಿಸಿರಲಿಲ್ಲ. ಅವರಿಗೆ ಬಹಳ ವಯಸ್ಸಾದಂತಿತ್ತು. ಜಲಪಾತದ ಬಳಿ ಒಮ್ಮೆ ಕುಳಿತು, ಅಲ್ಲಿ ನೀರು ಕುಡಿದು ದಣಿವಾರಿಸಿಕೊಂಡರು. ನಂತರ, ಅಲ್ಲಿದ್ದ ಕಲ್ಲು ಬಂಡೆಗಳ ಮೇಲೆಲ್ಲಾ ಕೈ ಆಡಿಸಿದರು. "ನಮ್ಮ ಜನರ ರಕ್ತ! ತಾಯ ಮಕ್ಕಳ ರಕ್ತ!" ಎಂದು ಪರಿಪರಿಯಾಗಿ ದುಃಖಿಸಿದರು. ನಮಗೆ ಅವರನ್ನು ಸಮಾಧಾನ ಪಡಿಸುವುದು ಹೇಗೆ ಎಂದು ತಿಳಿಯಲಿಲ್ಲ. ಆದರೆ ನಾವು ಅವರ ಕೈ ಹಿಡಿದು, "ಈಗ ಹೋಗೋಣ ನಡೆಯಿರಿ" ಎಂದು ಕರೆದುಕೊಂಡು ಹೊರಟೆವು. ಅವರಲ್ಲಿದ್ದ ದುಃಖದ ನೋವೇ ಅವರನ್ನು ಮುನ್ನಡೆಸುತ್ತಿತ್ತು. ನಾವು ಹನುಮಂತನ ಬೆಟ್ಟ ಸೇರುವಷ್ಟರಲ್ಲಿ ಸಂಜೆಯಾಗಿತ್ತು. ಸೂರ್ಯ ಮುಳುಗುವುದು ಕಾಣುತ್ತಿತ್ತು. ನಾಲ್ವರೂ ಬೆಟ್ಟದ ಒಂದು ಬಂಡೆಯ ಮೇಲೆ ನಿಂತು ಸೂರ್ಯ ಮುಳುಗುವುದನ್ನೇ ನೋಡುತ್ತಿದ್ದೆವು. ಆಗ ನಮ್ಮೊಂದಿಗಿದ್ದ ತಾತಾ, "ನಾಶಯತ್ಯೇಷ ವೈ ಭೂತಂ ತದೇವ ಸೃಜತಿ ಪ್ರಭುಃ । ಪಾಯತ್ಯೇಷ ತಪತ್ಯೇಷ ವರ್ಷತ್ಯೇಷ

ಗಭಸ್ತಿಭಿಃ॥" ಎಂದು ರಾಗವಾಗಿ ಹಾಡಿದರು. ಅವರ ಧ್ವನಿಯು ವಯಸ್ಸಿನಿಂದಾಗಿ ಮಾಧುರ್ಯವನ್ನು ಕಳೆದುಕೊಂಡಿತ್ತಾದರೂ, ಅದರಲ್ಲಿನ ಆರ್ದ್ರತೆ ಹಾಗೂ ದಿವ್ಯ ಸ್ವಭಾವ ಹಾಗೆಯೇ ಇತ್ತು. ಅವರು ಮಂತ್ರವನ್ನು ಹೇಳುತ್ತಿದ್ದಾಗ ನಾವು ಅವರನ್ನೇ ನೋಡುತ್ತಿದ್ದೆವು. ಅವರು ಮಂತ್ರ ಹೇಳಿದ ನಂತರ, ನಮ್ಮನ್ನು ನೋಡಿ, "ಇದರ ಅರ್ಥ ಏನು ಗೊತ್ತಾ? ಹೊಳೆಯುವ ಕಿರಣಗಳಿಂದ ಕಾವು ಕೊಡುವವನೇ, ಸೃಷ್ಟಿಸಲ್ಪಟ್ಟಿದ್ದನ್ನು ಪೋಷಿಸುವ, ನಾಶ ಮಾಡುವ ಒಬ್ಬನೇ, ಕಿರಣಗಳ ಬಿಸಿಯಿಂದ ನೀರನ್ನು ಹಬೆಯನ್ನಾಗಿಸಿ, ಮತ್ತೆ ಮಳೆಯಾಗಿ ಕೆಳಗಿಳಿಯಲು ಕಾರಣನಾದವನಿಗೆ ನಮಸ್ಕಾರಗಳು ಎಂದು! ಆ ಸೂರ್ಯನೇ ಸಮಸ್ತ ಶಕ್ತಿಯ ಮೂಲ!" ಎಂದರು. ನಮಗೆ ಆಚಾರ್ಯರ ನೆನಪೇ ಆಗುತ್ತಿತ್ತು. ಅವರಂತೆಯೇ ಇವರೂ ಹೇಳಿದ ಮಂತ್ರಗಳಿಗೆ ಸ್ವಾರಸ್ಯಕರವಾಗಿ ಅರ್ಥವನ್ನು ವಿವರಿಸಿದರು! ಬೆಟ್ಟವನ್ನು ಇನ್ನು ಸ್ವಲ್ಪ ಹತ್ತಿದಾಗ ನಮ್ಮ ಹನುಮನು ನಿಂತಿರುವುದು ಕಂಡಿತು. ನಾವು ತಾತಾ ಹೇಗೆ ಪ್ರತಿಕ್ರಯಿಸುತ್ತಾರೋ ಎಂದು ಕಾಯುತ್ತಿದ್ದೆವು! ಅವರು ಆ ವಿಗ್ರಹವನ್ನು ನೋಡಿ, ಅದರ ಸುತ್ತಲೂ ನಡೆದು, ಸಾಷ್ಟಾಂಗ ನಮಸ್ಕಾರ ಮಾಡಿ,

ಧೀವರ! ಪ್ರಸರ ಶೌರ್ಯತರ!
ಉತ್ಸರ ಸ್ಥಿರ ಗಂಭೀರ!
ಉಗ್ರಮ ಅಸಮ ಶೌರ್ಯತಮ!
ರೋದ್ಗಮ ನವಭೀತಿರ್ಮ!

ಎಂದು ತಾತಾ ಭಾವೋತ್ಕಟತೆಯಿಂದ ಹೇಳಿದರು. ಆಚಾರ್ಯರು ಬೇರೆ ಬೇರೆ ಮಂತ್ರಗಳನ್ನು ಹೇಳಿರುವುದನ್ನು ಕೇಳಿದ್ದೆವು. ಆದರೆ ಈ ಮಂತ್ರವು ಆಕರ್ಷಿತವಾಗಿತ್ತು! ನಮ್ಮಲ್ಲೇ ಹುಮ್ಮಸ್ಸನ್ನು ಹೆಚ್ಚಿಸುವಂತಿತ್ತು. ಅದರ ಅರ್ಥದ ಅಪೇಕ್ಷೆಯಲ್ಲಿ ನಾವು ಅವರ ಪಕ್ಕದಲ್ಲಿ ಕುಳಿತೆವು. ಅವರು, "ರಾಮಾಯಣದಲ್ಲಿ, ಈ ಹನುಮಂತ ತನ್ನ ಸಾಮರ್ಥ್ಯವನ್ನೇ ಮರೆತು ಹೋಗಿರುತ್ತಾನೆ. ಆಗ ಜಾಂಬವಂತ ಎನ್ನುವವನು ಹನುಮನನ್ನು ಉತ್ತೇಜಿಸಲು ಈ ಶ್ಲೋಕಗಳನ್ನು ಹೇಳುತ್ತಾನೆ! ಈಗ ನಮ್ಮ ಗತಿ ಆಗಿರುವುದು ಅದೇ! ನಮ್ಮ ಸಾಮರ್ಥ್ಯ ನಮಗೆ ತಿಳಿಯದು. ಶತ್ರುವಿನ ಭಯ. ಅವನ ವಿಷ ಬಾಣಗಳು ನಮ್ಮ ದೇಹ ದೇಶಗಳನ್ನು ಹೊಕ್ಕಿಬಿಟ್ಟಿವೆ. ನಮಗೆ ನಾವೇ ನೆನಪಿಸಿಕೊಳ್ಳಬೇಕು! ಹೇ ಧೈರ್ಯವಂತನೆ, ಧೀರನೇ! ನಿನ್ನ ಧೈರ್ಯವೇ ನಿನ್ನನ್ನು ಮುಂದಕ್ಕೆ ಒಯ್ಯುತ್ತಿದೆ! ಹೇ ಮೇಲೆ ಮೇಲೆ ಏರುತ್ತಿರುವವನೇ! ಹೋರಾಡುವ ಮನೋಭಾವ ಹಾಗೂ ಸಾಮರ್ಥ್ಯಗಳಲ್ಲಿ ಎದುರಿಲ್ಲದವನೇ! ಶತ್ರುವಿನಲ್ಲಿ ಭಯವನ್ನು ಹುಟ್ಟಿಸುವವನೇ! ನೋಡಿ ಹೇಗಿದೆ! ಹನುಮಂತನ ಎತ್ತರ ಬೆಳೆದು ಸಮುದ್ರ ಹಾರಿದ್ದು ಹೀಗೆಯೆ! ಈಗ ನಮಗೂ ಇಂತಹ ಪ್ರೇರಣೆ ಬೇಕಾಗಿದೆ! ನಾವೆಲ್ಲರೂ ಹನುಮಂತನಂತೆ ಈ

ದೇಶಕ್ಕೆ ಸಂಜೀವಿನಿಯನ್ನು ತರಬೇಕು. ಸಂಜೀವಿನಿಯನ್ನು ತಂದು ವಿಷಬಾಣದ ಪ್ರಭಾವದಿಂದ ಅಂಗಾತ ಬಿದ್ದಿರುವ ದೇಶವನ್ನು ರಕ್ಷಿಸಬೇಕು. ಬೆಟ್ಟವನ್ನು ರಕ್ಷಿಸಬೇಕು!" ಎಂದು ಹೇಳಿದಾಗ, ನಮ್ಮಲ್ಲಿ ಭಾವಪರವಶತೆ ಉಂಟಾಯಿತು. ನಾವು ಗುಡಿಸಲ ಕಡೆ ಹೋದೆವು. ಗುಡಿಸಲಲ್ಲಿ ಯಾರೂ ಇರಲಿಲ್ಲ. ಬಹುಶಃ ಆಚಾರ್ಯರು ಕಾಂತಾ ಅಥವಾ ಸಾಕ್ಷಿಯನ್ನು ಸಂಧಿಸಲು ಹೋಗಿರಬೇಕು. ನಾವು ಕಾಂತಾ, ಸಾಕ್ಷಿ ಹಾಗೂ ಆಚಾರ್ಯರ ಬಗ್ಗೆ ತಾತನಿಗೆ ಹೇಳಿದ್ದೆವು. ಗುಡಿಸಲೊಳಗಿದ್ದ ಕುಡಿಯುವ ನೀರನ್ನು ತಾತನಿಗೆ ಕೊಟ್ಟೆವು. ನಂತರ ಆಚಾರ್ಯರು ಬರುತ್ತಿರಬಹುದೆಂದು ಪ್ರತೀಕ್ಷಿಸುತ್ತ ಕುಳಿತೆವು. ತಾತ ದಣಿದಿದ್ದ ಕಾರಣ, ಅವರು ಚಾಪೆಯ ಮೇಲೆ ಕುಳಿತು ಹಾಗೆಯೇ ಒರಗಿದರು. ಸ್ವಲ್ಪ ಹೊತ್ತಾದ ಮೇಲೆ ಒಂದು ಪಂಜಿನ ಬೆಳಕು ಕಾಣತೊಡಗಿತು. ಆ ಬೆಳಕಿನಲ್ಲಿ ಇಬ್ಬರು. ಅವರಿಬ್ಬರೂ ಕಪ್ಪು ಮುಸುಕನ್ನು ಹಾಕಿಕೊಂಡಿದ್ದರು. ಇದು ಸಂಶಯಾಸ್ಪದ ಎಂದುಕೊಂಡು ನಾವು ನಮ್ಮ ಆಯುಧಗಳೊಂದಿಗೆ ಸಿದ್ಧರಾಗಿ ಕುಳಿತೆವು. ಆದರೆ ಬೆಟ್ಟದ ಮೇಲಿದ್ದ ಬಯಲಿನಂತಹ ಸ್ಥಳಕ್ಕೆ ಬಂದ ಮೇಲೆ, ಇಬ್ಬರಲ್ಲಿ ಒಬ್ಬರು ಮುಸುಕನ್ನು ತೆಗೆದರು. ಅದು ಆಚಾರ್ಯರೇ. ನಾವು ನಿಟ್ಟುಸಿರು ಬಿಟ್ಟೆವು. ಜೊತೆ ಯಲ್ಲಿ ಸಾಕ್ಷಿಯೂ ಬಂದು ಗುಡಿಸಲನ್ನು ಹೊಕ್ಕಿದರು. ತಾತ ಎದ್ದು ಕುಳಿತರು, "ನಮಸ್ಕಾರ!" ಎಂದು ಕೈ ಜೋಡಿಸಿ ಹೇಳಿದರು. ಆಚಾರ್ಯ ಹಾಗೂ ಸಾಕ್ಷಿ, ಇಬ್ಬರೂ ತಾತನ ಪಾದವನ್ನು ಸ್ಪರ್ಶಿಸಿ ಕಣ್ಣಿಗೊತ್ತಿಕೊಂಡರು. ನಮಗೆ ನಾಚಿಕೆ ಯಾಯಿತು. ಬೆಳಗ್ಗೆಯಿಂದಲೂ ಇಂತಹ ಹಿರಿಯರೊಂದಿಗೆ ಇದ್ದುಕೊಂಡು, ಅವರು ಹೇಳಿದ ಮಂತ್ರ ಶ್ಲೋಕಾದಿಗಳನ್ನೂ ಕೇಳಿಸಿಕೊಂಡು ಅವರ ಪಾದಸ್ಪರ್ಶವನ್ನು ಮಾಡಲಿಲ್ಲ! ಎಂತಹ ಸಂಸ್ಕಾರ ನಮ್ಮದು! ಆಚಾರ್ಯರು ಹೇಳಿಕೊಟ್ಟಿದ್ದರ ಫಲವೇನು ಎಂದೆಲ್ಲಾ ಎನ್ನಿಸ ತೊಡಗಿತು. ಆಗ ನಾವು ಮೂವರು ಅವರಿಗೆ ಸಾಷ್ಟಾಂಗ ನಮಸ್ಕಾರಗಳನ್ನು ಮಾಡಿದೆವು. ಅವರು ನಮ್ಮ ತಲೆಯ ಮೇಲೆ ಕೈಯಿಟ್ಟು, "ನಮೋ ಭಾರತಿ!" ಎಂದರು. ಎಲ್ಲರೂ ವೃತ್ತಾಕಾರದಲ್ಲಿ ಕುಳಿತೆವು. ಈಗ ನಾವು ಮುಂದಿನ ಕೆಲಸಗಳನ್ನು ರೂಪಿಸಲು ಕುಳಿತೆವು. ಒಂದು ಕಡೆ ಚರ್ಚಿನ ಕಳ್ಳತನ. ಇನ್ನೊಂದು ಕಡೆ ಅರಣ್ಯಾನಿ ಬೆಟ್ಟದಲ್ಲಿ ಕಳ್ಳತನ. ಎರಡನ್ನೂ ಸಂಭಾಳಿಸುವುದು ಹೇಗೆ?

ಈಗ, ಅರಣ್ಯಾನಿ ಬೆಟ್ಟದ ದಾರಿ ತಿಳಿದಿರುವುದು ಕೇವಲ ತಾತನಿಗೆ. ಅವರಿಗೆ ಚಂಡೆಯ ಸಂದೇಶಗಳನ್ನು ಕಳುಹಿಸುವ ಬಗೆ ಕೂಡ ಗೊತ್ತಿತ್ತು. ಜೊತೆಗೆ, ಅವರಿಗೆ ಅಲ್ಲಿರುವ ಜನರ ಪರಿಚಯ ಇತ್ತು. ಅವರೊಂದಿಗೆ ನಾವು ಹೋದರೆ, ನಮಗೆ ಯಾವುದೇ ತೊಂದರೆ ಇರುವುದಿಲ್ಲ. ಆಗ ಸಾಕ್ಷಿ ನೆನಪಿಸಿದ. ಹಡಗಿನಲ್ಲಿ ಬಂದ ಬ್ರಿಟೀಷಿನ ಅಧಿಕಾರಿ ಒಬ್ಬನು ಇದ್ದ. ಅವನು ಬಂದಿದ್ದು ಏತಕ್ಕೆ? ಸಾಕ್ಷಿ

ಇದನ್ನೂ ಕಂಡುಹಿಡಿದಿದ್ದ. "ಆ ಅಧಿಕಾರಿಯು ಪುರಾತತ್ವ ಶಾಸ್ತ್ರಜ್ಞನಂತೆ. ಅವನಿಗೆ ಇಲ್ಲಿಯ ದೇವಾಲಯಗಳ, ದೇಶದಲ್ಲಿರುವ ದೇವಾಲಯಗಳ ಜ್ಞಾನವಿದೆಯಂತೆ. ಅವನೊಬ್ಬನೇ ಬಂದು ಇಲ್ಲಿಯ ದೇವಾಲಯಗಳ ಕುರಿತು ಸಂಶೋಧಿಸಿದ್ದಾನಂತೆ. ಅವನಿಗೆ ಸಿಕ್ಕಿದ ಹಲವು ದೇವಾಲಯಗಳ ಮೂರ್ತಿಯನ್ನು ಈಗಾಗಲೇ ತೆಗೆದು ಆಗಿದೆಯಂತೆ. ಆದರೆ ಅರಣ್ಯಾನಿಯ ಕುರಿತಾಗಿ ತಿಳಿದಿರಲಿಲ್ಲವಂತೆ. ಈಗ ತಿಳಿದ ನಂತರ ಅಂತಹ ಅಮೂಲ್ಯ ದೇವತೆಯ ಮೂರ್ತಿ ಅವರಿಗೆ ಬೇಕೇ ಬೇಕೆಂದು ಹಠ ಹಿಡಿದು ಬಂದಿದ್ದಾರೆ. ಆ ಮೂರ್ತಿಯನ್ನು ಕಾಯುತ್ತಿರುವ ಕಾಡು ಜನರ ಬಗ್ಗೆ ಅವರಿಗೆ ತಿಳಿದಂತಿಲ್ಲ. ಅದು ತಿಳಿದಿರುವುದು ಕೇವಲ ತಾತನಿಗೆ ಮಾತ್ರ. ಅವನ ಜನರಿಗೂ ಅದು ತಿಳಿದಿತ್ತಾದರೂ, ಅವರೆಲ್ಲರ ಸಾವಿನ ನಂತರ ಅವರನ್ನು ಸಂಧಿಸುವ ಬಗೆಯಾಗಲಿ, ಅವರಿಗೆ ಸಂದೇಶಗಳನ್ನು ತಲುಪಿಸುವ ವಿಧಾನ ವಾಗಲಿ, ಅಲ್ಲಿನ ದೇವಾಲಯಗಳಿಗೆ ಪೂಜೆಯಾಗಲಿ ಸಲ್ಲುತ್ತಿಲ್ಲ. ಇದಲ್ಲದೇ ಆ ಅಧಿಕಾರಿಯೇ ಕಾಡಿನ ಇನ್ನೊಂದು ಭಾಗದಲ್ಲಿರುವ ಚರ್ಚಿನಲ್ಲಿನ ಸಂಪತ್ತಿನ ಬಗ್ಗೆ ಹೇಳಿದ್ದಂತೆ. ಅದನ್ನ ಅವರ ದೇಶಕ್ಕೆ ಸಾಗಿಸುವ ಸಂಚಿದೆ. ಅಂತಹ ಯಥೇಚ್ಛ ಹಣವನ್ನ, ಯಃಕಶ್ಚಿತ್ ಸಮಯದಲ್ಲಿ ದೋಚಿಕೊಂಡು, ದೇಶವನ್ನು ಬಿಡುವುದು ಅವರ ಯೋಜನೆ ಆಗಿರಬೇಕು. ಎರಡನ್ನೂ ತಡೆಯುವುದು ನಮ್ಮ ಯೋಜನೆ." ಹೀಗೆ ಸಾಕ್ಷಿ ಆ ಅಧಿಕಾರಿಯ ಗೊತ್ತು-ಗುರಿಗಳ ಬಗ್ಗೆ ವಿವರಿಸಿದ. "ಆ ಅಧಿಕಾರಿಯು ಸದಾ ಗುಡಿಸಲ ಒಳಗೇ ಇರುತ್ತಾನೆ. ಅವನಿಗೆ ಸದಾ ನಾಲ್ವರು ಸೈನಿಕರು ಕಾವಲಿರುತ್ತಾರೆ. ಅವನನ್ನು ತಾಕುವುದು ಬಹಳ ಕಷ್ಟ. ಈ ಇಡೀ ಸಂಚಿನ ರೂವಾರಿ ಅವನೇ ಇರಬೇಕು." ಈಗ ಆಚಾರ್ಯರು ಎದ್ದು ನಿಂತರು. ಅವರು ಎಲ್ಲರಿಗೂ ಒಂದು ಪಾತ್ರವನ್ನು ನೇಮಿಸುವ ಕೆಲಸದಲ್ಲಿದ್ದರು. ಅವರು ಮೊದಲು ಸಾಕ್ಷಿಯನ್ನುದ್ದೇಶಿಸಿ, "ಸಾಕ್ಷಿ, ನೀನು ಬಂಡಿಯನ್ನು ಓಡಿಸುವವರೆಲ್ಲ ರೊಡನೆಯೂ ಮಾತಾಡಿದ್ದೀಯ ಅಲ್ಲವೇ? ಅವರು ಎಲ್ಲೆಲ್ಲಿ ಇರಬೇಕು ಎಂದು ಮೊದಲೇ ಹೇಳು. ಆ ಪೆಟ್ಟಿಗೆಗಳು ನಾವಿರುವ ಈ ಹನುಮಂತನ ಬೆಟ್ಟದ ಕಡೆಗೆ ಬರಲಿ. ನೀನು ಆದಷ್ಟು ಬೇಗ ಆ ಕೆಲಸವನ್ನು ಮಾಡಬೇಕು. ಅರಣ್ಯಾನಿ ಬೆಟ್ಟದ್ದು ಅಷ್ಟೇನು ಹೆದರಿಕೆ ಇಲ್ಲ. ಕಾರಣ, ಅಲ್ಲಿ ಬರುವುದು ನಮ್ಮ ವಿಶ್ವನಾಥನೇ. ಹೆಚ್ಚು ಬಂಡಿಗಳನ್ನು ನೀನು ಚರ್ಚಿನ ಬಳಿಯೇ ಇಟ್ಟುಕೊಳ್ಳಬೇಕು. ಮಿಕ್ಕಿದ ಬಂಡಿಗಳನ್ನು ನದಿಯ ಬಳಿ ನಿಲ್ಲಿಸು. ಅಕಸ್ಮಾತ್ತಾಗಿ ಪೆಟ್ಟಿಗೆಗಳು ನಮ್ಮ ಕೈ ಜಾರಿದರೂ ನದಿಯ ಬಳಿಗಂತೂ ಅವು ಬರಲೇ ಬೇಕು. ಹಾಗೆ ಬಂದಾಗ ನದಿಯ ದಡವನ್ನು ನಮ್ಮ ಸುಪರ್ದಿಗೆ ತೆಗೆದುಕೊಂಡು, ಅಲ್ಲಿ ಬರುವ ಸೈನಿಕರೊಂದಿಗೆ ಸೆಣೆಸಾಡುವ ಕಾರ್ಯಕ್ಕೆ ಸನ್ನದ್ಧರಾಗಿರಬೇಕು. ದೇವಾಲಯಗಳು ಸುರಕ್ಷಿತ ಎಂದೇ ನನ್ನ ಭಾವನೆ. ಆಗಲೇ ಹೇಳಿದಂತೆ, ವಿಶ್ವನಾಥನು

ನಮ್ಮೊಂದಿಗಿರುತ್ತಾನೆ, ಅವನೊಂದಿಗಿರುವ ಜನ, ಹಾಗೂ ಈ ವೀರತ್ರಯರು. ಸಾಕ್ಷಿ, ನೀನು ಚರ್ಚು ಮತ್ತು ಈ ಬೆಟ್ಟ ಎರಡರ ನಡುವೆಯೂ ಸಮತೋಲನ ವನ್ನು ಕಾಪಾಡಬೇಕು. ಆದಷ್ಟು ಇಲ್ಲಿ ಹಾಗೂ ಅಲ್ಲಿ, ಎರಡೂ ಕಡೆ ಯಾವುದೇ ಅಪಾಯವಿಲ್ಲದಂತೆ ನೋಡಿಕೊಳ್ಳಬೇಕು. ಅಕಸ್ಮಾತ್ ಅಗತ್ಯ ಇದ್ದರೆ, ಎರಡು ಬಂಡಿ ಬೇಕಾಗಬಹುದು, ಅವುಗಳನ್ನು ನೀನು, ಅರಣ್ಯಾನಿ ಬೆಟ್ಟದ ತಪ್ಪಲಲ್ಲಿ ಬಚ್ಚಿಟ್ಟಿರು. ಇನ್ನು ಕಾಂತಾ ಚರ್ಚಿನ ಕಡೆ ಹೋಗುತ್ತಾನೆ. ಅಲ್ಲಿಗೆ ನಾನೂ ಹೋಗುತ್ತೇನೆ. ಪೆಟ್ಟಿಗೆಗಳನ್ನು ಬಂಡಿಗಳಿಗೆ ಹೇರಿದ ಮೇಲೆ ನೀವು ಎಲ್ಲವನ್ನೂ ನಮ್ಮ ಈ ಗುಡಿಸಲಿರುವ ಹನುಮಂತನ ಬೆಟ್ಟದ ಕಡೆಗೆ ಸಾಗಿಸಿಬಿಡಿ. ಈಗ ನಾಳೆಗೆ ಸಿದ್ಧರಾಗಿ. ಸಾಕ್ಷಿ, ಏಳು. ಮೊದಲು ನೀನು ಎಲ್ಲಾ ಬಂಡಿಗಳಿರುವ ಕಡೆಗೆ ಹೋಗಿ, ನಿನ್ನ ಸ್ನೇಹಿತರ, ಹಾಗೂ ದನಗಳ ಯೋಗಕ್ಷೇಮವನ್ನು ನೋಡಿಕೊ!" ಎನ್ನುತ್ತಾ ಕಳುಹಿಸಿದರು. ಸಾಕ್ಷಿ ತಾತನ ಚರಣಕ್ಕೆ, ಹಾಗೆಯೇ ಆಚಾರ್ಯರ ಚರಣಕ್ಕೆ ನಮಿಸಿ, ನಮ್ಮನ್ನು ಒಮ್ಮೆ ಅಪ್ಪಿಕೊಂಡು ಪಂಜು ಹಿಡಿದು ಹೊರಟ. ಇನ್ನು ಆಚಾರ್ಯರು ನಮ್ಮ ಕಡೆಗೆ ತಿರುಗಿದರು. ನಾವು ನಿನ್ನೆಯಿಂದಲೂ ಅವರ ಉಪಾಯಗಳನ್ನು ಕೇಳಿಸಿಕೊಂಡಿದ್ದವರು. ಹಾಗಾಗಿ ಅವರು ಹೇಳುವ ಮುನ್ನ, ನಾವೇ ಅದನ್ನು ಹೇಳತೊಡಗಿದೆವು. ಮೊದಲು ಬೋಕ, "ನಾವು ನಾಳೆ ಬೆಳಗ್ಗೆಯೇ ತಾತನನ್ನು ಕರೆದುಕೊಂಡು ಹೊರಡುತ್ತೇವೆ" ಎಂದ. ನಂತರ ನಾಗ, "ತಾತನನ್ನು ಕರೆದುಕೊಂಡು ಹೋಗಿ, ನಂತರ ಅಲ್ಲಿನ ಜನರನ್ನು ಸಂಧಿಸುತ್ತೇವೆ. ಸಂಧಿಸಿ ಅವರಿಗೆ ಪರಿಸ್ಥಿತಿಯನ್ನು ವಿವರಿಸಬೇಕು. ಅವರು ಖಂಡಿತ ಒಪ್ಪುತ್ತಾರೆ" ಎಂದ. ನಂತರ ನಾನು, "ಮೊದಲು ದೇವಾಲಯ ವನ್ನು ನೋಡಿ, ಅದರ ರಕ್ಷಣೆಗೆ ಬೇಕಾದ ವ್ಯವಸ್ಥೆಗಳನ್ನು ಮಾಡಬೇಕು. ನಂತರ ವಿಶ್ವನಾಥ ಹಾಗೂ ಅವರ ಗುಂಪಿನ ಬರುವಿಕೆಯನ್ನು ಕಾಯಬೇಕು! ಈ ಮಧ್ಯೆ ನಾನು ಮರವನ್ನು ಹತ್ತಿ ಸುತ್ತ ಮುತ್ತಲೂ ಯಾರಾದರೂ ಸಂಶಯಾಸ್ಪದವಾಗಿ ಬಂದಿದ್ದಾರಾ ಎಂದು ನೋಡಬೇಕು" ಎಂದು ಹೇಳಿದೆ. ಆಚಾರ್ಯರು ನಗುಮುಖದಲ್ಲಿ, "ಪರಿಪೂರ್ಣ" ಎಂದರು. ನಾವೆಲ್ಲರೂ ಈಗ ತಾತನ ಕಡೆಗೆ ತಿರುಗಿದೆವು. ಅವರು ಹೆಮ್ಮೆಯಿಂದ ಬೀಗುತ್ತಿದ್ದರು. "ನಾನು ಏನೂ ನಿರೀಕ್ಷಿಸದೆ ನಿಮ್ಮೊಡನೆ ಬಂದೆ. ನೀವು ನಿಜವಾದ ತಾಯಿ ಅರಣ್ಯಾನಿಯ ಮಕ್ಕಳು! ವೀರರು ನೀವು! ನಿಮ್ಮೊಡನೆ ನಾನಿರುವುದು ನಿಜವಾಗಲು ನನಗೂ ಶೌರ್ಯ, ವೀರ್ಯಗಳನ್ನು ತರುತ್ತಿದೆ. ಇದು ಖಂಡಿತ ನಮಗೆ ವಿಜಯವನ್ನು ತರುತ್ತದೆ! ನಮೋ ಭಾರತಿ!" ಎಂದರು. ನಾವೆಲ್ಲರೂ ಒಟ್ಟಿಗೆ

ಕರಚರಣ ಕೃತಂ ವಾಕ್ಕಾಯಜಂ ಕರ್ಮಜಂವಾ
ಶ್ರವಣ ನಯನಜಂವಾ ಮಾನಸಂವಾಪರಾಧಂ

ವಿಹಿತಂ ಅವಿಹಿತಂ ವಾ ಸರ್ವಮೇತ್ ತಕ್ಷಮಸ್ವ
ಜಯಜಯ ಕರುಣಾಬ್ಧೇ ಶ್ರೀ ಮಹಾದೇವ ಶಂಭೋ!

ಎಂದು ಹೇಳಿದೆವು. "ಕೈಗಳಿಂದಾಗಲಿ, ಕಾಲುಗಳಿಂದಾಗಲಿ, ಮನೋವಾಕ್ಕಾಯಗಳಿಂದಾಗಲಿ, ನಮ್ಮ ಕರ್ಮಗಳಿಂದಾಗಲಿ, ನಮ್ಮ ಕಿವಿ, ಕಣ್ಣು, ಅದೃಶ್ಯ ಮನದಿಂದಾಗಲಿ, ಗೊತ್ತಿದ್ದೋ ಗೊತ್ತಿಲ್ಲದೆಯೋ ಮಾಡಿದ ತಪ್ಪುಗಳನ್ನು ಕ್ಷಮಿಸು! ಹೇ ಕರುಣೆಯ ಸಾಗರನಾದ ಮಹಾದೇವನೆ!"

ಗಮ್ಯವು ಶಾಂತಿಯೇ. ಆದರೆ ಮಾರ್ಗವು ಯುದ್ಧವಷ್ಟೇ! ನಾವು ಮುಂದಿನ ದಿನದ ಯುದ್ಧಕ್ಕೆ ಬೇಕಾದಷ್ಟು ವಿಶ್ರಾಂತಿಯನ್ನು ತೆಗೆದುಕೊಳ್ಳಲಾರಂಭಿಸಿದೆವು.

10

ಯುದ್ಧ

ರಾತ್ರಿ ಇಡೀ ನಿದ್ರೆ ಬರುವುದೆಲ್ಲಿ? ನಿದ್ರೆಯೇ ಬರದಿದ್ದ ಮೇಲೆ ಎಚ್ಚರವಾಗುವುದೆಲ್ಲಿ? ಜಾಗೃತರಾಗಬೇಕಷ್ಟೆ. ಸ್ವಪ್ನಾವಸ್ಥೆ, ಜಾಗೃತಿ ಅವಸ್ಥೆ, ಸುಷುಪ್ತಿ ಅವಸ್ಥೆ ಮೂರರಲ್ಲಿಯೂ ನಮಗೆ ಕೇವಲ ಅರಣ್ಯಾನಿ, ಅರಣ್ಯಾನಿ, ಅರಣ್ಯಾನಿ. ಇದೇ ಯೋಚನೆ. ಆಚಾರ್ಯರು ಎದ್ದು, ಒದ್ದೆ ಬಟ್ಟೆಯಲ್ಲಿ ಹನುಮಂತನ ಮೂರ್ತಿಯ ಮುಂದೆ ಕುಳಿತು ಧ್ಯಾನಾಸಕ್ತರಾಗಿದ್ದರು. ನಾವು ತಡ ಮಾಡದೆಯೇ ನದಿಯ ಕಡೆಗೆ ಹೊರಟೆವು. ನಾವೂ ಒದ್ದೆ ಬಟ್ಟೆಯಲ್ಲೇ ಬಂದು ಕುಳಿತೆವು. ತಾತ ಗುಡಿಸಲ ದ್ವಾರದಲ್ಲಿ ನಿಂತು ಕೈಮುಗಿದು ನೋಡುತ್ತಿದ್ದರು. ಆಚಾರ್ಯರು ದೀರ್ಘ ಶ್ವಾಸವನ್ನು ತೆಗೆದುಕೊಂಡದ್ದು ನಮಗೆ ಕೇಳಿಸಿತು. ನಾವೆಲ್ಲರೂ ಸಿದ್ಧರಾದೆವು. ಎಲ್ಲರೂ ಸಮೂಹವಾಗಿ,

ಓಂ ನಮಃ ಪರಮಾತ್ಮನೇ ಸರ್ವಶಕ್ತಿಮತೇ
ವಿರೂಪಾಕ್ಷಾಯ ಭಾಲನೇತ್ರಾಯ ರಂ ಹುಂ ಫಟ್‌ಸ್ವಾಹಾ ।
ತತೋ ಹೈಮವತೀಂ ಧ್ಯಾತ್ವಾ ಪ್ರಣಮ್ಯ ಯುದ್ಧಮಾರಭೇತ್!
ಓಂ ಹ್ರೀಂ ಶ್ರೀಂ ಹೈಮವತೀಶ್ವರೀಂ ಹ್ರೀಂ ಸ್ವಾಹಾ ।
ಓಂ ಹ್ರೀಂ ವಜ್ರಯೋಗಿನ್ಯೈ ಸ್ವಾಹಾ ।
ಸಿಂಹಾಸನಸ್ಥಾಂ ರುದ್ರಾಣೀಂ ಧ್ಯಾಯೇತ್॥

ಓಂ! ಸರ್ವಶಕ್ತಿವಂತನಾದ, ಪರಮಾತ್ಮನಾದವನಿಗೆ ನಮ್ಮ ನಮನ. ಈ ಬೃಹತ್‌ಬ್ರಹ್ಮಾಂಡವನ್ನೇ ಪೊರೆಯುತ್ತಿರುವ ವಿರೂಪಾಕ್ಷನಿಗೆ ನಮ್ಮ ನಮನ. ಹಣೆಯಲ್ಲಿ ನೇತ್ರವುಳ್ಳವನಿಗೆ ನಮ್ಮ ನಮನ. ಅವನಿಗೆ ಅರ್ಪಣೆ! ಹಾಗೆಯೇ ದುರ್ಗೆಯ ರೂಪವಾದ ಹೈಮಾವತಿಗೆ ನಮ್ಮ ನಮನ! ಯುದ್ಧಾರಂಭದಲ್ಲಿ

ಅವಳನ್ನು ಧ್ಯಾನಿಸುತ್ತೇವೆ! ರುದ್ರಾಣಿ ಸಿಂಹಾರೂಢಳಾಗಿ ಮೆರೆಯುತ್ತಿರುವ ದುರ್ಗೆಗೆ ನಮ್ಮ ನಮನ![13]

ಕಾಯದಲ್ಲಿ ವಿದ್ಯುತ್ತಿನಂತೆ ಸಂಚರಿಸುವ ಶಕ್ತಿಯನ್ನು ನೀಡಬಲ್ಲ ದೇವದಂಪತಿ ರುದ್ರ-ರುದ್ರಾಣಿಯರು. "ಹಂ" ಎನ್ನುವ ಶಬ್ದವು ಶತ್ರುವಿಗೆ ಮರಣಪ್ರಾಯ. ಫಟ್ ನ್ನುವ ಶಬ್ದವು ಶತ್ರುವನ್ನು ದೂರ ಓಡಿಸುವ ಶಕ್ತಿ ಉಳ್ಳದ್ದು. ನಾವು ಕಣ್ಣು ಮುಚ್ಚಿ, ಈ ಜಪವನ್ನು ಮಾಡುತ್ತಿರಲು, ತಾತ ಗುಡಿಸಲ ದ್ವಾರದಲ್ಲಿ ನಿಂತು ಭಕ್ತಿಯಿಂದ ಕೈ ಮುಗಿದು ನೋಡುತ್ತಿದ್ದರು.

***

ನದಿಯ ದಡದಲ್ಲಿ ದೊಡ್ಡ ದೊಡ್ಡ ಅಲೆಗಳೇ ಏಳುತ್ತಿದ್ದವು. ಹಡಗನ್ನು ಸಮಸ್ತ ರೀತಿಯಲ್ಲಿ ಸಿದ್ಧ ಮಾಡಲಾಗುತ್ತಿತ್ತು. ಎಲ್ಲೆಡೆ ಚಟುವಟಿಕೆ. ಒಂದು ಕಡೆ ಬಂದೂಕುಗಳನ್ನು ಸಾಲಾಗಿ ಜೋಡಿಸಲಾಗಿತ್ತು. ಇನ್ನೊಂದು ಕಡೆ ಕೊಡಲಿಗಳನ್ನು ಚೂಪು ಮಾಡಿ ಕೊನೆಯಲ್ಲಿ ಅದರ ಪರೀಕ್ಷೆಯನ್ನು ಮಾಡಲಾಗುತ್ತಿತ್ತು. ಇನ್ನೊಂದು ಕಡೆ ಸೈನಿಕರೆಲ್ಲರೂ ಕೆಂಪು ಬಣ್ಣದ ಬಟ್ಟೆಯನ್ನು ಹಾಕಿಕೊಂಡು ಸಿದ್ಧವಾಗುತ್ತಿದ್ದರು. ಮತ್ತೊಂದು ಕಡೆ ಅಧಿಕಾರಿಗಳು ಬೇರೆ ಬೇರೆ ಕಾಗದಗಳನ್ನು ಜೋಡಿಸಿಕೊಂಡು ದಾರಿಯನ್ನು ಖಚಿತಪಡಿಸಿಕೊಳ್ಳುತ್ತಿದ್ದರು. ಇನ್ನೊಂದು ಕಡೆ ಕಿಟ್ಟಾಚಾರಿ ಬಂಡಿಗಳನ್ನೆಲ್ಲಾ ಒಂದೇ ಕಡೆ ನಿಲ್ಲಿಸಿ, ದನಗಳಿಗೆ ಮೇವನ್ನು ನೀಡುತ್ತಿದ್ದನು. ಅವನೊಂದಿಗೆ ಇನ್ನೂ ಕೆಲವರು ಬಂಡಿಯ ಚಕ್ರಗಳಿಗೆ ಎಣ್ಣೆ ಹಾಕುವುದು, ಇತ್ಯಾದಿ ಚಿಕ್ಕ-ಪುಟ್ಟವಾದರೂ ಮಹತ್ವವಾದ ಕಾರ್ಯಗಳನ್ನು ಮಾಡುತ್ತಿದ್ದರು. ಅಧಿಕಾರಿಯ ಗುಡಿಸಲಲ್ಲಿ ಇಬ್ಬರು ಇದ್ದಾರೆ. ಅಧಿಕಾರಿಯೊಂದಿಗೆ ಕಾಂತಾ. ಅರಣ್ಯದ ಜ್ಞಾನ ಇರುವುದರಿಂದ ಕಾಂತಾನಿಗೆ ಸುರಕ್ಷತೆಯ ಜವಾಬ್ದಾರಿಯನ್ನು ಕೊಡಲಾಗಿದೆ. ಅವನ ಕೆಳಗೆ ಸೈನಿಕರ ತುಕಡಿ ಇಲ್ಲ. ಅವನೂ ಬಿಳಿಯ ಸೈನಿಕರೊಂದಿಗೆ ಇದ್ದುಕೊಂಡು ಕೆಲಸ ಮಾಡಬೇಕಷ್ಟೆ. ಕಾಂತಾ ಒಂದು ಕೈಯಲ್ಲಿ ಕೊಡಲಿ, ಇನ್ನೊಂದು ಕೈಯಲ್ಲಿ ಬಂದೂಕನ್ನು ಹಿಡಿದು ಹೊರಗೆ ಬಂದ. ಇನ್ನೂ ಬೆಳಕು ಹರಿದಿರಲಿಲ್ಲ. ನದಿಯ ಸದ್ದು ಕೇಳಿಸುತ್ತಲೇ ಇತ್ತು. ಅಧಿಕಾರಿ ಹೊರಗೆ ಬಂದು ಚಪ್ಪಾಳೆ ತಟ್ಟಿದ. ಇಡೀ ಸ್ಥಳವೇ ಸ್ತಬ್ಧವಾಯಿತು. ಮಾತನಾಡುತ್ತಿದ್ದವರೆಲ್ಲರೂ ನಿಲ್ಲಿಸಿ, ಬಂದು ಸಾಲಿನಲ್ಲಿ ನಿಂತುಬಿಟ್ಟರು. ಕೊಡಲಿಗಳೊಂದಿಗೆ ಬಂದೂಕುಗಳನ್ನು ಅಧಿಕಾರಿಯ ಪಕ್ಕದಲ್ಲಿ ಜೋಡಿಸಲಾಯಿತು. ಸೈನಿಕರೆಲ್ಲರೂ ಒಂದೊಂದು ಬಂದೂಕನ್ನು ಕೈಗೆತ್ತಿಕೊಂಡು ನಿಂತರು.

13. ವಸಿಷ್ಠ ಧನುರ್ವೇದ ಸಂಹಿತ : ಶ್ರೀ ರುದ್ರಂ ಧ್ಯಾತ್ವಾ ತನ್ಮಂತ್ರಂ ಜಪೇತ್

ಕಾಂತಾ ಮೊದಲುಗೊಂಡು ಬಂಡಿಯನ್ನು ಒಡಿಸುವವರೆಲ್ಲರೂ ಕೊಡಲಿಗಳನ್ನು ಕೈಗೆತ್ತಿಕೊಂಡರು. ನಂತರ ಸೈನಿಕರೆಲ್ಲರೂ ಪಂಜನ್ನು ಹೊತ್ತಿಸಿಕೊಂಡರು. ಅಧಿಕಾರಿಯು ಬಂಡಿಗಳ ಕಡೆ ನೋಡಿ, "ಬರಲಿ ಇತ್ತ ಕಡೆ" ಎಂದ. ಸಾಕ್ಷಿಯು ಎಲ್ಲರಿಗೂ ಸನ್ನೆ ಮಾಡಿದ. ಬಂಡಿಗಳೆಲ್ಲವೂ ಒಂದೊಂದಾಗಿ ಬಂದು ಅಧಿಕಾರಿಯ ಮುಂದೆ ನಿಂತಿತು. ಒಂದೊಂದು ಬಂಡಿಯಲ್ಲಿ ಆರು ಜನರಂತೆ ಕುಳಿತರು. ಬಂದೂಕುಗಳನ್ನು ಮಾತ್ರ ಕೈಯಲ್ಲೇ ಗಟ್ಟಿಯಾಗಿ ಹಿಡಿದರು ಕೆಲವರು. ಇನ್ನು ಕೆಲವರು ಅದನ್ನು ತಮ್ಮ ಹೆಗಲ ಮೇಲೆ ಇಟ್ಟುಕೊಂಡರು. ಯಾವುದೇ ಅಪಾಯಕ್ಕೆ ಸಿದ್ಧರಾಗಬೇಕೆಂದು ಅಧಿಕಾರಿ ಹೇಳಿದ್ದ ಕಾರಣ, ಅವರು ಯಾರು ಬಂದರೂ, ಯಾವುದೇ ಪ್ರಾಣಿ ಬಂದರೂ ಬಂದೂಕಿನಿಂದ ಪ್ರಾಣವನ್ನು ತೆಗೆಯಲು ಸಿದ್ಧರಾಗಿದ್ದರು. ಇನ್ನು ಕೆಲವರು ಬಂಡಿಗಳ ಮುಂಭಾಗದಲ್ಲಿ ಕೊಡಲಿಗಳನ್ನು ಹಿಡಿದು ನಡೆಯತೊಡಗಿದರು. ಅಧಿಕಾರಿ ಮೊದಲ ಬಂಡಿಯ ಕಡೆ ನೋಡಿ ಹೂಗುಟ್ಟಿದ. ಸಾಕ್ಷಿ, ಎತ್ತುಗಳನ್ನು ಮುಟ್ಟಿ ನಡೆ ಎನ್ನುವಂತಹ ಸೂಚನೆ ಕೊಟ್ಟ. ಎತ್ತು ತನ್ನ ಕಣ್ಣುಗಳನ್ನು ಕೆಂಪು ಮಾಡಿಕೊಂಡು ಬಂಡಿಯನ್ನು ಎಳೆಯತೊಡಗಿತು. ಕೊನೆಯ ಬಂಡಿಯಲ್ಲಿ ನಾಲ್ವರು ಸೈನಿಕರು ಹಾಗೂ ಆ ಅಧಿಕಾರಿ ಹತ್ತಿ ಕುಳಿತುಕೊಂಡರು. ಹನ್ನೊಂದು ಬಂಡಿಗಳು ಹೀಗೆ ದಾರಿಯಲ್ಲಿ ಸಾಗತೊಡಗಿತು.

2

ಆಚಾರ್ಯ ನಿಧಾನವಾಗಿ ನಡೆಯುತ್ತಾ ಕಾಡಿನ ಇನ್ನೊಂದು ಭಾಗವನ್ನು ತಲುಪಿದರು. ಅವರ ಕೂದಲನ್ನು ಗಂಟಾಗಿ ಕಟ್ಟಿಕೊಂಡಿದ್ದರು. ವೀರಗಚ್ಚೆ, ಮೇಲಂಗಿಯಾಗಿ ಕಪ್ಪುವಸ್ತ್ರವನ್ನು ಧರಿಸಿದ್ದರು. ಕೈಯಲ್ಲಿ ಕತ್ತಿ, ಹೆಗಲಲ್ಲಿ ಬಿಲ್ಲು ಹಾಗೂ ಬತ್ತಳಿಕೆ, ಸೊಂಟದ ಸುತ್ತ ಉರುಮಿಯು ಸೂಕ್ಷ್ಮವಾಗಿ ಗಮನಿಸಿದವರಿಗೆ ಕಾಣುತ್ತಿತ್ತು. ಆಚಾರ್ಯರು ಯಾವುದೇ ಶಬ್ದವೇ ಇಲ್ಲದೆ ವಿಶ್ವನಾಥನ ಮನೆಯ ಬಳಿ ಬಂದು ಬಾಗಿಲನ್ನು ತಟ್ಟಿದರು. ಅತ್ತ ಕಡೆಯಿಂದಲೂ ಎರಡು ಬಾರಿ ಬಾಗಿಲನ್ನು ತಟ್ಟಲಾಯಿತು. ಆಗ ಆಚಾರ್ಯರು, "ದೇಶಪೂಜೆ" ಎಂದು ಪಿಸುಗುಟ್ಟಿದ್ದರು. ತಕ್ಷಣ ಬಾಗಿಲನ್ನು ತೆರೆಯಲಾಯಿತು. ಆಚಾರ್ಯರು ಯಾರೂ ನೋಡುತ್ತಿಲ್ಲವೆಂದು ಖಾತ್ರಿ ಮಾಡಿಕೊಂಡು ಒಳ ಹೊಕ್ಕಿದರು. ವಿಶ್ವನಾಥನ ಬೆವರಿದ ಮುಖವು ಪಂಜಿನ ಬೆಳಕಿನಲ್ಲಿ ಕಾಣುತ್ತಿತ್ತು. "ಎಲ್ಲವೂ ಸಿದ್ಧವೇ?" ಎಂದು ಆಚಾರ್ಯರು ಕೇಳಿದರು. ವಿಶ್ವನಾಥ, ಬಟ್ಟೆ ಒಂದರಲ್ಲಿ ತನ್ನ ಬೆವರನ್ನು ಒರೆಸಿಕೊಂಡು, "ಹೌದು" ಎನ್ನುತ್ತಾ ಆಚಾರ್ಯರನ್ನು ಒಳಗೆ ಕರೆದುಕೊಂಡು ಹೋದ. ಒಳಗಡೆ, ದೊಡ್ಡದೊಂದು ಕೊಠಡಿ. ಅದರ ತುಂಬಾ ಬರೀ ಜನರೆ.

ಅವರು ಯಾವುದರ ಸುತ್ತವೋ ನಿಂತಿದ್ದರು. ಆಚಾರ್ಯರನ್ನು ಕಂಡ ತಕ್ಷಣ, ಅವರೆಲ್ಲರೂ "ಆಚಾರ್ಯ, ಕೃಷ್ಣಾಚಾರ್ಯ!" ಎಂದು ಮಾತನಾಡ ತೊಡಗಿದರು. ಆಚಾರ್ಯರು ಕೈ ಎತ್ತಿ "ಮೌನ" ಎಂದರು. ಎಲ್ಲರೂ ಸುಮ್ಮ ನಾದರು. ಅಷ್ಟೂ ಜನರ ಮುಖದಲ್ಲಿ ಆಶ್ಚರ್ಯ, ಖುಷಿ, ಸಂದೇಹ, ಎಲ್ಲವೂ ಕಾಣುತ್ತಿದ್ದವು. ವಿಶ್ವನಾಥ ಮುಂದೆ ಬಂದು, "ಸಹಚರರೇ, ನಮ್ಮ ಪ್ರೀತಿಯ ಆಚಾರ್ಯರು ಇನ್ನೂ ಬದುಕೇ ಇದ್ದಾರೆ! ಕಾಂತಾ ದ್ರೋಹಿ ಅಲ್ಲ. ಅವನು ಅಷ್ಟೆಲ್ಲ ಮಾಡಿದ್ದು ನಾಟಕವಷ್ಟೆ ಅವನು ನಮ್ಮ ಬೇಹುಗಾರ. ಅವರ ರಹಸ್ಯಗಳನ್ನೆಲ್ಲ ತಿಳಿದುಕೊಂಡು, ದೇಶದ ನಷ್ಟವನ್ನು ತಪ್ಪಿಸಲು ಆಚಾರ್ಯರೇ ಅವನನ್ನು ಆ ಕೆಲಸಕ್ಕೆ ನೇಮಿಸಿದ್ದರು. ಈಗ ಮತ್ತೆ ಒಂದು ಅಪಾಯ ಎದುರಾಗಿದೆ. ನಮ್ಮ ದೇವಾಲಯ ವೊಂದನ್ನು ಹಾಳುಗೆಡಹುವ ಉದ್ದೇಶದಲ್ಲಿ ಅವರು ಇಲ್ಲಿಗೆ ಬಂದಿದ್ದಾರೆ. ನಮಗೆ ತಿಳಿದಂತೆ ನಮ್ಮನ್ನೆಲ್ಲಾ ಅವರು ಆ ಬೆಟ್ಟದ ಕಾರ್ಯಾಚರಣೆಗೆಂದೇ ಕಳುಹಿಸಿದ್ದಾರೆ. ಆದರೆ ನಾವು ಮಾತ್ರ ನಮ್ಮ ದೇಶಕ್ಕಾಗಿಯೇ ಕೆಲಸ ಮಾಡಬೇಕು. ಅವರೊಂದಿಗೇ ಹೋಗೋಣ. ಅವರು ಮಾಡುವಂತೆ ಅವರ ಬೆನ್ನಿಗೆ ಚೂರಿ ಹಾಕೋಣ. ಅಷ್ಟಕ್ಕೂ ನಾವು ಮೋಸ ಮಾಡುತ್ತಿಲ್ಲ. ನಾವು ನಮ್ಮದು ಎನ್ನುವುದನ್ನು ರಕ್ಷಿಸುತ್ತಿದ್ದೇವೆ ಅಷ್ಟೆ! ಆಚಾರ್ಯರು ಬಂದಾಗಿದೆ! ಇನ್ನು ನಾವು ಅವರ ಆಜ್ಞೆಯಂತೆ ನಡೆಯಬೇಕು ಅಷ್ಟೆ!" ಎಂದು ಎಲ್ಲರಿಗೂ ತಿಳಿ ಹೇಳಿದನು. ಆಚಾರ್ಯರು "ಸಹಚರರೇ! ಇಂದು ನಡೆಯು ತ್ತಿರುವುದು ಕೇವಲ ಬೆಟ್ಟದ ಕಾರ್ಯಾಚರಣೆ ಅಲ್ಲ! ಇಲ್ಲಿ ಚರ್ಚು ಎಂದು ಕಟ್ಟಲಾಗಿರುವ ಜಾಗದಲ್ಲಿ ಹಿಂದೆ ರಾಜರು ಸಂಪತ್ತನ್ನು ಇಟ್ಟಿದ್ದರೆಂದು ನನ್ನ ನಂಬಿಕೆ. ಅದನ್ನು ಅವರು ಈಗಾಗಲೇ ಪೆಟ್ಟಿಗೆಗಳಲ್ಲಿ ತುಂಬಿಸಿ ಇಟ್ಟಿದ್ದಾರೆಂದು ನನ್ನ ನಂಬಿಕೆ. ಹತ್ತು ಪೆಟ್ಟಿಗೆಗಳಷ್ಟು ಸಂಪತ್ತು ಅವರಿಗೆ ಸಿಕ್ಕಿದೆ ಎಂದು ನನಗೆ ಮಾಹಿತಿ ದೊರಕಿದೆ!" ಎಂದು ಘೋಷಿಸಿದಾಗ, ಎಲ್ಲರಲ್ಲೂ ಗುಸುಗಸು ಆರಂಭವಾಯಿತು. ವಿಶ್ವನಾಥ ಆಚಾರ್ಯರ ಹತ್ತಿರ ಬಂದು ಕಿವಿಯಲ್ಲಿ ಏನೋ ಪಿಸುಗುಟ್ಟಿದನು. ಆಚಾರ್ಯರ ಮುಖ ಬೆಳಗಿತು. ಆ ದೊಡ್ಡ ಕೊಠಡಿಯಲ್ಲಿ ಇದ್ದ ಜನರೆಲ್ಲರೂ ಪಕ್ಕಕ್ಕೆ ಸರಿದರು. ಆಗ ಅಲ್ಲಿ ಆಚಾರ್ಯರಿಗೆ ಕಂಡಿದ್ದು ಐದು ಪೆಟ್ಟಿಗೆಗಳು. ವಿಶ್ವನಾಥ, "ಆಚಾರ್ಯ, ನಾನು ನಿಮಗೆ ಹೇಳಿದ್ದ ಉಡುಗೊರೆ ಇದೇ!" ಎಂದು ಆ ಪೆಟ್ಟಿಗೆಗಳನ್ನು ತೆರೆದನು. ಐದು ಪೆಟ್ಟಿಗೆಗಳ ತುಂಬಾ ಬಂಗಾರದ ನಾಣ್ಯಗಳು, ಕೆಲವು ಹಿತ್ತಾಳೆ ನಾಣ್ಯಗಳು, ಕಂಚಿನ ನಾಣ್ಯಗಳು, ಎಲ್ಲವೂ ತುಂಬಿದ್ದವು. ಆಚಾರ್ಯರು, ಅದನ್ನು ಮುಟ್ಟಿ ನಮಸ್ಕರಿಸಿದರು. "ಇದು ನಮ್ಮ ರಾಜರು ಬಿಟ್ಟು ಹೋಗಿರುವ ಸಿರಿ. ಇದನ್ನು ಸದುಪಯೋಗಪಡಿಸಿಕೊಳ್ಳಬೇಕು" ಎನ್ನುತ್ತಾ, ವಿಶ್ವನಾಥನನ್ನು ಅಪ್ಪಿಕೊಂಡರು. ನಂತರ ಎಲ್ಲರೂ ಆಚಾರ್ಯರನ್ನೇ ನೋಡುತ್ತಾ ನಿಂತರು.

ಆಚಾರ್ಯರು, "ನಿಮಗೆ ದೊರಕಿದ್ದು ಐದೇ ಪೆಟ್ಟಿಗೆಗಳೇ?" ಎಂದು ಕೇಳಿದರು. ಆ ಜನರ ಗುಂಪಿನಲ್ಲಿ ಒಬ್ಬನು ಮುಂದೆ ಬಂದು, "ಆಚಾರ್ಯ, ನಮಗೆ ತಿಳಿದಿದ್ದು ಈ ಐದು ಪೆಟ್ಟಿಗೆಗಳ ಇರುವಿಕೆಯ ಬಗ್ಗೆಯೇ! ಹತ್ತು ಪೆಟ್ಟಿಗೆಗಳಿದ್ದವೆಂದು ತಿಳಿದಿದ್ದು ಈಗಲೇ! ನೀವು ನಮಗೆ ಹೇಳಿದಾಗಲೇ!" ಎಂದು ಆಶ್ಚರ್ಯವನ್ನು ವ್ಯಕ್ತಪಡಿಸಿದ. ಆಚಾರ್ಯರು ಹಿಂದಕ್ಕೆ ತಿರುಗಿ, ತಲೆಯ ಮೇಲೆ ಕೈ ಇಟ್ಟುಕೊಂಡರು. ಬಿಲ್ಲನ್ನು ಹೆಗಲಿಂದ ತೆಗೆದು, ಅದನ್ನು ಕೆಳಗಿಟ್ಟರು. "ಈಗ ಅವರು ಬರಬಹುದು. ಐದು ಪೆಟ್ಟಿಗೆಗಳು ಕಣ್ಮರೆಯಾಗಿರುವುದನ್ನು ಕಂಡು ಅವರು ಕುಪಿತರಾಗಬಹುದು. ಎಲ್ಲರೂ ಬೆಟ್ಟದ ಕಾರ್ಯಾಚರಣೆಗೆ ಹೊರಡಬೇಡಿ. ನನ್ನೊಂದಿಗೆ ಕೆಲವರು ಇಲ್ಲೇ ಇರಿ!" ಎಂದು ಆಚಾರ್ಯರು ಹೇಳಿದರು. ವಿಶ್ವನಾಥ ಮುಂದೆ ಬಂದು, "ಆಚಾರ್ಯರೇ, ನಾನು ಎಲ್ಲಿ ಇರಬೇಕು?" ಎಂದು ಕೇಳಿದ. ಆಗ ಆಚಾರ್ಯರು, "ಇಲ್ಲಿನ ನೇತೃತ್ವಕ್ಕೆ ನಾನು ಇರುತ್ತೇನೆ. ನೀನು ಬೆಟ್ಟಕ್ಕೆ ಹೋಗಿ, ಅಲ್ಲಿರುವ ನಮ್ಮ ವೀರತ್ರಯರಿಗೆ ಸಹಾಯ ಮಾಡು!" ಎಂದು ಕಳುಹಿಸಿದರು. ವಿಶ್ವನಾಥ ಅಲ್ಲಿನ ಗುಂಪಿನಲ್ಲಿ ಹತ್ತು ಮಂದಿಯನ್ನು ಆಯ್ದುಕೊಂಡು, "ಬನ್ನಿ ಹೋಗೋಣ! ಸ್ವಾತಂತ್ರ್ಯ ಲಕ್ಷ್ಮೀಗೆ ಜೈ!" ಎಂದನು. ಹತ್ತೂ ಜನರು ಒಕ್ಕೊರಲಲ್ಲಿ "ಸ್ವಾತಂತ್ರ್ಯ ಲಕ್ಷ್ಮೀಗೆ ಜೈ" ಎಂದರು, ಹೊರಕ್ಕೆ ಸದ್ದು ಕೇಳಿಸದಂತೆ. ಆಚಾರ್ಯರು ವಿಶ್ವನಾಥನನ್ನು ತಡೆದು, "ನಿಮಗೆ ಆ ಅರಣ್ಯಾನಿ ಬೆಟ್ಟಕ್ಕೆ ದಾರಿ ಗೊತ್ತಿದೆಯೇ?" ಎಂದು ಕೇಳಿದರು. ವಿಶ್ವನಾಥ ಆಚಾರ್ಯರ ಕಡೆಯೇ ನೋಡಿ, ತಲೆ ಬಗ್ಗಿಸಿದನು. ಆಚಾರ್ಯರು, ಅವನ ಹೆಗಲ ಮೇಲೆ ಕೈಯಿಟ್ಟು, "ಚಿಂತೆ ಇಲ್ಲ. ಇರುವ ಒಂದು ದಾರಿಯಲ್ಲಿ, ಇಷ್ಟು ಹೊತ್ತಿಗಾಗಲೇ ಬ್ರಿಟೀಷರು ಬರುತ್ತಿರುತ್ತಾರೆ. ನೀವು ಕಾಡಿನೊಳಕ್ಕೆ ನುಗ್ಗಿ. ಜಲಪಾತವೊಂದು ಕಾಣುತ್ತದೆ. ಆ ಜಲಪಾತದ ಹಿಂದೆ ಇರುವ ಬೆಟ್ಟವೇ ಅರಣ್ಯಾನಿ ಬೆಟ್ಟ. ಸಿಂಗಳೀಕದ ಕೂಗು ನೆನಪಿರಲಿ. ಅದರಂತೆ ಕೂಗಿದರೆ, ನಮ್ಮ ವೀರತ್ರಯರಿಗೆ ನೀವು ಯಾರೆಂದು ತಿಳಿಯುತ್ತದೆ" ಎಂದು ಹೇಳಿದರು. ವಿಶ್ವನಾಥನು "ಹಾಗೆಯೇ ಆಚಾರ್ಯರೆ" ಎಂದು ಹತ್ತು ಜನ ರೊಂದಿಗೆ ಹೊರಟ. ಆಚಾರ್ಯರು ನಂತರ ಮಿಕ್ಕವರನ್ನು ನಿಲ್ಲಿಸಿಕೊಂಡು, "ಈಗ ಶತ್ರು ಸೈನ್ಯ ಬರಬಹುದು. ಅವರನ್ನು ಎದುರಿಸುವುದು ಸ್ವಲ್ಪ ಕಷ್ಟವೇ ಆದರೂ, ತಂತ್ರದಿಂದ ಆದರೂ ನಾವು ಅವರನ್ನು ಸೋಲಿಸಬೇಕು. ನಿಮ್ಮ ಆಯುಧಗಳನ್ನು ಸಿದ್ಧಪಡಿಸಿ ಇಟ್ಟುಕೊಳ್ಳಿ. ಮಿಕ್ಕಿದ ಐದೂ ಪೆಟ್ಟಿಗೆಗಳನ್ನು ನಾವು ಇಲ್ಲಿಂದ ಹೊರಡಲು ಬಿಡಬಾರದು. ಹೇಗಾದರೂ ಮಾಡಿ ಅವುಗಳನ್ನು ಕಾಡು ದಾಟಲು ಬಿಡಬಾರದು. ಈಗ ಹೊರಡಿ, ಅವರು ಹೇಳಿದಂತೆಯೇ ಮಾಡಿ, ಬಹುಶಃ ಅವರು ಪೆಟ್ಟಿಗೆಗಳನ್ನು ಬರುವ ಬಂಡಿಗಳಿಗೆ ಹಾಕಲು ಹೇಳುತ್ತಾರೆ.

ಅದರಂತೆಯೇ ಮಾಡಿ. ಆದರೆ ಬಂಡಿಗಳು ಮಾತ್ರ ಅವರು ಹೇಳಿದ ಸ್ಥಳಕ್ಕೆ ಹೋಗುವುದಿಲ್ಲ" ಎಂದು ಹೇಳಿದಾಗ, ಎಲ್ಲರೂ ಸಿದ್ಧರಾಗಿ ಪಕ್ಕದಲ್ಲಿ ಇದ್ದ ಕತ್ತಿಗಳನ್ನೆತ್ತಿಕೊಂಡು ಹಾಕಿಕೊಂಡ ಬಟ್ಟೆಯ ಬೆನ್ನಿನ ಭಾಗದಲ್ಲಿ ಮರೆ ಮಾಡಿಕೊಂಡರು. ನಂತರ ಕೈಗಳಲ್ಲಿ ಪುಟ್ಟ ಪುಟ್ಟ ಕೊಡಲಿಗಳನ್ನು ಎತ್ತಿಕೊಂಡರು. ಎರಡೂ ಕೈಗಳಲ್ಲಿ ಕೊಡಲಿಗಳು. ಎಸೆಯಬಲ್ಲಂತವೂ, ಜೊತೆಗೆ ಘಾತಿಸ ಬಲ್ಲಂತವು. ನೇರವಾಗಿ ಯುದ್ಧಕ್ಕೂ ಯೋಗ್ಯ. ಆಚಾರ್ಯರು ವಿಶ್ವನಾಥನ ಉಪಾಯವನ್ನು ಮೆಚ್ಚಿದರು. ಆಚಾರ್ಯರೊಬ್ಬರನ್ನು ಬಿಟ್ಟು, ಮಿಕ್ಕಿದವರೆಲ್ಲರೂ ಹೊರ ನಡೆದರು. ಆಚಾರ್ಯರು ವಿಶ್ವನಾಥನ ಮನೆಯ ಹಿಂದಿನ ಬಾಗಿಲಿನಿಂದ ಹೊರ ನಡೆದು, ಮನೆಯ ಮೇಲೆ ನಿಂತರು. ಮನೆಯ ಮುಂದಿನ ಭಾಗವು ಬಚ್ಚಿಟ್ಟುಕೊಳ್ಳುವುದಕ್ಕೆ ಅನುಕೂಲಕರವಾಗಿತ್ತು. ಬಂಡಿಗಳ ಸದ್ದಾಗತೊಡಗಿತು. ದೂರದಲ್ಲಿ ಚರ್ಚಿನಲ್ಲಿ ಹೊತ್ತಿಕೊಂಡ ಬೆಳಕು ಕಂಡಿತು. ಆಚಾರ್ಯರು ಎಣಿಸಿದಂತೆ ಇಲ್ಲಿಗೆ ಹನ್ನೊಂದು ಬಂಡಿಗಳು ಬರಬೇಕಿತ್ತು. ಆದರೆ ನೋಡು ನೋಡುತ್ತಿದ್ದಂತೆ ಬಂದಿದ್ದು ಕೇವಲ ಆರು ಬಂಡಿಗಳು. ಮಿಕ್ಕ ಆರು ಬಂಡಿಗಳೆಲ್ಲಿ? ಕೊನೆಯ ಬಂಡಿಯಲ್ಲಿ ಅಧಿಕಾರಿಯು ಠೀವಿಯಿಂದ ಕುಳಿತಿದ್ದ. ಅವರನ್ನು ನೋಡಿದ ಕೂಡಲೆ ಕೆಳಗೆ ನಿಂತಿದ್ದ ಆಚಾರ್ಯರ ಸಹಚರರು ಗೌರವದಲ್ಲಿ ತಲೆ ಬಾಗಿಸಿದರು. ಆ ಅಧಿಕಾರಿಯು ಚರ್ಚಿನ ಬಳಿ ಎಲ್ಲರನ್ನೂ ಬರುವಂತೆ ಹೇಳಿದ. ಎಲ್ಲರೂ ಆ ಬಂಡಿಯನ್ನು ಹಿಂಬಾಲಿಸತೊಡಗಿದರು. ಆಚಾರ್ಯರು ಒಂದು ಮನೆಯಿಂದ ಇನ್ನೊಂದು ಮನೆಯ ಮೇಲೆ ಎಗರುತ್ತಾ, ಸದ್ದು ಮಾಡದೆ, ಚರ್ಚಿನ ಹಿಂಭಾಗದಲ್ಲಿದ್ದ ಕಾಡನ್ನು ತಲುಪಿದರು. ಚರ್ಚಿನಲ್ಲಿ ಸಿದ್ಧತೆಗಳಾಗುತ್ತಿದ್ದವು. ಅದರ ಹಿಂಭಾಗದಲ್ಲಿ ಒಂದು ಬಾಗಿಲು ತೆರೆದಿತ್ತು. ಒಳಗೆ ಹತ್ತಾರು ಪಂಜುಗಳು ಉರಿಯುತ್ತಿದ್ದವು. ಒಳಗೆ ಇಬ್ಬರು ಬಿಳಿ ಮನುಷ್ಯರು ಗಾಬರಿಯಲ್ಲಿ ಒದ್ದಾಡುತ್ತಿದ್ದರು. ಆ ದೊಡ್ಡ ಜಾಗದ ತುಂಬೆಲ್ಲಾ ಒಣ ಹುಲ್ಲಿತ್ತು. ಒಂದು ಮೂಲೆಯಲ್ಲಿ ಐದು ಪೆಟ್ಟಿಗೆಗಳಿದ್ದವು. ಆಚಾರ್ಯರು ನೋಡು ನೋಡುತ್ತಿದ್ದಂತೆಯೇ ಕಿಟ್ಟಾಚಾರಿಯ ವೇಷದ ಸಾಕ್ಷಿ ಆ ಜಾಗಕ್ಕೆ ಬಂದ. ಆ ಬಿಳಿಯರನ್ನು ಕರೆದುಕೊಂಡು ಹೋದ. ಆಚಾರ್ಯರು ನಿಧಾನವಾಗಿ ನೆರಳಿನಂತೆ ಅವರನ್ನು ಹಿಂಬಾಲಿಸತೊಡಗಿದರು. ಅಲ್ಲಿ ಕಾಂತಾ, ಅಧಿಕಾರಿ ಹಾಗೂ ಸುಮಾರು ಮೂವತ್ತು ಜನ ಬ್ರಿಟೀಷಿನ ಸೈನಿಕರಿದ್ದರು. ಬೆವರುತ್ತಿದ್ದ ಈ ಇಬ್ಬರು ಬಿಳಿಯರು, ಅಧಿಕಾರಿಯ ಬಳಿ ಪರಿತಪಿಸುತ್ತಿದ್ದರು. "ಇನ್ನು ಐದು ಪೆಟ್ಟಿಗೆ ಏನಾಯಿತೋ ತಿಳಿಯುತ್ತಿಲ್ಲ. ಅದು ಯಾರಿಗೂ ಗೊತ್ತಿಲ್ಲ" ಇತ್ಯಾದಿಯಾಗಿ ಅವರು ಬೇಡುತ್ತಿದ್ದರು. ಅಧಿಕಾರಿಯು ಚರ್ಚಿನ ಹೊರಭಾಗಕ್ಕೆ ನಡೆದು ಕೊಳವೆ ಆಕಾರದ ಆಟಿಕೆ ಅಗಿದ್ದ ಗಂಟೆಯನ್ನು ಜೋರಾಗಿ ಐದು ಬಾರಿ ಹೊಡೆದ.

ಆ ಜೋರು ಸದ್ದಿಗೆ ಕಾಡಿನ ಪಕ್ಷಿಗಳು ಹಾರಿ ಹೋಗಿದ್ದು ಕಂಡಿತು. ಒಂದೊಂದೇ ಮನೆಯಲ್ಲಿ ದೀಪ ಉರಿಯಲು ಆರಂಭಿಸಿತು. ವಿಶ್ವನಾಥನ ಮನೆಯಲ್ಲೂ ಒಂದೇ ಒಂದು ಪಂಜನ್ನು ಬಿಡಲಾಗಿತ್ತು. ಅಧಿಕಾರಿಯು ಸೈನಿಕರನ್ನು ಒಂದೊಂದೇ ಮನೆಯನ್ನು ಪರಿಶೀಲಿಸುವಂತೆ ಕಳುಹಿದರು. ಕಾಂತಾ ಅವರೊಂದಿಗೆ ಹೋದ. ಆಚಾರ್ಯರು ನಿಧಾನವಾಗಿ ತಪ್ಪಿಸಿಕೊಂಡು ಮನೆಗಳ ಹಿಂಭಾಗದ ಕಡೆಗೆ ನಡೆದರು. ಇತ್ತ ಅಧಿಕಾರಿಯು, ಮಿಕ್ಕಿದ ಐದು ಪೆಟ್ಟಿಗೆಗಳನ್ನು ಬಂಡಿಗೆ ಏರಿಸುವ ವ್ಯವಸ್ಥೆ ಮಾಡಿ, ಎರಡು ಬಂಡಿಗಳನ್ನು ಹಡಗುಗಳತ್ತ ಕಳುಹಿಸಿದ. ಆದರೆ ಒಂದು ಬಂಡಿ ಸಾಕ್ಷಿಯ ಕೈಲಿತ್ತು. ಇನ್ನೊಂದೂ ಅವನ ವ್ಯವಸ್ಥೆಯೇ. ಅವರಿಬ್ಬರೂ ಸ್ವಲ್ಪ ದೂರ ಹೊರಟು, ಬಂಡಿಗಳನ್ನು ಹನುಮಂತನ ಬೆಟ್ಟದ ಕಡೆಗೆ ತಿರುಗಿಸಿದರು. ಇತ್ತ, ಆಚಾರ್ಯ ಹಾಗೂ ಕಾಂತಾ ಸೈನಿಕರು ಹೊಕ್ಕುತ್ತಿದ್ದ ಮನೆಯೊಳಕ್ಕೇ ತಾವೂ ಹೊಕ್ಕು ಒಬ್ಬೊಬ್ಬ ಸೈನಿಕನನ್ನೇ ಸಾಯಿಸುತ್ತಿದ್ದರು. ವಿಶ್ವನಾಥನ ಮನೆಯೊಳಕ್ಕೆ ಬಾಗಿಲನ್ನು ಹೊಡೆದು ಇಬ್ಬರು ಸೈನಿಕರು ನುಗ್ಗಿದರು. ಹಿತ್ತಲಿನ ಬಾಗಿಲಿನಿಂದ ಬಂದಿದ್ದ ಆಚಾರ್ಯರು ರಕ್ತಸಿಕ್ತ ಕತ್ತಿಯನ್ನು ಹಿಡಿದು ಕಾಯುತ್ತಿದ್ದರು. ಮುಂದೆಯಿಂದ ಕಾಂತಾ ಕೂಡ ಬಂದ. ಅವನು ತನ್ನ ಬಳಿಯಿದ್ದ ಕೊಡಲಿಯನ್ನು ಹೊರ ತೆಗೆದ. ಅವನ ಮೇಲಂಗಿ ರಕ್ತಮಯವಾಗಿತ್ತು. ಮೂವತ್ತು ಮಂದಿಯಲ್ಲಿ ಹೆಚ್ಚೂ ಕಮ್ಮಿ ಇಪ್ಪತ್ತು ಮಂದಿ ಸೈನಿಕರು ಹತರಾಗಿದ್ದರು. ಅಧಿಕಾರಿ ಮಾತ್ರ ಚರ್ಚಿನ ಮುಂದೆ ನಿಂತು ಕಾಯುತ್ತಿದ್ದ. ಅವನ ಪಕ್ಕದಲ್ಲಿ ರಕ್ಷಣೆಗೆಂದು ಇಬ್ಬರು ಸೈನಿಕರು. ಇಲ್ಲಿ, ವಿಶ್ವನಾಥನ ಮನೆಯಲ್ಲಿ ಆಚಾರ್ಯರು ತಮ್ಮ ಕತ್ತಿಯನ್ನು ಬೀಸಿ ಒಬ್ಬನನ್ನು ಕೊಂದರು. ಇನ್ನೊಬ್ಬ ಬಿಳಿ ಸೈನಿಕ ಕಾಂತಾ, ಆಚಾರ್ಯ, ಇಬ್ಬರಿಂದಲೂ ತಪ್ಪಿಸಿಕೊಂಡು ಓಡಿದ. ಕಾಂತಾ ಅವನ ಬಳಿ ಇದ್ದ ಚಿಕ್ಕ ಕೊಡಲಿಯನ್ನು ಅವನ ಬೆನ್ನಿಗೆ ಎಸೆದ. ಅದು ಅವನ ಬೆನ್ನ ಹಿಂದೆ ನೇತುಹಾಕಿಕೊಂಡಿದ್ದ ಬಂದೂಕಿಗೆ ತಗುಲಿ ಕೆಳಕ್ಕೆ ಬಿತ್ತು. ಆಚಾರ್ಯರು ಕಾಂತಾನನ್ನು ನೋಡಿ, ಅವರು ಹಿತ್ತಲ ಕಡೆಯಿಂದ ಓಡತೊಡಗಿದರು. ಕಾಂತಾ ಇನ್ನೇನು ಹೊರಕ್ಕೆ ಬಂದು ಆ ಸೈನಿಕನನ್ನು ಹಿಂಬಾಲಿಸುತ್ತಿರುವಷ್ಟರಲ್ಲಿ, ಅವನು, "ಟೈಗರ್ ಈಸ್ ಎ ಟ್ರೈಟರ್! ದ್ರೋಹಿ! ದ್ರೋಹಿ!" ಎಂದು ಬೊಬ್ಬೆ ಹಾಕತೊಡಗಿದ. ಕಾಂತಾ ಇದರ ಬಗ್ಗೆ ಚಿಂತಿಸಲಿಲ್ಲ. ಇನ್ನು ಮರೆಯಲ್ಲಿರುವ ಕಾಲ ಮುಗಿಯಿತು ಎಂದುಕೊಂಡು ಅವನು ಆ ಸೈನಿಕನನ್ನು ಹಿಡಿದು ಅವನ ಬಂದೂಕನ್ನು ತೆಗೆದು ನಿಧಾನವಾಗಿ ಅದನ್ನು ತೊಟ್ಟು, ಆ ಸೈನಿಕನಿಗೆ ಹೊಡೆದ. ಅವನು ಸ್ಥಳದಲ್ಲೇ ಮೃತಪಟ್ಟ. ಚರ್ಚಿನ ಮುಂದೆ ನಿಂತಿದ್ದ ಅಧಿಕಾರಿಯ ಪಕ್ಕದಲ್ಲಿನ ಇಬ್ಬರು ಸೈನಿಕರು ತಮ್ಮ ಬಂದೂಕನ್ನು ಸಿದ್ಧಪಡಿಸಿ ಕಾಂತಾನ ಮೇಲೆ ಹಾರಿಸಬೇಕು ಎನ್ನುವಷ್ಟರಲ್ಲಿ

ಕಾಂತಾ ನೇರವಾಗಿ ಅಧಿಕಾರಿಯ ಎದೆಗೆ ಗುಂಡು ಹಾರಿಸಿದ. ಆ ಅಧಿಕಾರಿಯು ರಕ್ತ ಕಕ್ಕುತ್ತಾ ಸತ್ತು ಬಿದ್ದ. ಆಚಾರ್ಯರು ಮೇಲಿನಿಂದಲೇ ಆ ಇಬ್ಬರು ಸೈನಿಕರನ್ನು ಗುರಿಯಾಗಿಸಿಕೊಂಡು ಬಾಣವನ್ನು ಬಿಟ್ಟರು. ಒಬ್ಬನು ಸಾಯುವಷ್ಟರಲ್ಲಿ, ಇನ್ನೊಬ್ಬನು ನೇರವಾಗಿ ಕಾಂತಾನ ಕಡೆ ಗುಂಡು ಹಾರಿಸಿದ. ಒಂದು ಕಡೆ ಗುಂಡು ಕಾಂತಾನ ಎದೆಗೆ ಬಿದ್ದರೆ, ಆಚಾರ್ಯರ ಸೂಚೀ ಮುಖ ಬಾಣವು ಆ ಸೈನಿಕನ ಹಣೆಯನ್ನು ನಾಟಿತು. ಆಚಾರ್ಯರು, "ಕಾಂತಾ" ಎಂದು ಕೂಗುತ್ತಾ ಓಡಿ ಬಂದು ಅವನನ್ನು ತಮ್ಮ ತೊಡೆಯ ಮೇಲೆ ಮಲಗಿಸಿ ಕೊಂಡರು. ಕಾಂತಾ ಪ್ರಾಣ ಬಿಟ್ಟಾಗಿತ್ತು. ಒಂದು ದಂತ ಕಥೆಯ ಅಂತ್ಯವಾಗಿತ್ತು. ಆಚಾರ್ಯರ ಕಣ್ಣಿನಲ್ಲಿ ನೀರು ಸುರಿಯುತ್ತಿತ್ತು. "ಇನ್ನೇನು ಗುರಿಯನ್ನು ತಲುಪುವಷ್ಟರಲ್ಲೇ ಪ್ರಾಣ ಬಿಟ್ಟೆಯಲ್ಲೋ!" ಎನ್ನುತ್ತಾ ಅವನ ಹಣೆಗೆ ಮುತ್ತನ್ನಿಟ್ಟರು. ಅವನನ್ನು ಮಲಗಿಸಿ, ಆಚಾರ್ಯರು,

> ಪರಿವ್ರಾಡ್ಯೋಗಯುಕ್ತಶ್ಚ ರಣೇ ಚಾಭಿಮುಖೋ ಹತಃ!
> ಯತ್ರ ಯತ್ರ ಹತಃ ಶೂರಃ ಶತ್ರುಭಿಃ ಪರಿವೋಷ್ಟಿತಃ!
> ಅಕ್ಷಯಂ ಲಭತೇ ಲೋಕಂ ಯದಿ ಕ್ಲೀವಂ ನ ಭಾಷತೇ!

ಎಂದು ಗದ್ಗದಿತರಾಗಿ ಹೇಳಿದರು. "ಸುತ್ತಲೂ ಶತ್ರುಗಳಿರುವಾಗ ಹೋರಾಡಿ, ಮಡಿಯುತ್ತಾ ಯಾವುದೇ ಅಯೋಗ್ಯ ಮಾತುಗಳನ್ನಾಡದೇ ವೀರನಾಗಿ ಮಡಿಯುವವನು, ಖಂಡಿತ ಸ್ವರ್ಗ ಸೇರುತ್ತಾನೆ!" ಎಂದು ಉಸುರಿದರು. ಆಚಾರ್ಯರ ಗಂಟಲು ಕಟ್ಟಿತ್ತು. ಕಾಂತಾ ಎನ್ನುವುದೇ ಒಂದು ಕಥೆ. ಯಾರಿಗೂ ತಿಳಿಯದೆ, ಎಲ್ಲರ ವೈರವನ್ನು ಕಟ್ಟಿಕೊಂಡು, ಕೊನೆಯಲ್ಲಿ ವೀರೋಚಿತವಾಗಿ ಹೋರಾಡಿ ಅಜ್ಞಾತವಾಗಿ ಪ್ರಾಣಬಿಟ್ಟನೆಂದು ಆಚಾರ್ಯರು ಅಳತೊಡಗಿದರು. ಊರಿನ ಆಚೆ ನಿಂತಿದ್ದ ಮಿಕ್ಕ ಬಂಡಿಗಳನ್ನು ಒಳಕ್ಕೆ ಕರೆದುಕೊಂಡು ಬಂದರು. ಕಾಂತಾನ ದೇಹವನ್ನು ಒಂದು ಬಂಡಿಯ ಮೇಲೆ ಹೇರಿ, ಇನ್ನು ಎರಡು ಬಂಡಿಗಳ ಮೇಲೆ ಮಿಕ್ಕ ಐದು ಪೆಟ್ಟಿಗೆಗಳನ್ನು ಹಾಕಿಕೊಂಡು ಜಲಪಾತದ ಕಡೆಗೆ ಹೊರಟರು.

3

ನಾನು, ನಾಗ, ಬೋಕ, ತಾತನನ್ನು ಕರೆದುಕೊಂಡು ಅರಣ್ಯಾನಿ ಬೆಟ್ಟದ ತಪ್ಪಲಿಗೆ ಬಂದೆವು. ಜಲಪಾತ ಅದರ ಪಾಡಿಗೆ ಅದು ಹರಿಯುತ್ತಿತ್ತು. ತಾತ, ಚಂಡೆಯನ್ನೆತ್ತಿಕೊಂಡು ಸತತವಾಗಿ ಬಾರಿಸತೊಡಗಿದರು. ಎರಡು ಕ್ಷಣ ಅದು ಅರಣ್ಯದಲ್ಲೆಲ್ಲಾ ಪ್ರತಿಧ್ವನಿಸಿತು. ಬೆಟ್ಟದ ಮೇಲಿಂದಲೂ ಅದೇ ರೀತಿಯ ಸತತವಾದ ತಾಳ ಕೇಳಿಸಿತು. ತಾತ, ಬೋಕನ ತಲೆಯನ್ನು ಮುಟ್ಟಿ, ಬನ್ನಿ ಎಂದರು. ತಾತ,


ತಮ್ಮ ದಣಿವನ್ನೆಲ್ಲಾ ಮರೆತಿದ್ದರು. ಛಂಗ್ ಛಂಗ್ ಎಂದು ಬೆಟ್ಟವನ್ನು ಹತ್ತ ತೊಡಗಿದರು. ಅಲ್ಲಲ್ಲಿ ಪಾಚಿಯಿತ್ತು. ಅದನ್ನು ತೋರಿಸುತ್ತಾ, ತಾತ, "ಹುಷಾರು, ಜಾರುತ್ತೆ" ಎಂದರು. ನಾವು ಅದರ ಮೇಲೆ ಕಾಲಿಡದೆ ಹತ್ತತೊಡಗಿದೆವು. ಒಂದು ಕಡೆ ಬೆಟ್ಟ ಬಹಳ ಕಡಿದಾಗಿತ್ತು. ಒಂದು ಗಟ್ಟಿಯಾಗಿದ್ದ ಬಳ್ಳಿಯನ್ನು ಹಿಡಿದು ಕೊಂಡು ನಾವು ಬೆಟ್ಟವನ್ನು ಏರತೊಡಗಿದೆವು. ಕಡಿದಾದ ಭಾಗ ಮುಗಿದ ಮೇಲೆ ಒಂದು ವಿಸ್ತಾರವಾದ ಬಂಡೆ ಕಂಡಿತು. ಅಲ್ಲಿ ಹತ್ತು ಜನ ಬಿಲ್ಲುಧಾರಿಗಳು ಕಾಯುತ್ತಿದ್ದರು. ತಾತನನ್ನು ನೋಡಿದ ತಕ್ಷಣ ಅವರು ಕೈ ಮುಗಿದರು. ಆದರೆ ನಮ್ಮನ್ನು ನೋಡಿದ ತಕ್ಷಣ ಅವರು ಬತ್ತಳಿಕೆಯಿಂದ ಬಾಣಗಳನ್ನು ತೆಗೆಯಲು ಆರಂಭಿಸಿದರು. ತಾತ, "ನಮ್ಮವರೇ ಇವರು. ಇವರು ನಮ್ಮ ಈ ದೇವಾಲಯ ಗಳನ್ನು ರಕ್ಷಿಸಲು ಬಂದಿರುವವರು!" ಎಂದಾಗ, ಅವರು ಶಾಂತರಾಗಿ, ಮೆಲ್ಲಗೆ ಯಿಂದ ನಮ್ಮನ್ನು ಸ್ವಾಗತಿಸಿದರು. ವಿಸ್ತಾರವಾದ ಬಂಡೆಯ ಮೇಲೆ ಸಣ್ಣದಾಗಿ ನೀರು ಹರಿಯುತ್ತಿತ್ತು, ಅದನ್ನು ದಾಟಿದ ಮೇಲೆ ಒಂದು ಅದ್ಭುತ ರಚನೆ ನಮಗೆ ಕಂಡಿತು. ಕೇವಲ ಮರದಿಂದ ಮಾಡಿದ ರಚನೆ ಅದು. ತಾತ ನಮಗೆ ಅದನ್ನು ತೋರಿಸಿ, "ಇದು, ಈ ಜನರು ತಮ್ಮ ಸಮರಕಲೆಯನ್ನು ಅಭ್ಯಸಿಸುವ ಜಾಗ. ಇದನ್ನು ಗರೊಡಿ ಎನ್ನುತ್ತಾರೆ. ಇದು ಹದಿನಾರು ಕೋಲು ಉದ್ದದ, ಆರು ಕಂಬಗಳಿರುವ ಗರೊಡಿ" ಹೀಗೆನ್ನುತ್ತಾ, ನಮ್ಮನ್ನು ಒಳಕ್ಕೆ ಕರೆದುಕೊಂಡು ಹೋದರು. ಒಳಗಡೆ ಇನ್ನೊಂದು ರಚನೆ ಇತ್ತು. ತಾತ ನಮಗೆ ಅದನ್ನು ತೋರಿಸಿ, "ಇದು ಬ್ರಹ್ಮ ಗುಡಿ. ಅದರ ಒಳಗೆ ಕಾಣುತ್ತಿರುವ ಇಬ್ಬರ ಮೂರ್ತಿ ಕೋಟಿ ಚೆನ್ನಯ್ಯರದ್ದು. ಅವರು ವೀರದ್ವಯರು. ಅನ್ಯಾಯದ ವಿರುದ್ಧ ಹೋರಾಡಿ, ನಾಡಿನೆಲ್ಲೆಡೆ ಗರೊಡಿಗಳನ್ನು ಸ್ಥಾಪಿಸಿದವರು. ಅದ್ಭುತ ಆಯುರ್ವೇದ ವಿದ್ವಾಂಸರು. ಸಮರಕಲೆಗಳಲ್ಲಿ ಎತ್ತಿದ ಕೈ. ಯುದ್ಧದಲ್ಲೇ ವೀರರಾಗಿ ಮಡಿದವರು. ಅದರೊಳಗೆ ಇರುವುದು ಬ್ರಹ್ಮಗುಂಡ. ಅದರಲ್ಲಿ ಬೆಲೆಬಾಳುವ ನವರತ್ನಗಳನ್ನು ಇಟ್ಟಿರುತ್ತಾರೆ. ಇವೆಲ್ಲವನ್ನೂ ಕಟ್ಟುವ ಮುನ್ನ ಬಹಳಷ್ಟು ಹೋಮಗಳನ್ನು ನೆರವೇರಿಸುತ್ತಾರೆ. ಇಷ್ಟೇ ಅಲ್ಲ. ಇಲ್ಲಿರುವ ಆ ಬ್ರಹ್ಮಗುಂಡವನ್ನೂ ಭೂವಿದ್ಯುತ್ಕಾಂತ ಹಾಗೂ ಭೂಅಯಸ್ಕಾಂತವನ್ನು ಗುರುತಿಸಿ ಇಡಲಾಗಿದೆ"[14] ಎಂದರು. ನಾವು ಆ ಬ್ರಹ್ಮಗುಂಡವನ್ನೇ ದಿಟ್ಟಿಸಿ ನೋಡಿದೆವು. ಅದರ ಮೇಲೆ ಕಮಲದಂತಹ ಒಂದು ಶಿಲೆಯಿತ್ತು. ಅದ್ಭುತ ಶಿಲೆ ಅದು. ಆ ಕಮಲದೊಳಗೆ ಒಂದು ಆಮೆಯ ಆಕೃತಿ. ಆ ಆಕೃತಿಯಿಂದ ತಾಮ್ರದ ಬಳ್ಳಿಯೊಂದು ಮೇಲಕ್ಕೆ

14. ತುಳುನಾಡಿನ ಗರೊಡಿಗಳ ಸಾಂಸ್ಕೃತಿಕ ಅಧ್ಯಯನ, ಬನ್ನಂಜೆ ಬಾಬು ಅಮೀನ್, ಪುಟ 65, 66

ಬಂದು ಇನ್ನೊಂದು ಶಿಲ್ಪವನ್ನು ತಾಗಿತ್ತು. ಆ ಶಿಲ್ಪವು ಸ್ತ್ರೀ–ಪುರುಷ ಎರಡರಂತೆಯೂ ಕಾಣುತಿತ್ತು.[15] ಇಂತಹ ಅದ್ಭುತ ಶಿಲೆಗಳು ನಮ್ಮ ಕಾಡಿನಲ್ಲಿವೆ ಎಂದು ನಾವು ಆಶ್ಚರ್ಯಪಟ್ಟೆವು. ನಂತರ ನಾನು, ಆ ಹತ್ತು ಧನುರ್ಧಾರಿಗಳನ್ನು ಕರೆದು, ನಾವು ಹೇಗೆ ವ್ಯೂಹಗಳನ್ನು ರಚಿಸಬಹುದೆಂದು ಕೇಳಿದೆ. ಅವರು ತಮ್ಮ ವಿಧವಾದ ಪ್ರತಿಘಾತವನ್ನೇ ಕೈಗೊಳ್ಳುತ್ತಾರೆಂದು ಹೇಳಿದರು. ಆಗ ನಾನು, "ಅದೇನೋ ಸರಿ. ಆದರೆ ಈಗ ಶತ್ರುವಿನ ವೇಷದಲ್ಲಿ ಬರುವವರು ನಮ್ಮವರೇ. ಅವರು ಸಿಂಗಳೀಕದ ಕೂಗು ಹಾಕುತ್ತಾರೆ. ಎಚ್ಚರಿಕೆಯಿಂದ ಇರಿ ದಯವಿಟ್ಟು" ಎಂದು ಹೇಳಿದೆ. ಅವರಲ್ಲಿ ಒಬ್ಬ ಬಂದು, "ಹಾಗೆಯೇ ತಮ್ಮ. ಇದು ಕೇವಲ ಗರೊಡಿ. ಇನ್ನೂ ಮೇಲೆ ಹೋದರೆ, ಅಲ್ಲಿ ಗಣಪತಿ, ಪಂಜುರ್ಲಿ ದೈವ, ಹಾಗೂ ಮುಖ್ಯವಾಗಿ ಅರಣ್ಯನಿ ದೇವಾಲಯವಿದೆ. ಅದನ್ನು ಶತ್ರುಗಳು ತಾಕುವುದೇ ಅತಿ ಕಷ್ಟಕರ. ಇನ್ನು ನಮ್ಮವರೇ ಬರುತ್ತಾರೆ ಎಂದರೆ ಅದರ ಚಿಂತೆಯಿಲ್ಲ ಬಿಡು" ಎನ್ನುತ್ತಾ ನಮ್ಮನ್ನು ಅಪ್ಪಿಕೊಂಡನು. ನಾವು ತಲೆ ಆಡಿಸಿ, ಸತತ ಜಾಗ್ರುತಿಯನ್ನು ನೆನೆಸಿಕೊಂಡೆವು. ನಂತರ ತಾತ, "ಬನ್ರೋ, ಮಿಕ್ಕಿದ ದೇವಾಲಯಗಳನ್ನು ನೋಡಿ ಎಚ್ಚರದಿಂದ ಇರೋಣ. ಕೆಲಸಗಳನ್ನು ಮುಗಿಸೋಣ" ಎನ್ನುತ್ತಾ ಕರೆದುಕೊಂಡು ಹೊರಟರು. ವಿಸ್ತಾರವಾದ ಬಂಡೆಗಳ ಸ್ಥಳ ಕಳೆದು ಮೇಲೆ ಹೋದಂತೆ ಮರಗಳ ದಟ್ಟಣೆ ಇನ್ನೂ ಹೆಚ್ಚಾಯಿತು. ಎರಡೆರಡು ಮರಗಳ ನಡುವೆ ನುಸುಳಿಕೊಂಡು ಹೋಗವಂತಹ ಸ್ಥಳಗಳೂ ಇದ್ದವು. ಕೆಲವು ಒಣಗಿದ ಮರಗಳು ಅಡ್ಡಲಾಗಿ ಬಿದ್ದಿದ್ದವು. ಅವುಗಳನ್ನೂ ದಾಟಿಯೋ ಅಥವಾ ಅದರ ಕೆಳಗೆ ನುಸುಳಿಕೊಂಡೋ ಹೋಗಬೇಕಿತ್ತು. ಇಷ್ಟು ದಟ್ಟ ಕಾಡಿನ ನಡುವೆ, ಕಲ್ಲಿನಿಂದ ಮಾಡಿದ ಒಂದು ಪುಟ್ಟ ರಚನೆ ಕಂಡಿತು. ನಮಗಿಂತ ಎರಡು ಪಟ್ಟು ಉದ್ದವಿದ್ದ ಆ ರಚನೆಯಲ್ಲಿ ಸೂಕ್ಷ್ಮವಾದಂತಹ ಕೆತ್ತನೆಗಳಿದ್ದವು. ನಾವು ಎಂದೂ ನೋಡಿಯೇ ಇರದ ಕೆತ್ತನೆಗಳು! ಯಾರೋ ನೃತ್ಯ ಮಾಡುತ್ತಿರುವಂತೆ, ದೀಪ ಬೆಳಗುತ್ತಿರುವಂತೆ, ಕಲ್ಲಿನ ನಡುವೆ ಇದ್ದ ಸ್ವಲ್ಪ ಜಾಗದಲ್ಲಿ ಕೆತ್ತಿದ್ದರು. ನಾವು ಬಗ್ಗಿ ಒಳಗೆ ಹೋದೆವು. ಒಳಗಡೆ ಜೇಡಗಳು ತುಂಬಿಕೊಂಡಿದ್ದವು. ಅವುಗಳನ್ನೆಲ್ಲಾ ಬಿಡಿಸಿ ಗರ್ಭಗುಡಿ ಎಂದು ಕರೆಯಲಾಗುತ್ತಿದ್ದ ಪುಟ್ಟ ಕೋಣೆಯ ಒಳಗೆ ಆನೆಯ ತಲೆ ಹೊಂದಿರುವ, ಉದರಕ್ಕೆ ಹಾವನ್ನು ಸುತ್ತಿಕೊಂಡಿರುವ, ನಾಟ್ಯವಾಡುತ್ತಿದ್ದ ಗಣಪತಿಯ ವಿಗ್ರಹ! ಅದನ್ನು ನೋಡಿಯೇ ನಮ್ಮಲ್ಲಿ ಭಯ ಉಂಟಾಯಿತು. ಒಂದು ರೀತಿಯ ಸಾತ್ವಿಕ ಭಯ. ಒಂದು ರೀತಿಯ ಭಕ್ತಿಯ ಭಾವ. ನಾಲ್ವರೂ ಅದರ ಪಾದಕ್ಕೆ ಬಿದ್ದು ನಮಸ್ಕರಿಸಿದೆವು. ಅದರ ಪಕ್ಕದಲ್ಲೇ ಇನ್ನೊಂದು ಕೋಣೆ ಇತ್ತು. "ಪಂಜುರ್ಲಿ

---

15. Ibid



ದೈವ" ಎಂದರು ತಾತ. ಅದು ವರಾಹದ ಮೇಲೆ ಕುಳಿತಿದ್ದ ಅರ್ಧ ಮಾನವ-ಅರ್ಧ ವರಾಹದ ಮೂರ್ತಿ. ಮೇಲೆ ಕುಳಿತಿದ್ದ ವರಾಹ ಮೂರ್ತಿಯ ಶಿರಕ್ಕೆ ನಾಗರದ ಹೆಡೆಗಳಿಂದ ಶೋಭಿತವಾದ ಕಿರೀಟ. ಇದೇ ನಮಗೆ ರಕ್ಷಣೆ ಎನ್ನುವಂತಹ ಭಾವನೆಯಲ್ಲಿ ಕುಳಿತ ಮೂರ್ತಿ ಅದು! ಅದಕ್ಕೂ ನಮಸ್ಕರಿಸಿದೆವು. ತಾತ, "ಈ ದೇವಾಲಯ ಬಹಳ ದಟ್ಟ ಮರಗಳ ನಡುವೆ ಇದೆ. ಸಿಗುವುದೇ ಕಷ್ಟ. ನಡೆಯಿರಿ ನಾವು ಈಗ ಅರಣ್ಯಾನಿಯ ದೇವಾಲಯಕ್ಕೆ ಹೋಗೋಣ" ಎಂದು ನಮ್ಮ ಕೈ ಹಿಡಿದು ಕರೆದುಕೊಂಡು ಹೊರಟರು. ದಟ್ಟ ಮರಗಳನ್ನು ದಾಟಿದ ಮೇಲೆ ಚಿಕ್ಕದೊಂದು ಝರಿಯನ್ನೇ ಅನುಸರಿಸಿಕೊಂಡು ಹೋದೆವು. ಹೋಗುತ್ತಾ ಹೋಗುತ್ತಾ, ಝರಿಯು ಬರುತ್ತಿರುವುದೇ ಒಂದು ದೇವಾಲಯದ ಒಳಗಿನಿಂದ ಎಂದು ತಿಳಿಯಿತು. ಆ ದೇವಾಲಯವನ್ನು ಹೊಕ್ಕಿದ ತಕ್ಷಣ ನಮಗೆ ತಣ್ಣಗಿನ ಅನುಭವವಾಯಿತು. ನಾವು ಅಮ್ಮನ ಮೇಲೆ ಮಲಗುತ್ತಿದ್ದಾಗ ಉಂಟಾಗುತ್ತಿದ್ದ ಕ್ಷೇಮಭಾವ, ಮಮತೆ. ಒಳಗೆ ಮಧ್ಯದಲ್ಲಿ ಒಂದು ರಂಧ್ರದಿಂದ ಝುಳು ಝುಳು ನೀರು ಹರಿಯುತ್ತಿತ್ತು. ಇನ್ನೂ ಒಳಗೆ ಹೋದಾಗ ಒಂದು ದೊಡ್ಡ ಮರ. ಆ ದೇವಾಲಯದ ಮೇಲೆ ಛಾವಣಿಯಂತೆ ಆಚ್ಛಾದಿಸಿರುವ ಮರ. ಅದರಿಂದ ಬಳ್ಳಿ ಬಳ್ಳಿಯಾಗಿ ಹೂವುಗಳು ಜೋತಾಡುತ್ತಿದ್ದವು. ಅದರ ಕೆಳಗೆ

ಯಾರೋ ನಿಂತಂತೆ ಭಾಸವಾಯಿತು. ಹತ್ತಿರ ಹೋಗಿ ನೋಡಿದರೆ, ತಾಯಿ! ಅಭಯಹಸ್ತವನ್ನು ಎತ್ತಿ ಹಿಡಿದು, ಬಲಗಡೆಗೆ ನೋಡುತ್ತಿರುವ, ಸುಂದರ ವಾದರೂ, ಭರವಸೆ ನೀಡುವಂತಹ, ಮಮತೆಯ ಆಕಾರವಾದ ನಗು. ಮರದಿಂದ ಜೋತಾಡುತ್ತಿದ್ದ ಹೂಗಳು ಅವಳ ಹೆಗಲಿನಿಂದ ಕೆಳಗಿಳಿದು ಅವಳ ಪಾದವನ್ನು ತಾಗಿತ್ತು. ಅವಳ ಭಂಗಿ ನಾಟ್ಯಮಯವಾಗಿತ್ತು. ಎಡಗೈಯಲ್ಲಿ ಚಿನ್ಮುದ್ರೆ. ಅವಳ ಕಾಲುಗಳಲ್ಲಿ ಗೆಜ್ಜೆ. ಅದು ಕೆತ್ತನೆ ಅನ್ನಲಾರದಷ್ಟು ಸೂಕ್ಷ್ಮವಾಗಿತ್ತು. ಅತಿ ಸರಳವಾದರೂ, ಅತೀ ಜಟಿಲ ಎನ್ನುವಂತಹ ಅವಳ ಭಾವಾರ್ಥ! ಅರಣ್ಯವೇ ಹಾಗೆ ಅಲ್ಲವೆ! ತಾಯಿ ಅರಣ್ಯನಿ! ತಾತ ಕಂಬನಿ ಸುರಿಸುತ್ತಾ ಧ್ಯಾನಾಸಕ್ತರಾದರು. ನಾವು ಸಾಷ್ಟಾಂಗ ನಮಸ್ಕಾರವನ್ನು ಮಾಡಬೇಕು ಎಂದುಕೊಂಡು ಆಯುಧ ಗಳನ್ನು ತೆಗೆದಿಡುವಷ್ಟರಲ್ಲಿ, "ಢಾಮ್! ಢಾಮ್!" ಎಂಬ ಸದ್ದು ಕೇಳಿಸಿತು. ತಾತ ಧ್ಯಾನದಿಂದ ಎಚ್ಚೆತ್ತರು. "ಅಪಾಯ! ಅಪಾಯ!" ಎಂದು ಭಯಭೀತರಾಗ ತೊಡಗಿದರು. ನಾವು ಅವರನ್ನು ಸಮಾಧಾನಪಡಿಸಿ, ಹೊರಗೆ ಬಂದೆವು. ನಾನು, ಒಂದು ಎತ್ತರವಾದ ಮರವನ್ನು ಆರಿಸಿ ಅದನ್ನು ಹತ್ತಿದೆ. ಒಂದು ರೆಂಬೆಯ ಮೇಲೆ ನಿಂತು, ಸಿಂಗಳೀಕದಂತೆ ಕೂಗಿದೆ. ಅತ್ತ ಕಡೆಯಿಂದಲೂ ಸಿಂಗಳೀಕದ ಕೂಗು ಕೇಳಿತು. ಬೆಟ್ಟವೆಲ್ಲವೂ ಕಾಣುವಂತೆ ನಾನು ಇನ್ನೂ ಮೇಲಕ್ಕೆ ಹತ್ತಿ ನೋಡಿದಾಗ ನನ್ನ ಎದೆಯೇ ಒಡೆಯಿತು. "ನಾಗ, ಬೋಕ!" ಎಂದು ಕೂಗುತ್ತಾ ಕೆಳಗಿಳಿದೆ. ಅವರು ಬೆವರುತ್ತಿದ್ದರು. ನಾನು, "ಲೋ, ಬಂದಿರುವುದು ಕೇವಲ ನಮ್ಮವರಲ್ಲ! ಅವರೊಂದಿಗೆ ಬಂದೂಕು ಹಿಡಿದಿರುವ ಬ್ರಿಟೀಷರೂ ಇದ್ದಾರೆ! ಬನ್ನಿ ತಡ ಮಾಡುವುದು ಬೇಡ!" ಎನ್ನುತ್ತಾ ಓಡುವುದಕ್ಕೆ ಮುನ್ನ, ತಾತನನ್ನು ಕರೆದು, "ತಾತ, ನಿಮ್ಮ ಕೊಡಲಿ ನಿಮ್ಮ ಬಳಿ ಇರಲಿ! ನಾವು ಈ ಬೆಟ್ಟವನ್ನು ರಕ್ಷಿಸಿಯೇ ತೀರುತ್ತೇವೆ. ಇಷ್ಟು ದಿನ ತಾಯಿ ನಮ್ಮನ್ನು ರಕ್ಷಿಸಿದ್ದಳು. ಈಗ ನಮ್ಮ ಸರದಿ!" ಎಂದು ಹೇಳಿ ಕೆಳಕ್ಕೆ ಓಡ ತೊಡಗಿದೆ. ಓಡುತ್ತಾ, ಏದುಸಿರಲ್ಲಿಯೇ, "ಸತತ ಜಾಗೃತಿ" ಎಂದೆ. ನಾಗ ಬೋಕರು ನನ್ನನ್ನು ನೋಡಿ, "ಹೌದು!" ಎಂದು ತಲೆ ಅಲ್ಲಾಡಿಸಿದರು. ಮೂವರೂ ಮೂರು ದಿಕ್ಕಿನಲ್ಲಿ ಓಡಿದೆವು. ಗಣಪತಿಯ ದೇವಸ್ಥಾನದ ಬಳಿ ಯಾವುದೇ ಮನುಷ್ಯರು ಸುಳಿವಿರಲಿಲ್ಲ. ನಾನು ಓಡುತ್ತಾ ಓಡುತ್ತಾ ವಿಸ್ತಾರವಾದ ಬಂಡೆಯ ಮೇಲೆ ಜಾರಿ ಗರೊಡಿಯನ್ನು ತಲುಪಿದೆ. ಅಲ್ಲಿ ಒಬ್ಬೊಬ್ಬರೇ ಬ್ರಿಟೀಷಿನ ಸೈನಿಕರು ಕೆಂಪು ಬಟ್ಟೆಯನ್ನು ಧರಿಸಿ ಬರುತ್ತಿರು ವುದು ಕಂಡಿತು. ನಾನು ಮರೆಯಲ್ಲಿ ನಿಂತು ಅರ್ಧಚಂದ್ರಾಕಾರದ ಬಾಣಗಳನ್ನು ಬಿಡತೊಡಗಿದೆ. ಒಂದು ಬಾಣವು ಒಬ್ಬನ ಕುತ್ತಿಗೆಗೆ ಚುಚ್ಚಿ ಅವನು ಬಿದ್ದ. ಬಿದ್ದವನು ನೇರ ತಪ್ಪಲಿಗೆ ಜಾರಿದ. ಇದನ್ನು ನೋಡಿ ಬೇರೆಯವರು ಎಚ್ಚೆತ್ತರು. ಬಾಣದ ಮೂಲವನ್ನು ಹುಡುಕತೊಡಗಿದರು. ನಾನು ಬೇರೆ ಬೇರೆ ಕಡೆಗಳಿಂದ

ಸೂಚೀಮುಖ ಬಾಣಗಳನ್ನು ಬಿಡತೊಡಗಿದೆ. ಕೆಲವು ಗುರಿಯನ್ನು ಮುಟ್ಟುತ್ತಿರಲಿಲ್ಲವಾದರೂ ಅವರನ್ನು ಘಾತಿಸುತ್ತಿತ್ತು. ಅಷ್ಟರಲ್ಲಿ ಗರೊಡಿಯ ಒಳಗಿನಿಂದ ಹತ್ತೂ ಜನ ಧನುರ್ಧಾರಿಗಳು ಹೊರಕ್ಕೆ ಬಂದರು. ಕೆಲವರು ಕ್ಷುರಪ್ರ ಬಾಣಗಳನ್ನು ಬಿಟ್ಟರೆ, ಇನ್ನು ಕೆಲವರು ದೇಹವನ್ನು ಹೊಕ್ಕಿ ರಂಧ್ರವನ್ನು ಮಾಡಬಲ್ಲ ಕಾಕತುಂಡ ಬಾಣಗಳನ್ನು ಬಿಡತೊಡಗಿದರು. ನೋಡು ನೋಡುತ್ತಿದ್ದಂತೆ ಸೈನಿಕರ ಸಂಖ್ಯೆ ಹೆಚ್ಚಾಯಿತು. ಹಿಂದೆ ಬಂದವರು ಗುಂಡನ್ನು ಹಾರಿಸತೊಡಗಿದರು. ಇತ್ತ, ಬಂದೂಕಿನ ಅನುಭವವಿಲ್ಲದ ಆ ಹತ್ತು ಜನರಲ್ಲಿ ಆರು ಜನ ಗುಂಡಿನ ಏಟಿನಿಂದ ವಿಲವಿಲ ಒದ್ದಾಡುತ್ತಾ ಬಿದ್ದರು. ನಾವು ಹೇಗಾದರೂ ಮಾಡಿ ಗರೊಡಿಯ ದ್ವಾರವನ್ನು ಕಾಯಬೇಕೆಂದು ಅದರ ಮುಂದೆ ಹೋಗಿ ಅಲ್ಲಿದ್ದ ಒಂದು ಕತ್ತಿಯನ್ನು ಹಿಡಿದು ನಿಂತೆ. ಅವರು ಬಂದೂಕಿನಲ್ಲಿ ಒಂದೊಂದು ಗುಂಡನ್ನು ಹಾರಿಸಿದಾಗಲೂ, ಆ ಬಂದೂಕಿನ ಯಾವುದೋ ಭಾಗವನ್ನು ತೆಗೆದು ಇನ್ನೊಂದು ಗುಂಡನ್ನು ಹಾಕಬೇಕಾಗಿತ್ತು. ಅಷ್ಟರಲ್ಲಿ ನಾನು ಮರೆಯಿಂದ ಅವರಿಗೆ ಬಾಣವನ್ನು ಬಿಟ್ಟೋ, ಕತ್ತಿಯಲ್ಲಿ ಚುಚ್ಚಿಯೋ ಕೊಲ್ಲುತ್ತಿದ್ದೆ. ಅಷ್ಟರಲ್ಲಿ ವಿಶ್ವನಾಥನ ಗುಂಪು ಮೇಲೆ ಬಂದಿತು. ನನಗೆ ಸ್ವಲ್ಪ ಧೈರ್ಯ ಬಂದಿತು ಸಿಂಗಳೀಕದಂತೆ ಕೂಗತೊಡಗಿದೆ. ಅವರು ಚಿಕ್ಕ ಚಿಕ್ಕ ಕೊಡಲಿಗಳನ್ನು ಎಸೆದು, ಓಡಿ ಹೋಗಿ ಶತ್ರುವಿನ ಸಾವನ್ನು ಖಚಿತ ಪಡಿಸಿಕೊಂಡು, ಇನ್ನೊಬ್ಬನನ್ನು ಕೊಲ್ಲುತ್ತಿದ್ದರು. ಆದರೂ ಬಹಳಷ್ಟು ಮಂದಿ ನಮ್ಮ ಕೈ ಬಿಟ್ಟಿದ್ದರು. ನಾವು ಬಂಡೆಯನ್ನು ದಾಟಿಕೊಂಡು ಹೋಗುವಷ್ಟರಲ್ಲಿ ಗಣಪತಿ ದೇವಾಲಯದ ಬಳಿ ದೊಡ್ಡದೊಂದು ಬೆಂಕಿ ಹೊತ್ತಿಕೊಂಡಿರುವುದನ್ನು ನೋಡಿದೆವು. ವಿಶ್ವನಾಥನ ಗುಂಪಿನ ಜೊತೆ ನಾವು ಓಡತೊಡಗಿದೆವು. "ಠಣ್!" ಎಂದು ಕಲ್ಲನ್ನು ಹೊಡೆಯುತ್ತಿರುವ ಸದ್ದು ಕೇಳಿಸಿತು. ನಾನು "ಏಯ್!" ಎಂದು ಚೀರುತ್ತಾ ದೇವಾಲಯವನ್ನು ಹೊಕ್ಕಿದೆ. ಪಂಜುರ್ಲಿ ವಿಗ್ರಹವು ಮಾಯವಾಗಿತ್ತು. ನನ್ನ ಕೋಪ ಇಮ್ಮಡಿಯಾಯಿತು. ಗಣಪತಿ ವಿಗ್ರವನ್ನು ಭೇದಿಸಲು ಯತ್ನಿಸುತ್ತಿದವನನ್ನು ಬೋಕನು ತನ್ನ ಉರುಮಿಯಿಂದ ಘಾತಿಸಿ ಹೊರಕ್ಕೆ ಎಳೆದನು. ಅವನ ತಲೆ ಶರೀರದಿಂದ ಬೇರೆಯಾಯಿತು. ಕಾಡು ನಿಶ್ಯಬ್ಧವಾಯಿತು. ಆಗ ನಾಗನು ರಕ್ತಸಿಕ್ತ ಕತ್ತಿಯನ್ನು ಹಿಡಿದು ಬಂದು, "ಅರಣ್ಯಾನಿ" ಎಂದು ನೆನಪಿಸಿದ. ನಾವು ಭೀತಿಯಿಂದ ಅರಣ್ಯಾನಿ ದೇವಾಲಯದ ಕಡೆಗೆ ಓಡತೊಡಗಿದೆವು. ನಮಗೆ ಒಂದು ಆಶ್ಚರ್ಯವೇ ಅಲ್ಲಿ ಕಾದಿತ್ತು. ತಾತ ವಿಚಿತ್ರ ಕತ್ತಿಯನ್ನು ಒಂದು ಕೈಯಲ್ಲಿ, ಬಂದೂಕನ್ನು ಇನ್ನೊಂದು ಕೈಯಲ್ಲಿ ಹಿಡಿದು ನಿಂತಿದ್ದರು. ಅವರ ಬಳಿ ಇಬ್ಬರು ಶತ್ರು ಸೈನಿಕರ ಶವಗಳು ಬಿದ್ದಿದ್ದವು. ಅಷ್ಟೂ ಸೈನಿಕರು ಮೃತ ಪಟ್ಟಿರಬೇಕು ಎಂದು ನಾವು ಭ್ರಮಿಸಿದೆವು. ಆದರೆ ಪಂಜುರ್ಲಿ

ದೈವದ ವಿಗ್ರಹ? ನಾನು ಅದರ ಕುರಿತಾಗಿ ಹೇಳಿದ ತಕ್ಷಣ, ಎಲ್ಲರೂ ಓಡತೊಡಗಿದೆವು. ಬೆಟ್ಟದ ತಪ್ಪಲ ಕಡೆಗೆ ಓಡುತ್ತಾ ಹೋದೆವು. ಎಲ್ಲರಿಗೂ ಮುಳ್ಳು ಇತ್ಯಾದಿಗಳಿಂದ ನೋವಾದರೂ ಲೆಕ್ಕಿಸದೆ ಕೆಳಕ್ಕೆ ಹೋದೆವು. ಇಬ್ಬರು ಸೈನಿಕರು ಪಂಜುರ್ಲಿ ವಿಗ್ರಹವನ್ನು ಹಿಡಿದು ಓಡುತ್ತಿದ್ದರು. ಇನ್ನೊಂದು ಕಡೆಯಿಂದ ಬಂಡಿಯ ಸದ್ದು ಕೇಳಿಸಿತು. ಒಂದು ಬಂಡಿಯಿಂದ ಆಚಾರ್ಯರು ಕೆಳಗಿಳಿದು, ಆ ಸೈನಿಕರನ್ನು ಅಟ್ಟಿಸಿಕೊಂಡು ಓಡತೊಡಗಿದರು. ಅವರು ಆ ಭಾರದ ವಿಗ್ರಹವನ್ನು ಹಿಡಿದು ನದಿಯ ತನಕ ಓಡತೊಡಗಿದರು. ನೋಡು ನೋಡುತ್ತಿದ್ದಂತೆಯೇ ಅವರು ನದಿಗೆ ಧುಮುಕಿಬಿಟ್ಟರು. ಒಬ್ಬನು ಆ ವಿಗ್ರಹವನ್ನು ನದಿಯಲ್ಲಿಯೇ ದೂರಕ್ಕೆ ಎಸೆದುಬಿಟ್ಟ. ಇಬ್ಬರೂ ನದಿಗೆ ಬಿದ್ದಿದ್ದು ಕೇಳಿಸಿತು. ಆದರೆ ಯಾರೂ ಏಳುವುದನ್ನು ಕಾಣಲಿಲ್ಲ. ಸ್ವಲ್ಪ ಹೊತ್ತಿನ ನಂತರ ರಕ್ತವು ಕಂಡಿತು. ಮೊಸಳೆ ಬೇಟೆ ಆಗಿರಬೇಕು.

4

ಎಲ್ಲರೂ ದಣಿದಿದ್ದೆವು. ಹತ್ತೂ ಪೆಟ್ಟಿಗೆಗಳು ಕೈ ಸೇರಿದ್ದವು. ಆದರೆ ಪಂಜುರ್ಲಿಯ ವಿಗ್ರಹ, ಆ ಶಕ್ತಿವಂತ ವಿಗ್ರಹವನ್ನು ನಾವು ಕಳೆದುಕೊಂಡಿದ್ದೆವು. ಎಲ್ಲೋ ಇಲ್ಲೇ ನಮ್ಮ ತಾಯ ಮಡಿಲ ನದಿಯಲ್ಲೇ ಇತ್ತು. ಹುಡುಕಬೇಕಾಗಿತ್ತಷ್ಟೆ. ಸಂಜೆ ಸಮೀಪಿಸುತ್ತಿತ್ತು. ಇನ್ನೂ ಬೆಳಕಿರುವಾಗಲೇ ಆಚಾರ್ಯರು ನದಿಗೆ ಧುಮುಕಿದರು. ನಾವು ಇದನ್ನು ನೋಡಿ ನದಿಗೆ ಧುಮುಕಿದೆವು. ನದಿಯ ಒಳಗೆ ವಿಗ್ರಹವನ್ನು ಹುಡುಕತೊಡಗಿದೆವು. ಆಚಾರ್ಯರು ಬಹಳ ದೂರ ಹೋಗಿದ್ದರು. ನಾವು ಉಸಿರನ್ನು ತೆಗೆದುಕೊಳ್ಳಲು ಮೇಲೆದ್ದಾಗ, ಆಚಾರ್ಯರು ತಮ್ಮ ಕೈಯಲ್ಲಿ ಪಂಜುರ್ಲಿ ದೈವದ ವಿಗ್ರಹವನ್ನು ಹಿಡಿದು ಏಳುತ್ತಿರುವುದನ್ನು ಕಂಡೆವು. ಆಚಾರ್ಯರು ಸುಸ್ತಾಗಿ ಬಂದು, ನದಿಯ ದಡದಲ್ಲಿ ಆ ವಿಗ್ರಹವನ್ನಿಟ್ಟು ಕುಳಿತರು. ಬೆಟ್ಟದಲ್ಲಿ ಮೂವತ್ತಕ್ಕಿಂತ ಹೆಚ್ಚಿನ ಸೈನಿಕರ ಶವಗಳಿದ್ದವು. ಅವೆಲ್ಲವನ್ನೂ ತರುವಂತೆ ಆಚಾರ್ಯರು ಹೇಳಿದರು. ನಾವು ಒಂದೊಂದನ್ನೆ ಎಳೆದು ತಂದು ಗುಡ್ಡೆ ಹಾಕಿದೆವು. ಅಲ್ಲೇ ದಡದಲ್ಲಿದ್ದ ಹಡಗನ್ನು ನಾವು ಚೂರು ಚೂರು ಮಾಡಿ, ಮರದ ಭಾಗಗಳನ್ನೆಲ್ಲಾ ತಂದು, ಅವರು ಸೇನೆಯ ಜಮಾವಣೆಗೆಂದು ಮಾಡಿದ್ದ ಬರಡು ಜಾಗದಲ್ಲಿ ದೇಹಗಳನ್ನೂ, ಹಡಗಿನ ಹಲಗೆಗಳನ್ನೂ ಹಾಕಿ ಸುಟ್ಟುಬಿಟ್ಟೆವು. ಎಲ್ಲರ ಕಣ್ಣಲ್ಲೂ ನೀರಿತ್ತು. ಆಗ ನಮಗೆ ಹೊಳೆದ ಪ್ರಶ್ನೆ. "ಆಚಾರ್ಯರೇ! ಕಾಂತಾ ಎಲ್ಲಿ?"

***

ಆಚಾರ್ಯರು ನಮ್ಮನ್ನು ಕೈಹಿಡಿದು ಜಲಪಾತದ ಬಳಿ ಕರೆದೊಯ್ಯುವಾಗಲೇ ನಮಗೆ ಸಂಶಯ ಬರಬೇಕಿತ್ತು. ಅಲ್ಲಿ ಗುಂಡಿ ತೆಗೆದು, ಕಲ್ಲುಗಳಿಂದ ಮುಚ್ಚಿದ ಒಂದು ರಚನೆಯನ್ನು ತೋರಿಸಿದರು ಆಚಾರ್ಯರು. ನಾವು ನಮ್ಮ ಅಪ್ಪಯ್ಯನನ್ನ ಕಳೆದುಕೊಂಡಾಗಲೂ ಅತ್ತಿರಲಿಲ್ಲ. ಅಷ್ಟು ಅತ್ತೆವು. ಅವನ ಸ್ಫೂರ್ತಿ ಸದಾ ನಮ್ಮೊಂದಿಗಿ ರುತ್ತದೆ. ಎಲ್ಲೋ ಅಜ್ಞಾತವಾಗಿ ಹೋರಾಡಿ, ಮಡಿದ. ಅರಣ್ಯಾನಿಯ ಮಗ! ನಾವು ನದಿಯಲ್ಲಿ ಸ್ನಾನ ಮಾಡಿ, ರಕ್ತವನ್ನೆಲ್ಲಾ ತೊಳೆದುಕೊಂಡು, ಪಂಜುರ್ಲಿ ವಿಗ್ರವನ್ನೆತ್ತಿಕೊಂಡು ಅರಣ್ಯಾನಿ ಬೆಟ್ಟವನ್ನು ಹತ್ತಿದೆವು. ಮಡಿದ ಹತ್ತೂ ವೀರರನ್ನು ಗರೊಡಿಯ ಬಳಿಯಲ್ಲೇ ಮಣ್ಣು ತೆಗೆದು ಮಲಗಿಸಿದೆವು. ಪಂಜುರ್ಲಿಯ ವಿಗ್ರಹವನ್ನು ಮರುಸ್ಥಾಪಿಸಿ ಆಚಾರ್ಯರು ಅರಣ್ಯಾನಿಯ ದೇವಾಲಯದ ಕಡೆಗೆ ನಡೆದರು.

ಆ ತಾಯಿಯನ್ನು ನೋಡುತ್ತಾ ನಾವೆಲ್ಲರೂ ಅರಣ್ಯಾನಿ ಸೂಕ್ತವನ್ನು ಪಠಿಸತೊಡಗಿದೆವು.

ಅದನ್ನು ಮುಗಿಸಿ, ಆಚಾರ್ಯರು, ನಮ್ಮನ್ನೆಲ್ಲಾ ಕರೆದುಕೊಂಡು ಹನುಮಂತನ ಬೆಟ್ಟದ ಕಡೆಗೆ ಬಂದರು. ನಾವು ಹತ್ತೂ ಪೆಟ್ಟಿಗೆಗಳನ್ನು ಸಾಕ್ಷಿಯೊಂದಿಗೆ ಹೇರಿಕೊಂಡು ಬೆಟ್ಟದ ಮೇಲೆ ಇಟ್ಟೆವು. ಎಲ್ಲವೂ ಮುಗಿಯಿತೆಂದು ನಿಟ್ಟುಸಿರು ಬಿಟ್ಟು ಕುಳಿತೆವು. ಇನ್ನು ಎಲ್ಲಾ ಕಡೆ ಮರಗಳು ಕಡಿದಿದ್ದರು. ಅವುಗಳ ಕಡೆಯೆಲ್ಲಾ ನಾವು ಕಾಡುಮಾವು, ಹಲಸಿನಂತಹ ಮರಗಳನ್ನ ನೆಟ್ಟೆವು. ಇದು ಮಣ್ಣಿಗೂ ಒಳ್ಳೆಯದು, ಪಾಪ ಸಿಂಗಳೀಕಗಳಿಗೂ ಆಹಾರ.

11

ಹೊಸ ಆರಂಭ

ನಾವೈದೂ ಜನ ಒಟ್ಟಿಗೆ ಇರತೊಡಗಿದೆವು. ಹೀಗಿರುವಾಗ, ಒಮ್ಮೆ ಕಾಡಿನ ಒಳಗೆ ಯಾರೋ ಬಂದಿದ್ದಾರೆಂದು ಅಕ್ಷಿ ಹೇಳಿದಾಗ ಆಚಾರ್ಯರು ನನ್ನನ್ನು ಕಳುಹಿದರು. ನಾನು ಅದೇ ಹಳೇ ಉತ್ಸಾಹದಲ್ಲಿ ಯಾವುದೇ ಶಬ್ದ ಮಾಡದೇ ಕಾಡನೆಲ್ಲಾ ಶೋಧಿಸಿದಾಗ, ಬಿಳಿ ವ್ಯಕ್ತಿ ಒಬ್ಬನು ಅರಣ್ಯಾನಿ ಬೆಟ್ಟದ ಸುತ್ತಾ ಮುತ್ತಾ ಸುಳಿಯುತ್ತಿರುವುದನ್ನು ಕಂಡೆ. ಅಲ್ಲದೆ ಅವನ ಬಳಿಯಿದ್ದ ಕಾಗದದ ನಕ್ಷೆಗಳನ್ನೆಲ್ಲಾ ನೋಡಿ, "ಮತ್ತೆ ಶುರುವಾಯಿತು" ಎಂದುಕೊಂಡು ಅವನ ಮೇಲೆ ಪ್ರಹಾರ ಮಾಡಿದೆ.

***

"ಆಗ ನೀನು ನಮ್ಮ ಕೈಗೆ ಸಿಕ್ಕಿಕೊಂಡೆ" ಎಂದರು ಆರಕ್ಷಕರ ಠಾಣೆಯಲ್ಲಿನ ಖಾಕಿಧಾರಿ ಸಾಹೇಬರು ಹೇಳಿದರು.

"ಇದೇ ನಿನ್ನ ಪ್ರಬಲ ಕಾರಣ!" ಎಂದನು ಗೋಪಿ.

"ಹೌದು" ಕಾಳ ಹೇಳಿದ.

ಠಾಣೆಯಲ್ಲಿನ ಇನ್ನೊಬ್ಬ ಹೇಳಿದ, "ಸಾರ್, ಅಮಾವಾಸ್ಯೆಯ ದಿನ ಅಲ್ಲವೇ ನಮಗೆ ಸ್ವಾತಂತ್ರ್ಯ ಬಂದಿದ್ದು?"

ಕಾಳ ತಕ್ಷಣ ಕಣ್ಣರಳಿಸಿದ, "ಏನು? ವಿಕ್ರಮ ಸಂವತ್ಸರದ, ಶ್ರಾವಣ ಮಾಸದ ಕೃಷ್ಣ ಪಕ್ಷದ ಅಮಾವಾಸ್ಯೆಯೇ?" ಎಂದು ಕೇಳಿದ.

ಗೋಪಿ ಎಣಿಸುತ್ತಾ, "ಹೌದು. ಯಾಕೆ?" ಎಂದು ಕೇಳಿದ.

"ಅಂದೇ ಆ ಬೆಟ್ಟದ ಸಂಗ್ರಾಮ ನಡೆದಿದ್ದು!" ಎಂದು ಕಾಳ ಹೇಳಿದ.

ಸಾಹೇಬರು, "ಹಾಗಿದ್ದರೆ ನಾವು ನಿಮ್ಮ ಹನುಮಂತನ ಬೆಟ್ಟ, ಅರಣ್ಯಾನಿ ಬೆಟ್ಟವನ್ನು ನೋಡಬಹುದೇ? ನೀನು ಹೇಳಿದ್ದು ನಿಜವೇ ಆದರೆ ನಿಮ್ಮ ವೀರತ್ರಯರನ್ನು ನಾವು ಈ ಕಾಡಿನ ರಕ್ಷಣೆಗೇ ನೇಮಿಸಬಹುದು!" ಎಂದರು. ಕಾಳ ಎದ್ದು ನಿಂತ.

"ನಾನು ಸಿದ್ಧ. ನಡೆಯಿರಿ" ಎಂದ.

ಸಾಹೇಬರು, ಗೋಪಿ ಹಾಗೂ ಇನ್ನೂ ಇಬ್ಬರು ಕಾಳನನ್ನು ವಿಲ್ಲೀಸ್ ಜೀಪಿನಲ್ಲಿ ಕೂರಿಸಿಕೊಂಡು ಹೊರಟರು. ಕಾಳ ದಾರಿಯನ್ನು ತೋರಿಸುತ್ತಾ, ಹನುಮಂತನ ಬೆಟ್ಟದ ಬಳಿ ಕರೆದುಕೊಂಡು ಬಂದ. ಕಾಳ ಹೇಳಿದಂತೆಯೇ ಆ ಬೆಟ್ಟವಿತ್ತು. ಎಲ್ಲರೂ ಹತ್ತತೊಡಗಿದರು. ಹನುಮಂತನ ವಿಗ್ರಹದ ಮಂದೆ ಧ್ಯಾನದಲ್ಲಿ ಕುಳಿತಿದ್ದ ಬೋಕ, ನಾಗ, ಸಾಕ್ಷಿ ಹಾಗೂ ಆಚಾರ್ಯರನ್ನು ನೋಡಿ ಅವರೆಲ್ಲರೂ ದಂಗಾದರು. ಕಾಳನ ವೃತ್ತಾಂತವನ್ನು ಕೇಳಿ, ಇವರೆಲ್ಲರೂ ಅವರಿಗೂ ಆತ್ಮೀಯರಾಗಿದ್ದರು. ಖಾಕಿಧಾರಿ ಸಾಹೇಬರು ತಮ್ಮ ಚಪ್ಪಲಿಯನ್ನು ಬಿಚ್ಚಿ, ನಮಸ್ಕಾರಗಳನ್ನು ಮಾಡಿದರು. ಕಾಳ ಆಚಾರ್ಯರಿಗೆ ಎಲ್ಲವನ್ನು ವಿವರಿಸಿದಾಗ, ಎಲ್ಲರೂ ಅರಣ್ಯಾನಿ ಬೆಟ್ಟದ ಕಡೆ ಹೊರಟರು.

ಈ ಆರಕ್ಷಕರು ಅದನ್ನು ಹತ್ತಲು ಹರಸಾಹಸ ಪಟ್ಟರಾದರೂ, ಎಲ್ಲಾ ದೇವಾಲಯಗಳನ್ನು ನೋಡಿ, ಅರಣ್ಯಾನಿಯ ಮೂರ್ತಿಯನ್ನು ನೋಡಿದಾಗ, ಕಣ್ಣಲ್ಲಿ ನೀರು ತಂದುಕೊಂಡರು. ಆಚಾರ್ಯರು ಮುಂದೆ ನಿಂತು, ನನ್ನ ನಂತರ ಹೇಳಿ, ಎಂದು,

ಅರಣ್ಯಾನ್ಯರಣ್ಯಾನ್ಯಸೌ ಯಾ ಪರೇವ ನಶ್ಯಸಿ।
ಕಥಾಗ್ರಾಮಂ ನ ಪೃಚ್ಛಸಿ ನ ತ್ವಾ ಭೀರಿವ ವಿನ್ದತೀಂ॥
ವೃಷಾರವಾಯ ವದತೇ ಯದುಪಾವತಿ ಚಿಚ್ಚಿಕಃ।
ಆಘಾಟಿಭಿರಿವಧಾವಯನ್ನರಣ್ಯಾನಿರ್ಮಹೀಯತೇ॥


* * * *

ಕಥಾತ್ಪರ್ಯ

ಕಥೆಗಳು ಕಾಲ್ಪನಿಕವಾದರೂ, ಅಥವಾ ಸತ್ಯ ಮಿಶ್ರಿತ ಕಲ್ಪನೆಯಾದರೂ, ಅದು ಮಹಾದೇವನ ಜಟೆಯಿಂದ ಹರಿಯುವ ಗಂಗೆಯಂತೆ. ಗಂಗೆಯ ಮೂಲ ಒಂದೆ. ಅದು ಜಟೆಯಿಂದ ಒಂದೇ ಎಳೆಯಾಗಿ ಹರಿಯುತ್ತದೆ. ಆದರೆ ಕೇಳುಗರೂ ಓದುಗರೂ, ಆ ಗಂಗೆಯ ತಟವಿದ್ದಂತೆ. ಕತೆಯು ವಿಸ್ತಾರವಾಗಿ ಅದರ ಒಳಹರಿವುಗಳು ಹೆಚ್ಚಾಗುತ್ತವೆ. ಕಥೆಗಾರ ಕಥೆ ಹೇಳಿದ್ದಾನೆ. ಅದರಲ್ಲಿರುವ ಜ್ಞಾನದ ಮಹತ್ತನ್ನು ಅರಿತು, ಗಂಗೆಯ ದಡಗಳ ಹಾಗೆ ಅದನ್ನು ಸದುಪಯೋಗಪಡಿಸಿಕೊಳ್ಳುವುದೇ ನಮ್ಮ ಜವಾಬ್ದಾರಿ. ಸೂತ್ರವು ಒಂದೇ ವಾಕ್ಯದ್ದಾಗಿರಬಹುದು. ಆದರೆ ಅದರಲ್ಲಿನ ಮಹತ್ವ ಸಾವಿರ ಭಾಷ್ಯಗಳಷ್ಟು. ಕಥೆ ಎಷ್ಟೇ ಗಾತ್ರದ್ದಾಗಿದ್ದರೂ, ಶ್ರೋತೃವು ಅದನ್ನು ಕೇಳಿ ಅನುಭವಿಸಿ ಆನಂದವನ್ನು ಪಡೆದಾಗ ಕಥೆಗಾರನ ಜೀವನ ಸಾರ್ಥಕ. ಹೀಗಾದಾಗ, ನಾವೂ ಒಬ್ಬ ಆಚಾರ್ಯನೋ, ಕಾಳನೋ, ನಾಗನೋ, ಬೋಕನೋ, ಸಾಕ್ಷಿಯೋ ಆಗಬಹುದು. ಅಜ್ಞಾತ ನಾಯಕರನ್ನು ಹೊರತರಬಹುದು!

Lasertypeset at Ganesha SoftService, Tumakuru
Printed at Magic International (Pvt) Ltd., Noida

Typeset at Chandra SoftServe, [illegible]
Printed at [illegible] International (Pvt) Ltd., Noida



ತೇಜಸ್ ಎಚ್ ಬಾಡಾಲ

ನಾನು ಒಬ್ಬ ವಿದ್ಯಾರ್ಥಿ, ಸಾಹಿತ್ಯಾಸಕ್ತ, ಹಾಗೂ ಒಂದು ರೀತಿಯ ಕವಿ. ಜೊತೆಗೆ ಒಂದಿಷ್ಟು ಸಂಗೀತ ಪ್ರಿಯ. ಈ ಎಲ್ಲಾ ಬೆಳವಣಿಗೆಗೂ ಕಾರಣರಾದವರು ನನ್ನ ಪೋಷಕರಾದ ಶ್ರೀ ಹೇಮಂತ್ ಕುಮಾರ್ ಹಾಗೂ ಶ್ರೀಮತಿ ರೂಪಶ್ರೀ. ಅವರ ಪ್ರೋತ್ಸಾಹ ಹಾಗೂ ಪ್ರೀತಿಯ ಜೊತೆಗೆ ಗುರುಗಳ ಕೃಪೆಯೂ ಸೇರಿಕೊಂಡಿದೆ. ಮೈಸೂರಿನ ಮಹಾರಾಜರ ಕುರಿತಾಗಿ ಸ್ಥಳದಲ್ಲಿಯೇ ಕವನವನ್ನು ರಚಿಸಿ ಅವರ ಹಸ್ತದಿಂದಲೇ ಮೊದಲನೇ ಬಹುಮಾನ ವನ್ನು ಪಡೆದ ಧನ್ಯನು ನಾನು. ಪ್ರಸ್ತುತ ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ವ್ಯಾಸಂಗ. ಕವನ ಬರೆದು, ರಾಗಕ್ಕೆ ಅಳವಡಿಸಿ ಹಾಡುವ ಹವ್ಯಾಸ ನನಗಿದೆ. ಗದಗಿನ ಅಶ್ವಿನಿ ಪ್ರಕಾಶನದವರು ಆಯೋಜಿಸಿದ್ದ ರಾಜ್ಯ ಮಟ್ಟದ ಕವನ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ಪಡೆದು, ನನ್ನ 30 ಕವನಗಳನ್ನು ಅಂತರಂಗ ಎಂಬ ಸಂಕಲನದಲ್ಲಿ ಪ್ರಕಟಿಸ ಲಾಗಿತ್ತು. ಚಿಂತಾಮಣಿ ಸಾಹಿತ್ಯ ಕೂಟದಲ್ಲಿ "ಸಾವರ್ಕರ್" ಕುರಿತು ಎರಡು ಕಂತುಗಳ ಉಪನ್ಯಾಸವನ್ನೂ, ಶ್ರೀಕೃಷ್ಣನ ಕೊನೆಯ ದಿನಗಳ ಕುರಿತಾಗಿ ಸಂಗೀತೋಪನ್ಯಾಸ ವನ್ನೂ ಗುರುಗಳ ಆಶೀರ್ವಾದದಿಂದ ನಡೆಸಿ ಕೊಟ್ಟಿದ್ದೆ. ನನ್ನ ಗುರುಗಳು ಮೈಸೂರಿನ ಡಾ. ರಾ.ಸ. ನಂದಕುಮಾರ್. ಭಾರತೀಯ ಶಾಸ್ತ್ರ ವಿದ್ಯೆಗಳಲ್ಲಿ ಆಸಕ್ತಿ ನನಗಿದೆ, ಜೊತೆಗೆ ಸಂಗೀತೋಪನ್ಯಾಸಗಳನ್ನೂ ನೀಡಿದ್ದೇನೆ.

PM Mentoring YUVA SCHEME | 75 Azadi Ka Amrit Mahotsav

ಯುವ ಲೇಖಕರಿಗೆ ಮಾರ್ಗದರ್ಶನ ನೀಡುವ ಪ್ರಧಾನ ಮಂತ್ರಿಗಳ 'ಯುವ' ಯೋಜನೆ

ಈ ಪುಸ್ತಕವನ್ನು ಯುವ ಲೇಖಕರಿಗೆ ಮಾರ್ಗದರ್ಶನ ನೀಡುವ ಪ್ರಧಾನ ಮಂತ್ರಿಗಳ 'ಯುವ' (YUVA-Young, Upcoming and Versatile Authors) ಯೋಜನಾ ಸರಣಿಯ ಅಡಿಯಲ್ಲಿ ಸಿದ್ಧಪಡಿಸಲಾಗಿದೆ. 30 ವರ್ಷದ ಕೆಳಗಿನ ಯುವ ಲೇಖಕರನ್ನು ಓದು, ಬರೆಹ, ಮತ್ತು ಪುಸ್ತಕ ಸಂಸ್ಕೃತಿಯತ್ತ ಸೆಳೆಯಲು ತರಬೇತಿ ನೀಡುವುದರ ಜೊತೆಗೆ, ಪ್ರಸ್ತುತ ಯೋಜನೆಯು ಭಾರತ ಮತ್ತು ಭಾರತೀಯ ಬರೆಹಗಳನ್ನು ಜಗತ್ತಿಗೆ ಪರಿಚಯಿಸುವ ಉದ್ದೇಶವನ್ನೂ ಹೊಂದಿದೆ. ಈ ಯೋಜನೆಯನ್ನು 75ನೇ ಸ್ವಾತಂತ್ರ್ಯೋತ್ಸವದ ಭಾಗವಾದ 'ಆಜಾದೀ ಕಾ ಅಮೃತ ಮಹೋತ್ಸವ್' ದ ಅಂಗವಾಗಿ ಭಾರತ ಸರಕಾರದ ಶಿಕ್ಷಣ ಮಂತ್ರಾಲಯವು 2021–22ರಲ್ಲಿ ನ್ಯಾಷನಲ್ ಬುಕ್ ಟ್ರಸ್ಟ್ ಜೊತೆಗೆ ಜಾರಿಗೆ ತಂದಿತು. ಈ ಸರಣಿಯಲ್ಲಿ ಪ್ರಕಟವಾದ ಪುಸ್ತಕಗಳು ಭಾರತದ ರಾಷ್ಟ್ರೀಯ ಹೋರಾಟದ ಸುತ್ತ ಹೆಣೆದುಕೊಂಡಿದ್ದು. ಅದರಲ್ಲಿಯೂ ಇದುವರೆಗೆ ಅನಾಮಧೇಯವಾಗುಳಿದ ವ್ಯಕ್ತಿಗಳು, ಗೊತ್ತಿಲ್ಲದ ಹಾಗೂ ಮರೆತುಹೋದ ಸ್ಥಳಗಳು, ರಾಷ್ಟ್ರೀಯ ಹೋರಾಟದಲ್ಲಿ ಅವುಗಳು ನಿರ್ವಹಿಸಿದ ಪಾತ್ರಗಳ ಕಡೆಗೆ ಹೆಚ್ಚು ಒತ್ತು ನೀಡುತ್ತವೆ. ಇವುಗಳು ಕಾದಂಬರಿ, ವಸ್ತುನಿಷ್ಠ ನಿರೂಪಣೆ ಅಥವಾ ಜೀವನ ಚರಿತ್ರೆ, ಮೊದಲಾದ ಪ್ರಕಾರಗಳಲ್ಲಿ ಇವೆ. ಅಖಿಲ ಭಾರತ ಮಟ್ಟದ ಸ್ಪರ್ಧೆ ನಡೆಸಿ, 22 ಅಧಿಕೃತ ಭಾಷೆಗಳಿಂದ ಇಲ್ಲಿನ ಲೇಖಕರನ್ನು ಆಯ್ದುಕೊಳ್ಳಲಾಗಿದೆ. ಇಂಗ್ಲಿಷ್ ಭಾಷೆಗೂ ಅವಕಾಶ ನೀಡಲಾಗಿದೆ. ಆಯಾ ಭಾಷೆಯ ವಿಷಯ ತಜ್ಞರು ಮತ್ತು ಶ್ರೇಷ್ಠ ಲೇಖಕರು, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾದ ಶಿಷ್ಯವೇತನದ ಅಡಿಯಲ್ಲಿ ಆಯ್ಕೆಯಾದ ಯುವ ಲೇಖಕರ ಯೋಜನೆಗಳನ್ನು ಪರಿಶೀಲಿಸಿ, ಅದೊಂದು ಉತ್ತಮ ಪುಸ್ತಕವಾಗುವ ಹಾಗೆ ಮಾರ್ಗದರ್ಶನ ಮಾಡಿದ್ದಾರೆ.

nbt.india
एकः सूते सकलम्
ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ

₹ 250.00
ISBN 935491641-4
9789354916410
22231516